# ಸ್ನೋವೈಟ್
# ಮತ್ತು
# ಇತರ ನೃತ್ಯರೂಪಕಗಳು

ಡಾ|| ಸಾ.ಶಿ. ಮರುಳಯ್ಯ

# ಸ್ನೋವೈಟ್

## ಮತ್ತು

## ಇತರ ನೃತ್ಯ ರೂಪಕಗಳು


ರಚನೆ :

**ಡಾ॥ ಸಾ.ಶಿ. ಮರುಳಯ್ಯ**



ಪ್ರಕಾಶಕರು :

**ರಾಗಿಣಿ ಶಿಕ್ಷಣ ಪ್ರತಿಷ್ಠಾನ**

'ರಾಗಿಣಿ' ಸರ್ವಿಸ್ ರಸ್ತೆ, ವಿಜಯನಗರ ೨ನೇ ಹಂತ

ಬೆಂಗಳೂರು – ೫೬೦ ೦೪೦

SNOW-WHITE MATTU ITHARA NRITYA ROOPAKAGALU,
Collection of Dance-Dramas and an opera ; written by Dr. Sa.Shi. Marulaiah; Published by Ragini Shikshana Pratishthana, Bangalore – 560 040, No. of Pages : 278 + viii          Price Rs. : 90/-

ಮೊದಲ ಮುದ್ರಣ ೧೯೯೯

ಹಕ್ಕುಗಳು : **ಶ್ರೀಮತಿ ವೀಣಾ ಮರುಳಯ್ಯ**

ವರ್ಣಶಿಲ್ಪಿ : **ಮೋನಪ್ಪ**

ಛಾಯಾಕ್ಷರ ಜೋಡಣೆ :
**ಪ್ರಗತಿ ಗ್ರಾಫಿಕ್ಸ್**
ವಿಜಯನಗರ, ಬೆಂಗಳೂರು : ೫೬೦ ೦೪೦
ದೂರವಾಣಿ : ೫೪೦೫೧೯೧

ಮುದ್ರಕರು :
**ಸತ್ಯಶ್ರೀ ಪ್ರಿಂಟರ್ಸ್**
ಚಾಮರಾಜಪೇಟೆ
ಬೆಂಗಳೂರು – ೧೮

## ಮುನ್ನುಡಿ

ಇಂಗ್ಲಿಷಿನ ಅಪೆರಾಕ್ಕಿರುವ ಪರ್ಯಾಯ ಕಲೆ ನೃತ್ಯರೂಪಕ. ತಾಂತ್ರಿಕವಾಗಿ ಎರಡೂ ಭಿನ್ನ. ಇದು ನೃತ್ಯ, ಗೀತ, ಮತ್ತು ಸಾಹಿತ್ಯಗಳ ಕಲಾಸಂಗಮ. ಇಲ್ಲಿ ನೃತ್ಯ ಮತ್ತು ಗೀತಗಳ ಪಾತ್ರ ಪ್ರಧಾನ. ಸಾಹಿತ್ಯದ ಪಾತ್ರ ಗೌಣ. ಆದರೂ ಸಾಹಿತ್ಯಾಂಶ ಬೆರೆಯದೆ ಇದ್ದಲ್ಲಿ ಇದು ಪರಿಪೂರ್ಣ ಕಲೆ ಎನಿಸಿಕೊಳ್ಳುವುದಿಲ್ಲ, ಅಪೆರಾ ಮಟ್ಟಿಗೆ ಹೇಳುವುದಾದರೆ, ಅದೊಂದು ಮೂರ್ಖಮೇಳ. ಅಲ್ಲಿ ಸಂಗೀತಕ್ಕೆ, ಆಂಗಿಕಾಭಿನಯಕ್ಕೆ ಹೆಚ್ಚು ಪ್ರಾಶಸ್ತ್ಯ. ನೃತ್ಯರೂಪಕದಲ್ಲಿ ಸಂಗೀತ, ಸಾಹಿತ್ಯ ಮತ್ತು ಅಭಿನಯಗಳ ಜೊತೆಯಲ್ಲಿ ತನ್ನದೇ ಆದ ವೈವಿಧ್ಯಮಯ ನೃತ್ಯವೂ ಉಂಟು. ಈ ನರ್ತನ ಕಲೆಯ ತಾಯಿಬೇರು ಇರವುದು ಭಾರತೀಯ ಜಾನಪದ ಕಲೆಗಳಾದ ಕರ್ನಾಟಕದ ಯಕ್ಷಗಾನ – ಬಯಲಾಟ, ಕೇರಳದ ಕಥಕ್ಕಳಿ, ಆಂಧ್ರದ ಭಾಮಾಕಲಾಪ ಮತ್ತು ಕೂಚುಪುಡಿ, ಒರಿಸ್ಸಾದ ಛಾವೂ ಮತ್ತು ಪಲ, ಬಂಗಾಳದ ಯಾತ್ರಾ, ಅಸ್ಸಾಮಿನ ಓಜಾಪಲಿ, ಕಾಶ್ಮೀರ ಮತ್ತು ಪಂಜಾಬ್‌ಗಳಲ್ಲಿನ ಜೋಗಿಗಳು, ಭಾಂಡರು ಎಂಬ ಅಲೆಮಾರಿಗಳ ನೃತ್ಯರೂಪಕಗಳು. ಇವುಗಳಲ್ಲಿ, ನಾನು ಇಲ್ಲಿ ನಮ್ಮ ಯಕ್ಷಗಾನದ ನೃತ್ಯ ಮೂಲದ, ಸಂಭಾಷಣೆಯ ಸ್ವಾರಸ್ಯದ, ಸಂಗೀತ ಮಾಧುರ್ಯದ ಸಂಕೀರ್ಣ ಸ್ವರೂಪವನ್ನು ಬಳಸಿಕೊಂಡಿದ್ದೇನೆ.

ಕನ್ನಡದಲ್ಲಿ ನೃತ್ಯ ರೂಪಕಗಳೇ ಕಡಿಮೆ, ಶಿವರಾಮ ಕಾರಂತರ 'ಗೀತ ನಾಟಕಗಳು' ಬಿಟ್ಟರೆ, ಎರಡನೆಯ ಪುಸ್ತಕ ಇಲ್ಲ. ಅದಕ್ಕೆ 'ಗೀತ ನಾಟಕ' ಎಂದು ಹೆಸರಿದ್ದರೂ ಅದು ಗೀತನಾಟಕ ಅಲ್ಲ, ನೃತ್ಯರೂಪಕ. ಪು.ತಿ.ನ. ರವರ ಗೀತನಾಟಕಗಳು ಅಕ್ಷರಶಃ ಗೀತರೂಪಕಗಳೇ, ನೃತ್ಯ ರೂಪಕಗಳಲ್ಲ. ಕಾರಂತರದು ನೃತ್ಯ ಪ್ರಧಾನಮೇಳ, ಪು.ತಿ.ನ. ರವರದು ಸಂಗೀತ ಪ್ರಧಾನ ಜಾಲ ! ಅವುಗಳಿಗೆ ಸಂಗೀತ ಮತ್ತು ಅಭಿನಯ ಸಾಕು, ನೃತ್ಯದ ಅನಿವಾರ್ಯತೆ ಇಲ್ಲ. ಆದರೆ ನೃತ್ಯ ರೂಪಕಕ್ಕೆ ಬಹುಮುಖ್ಯವಾಗಿ ಬೇಕು ನಾಟ್ಯ. ಅದರ ತಾಳಮೇಳಗಳಿಗೆ ಹೊಂದಿಕೆಯಾಗಿ ಸಂಗೀತ, ಸಾಹಿತ್ಯ, ಸಂಭಾಷಣೆ, ಅಭಿನಯಾದಿ ಪ್ರಯೋಗವಾಗುತ್ತವೆ. ಇಂತಹ ಹಳತನ್ನು ಹೊಸರೂಪದಲ್ಲಿ, ಅಂದರೆ ನಮ್ಮ ಜಾನಪದ ಯಕ್ಷಗಾನ–ಬಯಲಾಟದಿಂದಾದ ಶಿಷ್ಟ ಸ್ವರೂಪವನ್ನು ಪ್ರಚುರಪಡಿಸುವ ಸಲುವಾಗಿ ಸುಮಾರು ಐವತ್ತು ನೃತ್ಯ ರೂಪಕಗಳನ್ನು ರಚಿಸಿದೆ. ಅವುಗಳಲ್ಲಿ ಈ ಹತ್ತು ನೃತ್ಯ ರೂಪಕಗಳು ತಮ್ಮ ಮುಂದಿವೆ. ಈಗಾಗಲೇ ಇಪ್ಪತ್ತೈದು ಪ್ರಕಟವಾಗಿವೆ; ಉಳಿದವು ಮುದ್ರಣದ ಹಂತದಲ್ಲಿವೆ.

ಈ ನೃತ್ಯ ರೂಪಕಗಳ ರಚನೆಗೆ ಪ್ರೇರಣೆ ದೊರೆತದ್ದು ಅಮೇರಿಕೆಯ ಲಾಸಂಜೆಲೀಸ್ ಬಳಿ ಇರುವ ಡಿಸ್ನೆಲ್ಯಾಂಡ್ ಮಕ್ಕಳ ಲೋಕದಲ್ಲಿ. ಅಲ್ಲಿ ಸಿಂಡೆರೆಲಾ, ಸ್ನೋವೈಟ್ ಮತ್ತು ಏಳು ಜನ ಕುಳ್ಳರು ಮೊದಲಾದ ಪಪೆಟ್ ಪ್ರದರ್ಶನ ನೋಡಿದಾಗ, ಗ್ರಿಮ್ ಸಹೋದರರ ಅದ್ಭುತ ಕಲ್ಪನೆಯ ಮಕ್ಕಳ ರಂಜನೀಯ ಕೃತಿಗಳು ನನ್ನ ಮನಸ್ಸನ್ನಾಕರ್ಷಿಸಿದವು. ಅಂದಿನಿಂದಲೂ ಸ್ನೋವೈಟ್ ಅನ್ನು ಕನ್ನಡಕ್ಕೆ ತರಬೇಕು ಎಂಬ ತುಡಿತ ಬಲವಾಯಿತು. ಕಾಕತಾಳೀಯವಾಗಿ, ನಾನು ಭಾರತಕ್ಕೆ ಹಿಂದಿರುಗಿದ ಮೇಲೆ ಖ್ಯಾತ ನೃತ್ಯ ಕಲಾವಿದ ಶ್ರೀ ಅರುಣ್ ನನ್ನಲ್ಲಿಗೆ ಬಂದು, ಆ ವಿಷಯ ಕುರಿತ ಒಂದು ರೂಪಕ ಬರೆದು ಕೊಡುವಂತೆ ಕೇಳಿದರು. ಬರೆದೆ ಪ್ರದರ್ಶನವೂ ಆಯಿತು. ಹತ್ತಿರ ಹತ್ತಿರ ಎಂಟು ನೂರು ರಂಗ ಪ್ರದರ್ಶನ ಕಂಡಿದೆ ನನ್ನ 'ಸ್ನೋವೈಟ್'. ಅಷ್ಟು ಸಂಖ್ಯೆಯಲ್ಲಿ ಪ್ರದರ್ಶನಗೊಂಡ ನೃತ್ಯರೂಪಕ ಭಾರತೀಯ ಭಾಷೆಗಳಲ್ಲಿ ಬೇರೊಂದಿರದು. ಅರುಣ್ ದಂಪತಿಗಳು ಅತ್ಯಮೋಘವಾಗಿ ಅಭಿನಯಿಸಿ ದಾಖಲೆ ನಿರ್ಮಿಸಿದರು. ಅದಕ್ಕೆ ತಮಿಳಿನ ಖ್ಯಾತ ಚಲನಚಿತ್ರ ಸಂಗೀತ ನಿರ್ದೇಶಕ ಶ್ರೀ ವೈದ್ಯನಾಥನ್ ಸಂಗೀತ ಸಂಯೋಜಿಸಿದ್ದಾರೆ.

ಈ ಸಂಕಲನದಲ್ಲಿ ಒಂದು ಅಪರೂಪದ ಆಖ್ಯಾಯಿಕೆ ಇದೆ. ಅದೇ 'ಪೃಥಾಪವಿತ್ರೆ'. ಇದನ್ನು ನಾಟ್ಯಮಯೂರಿ ವೈಜಯಂತಿಕಾಶಿಯವರು ಒತ್ತಾಯಮಾಡಿ ಬರೆಸಿದರು. ಅದು ಒಳ್ಳೆಯದೇ ಆಯಿತು. ಏಕೆಂದರೆ ಮೊದಲೇ ಹೇಳಿದಂತೆ ಕನ್ನಡದಲ್ಲಿ ನೃತ್ಯ ರೂಪಕ, ಗೀತನಾಟಕಗಳು ಒಂದೆರಡಾದರೂ ಇವೆ. ಆದರೆ ಆಖ್ಯಾಯಿಕೆ ಒಂದೂ ಇಲ್ಲ. ನನ್ನ 'ಪೃಥಾಪವಿತ್ರೆ' ಆಖ್ಯಾಯಿಕೆ ಮೊತ್ತ ಮೊದಲ ಕೊಡುಗೆ ಕನ್ನಡ ಕಲಾರಂಗಕ್ಕೆ. ಅಂತೆಯೇ ಖ್ಯಾತ ನೃತ್ಯಕಲಾವಿದರುಗಳಾದ ಶ್ರೀಮತಿಯವರಾದ ರಾಧಾ ಶ್ರೀಧರ್, ಉಷಾದಾತಾರ್, ಬಿ.ಆರ್.ಮಂಜುಳಾ, ಶ್ರೀ ಗುಣಶೀಲನ್, ಶ್ರೀ ಕೇಶವಮೂರ್ತಿ ಮೊದಲಾದವರು ಪ್ರೇರಕ ಶಕ್ತಿಗಳಾಗಿದ್ದಾರೆ. ಈ ನೃತ್ಯ ರೂಪಕ ರಚನೆಗೆ,

ಈ ಎಲ್ಲಾ ನೃತ್ಯ ಪಟುಗಳಿಗೂ, ನಿರ್ದೇಶಕರುಗಳಿಗೂ ಆಶಂಸನದ ಮೂಲಕ ಶುಭ ಕೋರಿದ ಸೋದರಿ ಶ್ಯಾಮಲಾ ಜಿ. ಭಾವೆಯವರಿಗೂ ಸದಾ ನನ್ನೊಡನಿರುವ ಶ್ರೀ ಎ.ಎಸ್. ಭಟ್, ಶ್ರೀ ಪಂಪಣ್ಣ ಮತ್ತು ಎಂ.ಎನ್. ಶಿವಕುಮಾರ್‌ರವರಿಗೂ, ಛಾಯಾಕ್ಷರ ತೆಗೆದ ಪ್ರಗತಿ ಗ್ರಾಫಿಕ್ಸ್‌ನ ಪ್ರಮೋದರವರಿಗೂ, ಮುದ್ರಿಸಿಕೊಟ್ಟ ಸತ್ಯಶ್ರೀ ಪ್ರಿಂಟರ್ಸ್‌ರವರಿಗೂ ನನ್ನ ಧನ್ಯವಾದಗಳು.

**'ರಾಗಿಣಿ'** ಬೆಂಗಳೂರು **ಸಾ.ಶಿ. ಮರುಳಯ್ಯ**

೧೦ ಆಗಸ್ಟ್ ೧೯೯೯

# – ಶುಭಾಶಂಸನ –

ನನ್ನ ಕಾರ್ಯಕ್ಷೇತ್ರ ಸಂಗೀತ. ಸಾಹಿತ್ಯ ಲೋಕದ ಕೃತಿಯೊಂದರ ಬಗ್ಗೆ ಬರೆಯಲು ನನಗೆ ಎಳ್ಳಷ್ಟೂ ಅಧಿಕಾರವಿಲ್ಲ. ಆದರೂ ಪೂಜ್ಯ ಡಾ॥ ಸಾ.ಶಿ. ಮರುಳಯ್ಯನವರ ಈ ಕೃತಿಯನ್ನು ಕುರಿತು ನನ್ನ ಅನಿಸಿಕೆಯನ್ನು ತಿಳಿಯಪಡಿಸುವ ಭಾಗ್ಯ ನನ್ನ ಪಾಲಿಗೆ ಬಂದಿದೆ. ಕಾರಣವಿಷ್ಟೇ – ಈ ಕೃತಿ ಸಂಗೀತಾತ್ಮಕ ನೃತ್ಯರೂಪಕಗಳ ಸಂಕಲನವಾಗಿದೆ ಮತ್ತು 'ನಾಟ್ಯಸಂಗೀತ' ವೆಂಬ ಸಂಗೀತಪ್ರಕಾರವನ್ನು ಹುಟ್ಟುಹಾಕಿದ ಮಹಾರಾಷ್ಟ್ರ ಪ್ರಾಂತ್ಯದ ಆದ್ಯ ನಾಟಕಕಾರ ದಿ. ವಿಷ್ಣುದಾಸ ಭಾವೆಯವರ ಪರಂಪರೆಯಲ್ಲಿ ಹುಟ್ಟಿ ಬೆಳೆದಿರುವುದರಿಂದಾಗಿ ನನಗೆ ನಾಟಕ ಕಲೆಯಲ್ಲಿ ಅಭಿರುಚಿಯಿದೆ.

ಈ ನೃತ್ಯ ರೂಪಕಗಳನ್ನು ನನಗೆ ನೇರವಾಗಿ ಓದಿಕೊಂಡು ಹೋಗಲು ಸಾಧ್ಯವಾಗಲೇ ಇಲ್ಲ! ಆರಂಭದ ಪುಟದಿಂದಲೇ ಹಾಡಿಕೊಂಡೇ ಓದಬೇಕಾಯ್ತು. ಪ್ರತಿಯೊಂದೂ ರೂಪಕದಲ್ಲಿ, ಮೊದಲಿನಿಂದ ಕೊನೆಯವರೆಗೆ ಸಂಗೀತದ ಧಾಟಿ ಸುಲಲಿತವಾಗಿ ಮೂಡಿಬಂದಿದೆ, ನೃತ್ಯದ ದೃಶ್ಯಗಳು ಅಲೆಅಲೆಯಾಗಿ ಏರಿಬಂದಿವೆ. ಈ ಪರಿಯಲ್ಲಿ ಅವಲೋಕಿಸಿದಾಗ 'ಬಸವಣ್ಣ ಬಂದಾನೋ' ಮತ್ತು 'ತಥಾಗತಃ ಬುದ್ಧದೇವ' ಸ್ವಲ್ಪ ವಿಭಿನ್ನವಾಗಿದ್ದು, ಇವುಗಳಲ್ಲಿನ ಸಂಭಾಷಣೆಯ ಸರಳಮಾತುಗಳು ಸಂಗೀತಾತ್ಮಕ ಕಾವ್ಯದ ಅತಿಯಾದ ಪ್ರಯೋಗ (OVERDOSE) ದಿಂದುಂಟಾಗುವ ನಿರ್ವಿಶೇಷಭಾವ (Monotony) ವನ್ನು ಪರಿಣಾಮಕಾರಿಯಾಗಿ ತಡೆಗಟ್ಟಿವೆ ಎನ್ನಬಹುದು.

ನೃತ್ಯರೂಪಕಗಳ ಈ ಮಾಲಿಕೆಯಲ್ಲಿ ವೈವಿಧ್ಯತೆಯ ಹಿತವಾದ ಮಿಶ್ರಣವಿದೆ. ಇದರಲ್ಲಿ ಪೌರಾಣಿಕ ವಸ್ತುವಿದೆ (ಅಂಬೆ, ಪೃಥಾಪವಿತ್ರೆ), ಸಾಂಪ್ರದಾಯಿಕ ಸುಧಾರಣೆಯ ಕಥೆಯಿದೆ (ಬಸವಣ್ಣ ಬಂದಾನೋ, ತಥಾಗತಃ ಬುದ್ಧದೇವ), ಐತಿಹಾಸಿಕತೆಯಿದೆ (ಮನೆಯೊಳಗಣ ಕಿಚ್ಚು, ಬನವಾಸಿ), ಭಕ್ತಿರಸವಿದೆ (ಚೆನ್ನಿ ಚೆನ್ನಿ ಚೆನ್ನಲೆ, ಉಡುಪಿ.) ಮತ್ತು ಪುಟಾಣಿ ಪೀಳಿಗೆಯ ಕಣ್ಮಣಿಯಾದ "ಸ್ನೋವೈಟ್" ಇದೆ. "ಸ್ನೋವೈಟ್" ನೃತ್ಯರೂಪಕವು ರಂಗಪ್ರದರ್ಶನದಲ್ಲಿ ಸಂಖ್ಯಾದಾಖಲೆಯನ್ನು ನಿರ್ಮಿಸುತ್ತಿರುವುದನ್ನು ಇಲ್ಲಿ ಸ್ಮರಿಸಬಹುದು.

ನೃತ್ಯರೂಪಕವಾದ ಕೃತಿಯೊಂದು ಚೆನ್ನಾಗಿ ಮೂಡಿಬರಬೇಕಾದರೆ ಸಾಹಿತಿಗೆ ಸಂಗೀತದಲ್ಲಿ ಬರಿಯ ಸದಭಿರುಚಿಯಷ್ಟೇ ಇದ್ದರೆ ಸಾಲದು, ಕೊಂಚ ರಾಗ ಜ್ಞಾನವೂ ಅತ್ಯಗತ್ಯ. ಈ ದೃಷ್ಟಿಕೋಣದಿಂದ ನೋಡಿದಾಗ, ಈ ನೃತ್ಯರೂಪಕಗಳಲ್ಲಿ ಸಂಗೀತ ಸೃಜನತೆಯ ಸಾಮರ್ಥ್ಯ ಪ್ರಬಲವಾಗಿದೆ ಎಂದು ನನಗನ್ನಿಸುತ್ತಿದೆ. ಇವುಗಳ ರಂಗಪ್ರದರ್ಶನ ಸಂದರ್ಭದಲ್ಲಿ ಸಂಗೀತ ಮತ್ತು ನೃತ್ಯ ಸಂಯೋಜಿಸುವಾಗ ರಾಗಗಳ, ಧಾಟಿಗಳ, ತಾಳಗಳ, ನಡೆಗಳ ವೈವಿಧ್ಯತೆಯನ್ನು ಸೃಷ್ಟಿಸಬಹುದು. ಸಮರ್ಥ ಸಂಗೀತಗಾರರು ಹಾಗೂ ನೃತ್ಯಪಟುಗಳು ಇವನ್ನು ಯಶಸ್ವಿಯಾಗಿ ಪ್ರದರ್ಶಿಸಿ ಜನಪ್ರಿಯಮಾಡಬಹುದು.

ನೃತ್ಯರೂಪಕಗಳಲ್ಲಿ ಕವಿತಾತ್ಮಕ ಸಾಹಿತ್ಯಪ್ರಕಾರವನ್ನು ಬಳಸುವುದರಿಂದ ಕೆಲವೊಮ್ಮೆ ಕೃತಿಯ ಪ್ರಧಾನವಸ್ತು ಗೌಣವಾಗುವ ಸಾಧ್ಯತೆಯಿದೆ. ಅಂತಹ ಯಾವರೀತಿಯ ಪ್ರಸಂಗವೂ ಈ ಕೃತಿಯಲ್ಲಿ ನನಗೆ ಕಂಡಿಲ್ಲ. ಲೇಖಕರಿಗಿರುವ ಬಹುಮುಖ ಪ್ರಜ್ಞೆ ಇಲ್ಲಿ ಗೋಚರವಾಗುತ್ತದೆ.

ತಮ್ಮ ಯೌವನದಲ್ಲೇ ತಮ್ಮ 'ಕೆಂಗನಕಲ್ಲು' ಕವನ ಸಂಕಲನಕ್ಕೆ ರಾಜ್ಯ ಪ್ರಶಸ್ತಿಯ ಗೌರವವನ್ನು ಪಡೆದುಕೊಂಡ ಡಾ॥ ಸಾ.ಶಿ. ಮರುಳಯ್ಯನವರು, ತಮ್ಮ ವೈವಿಧ್ಯಮಯ ಸಾಹಿತ್ಯ ಕೃತಿಗಳಿಂದ ಕನ್ನಡದ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಕಳೆದ ಐದುವರ್ಷಗಳ ಹಿಂದೆ '೨೫ ನೃತ್ಯರೂಪಕಗಳ' ಕೃತಿಯೊಂದನ್ನು ಹೊರತಂದಿರುವ ಇವರ ಸಾಧನೆ ಪ್ರಶಂಸಾರ್ಹವಾಗಿದೆ. ಆಧುನಿಕ ತಂತ್ರಜ್ಞಾನದ ಮುನ್ನಡೆಯಿಂದ ಸಂಗೀತ ನೃತ್ಯ ನಾಟಕಾದಿಕಲೆಗಳಲ್ಲಿ ಮಾನವೀಯ ಮೌಲ್ಯ – ಸಾಮರ್ಥ್ಯಗಳು ಅವನತಿಯನ್ನು ಪಡೆಯುತ್ತಿರುವ ಈ ಸಮಯದಲ್ಲಿಯೂ, ಡಾ॥ ಸಾ.ಶಿ. ಮರುಳಯ್ಯನವರು ಪಾರಂಪರಿಕ ಸಾಹಿತ್ಯಕ್ಕೆ ಒತ್ತುಕೊಟ್ಟು ಇಂತಹ ರೂಪಕಗಳನ್ನು ಸೃಷ್ಟಿ ಮಾಡುತ್ತಿರುವುದು ಇಂದಿನ ಸಾಹಿತ್ಯ ಲೋಕದ ಯುವ ಪೀಳಿಗೆಗೆ ಆದರ್ಶ ಪ್ರಾಯವಾಗಿದೆ. ಕಳೆದ ಐದು ದಶಕಗಳ ತಮ್ಮ ಸುದೀರ್ಘ ಸಾಹಿತ್ಯ ಜೀವನದಲ್ಲಿ ಮಾಡಿರುವ ಸಾಧನೆ, ಅನುಭವಿಕ ಆನಂದ–ಇವುಗಳೇ ಡಾ॥ ಸಾ.ಶಿ. ಮರುಳಯ್ಯನವರಿಗೆ ಇಂತಹ ಕೆಲಸಗಳಲ್ಲಿ ಸ್ಫೂರ್ತಿಯಾಗಿವೆ ಎಂದರೆ ಪ್ರಾಯಶಃ ಅತಿಶಯೋಕ್ತಿಯಾಗಲಾರದು. ಇವರ ಸಾಧನೆಯ ಶ್ರೇಯಸ್ಸಿನಲ್ಲಿ, ಇವರಿಗೆ ಬೆಂಗಾವಲಾಗಿರುವ ಪತ್ನಿ ಶ್ರೀಮತಿ ವೀಣಾ ಮರುಳಯ್ಯ ಅವರಿಗೂ ಸಿಂಹಪಾಲು ಇದೆ ಎನ್ನಲೆ ?

ಮುಖ್ಯವಾಗಿ ಹೇಳುವುದಾದರೆ – ಈ ಕೃತಿಯು ಕನ್ನಡ ಪುಸ್ತಕ ಲೋಕಕ್ಕಷ್ಟೇ ಅಲ್ಲ – ಕಲಾಪ್ರಿಯರಿಗೂ, ಸಾರ್ವಜನಿಕರಿಗೂ ಉಪಯೋಗವಾಗಬೇಕು. ರಂಗಭೂಮಿಯ ಮೇಲೆ ಆಕಾಶವಾಣಿ, ದೂರದರ್ಶನ ಮುಂತಾದ ಮಾಧ್ಯಮಗಳಲ್ಲಿ ಈ ರೂಪಕಗಳು ಮೂಡಿಬರಲಿ ಎಂದು ಮನಸಾರೆ ಹಾರೈಸುತ್ತೇನೆ.

ಉಭಯಗಾನ ವಿದುಷಿ

೧೮–೮–೧೯೯೯ **ಶ್ಯಾಮಲಾ ಜಿ. ಭಾವೆ**

# ಪ್ರಕಟಣೆ

**ದಯವಿಟ್ಟು ಗಮನಿಸಿ**

ಈ ಕೃತಿಯಲ್ಲಿನ ಪ್ರತಿಯೊಂದು ಅಂಶ ಅಕ್ಷರವೂ ನನ್ನ ಕಲ್ಪಿತಗಳು – ಕನ್ನಡದಲ್ಲಿ ನೃತ್ಯ ರೂಪಕ ಪ್ರಕಾರ ಬೆಳೆಯದಿರುವುದನ್ನು ಕಂಡು, ಸುಮಾರು ಐವತ್ತು ನೃತ್ಯ ರೂಪಕಗಳನ್ನು ರಚಿಸಿ, ಕನ್ನಡ ಕುಲಕೋಟಿಯ ಆನಂದಕ್ಕಾಗಿ ಅನೇಕ ಕಲಾ ಪ್ರದರ್ಶನ ಸಂಸ್ಥೆಗಳಿಗೆ ಉಚಿತವಾಗಿ ಕೊಟ್ಟಿದ್ದೇನೆ ಯಾರಿಗೂ ಯಾವುದೇ ರೂಪಕವನ್ನು ನಾನು ಮಾರಿಕೊಂಡಿಲ್ಲ, ಆದ್ದರಿಂದ ಇವುಗಳ ಮೇಲೆ ಯಾರ ಹಕ್ಕು ಅಧಿಕಾರಗಳೂ ಇಲ್ಲ ಎಂದು ಈ ಮೂಲಕ ಸ್ಪಷ್ಟಪಡಿಸುತ್ತಿದ್ದೇನೆ. ಇದರಲ್ಲಿನ ಯಾವುದೇ ರೂಪಕ ಅನುವಾದ, ಶೀರ್ಷಿಕೆ ಬದಲಿಸಿಕೊಂಡ ಪ್ರದರ್ಶನ, ಪತ್ರಿಕೆ – ಸಂಚಿಕೆಗಳ ಪ್ರಕಟಣೆ, ರೇಡಿಯೋ ಚಲನಚಿತ್ರ ದೂರದರ್ಶನ ಮೊದಲಾದ ಸಮೂಹ ಮಾಧ್ಯಮಗಳ ಬಳಕೆ ಸರ್ವಥಾಕೂಡದು. ತುಂಬಾ ಅನಿವಾರ್ಯವೆನಿಸಿದಲ್ಲಿ ಶ್ರೀಮತಿ ವೀಣಾ ಮರುಳಯ್ಯ ಇವರಿಂದ ಲಿಖಿತ ಅನುಮತಿ ಪಡೆದುಕೊಳ್ಳಬೇಕು, ತಪ್ಪಿದರೆ **‘**ಕೃತಿ ಸ್ವಾಮ್ಯ ಕಾನೂನು**’** ರೀತ್ಯಾ ದಂಡನಾರ್ಹರಾಗುತ್ತಾರೆ.

**ಸ್ನೋವೈಟ್ ಮತ್ತು ಇತರ ನೃತ್ಯ ರೂಪಕಗಳು** ಕೃತಿಯ ಸಂಪೂರ್ಣ ಹಕ್ಕು ನನ್ನ ಧರ್ಮಪತ್ನಿ **ಶ್ರೀಮತಿ ವೀಣಾ ಮರುಳಯ್ಯ** ಇವರದು.

**– ಸಾ.ಶಿ. ಮರುಳಯ್ಯ**

## ಪರಿವಿಡಿ


ಮುನ್ನುಡಿ
ಶುಭಾಶಂಸನ
ಪ್ರಕಟಣೆ
ಪರಿವಿಡಿ

| | | |
|---|---|---|
| ೧. | ಸ್ನೋವೈಟ್ | ೧ |
| ೨. | ಪೃಥಾ ಪವಿತ್ರೆ | ೩೩ |
| ೩. | ಮನೆಯೊಳಗಣ ಕಿಚ್ಚು | ೫೭ |
| ೪. | ಅಂಬೆ | ೮೭ |
| ೫. | ಬನವಾಸಿ | ೧೦೫ |
| ೬. | ಬಾದಾಮಿ | ೧೨೩ |
| ೭. | ಉಡುಪಿ | ೧೩೫ |
| ೮. | ಚೆನ್ನಿ ಚೆನ್ನಿ ಚೆನ್ನಲೆ | ೧೫೭ |
| ೯. | ಬಸವಣ್ಣ ಬಂದಾನೋ | ೧೭೫ |
| ೧೦. | ತಥಾಗತ : ಬುದ್ಧದೇವ | ೨೨೩ |

# ಸ್ನೋವೈಟ್

**ಪಾತ್ರಗಳು :**

| | | |
|---|---|---|
| ಸ್ನೋವೈಟ್ | : | ಕಥಾನಾಯಕಿ |
| ಸ್ವರ್ಣ ಸುಂದರಿ | : | ಮಲತಾಯಿ |
| ಏಳು ಜನ ಕುಳ್ಳರು | : | ಪೋಷಕ ಪಾತ್ರಗಳು |
| ಮಹಾರಾಜ | : | ಒಂದು ದೇಶದ ಅರಸು |
| ರಾಜೇಂದ್ರ | : | ಬಿದನೂರ ರಾಜಕುಮಾರ |
| ಜೋಕರ್ | : | ವಿನೋದ ಪಟು |
| ದರ್ಪಣದ ಮಾಯಾವಿ | : | ನಿಲವುಗನ್ನಡಿ ; ಆದರೆ ನಿರ್ಜೀವಿ ಅಲ್ಲ |
| ಅಮಾಸಿ | : | ಮಹಾರಾಣಿಯ ಆಪ್ತ ಸೇವಕ |

ಸ್ನೋವೈಟ್‌ಳ ಗೆಳತಿಯರು, ನರ್ತಕಿಯರು, ನರ್ತಕರು, ರಿಬ್ಬನ್ ಮತ್ತು ಹಣ್ಣು
ಮಾರುವ ಮಾರು ವೇಷಗಳು ಎರಡು,
ಏಳೆಂಟು ಪ್ರೇತರೂಪದ ಯಮದೂತರುಗಳು.

**ದೃಶ್ಯ : ೧.** **ಅರಮನೆ**

ತೆರೆಸರಿದಾಗ ಭವ್ಯ ಭವನ ದೃಗ್ಗೋಚರ, ರಾಜಕುಮಾರಿಯ ಹುಟ್ಟು ಹಬ್ಬಕ್ಕಾಗಿ ಮಾಡಿದ ಅಲಂಕಾರಗಳಿರುತ್ತವೆ. ಸ್ನೋವೈಟ್ ಹಾಗೂ ಅವಳ ಗೆಳತಿಯರು ನೆರೆದಿದ್ದಾರೆ. ರಂಗ ಮಧ್ಯದಲ್ಲಿ ಅಲಂಕೃತ ಮೇಜು. ಅದರ ಮೇಲೆ ಕ್ಯಾಂಡಲ್‌ಗಳನ್ನು ಹತ್ತಿಸಿಟ್ಟ ಕೇಕ್ ಇದೆ. ಬೆಳಕಿನ ವಿನ್ಯಾಸಕ್ಕೆ ಮಧುರ ರಾಗದ ವಾದ್ಯ ಸಂಗೀತ ಹಿನ್ನೆಲೆ ಒದಗಿಸಿಕೊಟ್ಟಿದೆ, ಆನಂದ, ಉಲ್ಲಾಸಗಳು ಆ ಅಲಂಕೃತ ಅರಮನೆಯಲ್ಲಿ ನಲಿದಾಡುತ್ತಿವೆ.

ಜೋಕರ್ ವಿಚಿತ್ರ ವೇಷಧಾರಿ. ರಂಗದ ಮಧ್ಯದ ಮುಂಭಾಗದಲ್ಲಿ ನಿಂತು ವೈನೋದಿಕವಾಗಿ ತನ್ನದೇ ಆದ ಧಾಟಿಯಲ್ಲಿ ಹಾಡಿಕೊಂಡು ಎಲ್ಲರನ್ನೂ ಆಹ್ವಾನಿಸುತ್ತಿರುತ್ತಾನೆ. ಉಳಿದ ಪಾತ್ರಗಳು ಅವನ ಹಿಂದೆ ಸ್ವಾಗತ ಕೋರುತ್ತಾ, ಕೈ ಕುಲುಕುತ್ತಾ, ಏನೇನೋ ಸಂಭಾಷಿಸುವಂತೆ ನಟಿಸುತ್ತಾ ಹೂಗುಚ್ಚಗಳನ್ನು ಸ್ನೋವೈಟಳಿಗೆ ನೀಡುತ್ತಾ ಚಟುವಟಿಕೆಗಳಲ್ಲಿ ನಿರತವಾಗಿರುತ್ತವೆ.

**ಜೋಕರ್** : ಒಸಗೆ ಒಸಗೆ ಒಸಗೆ
ಒಸಗೆ ಒಸಗೆ ಒಸsಗೇ ॥
ಹುಟ್ಟು ಹಬ್ಬದಾ ಒಸಗೆ
ನಮ್ಮ ರಾಜಕುಮಾರಿ ಶ್ವೇತಸುಂದರಿ
ಅವಳ ಹೆಸರಿದೇ ಸ್ನೋ ವೈಟ್ !
ಅವಳಿಹಳಬ್ಬಾ ! Very Very Bright !
ನಮ್ಮಯ ಸ್ನೋವೈಟ್ ತ್ರಿಲೋಕ ಸುಂದರಿ
ಕರೆವೆವು ನಾವು ಶ್ವೇತಸುಂದರಿ !
ನಡೆದರೆ ಹಂಸೆ
ನುಡಿದರೆ ಕೋಗಿಲೆ
ನರ್ತನಗೈದರೆ ನಾಚಿತು ನವಿಲೆ !
ಈ ಸುಂದರಿಗೆ ಷೋಡಶ ವರ್ಷ !
ಅದಕ್ಕೆ ಹುಟ್ಟಿದ ಹಬ್ಬದ ಹರ್ಷಾ !
ಒಸಗೆ ಒಸಗೆ ಒಸಗೇ
ಒಸಗೆ ಒಸಗೆ ಒಸಗೇ
ಹುಟ್ಟು ಹಬ್ಬದಾ ಒಸಗೆ
ಸ್ನೋವೈಟಳಿಗೆ ಶ್ವೇತಸುಂದರಿಗೆ
ಹುಟ್ಟು ಹಬ್ಬದಾ ಒಸಗೆ ॥
ನಿಮಗೆ ?

(ಆಗಮಿಸಿರುವ ಅತಿಥಿಗಳ ಕಡೆ ತಿರುಗಿ ಶಾಸ್ತ್ರೀಯ ಸಂಗೀತದ ಧಾಟಿಯಲ್ಲಿ)

ಸ್ವಾಗತ ಸ್ವಾಗತ ಸ್ವಾಗತ !
ಶ್ವೇತಸುಂದರಿಯ ಹುಟ್ಟು ಹಬ್ಬಕೆ
ಸ್ವಾಗತ ಸ್ವಾಗತ ಸ್ವಾಗತ !

(ಪ್ರೇಕ್ಷಕರ ಕಡೆ ತಿರುಗಿ)

**(ಗದ್ಯ)** : ಓಹೋ ! ನೀವೋ !
ಬನ್ನಿ ಬನ್ನಿ ಬನ್ನಿ
ಹು ಹ್ಹು ಹ್ಹು ಹ್ಹು ಹ್ಹು
ಬೇಡ ........................ ಬೇಡ
ನೀವು ಅಲ್ಲೇ ಇರಿ; ಅಲ್ಲಿಂದಲೇ ಆಶೀರ್ವದಿಸಿ !

**(ರಾಗವಾಗಿ)** ನಮ್ಮ ರಾಜಕುಮಾರೀ ಶ್ವೇತಸುಂದರೀ ಸ್ನೋವೈಟಳಿಗೆ ಹೇಳಿರಿ
ಎಲ್ಲರು ಒಟ್ಟಿಗೆ ಸೇರಿ

**ಎಲ್ಲರೂ :** **Happy birth Day to you SNOW-WHITE**

(ಹೇಳುವರು, ಜೋಕರ್ ನಿರ್ಗಮಿಸುವನು)

– ನೇಪಥ್ಯದಲ್ಲಿ ಬ್ಯೂಗಲ್ ಅರ್ಥಾತ್ ತುತ್ತೂರಿ 'ತುತ್ತುತೂ' ಎಂದು ದನಿಗೈವುದು. ಅದರ ಹಿಂದೆಯೇ ರಾಜ ರಾಣಿಯರು ತಮ್ಮಿಬ್ಬರ ಮಧ್ಯದಲ್ಲಿ ಸ್ನೋವೈಟಳನ್ನು ನಿಲ್ಲಿಸಿ ನಿಲ್ಲುವರು. ಸ್ನೋವೈಟ್ ಕ್ಯಾಂಡಲ್ ಊದಿ, ಕೇಕ್ ಕತ್ತರಿಸಿ ತಂದೆ ತಾಯಿಯರ ಬಾಯಿಗಿಡುವಳು; ಅವರೂ ಅವಳ ಬಾಯಿಗೆ ಎಲ್ಲರಿಗೂ ಕೇಕ್ ಹಂಚಿಕೆಯಾಗುವುದು. ಕ್ರಿಯೆಯ ಉದ್ದಕ್ಕೂ ಮಧುರವಾದ ವಾದ್ಯ ಸಂಗೀತ ನಡೆಯುತ್ತಲೇ ಇರಬೇಕು –

**ಎಲ್ಲರೂ : "HAPPY BIRTH DAY TO YOU"**

(ಹೇಳುವಷ್ಟರಲ್ಲಿ 'ಡಣ್' ಎಂಬ ಜಾಗಟೆಯ ಧ್ವನಿ ಕೇಳುವುದು. ಎಲ್ಲರ ಗಮನವೂ ದ್ವಾರದ ಕಡೆ ಹರಿಯುವುದು. ದೂತನೊಬ್ಬನು ಆಗಮಿಸಿ, ರಾಜನಿಗೆ ನಮಿಸಿ ಪತ್ರ ನೀಡುವನು. ರಾಜನು ಪತ್ರದ ಸುರುಳಿ ಬಿಚ್ಚಿ ಓದಿ ಮತ್ತೆ ಪತ್ರವನ್ನು ಸುರುಳಿ ಸುತ್ತಿ ದೂತನ ಕಡೆಗೆ ಎಸೆಯುವನು, ಆಂತುಕೊಂಡ ದೂತನು ನಿರ್ಗಮಿಸುವನು.)

ರಾಜ : ಮಹಾರಾಣಿ,
ಕರೆಯು ಬಂದಿಹುದೆನಗೆ ರಾಜಕಾರಣದಿಂದ
ನಾನೀಗಲೇ ಹೊರಡುವೆನು. ಅರಮನೆಯು
ಜೋಪಾನ. ಇರಲಿ ಎಚ್ಚರ ಎಲ್ಲ ರಾಜ್ಯದಾಡಳಿತದಲಿ.
ನನ್ನ ಮುದ್ದಿನ ಮಗಳು, ತಾಯಿಯಿಲ್ಲದೀ ತಬ್ಬಲಿಗೆ
ನೀನು ತಾಯಾಗು; ಹಡೆದವಳಿಗೂ ಮಿಗಿಲಾಗಿ ಸಾಕಿ ಸಲಹು.

(ಸ್ನೋವೈಟ್ ಕಡೆ ತಿರುಗಿ)

ಮಗಳೆ, ಸ್ನೋವೈಟ್, ಹೋಗಿ ಬರುವೆನು ನಾನು ಶೀಘ್ರವಾಗಿ.
ಶುಭವಿರಲಿ, ಗೆಲವಿರಲಿ, ಮಂಗಳವು ಕೂಡಿರಲಿ,
ಸೂರ್ಯದೇವನ ತೇಜ, ಚಂದ್ರಮನ ಶಾಂತಿ
ನಕ್ಷತ್ರ ಮಂಡಲದ ನೀಹಾರಿಕಾ ಕಾಂತಿ,
ಭೂಮಿತಾಯಿಯ ಸಹನೆ, ಕಡಲ ಗಾಂಭೀರ್ಯ
ಮೈ ಹಾಸಿ ಮಲಗಿರುವ ಮಲೆನಾಡ ಸೌಂದರ್ಯ
ಎಲ್ಲ ಗುಣಗಳ ಗಣಿಯು ನಿನ್ನ ಮೈಯಾಗಲಿ.
ನಿನ್ನ ಬಾಳೆಂದಿಗೂ ಜ್ಯೋತಿಯೊಲು ಬೆಳಗಲಿ

(ನಿರ್ಗಮಿಸುವನು)

– ಗೆಳತಿಯರೆಲ್ಲರೂ ಸ್ನೋವೈಟ್‌ಳ ಜೊತೆಗೂಡಿ ನರ್ತಿಸುವರು –

**ಸಮೂಹ ಗೀತ – ನರ್ತನ :**

ಶ್ವೇತ ಸುಂದರಿ ಶ್ವೇತ ಸುಂದರಿ ಶ್ವೇತ ಸುಂದರಿ
ನಮ್ಮ ದೇಶದ, ನಮ್ಮ ಒಲುಮೆಯ ಸ್ನೋವೈಟ್ ರಾಜಕುಮಾರಿ ॥

ವರುಷ ನೂರನು ಹರಸುತಿಹೆವಮ್ಮ
ಬಾಳಲಿ ಹರುಷವು ತುಂಬಿರಲಮ್ಮ
ಒಳ್ಳೆಯ ಗಂಡನ ಕೈ ಹಿಡಿಯುತ
ಬಲುಹಿನ ಮಕ್ಕಳ ಪಡೆಯಮ್ಮ,
ಈಗ –

**Happy Birth Day to you,**
**Many Many Happy Returns to you Snow-white!**

– ಬೆಳಕು ನಿಧಾನವಾಗಿ ಇಳಿಯುವುದು –

**ದೃಶ್ಯ : ೨** **ಅಂತಃಪುರ**

**ಸ್ವರ್ಣ** : ಹಡೆದ ತಾಯಿಗು ಮಿಗಿಲು ಪಡೆದ ತಾಯಿ!
ನಾನು ಶ್ವೇತೆಯನು ಪಡೆದವಳು ಹಡೆದವಳಲ್ಲ,
ಆ ಭಾಗ್ಯ ನನಗಿಲ್ಲ ! ನಾನೊರ್ವ ಬಂಜೆ !

ಆದರೂ ಶ್ವೇತೆಯನು ವಾತ್ಸಲ್ಯ ವಕ್ಷದಲಿ
ಅಕ್ಕರೆಯ ಹಾಲೆರೆದು ಪೋಷಿಸಿಹೆ ನಾನು.
ಬತ್ತದಿಹುದೆಂದಿಗೂ ನನ್ನೊಡಲ ಚಿಲುಮೆ!
ಆದರೆ... ಆದರೊಂದೇ ಕೊರತೆ, ಕೊರಗು :
ಸ್ನೋವೈಟ್ ನನಗಿಂತ ಸುಂದರಿಯೆ ?
ಇಂದವಳ ನೋಡಿದೆನು !
ಹುಟ್ಟು ಹಬ್ಬದ ವೇಳೆ ಕಣ್ತುಂಬ ನೋಡಿದೆನು !
ಏನವಳ ಸೌಂದರ್ಯ ! ಏನವಳ ಲಾವಣ್ಯ !
ಸ್ವರ್ಗ ಸೌಂದರ್ಯವೇ ಸೂರೆಗೊಂಡಿದೆ ಅಲ್ಲಿ,
ಅವಳಲ್ಲಿ, ಆ ಶ್ವೇತ ಸುಂದರಿಯ ಮೈಯಲ್ಲಿ !
ಇದ ನೆನೆದರೆನಗಾಗದು !
        ಎಷ್ಟಾದರೂ ನಾನು ಹೆಣ್ಣಲ್ಲವೆ ?
ಹೆಣ್ಣು ಬಿನ್ನಾಣಕಿರುವ ಬೇರೊಂದು ಹೆಸರು !
ನಾನು ತ್ರಿಲೋಕ ಸುಂದರಿ, ರತಿ, ರಂಭೆ, ವೀನಸ್, ಹೆಲೆನ್ನಳನು
ಮೀರಿ ಮೆರೆಯುವ ಮೈಮಾಟ ;
ಕೂದಲಿನ ಎಳೆಎಳೆಯೂ ರೇಶ್ಮೆನೂಲಿನ ನೀಳ,
ಕಣ್ಣು ಕವಳಿಯ ಹಣ್ಣು, ಹುಬ್ಬು ಕಾಮನಬಿಲ್ಲು,
ತುಟಿ ತೊಂಡೆ, ಮೃದುಗಲ್ಲ, ಹಾಲುಗಲ್ಲಿನ ಕೆನ್ನೆ,
ಬಿರಿದೆಸೆವ ಚೆಂಗುಲಾಬಿಯ ಚೆಲುವು,
ಓಹ್! ಏನೆಂಥ ಸ್ಫಟಿಕ ಸುಂದರ ದೇಹ ನನ್ನದು ! ನನ್ನಡಿಯ
ಚುಂಬನಕೆ ಭೂದೇವಿಗೂ ಪುಲಕ !
ನಿರ್ಜೀವಿ ಕನ್ನಡಿಗೂ ಮೋಹ ಮೊಳೆದೋರುವುದು,
ಕಾಮ ಕಳೆಯೇರುವುದು ನನ್ನ ನೋಡಿದ ಚಣವೆ !
        ಈ ನನ್ನ ಸೊಬಗಿಂಗೆ ಸೌಂದರ್ಯ ಸಂಪದಕೆ
ಸ್ಪರ್ಧಿಗಳು ಜಗದೊಳಗೆ ಯಾರಾರು ಇಲ್ಲ !
ನನ್ನ ಮೈ ಚೆಲುವಿಂಗೆ ಸಾಟಿ ಇಲ್ಲ, ಸಾಟಿ ಇಲ್ಲ !
ಇದ್ದಳಾದರೆ.. ಇದ್ದಳಾದರೆ ಅವಳ ಕಥೆ ಮುಗಿಯಿತ್ತು ಇಂದೇ
ಅದಕಾಗಿ ತಪವಿದ್ದು ಜಪಜಪಿಸಿ,
ವಾಮಶಕ್ತಿಯನೊಂದ ವಶಮಾಡಿಕೊಂಡಿಹೆನು !
ಹಿಮಗಿರಿಯ ಕಂದರದ ಫಕೀರನೊಬ್ಬನ ಕಂಡು ಪಡೆದಂಥ
ಮಾಯಾವಿದ್ಯೆ ! ಅದೆ ಇಲ್ಲಿ ಸೆರೆಸಿಕ್ಕಿದೆ
ಈ ನನ್ನ ನಿಲವುಗನ್ನಡಿಯಲ್ಲಿ ! ಕರೆಯುವೆನು :
ಓ ಅವಲೋಕನಿ, ದರ್ಪಣದ ಮಾಯಾವಿ,
ಜಗದ ಚೆಲುವೆಯರಲ್ಲಿ ನಾ ಮೊದಲು ಅಲ್ಲೇನು? ಹೇಳು...
ಹೇಳು... ನುಡಿ... ಮಾತಾಡು!
ಮಾತಾಡು....... ಮೌನ ತಳೆದಿಹೆ ಏಕೆ? ಮಾತಾಡು ಮಾಯಾವಿ,
ಇದು ನನ್ನ ಕಟ್ಟಾಜ್ಞೆ, ಆಗ್ರಹದ ಬಲ್ಮೆ !

**ದರ್ಪಣ :** ಹ ಹ್ಹ ಹ್ಹ ಹ್ಹ ಹ್ಹ ಹ್ಹ ಹ್ಹಾ! ಓ ಹ್ಹೊ ಹ್ಹೊ ಹ್ಹೊ ಹ್ಹೊ ಹ್ಹೋ !!
(ನಗೆ ಚಣಕಾಲ ಪ್ರತಿಧ್ವನಿಗೊಡುವುದು. ಕತ್ತಲು ಬೆಳಕುಗಳ
ಚೆಲ್ಲಾಟ !)
ಚೆಲುವೆ ನೀ ಮಹರಾಣಿ! ಜಗದೊಳಗೆ ಬಲು ಚೆಲುವೆ! ಚೆಲ್ಲೆಗಂಗಳ

ಚೆಲುವೆ ! ಚೆಲುವೆಯರಲತಿ ಚೆಲುವೆ !

**ಸ್ವರ್ಣ** : ಭಲೇ! ಭೇಷ್! ಕೇಳಿದಂತೆಲ್ಲ ಆನಂದ!
ಮೈಮನಕೆ ಉಲ್ಲಾಸ ! ನನ್ನೊಲವಿನೊಲವೆ
ಓ ದರ್ಪಣದ ಮಾಯಾವಿ,
ಮುಂದುವರಿಯಲಿ ನಿನ್ನ ಸ್ತುತಿ ಗೀತೆ !

**ದರ್ಪಣ** : ಮಹರಾಣಿ, ಚೈತ್ಯನಲಿಂಗನದಿ ಮೆರೆವ
ಮೋಹದ ಮದಿರೆ ವಾಸಂತಿ ನೀನು !

**ಸ್ವರ್ಣ** : ಓಹ್ ! ಅನಂದ !.. ಎಣೆಯಿಲ್ಲದಾನಂದ !
ಕೇಳಿದಂತೆಲ್ಲ ಎನ್ನ ಮನಮಯೂರಿಯು ತನ್ನ
ಗರಿಗೆದರಿ ನರ್ತಿಪಳು!
ನಾನು ಮಹಾರಾಣಿ, ವಿಶ್ವಸುಂದರಿ, ಸೌಂದರ್ಯದಾ ಸೀಮೆ !
ನಾನೆ ಕಟ್ಟಕಡೆ, ಕೊಟ್ಟ ಕೊನೆ !
ನನಗಿಂತಲೂ ಮಿಗಿಲು ಸುಂದರಿಯೆ ಇಲ್ಲ !

**ದರ್ಪಣ** : ಸುಳ್ಳು !

**ಸ್ವರ್ಣ** : ಹ್ಞಾ !!

**ದರ್ಪಣ** : ಭ್ರಮೆಯ ಬಿಡು ಮಹರಾಣಿ! ಜಗವು ಕುಸ್ತಿ ಅಖಾಡ !
ಸತ್ಯಕೂ ಸವಾಲನ್ನೆಸೆವ ವಾದ ವೇದಿಕೆ ತಾಯಿ !

**ಸ್ವರ್ಣ** : ದರ್ಪಣದ ಮಾಯಾವಿ, ಎಚ್ಚರಾ... ಎಚ್ಚರಾ !!
ನನ್ನೊಡಲಿನಾಳದಿಂ ಭುಗಿಲೆದ್ದ ರೋಷ ಜ್ವಾಲೆ
ನಿನ್ನ ಬಲಿಗೊಳ್ಳದಿರಲಿ ! ನನ್ನೆದೆಯ ಹಾಲಾಹಲವ ಸವಿದು ಬೆಳೆದಿಹ
ನೀನು ಎಂದೆಂದಿಗು ನನಗೆ ದ್ರೋಹವನು ಎಸಗಲಾರೆ !
ಎಸಗಬಾರದು !

**ದರ್ಪಣ** : ಕ್ಷಮಿಸು ಮಹರಾಣಿ,
ಸತ್ಯ ಯಾವಾಗಲೂ ಕಟುವೆ !
ನ್ಯಾಯ ನೈಷ್ಠುರ್ಯಕ್ಕೆ ದಾಕ್ಷಿಣ್ಯ ತಿಳಿದಿಲ್ಲ, ಅದಕಾವ ಸ್ವಾರ್ಥವೂ ಇಲ್ಲ,
ವಸ್ತುನಿಷ್ಠದ ನಿಲವು ! ನಾನೊಂದು ಕನ್ನಡಿಯು, ನಿರ್ಜೀವ ವಸ್ತು;
ನಿಜ., ಆದರೆ ನನ್ನ ನಾಲಗೆಗೆ ಸುಳ್ಳಾಡಿ ಗೊತ್ತಿಲ್ಲ ಮನುಜರಂತೆ !
ಇದ್ದುದನು ಇದ್ದಂತೆ ನುಡಿವೆ. ಹಿತವೊ ಅಹಿತವೊ ಎಂತಾದರೂ
ಗ್ರಹಿಸು. ಸತ್ಯ ನುಡಿವುದೆ ನನ್ನ ನಿತ್ಯ ಕರ್ತವ್ಯ.

**ಸ್ವರ್ಣ** : ಇರಲಿ ನಿನ್ನ ಪ್ರವರ, ಹೇಳು ಮಾಯಾವಿ, ಯಾರವಳು?
ನನ್ನ ಸೌಂದರ್ಯ ಸ್ಪರ್ಧಾಳುವಾರು ?

**ದರ್ಪಣ** : ನಿನ್ನ ಮುದ್ದಿನ ಕುವರಿ, ನಮ್ಮೆಲ್ಲರರಗುವರಿ
ಸ್ನೋವೈಟ್ ಅರ್ಥಾತ್ ಶ್ವೇತಸುಂದರಿ !

**ಸ್ವರ್ಣ** : ಸಾಕು ನಿಲ್ಲಿಸು ಪ್ರೇತ !
ಶ್ವೇತ ಪ್ರತಿಸ್ಪರ್ಧಿ ಸೌಂದರ್ಯದೀ ಜೂಜಿನಲಿ ! ಇರಲಿ,
ಅವಳಿಲ್ಲವಾಗಿಸುವೆ, ನನ್ನೆಲ್ಲ ಚೆಲುವನ್ನೆ ಜಗದೊಳಗೆ ಮೆರೆವೆ.
ಅಚ್ಚಳಿಯದಂತಿಂದೆ ಮತ್ತೆ ಸ್ಥಾಪಿಸುವೆ !
ನೋಡುತಿರು, ನೋಡುತಿರು ಮಾಯಾವಿ ಹ ಹ್ಹ ಹ್ಹಾ !
(ಜೋರಾಗಿ ಜಾಗಟೆಯನ್ನು 'ಢಣ್' ಎನ್ನಿಸುವಳು. ಕೂಡಲೇ
ಶಸ್ತ್ರಧಾರಿ ಭಟ ಆಗಮಿಸಿ, ಶಿರಬಾಗಿ ನಿಲ್ಲುವನು)
ಅಮಾಸೀ...!

ಭಟ : ತಾಯೀ,

ಸ್ವರ್ಣ : ಅಮಾಸೀ, ನೀನಿಂದು ನನಗಾಗಿ ಕಾರ್ಯವೆಸಗಲೇಬೇಕು.
ಅದು ಪುಣ್ಯಕಾರ್ಯ, ಮಹತ್ವದ ಕಾರ್ಯ ಕೂಡ!

ಭಟ : ಆಜ್ಞೆಯಾಗಲಿ ತಾಯಿ, ಸೇವಕನು ಸಿದ್ಧನಿಹನು !

ಸ್ವರ್ಣ : ಭಲೆ ! ಭಲೆ ಕಾರ್ಯ ಧುರಂಧರ !
ಅಮಾಸಿ, ಇತ್ತ ಬಾ..... ತೆಗೆದುಕೊ ಈ ಮೊದಲ ತುತ್ತು!
(ಹಣದ ಥೈಲಿಯನ್ನೆಸೆಯುವಳು)
ಇಂದೆ ಮುಗಿಯಲಿ ಆ ಶ್ವೇತೆಯಾ ಸೌಂದರ್ಯ ಸ್ವತ್ತು!
ನನಗೆ ಬೇಕೇ ಬೇಕು ಅವಳೆದೆಯಗುಹೆಯಲ್ಲಿ
ಅಡಗಿರುವ ಮೃದು ಹೃದಯ! ತರಬಲ್ಲೆಯಾ?
ತಂದೆನಗೆ ಕಾಣಿಕೆಯನೀಯಬಲ್ಲೆಯ ಇಂದೆ ?

ಭಟ : ಇದಾವ ಗಹನ ಮಹರಾಣಿ ! ಘಳಿಗೆ ಮೂರೇ ಸಾಕು;
ಸ್ನೋವೈಟ್‌ಳ ಹೃದಯ ನಿಮ್ಮ ವಶವರ್ತಿ!
ಹೊರಡಲಪ್ಪಣೆಯೆ ಮಹರಾಣಿ !

ಸ್ವರ್ಣ : ಹೋಗಿ ಬಾ, ಬೇಗ ಬಾ, ಬೀಗಿ ತಾ ಅವಳೆದೆಯ ಗುಹೆಯಲ್ಲಿ
ಅಡಗಿರುವ ಮೃದು ಹೃದಯ !
(ಭಟನ ನಿರ್ಗಮನ)

ಸ್ವರ್ಣ : ಹ ಹ್ಹ ಹ್ಹ ಹ್ಹ ಹ್ಹ ಹ್ಹಾ
ಶ್ವೇತೆ ! ಓ ಸ್ನೋವೈಟ್! ಮುಗಿಯಿತ್ತು ನಿನ್ನ ಕಥೆ !
ರೂಪಸರ್ಪಿಣಿಯಾಗಿ ನನ್ನ ಕಚ್ಚುತಲಿದ್ದೆ, ಅಲ್ಲವೆ ? ನೋಡುತಿರು
ಹೆಡೆಯೊಡೆದು ಹುಡಿಯಾಗಿ ಮಡಿದು ಹೋಗುವೆ ನೀನು
ಇನ್ನರಘಳಿಗೆಯಲ್ಲಿ!
ಆಮೇಲೆ................. ಆಮೇಲೆ !
ನಾನೊಬ್ಬಳೇ ವಿಶ್ವಸುಂದರಿಯಾಗಿ ಮೆರೆವೆ !
ವಿಶ್ವಸುಂದರಿಯೆನಿಸಿ ಮೆರೆವೆ ! ಹ ಹ್ಹ ಹ್ಹ ಹ್ಹ ಹ್ಹಾ !
(ಬೆಳಕು ಬತ್ತುವುದು)

**ದೃಶ್ಯ ೩ :** **ಅರಣ್ಯ**

(ಭಟ ಮತ್ತು ಶ್ವೇತರ ಪ್ರವೇಶ)

ಸ್ನೋ : ಕಲ್ಲು ಹೂವನು ಕಿತ್ತು ಮುಡಿಸುವೆನು ಮುಡಿಗೆಂದು
ನೀನೆನ್ನ ಕರೆತಂದೆ! ವೀರಭಟ, ಭಯವಾಗುತಿದೆ ನನಗೆ !
ಗಾವುದಗಳೇಳೆಂಟು ದಾಟಿದರು ಸಿಗಲಿಲ್ಲ ಕಲ್ಲ ಹೂವನು ಬಿಟ್ಟ
ಅರೆ ಬಂಡೆ ! ಎಲ್ಲಿಹುದು ಹೇಳಣ್ಣ ?

ಭಟ : ಇಲ್ಲಿಹುದು ! (ಕಠಾರಿಯನ್ನು ಮೇಲೆತ್ತಿ ತೋರುವನು)

ಸ್ನೋ : ಹ್ಹಾ ! ಏನಿದೀ ಅಪಚಾರ ವೀರಭಟ ?

ಭಟ : ನಿನ್ನ ದೈವವ ಕೇಳು !

ಸ್ನೋ : ನಾ ಗೈದ ಅಪರಾಧವಾದರು ಏನು ಹೇಳಣ್ಣ ?

ಭಟ : ಸೌಂದರ್ಯವತಿಯಾಗಿ ಹುಟ್ಟಿದ್ದು !

ಸ್ನೋ : ಸೌಂದರ್ಯವತಿಯಾಗಿ ಹುಟ್ಟಿದ್ದು ! ಅದಕ್ಕೆ ನಾನು ಕಾರಣಳಲ್ಲ !

ಭಟ : ಸ್ನೋವೈಟ್, ಎಲ್ಲ ತಿಳಿಸಲು ನನಗೆ ಸಮಯವಿಲ್ಲೀಗ,
ನಿನ್ನ ಸೌಂದರ್ಯವೇ ನಿನ್ನ ಭಾಗಕೆ ಮೃತ್ಯು !

ನಿನ್ನ ಚಿಕ್ಕಮ್ಮನಿಗೆ ನಿನ್ನ ಹೃದಯವು ಬೇಕು !
ಒಡತಿಯಾಣತಿಯಂತೆ ನಿನ್ನಿಲ್ಲಿಗೆಳೆತಂದೆ !

**ಸ್ನೋ** : ನನ್ನ ಚಿಕ್ಕಮ್ಮನಿಗೆ ನನ್ನ ಹೃದಯವು ಬೇಕೆ ?

**ಭಟ** : ಹೌದು !

**ಸ್ನೋ** : ಅದರಿಂದ ಅವಳಿಗಾಗುವ ಲಾಭ ?

**ಭಟ** : ಆತ್ಮಸಂತೋಷ ! ಸ್ನೋವೈಟ್, ಕೇಳು,
ಈರೇಳು ಲೋಕಗಳಲೂ ಅವಳಂಥ ಸುಂದರಿಯು
ಮತ್ತೊಬ್ಬಳಿಲ್ಲೆಂಬ ಹೆಮ್ಮೆ !

**ಸ್ನೋ** : ನಿನಗೆ ?

**ಭಟ** : ನನಗೆ ಒಂದು ಜೋಳಿಗೆ ಹೊನ್ನು !

**ಸ್ನೋ** : ಸಂತೋಷ ! ನಾನು ಬಲಿಯಾದಲ್ಲಿ ಎರಡು ಲಾಭಗಳು,
ಮಲತಾಯಿಗಾನಂದ, ನಿನಗೆ ಜೋಳಿಗೆ ಹೊನ್ನು ! ಪಾಪ !
ನೀ ಬಡವ, ಚಣದಲ್ಲೆ ಧನಿಕನಾಗುವೆ ನೀನು !
ಅಣ್ಣ, ನನ್ನ ಜನ್ಮವದಿಂದು ಸಾರ್ಥಕವೆ ಆಯ್ತು !
ನಾ ಹುಟ್ಟಿ ನಿನ್ನಂಥವಗೆ ಬದುಕುಕೊಡುವಂಥ
ಭಾಗ್ಯ ಲಭಿಸಿತು ! ನಿನ್ನ ಕಾರ್ಯವ ನೀನು ನೆರವೇರಿಸಣ್ಣ,
ಒಳ್ಳಿತಾಗಲಿ ನಿನಗೆ, ನಿನಗಿಹಳು ನನ್ನಂಥ ಮಗಳು,
ಅವಳಿಗೊಳಿತಾಗಲಿ. ಚಿಕ್ಕಮ್ಮನಾನಂದ ಚಿರಾಯುವಾಗಲಿ !
........ ಅಪ್ಪಾಜಿ.......... ಅಮ್ಮ........ ! ಅಳುವಳು)

**ಭಟ** : ಸಾಕು ನಿಲ್ಲಿಸು ಮಗಳೆ, ಕಿತ್ತು ಬರುವುದು ಕರುಳು !
ನಿನ್ನ ಸದ್ಬುದ್ಧಿ ಸದ್ಭಾವನೆಗಳೆಳ್ಳಷ್ಟು ಇಲ್ಲ ಆ ನಿನ್ನ ಚಿಕ್ಕಮ್ಮನೆದೆಯಲ್ಲಿ!
ಮುಗ್ಧತೆಯೆ ಸಾಕಾರಗೊಂಡಂತೆ ಮೆರೆಯುತಿಹ ನಿನ್ನನ್ನು ನಾ
ಕೊಲ್ಲಲಾರೆ ! ನಾ ಕೊಲ್ಲಲಾರೆ ! ಕೊಂದಾವ ನರಕಕ್ಕೆ ಹೋಗಲಿ !
ಹೋಗಮ್ಮ ಈ ದಟ್ಟ ಕಾನನದಲ್ಲಿ ಎಲ್ಲಿಗಾದರು ಹೋಗು,
ಹೋಗಿ ಬದುಕು. ಈ ಕಟುಕನೆದೆಯಲ್ಲೂ ಕರುಣೆಯಾ
ಕಾರಂಜಿ ಪುಟಿದುದಕೆ ಅಚ್ಚರಿಯ ಪಡಬೇಡ.
ನಾ ಮನುಜನಲ್ತೆ ! ನನಗೂ ಹೃದಯವೆಂಬುದಿದೆ ತಾಯಿ !
ಆವುದಾದರು ಕುರಿಯ ಹೃದಯವನು ತೆಗೆದೊಯ್ವೆ
ರಾಣಿ ರೂಪದ ಆ ಸರ್ಪಿಣಿಗೆ ಕೊಟ್ಟು ತೃಪ್ತಿ ತುಂಬುವೆ ನಾಳೆ !
ಬರಲೆ ಮಗಳೆ !

**ಸ್ನೋ** : ಹೋಗಿ ಬಾರಣ್ಣ

(ರಂಗದ ಕಡೆವರೆಗೆ ಹೋಗಿ ಕೈಯೆತ್ತಿ ಬೀಳ್ಕೊಟ್ಟು ಚಣಕಾಲ ನಿಲ್ಲುವಳು.
ಅನಂತರ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳುತ್ತಾ)

ಅಯ್ಯೋ ನನ್ನ ದೈವವೆ !
ಅರಮನೆಯ ತೊರೆಸಿ ಅಡವಿಗೆಳೆತಂದೆಯಾ ?
ಎಲ್ಲಿ ಹೋಗಲಿ ನಾನು, ಯಾರು ಸಲಹುವರೆನ್ನ ?
ಈ ಕಗ್ಗಾಡಿನೊಡಲಲ್ಲಿ ಸಾವುದಾದರು ಎಲ್ಲಿ ?
ಅಯ್ಯಯ್ಯೋ ನಾ ಅನಾಥೆ, ನಾ ಅನಾಥೆ....!
ಅಮ್ಮಾ... ಅಮ್ಮಾ

(ಹಾಡು) ನನ್ನೊಬ್ಬಳನೆ ಬಿಟ್ಟು ನೀ ಎಲ್ಲಿಹೋದೆ
ನನ್ನನಾಥಳ ಮಾಡಿ ಮುಗಿಲ ಮರೆಯಾದೆ ॥

ಕನ್ನಡಿಯು ಕೈ ತಪ್ಪಿ ಹನ್ನೆರಡು ಚೂರಾಗೆ
ಕೂಡಿಸಲು ನೀ ಬೇಕು ಬೇಗ ಬಾರಮ್ಮ !
ಹಸಿದಿಹೆನು ಹಾಲೂಡು, ಪವಡಿಪೆನು ಮಡಿಲೊಡ್ಡು
ಹಳೆಯ ಜೋಗುಳವಾಡಿ ಮಲಗಿಸಮ್ಮ
ಬಿಮ್ಮನಹ ಬೆಟ್ಟಗಳೆ, ಸುಮ್ಮನಿಹ ಸರುವುಗಳೆ,
ಮುಗಿಲ ಚುಂಬಿಸುತಿರುವ ಓ ವೃಕ್ಷರಾಜಿಗಳೆ,
ಬಾಳ ಬತ್ತಲೆಗೊಳಿಸಿ, ನನ್ನ ಕತ್ತಲಲಿರಿಸಿ
ಹೊರಟು ಹೋದಳು ಅಮ್ಮ, ಕರೆಸಿಕೊಡಿರೇ !
ನನ್ನ ತಾಯಿಯ ನೀವು ಕರೆಸಿಕೊಡಿರೇ ॥
ಅಮ್ಮಾ... ಅಮ್ಮಾ..

(ಹಾಡಿಕೊಂಡೇ ನೈಪಥ್ಯ ಪ್ರವೇಶಿಸುವಳು. ದೃಶ್ಯ ಬದಲಾಗಿ ಕಳ್ಳರ ಕುಟೀರ ಕಾಣುವುದು. ಆ ಎಡೆಗೆ ಪ್ರವೇಶಿಸುವಳು)

**ದೃಶ್ಯ ೪** **ಕುಳ್ಳರ ಬೀಡು**

**ಸ್ನೋ** : ತಾಯಿಯಿಲ್ಲದ ಮೇಲೆ ಮಗು ಬದುಕಬಾರದು ! ಬದುಕಿದರು
ಮಲತಾಯಿ ಬಳಿ ಬೆಳೆಯಬಾರದು !
ಎತ್ತಿ ಮುದ್ದಾಡುವಾ ಅಮ್ಮನಿಲ್ಲದ ಮೇಲೆ
ಪಾಪಿ ಜೀವವ ಹಿಡಿದು ಬದುಕುವುದು ತಗದು !
ನಾನು ಸಾಯುವುದು ಲೇಸು ! ಸಾಯುವುದು ಲೇಸು !

(ಅಮ್ಮ! ಎಂದು ಚೀರಿ ಕುಳ್ಳರ ಕುಟೀರದ ಮುಂದೆ ಬೀಳುವಳು. ತುಸು ಹೊತ್ತಾದ ಮೇಲೆ ಕತ್ತೆತ್ತಿ ಕಣ್ತೆರೆದು ಕುಟೀರ ನೋಡಿ ಹಿಗ್ಗುವಳು. ಅನಂತರ ಮೈಕೊಡವಿ ಮೇಲೆದ್ದು)

ಓಹ್ ! ನನ್ನ ಪುಣ್ಯವೆ ಪುಣ್ಯ !!
ದಟ್ಟಡವಿಯಲ್ಲೊಂದು ಕಟ್ಟಿರುವ ಪುಟ್ಟ ಮನೆ !
ಋಷಿಗಳಾಶ್ರಮದಂತೆ ತೋರುತಿಹ ಪರ್ಣಕುಟಿ !
ಇರಲಿ. ಒಳಹೊಕ್ಕು ಹುಡುಕುವೆನು ನನ್ನ ಭಾಗ್ಯದ ಬೆಳಸ !

(ಕಿರಿದಾದ ಬಾಗಿಲು. ಕಷ್ಟಪಟ್ಟು ನುಸುಳಿ ಒಳಬರುವಳು)

ಎನಿತು ಕಿರಿದಾಗಿಹುದು ಮನೆಯ ಹೆಬ್ಬಾಗಿಲು !
ಪುಟ್ಟ ಮನೆ, ಕಿರಿದಾದ ಕೋಣೆಗಳು...

(ಪುಟ್ಟ ಪುಟ್ಟ ಕುರ್ಚಿಗಳು, ಅವುಗಳ ಮುಂದೆ ಪುಟ್ಟ ಮೇಜುಗಳು, ಮೇಜುಗಳ ಮೇಲೆ ಕಿರಿದಾದ ತಟ್ಟೆಗಳಲ್ಲಿ ಊಟ ಬಡಿಸಿದೆ)

ಓಹ್ !
ಏಳೆಂಟು ಊಟಗಳು ಆಗಲೇ ಸಿದ್ಧವಿವೆ !
ಹ್ಞು ! ಹಸಿವು... ಹಸಿವು... ಕಿತ್ತು ತಿನ್ನುವ ಹಸಿವು !
ಈಗಲೇ ಇಂಗಿಸುವೆ ! ಯಾರೇನೆ ಅನ್ನಲಿ, ಬಯ್ಯಲಿ, ಹೊಡೆಯಲಿ,
ಈ ಉಣಿಸು ತೆಗೆದೆನ್ನ ಹೊಟ್ಟೆಯನು ಸೇರಿಸುವೆ.

(ರುಚಿ ನೋಡಿ ಒಂದೊಂದೇ ಎಡೆಯಿಂದ ಒಂದೊಂದು ಆಹಾರ ವಸ್ತು ತೆಗೆದು ಮೆಲ್ಲುತ್ತಾ)

ಎನಿತು ಸವಿ! (ಪ್ಚು: ಚಪ್ಪರಿಸಿ) ಬಲುಸವಿಯು ಬಲುಸವಿಯು.
ಹುಳಿ, ಗೊಜ್ಜು, ತಿಳಿಸಾರು ಬಗೆ ಬಗೆಯ ಪಲ್ಲೆಗಳು !
ಮೇಲೆ ರೊಟ್ಟಿಯ ಚೂರು, ಬೆಳುದಿಂಗಳೇಳಿಸುವ ಬಿಳಿ ಮೊಸರು !

ಪ್ಚು ! ಆಹಾ !! ಏಳೆಡೆಯಳೊಂದೊಂದೇ ತಿನಿಸ ತಿನ್ನುವೆ ತೆಗೆದು.
ಯಾರೆಡೆಯೊ, ಯಾರ ಮೀಸಲ ಉಣಿಸೊ ನನಗೇನು ?
(ತಿಂದು) ಅಬ್ಬಾ! ತೃಪ್ತವಾಯಿತು ಜೀವ ! ಸಾಕು.
ಹೊಟ್ಟೆ ತುಂಬಿಸಿ ಆಯ್ತು, ದಾರಿ ನಡೆದಾಯಾಸ ! ಆಹ್ !
(ಆಕಳಿಸಿ, ಮೈಮುರಿದು) ಚಣಕಾಲ ಮಲಗುವೆನು.
ಬಂದದ್ದು ಬರಲಿ. ನನ್ನ ತಾಯಿಯ ಕರುಣೆ ನನ್ನನ್ನು ಕಾಯಲಿ
(ಒಂದು ಬದಿಯಲ್ಲಿದ್ದ ತುಸು ಎತ್ತರದ ಮಂಚದ ಮೇಲೆ ಮಲಗುವಳು)

**ದೃಶ್ಯ ೫.** **ಕಾಡಿನ ಹಾದಿ**

ಏಳು ಜನ ಕುಳ್ಳರು ತಮ್ಮ ಹೆಗಲ ಮೇಲೆ ಸಲಿಕೆ, ಪಿಕಾಸಿ, ಹಾರೆ, ಬಾಂಡ್ಲೆ ಇತ್ಯಾದಿಗಳನ್ನು ಹೊತ್ತು ಒಂದು ಕೈಯಲ್ಲಿ ಕಾರ್ಬೆಡ್ ಲ್ಯಾಂಪ್ ಹಿಡಿದು ಪ್ರವೇಶಿಸುವರು.

ಈ ಏಳು ಜನರು ಕುಳ್ಳರೇ ಇರಬೇಕು, ತಲೆಗಳ ಮೇಲೆ ವಿಚಿತ್ರವಾದ ಉದ್ದದ ಟೋಪಿ, ಬಣ್ಣದ ಚೊಣ್ಣ, ಕೆಲವರಿಗೆ ಬಿಳಿಮೀಸೆ, ಕೆಲವರಿಗೆ ಕರಿ ಮೀಸೆ, ವಯಸ್ಸಾಗಿದ್ದರೂ ಪುಟ್ಟ ಮಕ್ಕಳಂತೆ ಕಾಣುತ್ತಾರೆ. ಸಾಲಾಗಿ ಒಬ್ಬನ ಹಿಂದೆ ಮತ್ತೊಬ್ಬ ರಂಗದ ಮೇಲೆ ಬಂದು ಈ ಕಡೆಯಿಂದ ಆ ಕಡೆಗೆ ನಡೆದು ಹೋಗುತ್ತಾರೆ. ಆಗ ರಂಗದ ಹಿನ್ನೆಲೆಯಲ್ಲಿ ಟಣ್ ! ಟಣ್ ! ಟಣ ಟಣ ಟಣ್ ! ಟಣ್ ! . ಟಣ ಟಣ ಎಂಬ ವಾದ್ಯ ಧ್ವನಿ ಲಯಬದ್ಧವಾಗಿ ನುಡಿಯುತ್ತಿರುವುದು.

**ದೃಶ್ಯ ೬ :** **ಕುಳ್ಳರ ಬೀಡು**

(ಬೀಡಿನ ಮುಂದೆ ಐದು ಜನಮಾತ್ರ ನಿಂತು)

**ಕುಳ್ಳ ೧ :** ಎಲ್ಲರೂ ಬಂದು ಆಯ್ತೋ?
೨ : ಆಯ್ತು, ಆಯ್ತು.
೩ : (ಅಣಕಿಸುತ್ತಾ) ಆಯ್ತು.. ಆಯ್ತು ! ನಿಮ್ಮಮ್ಮನ ಮದುವೆ
ಆಯ್ತು ನಿಮ್ಮಪ್ಪನ ಜೊತೇಲೆ !!
೨ : ಏಯ್! ಅಪ್ಪ ಅಮ್ಮರ ಸುದ್ದಿ ಎತ್ತ ಬೇಡಾ !
ನನ್ನ ಸಿಟ್ಟು ನೆತ್ತಿಗೇರಿ ಜುಟ್ನಲ್ಲಿ ಜೋಕಾಲಿ ಆಡಿಬಿಡುತ್ತೆ !
೩ : ಸಿಟ್ಟು ಬಂದ್ರೆ ಏನು ಮಾಡ್ತಿಯೊ ?
೨ : ಏನೂ ಮಾಡ್ತಿನೋ.. ಕೈ ಮುರಿದು ಕಾಲಿಗೆ..
ಅಲ್ಲಲ್ಲ ಕಾಲು ಮುರ್ದು ಕೈಗೆ ಕೊಡ್ತೀನಿ !
೩ : ಕೊಡ್ತೀಯಾ, ಕೊಡ್ತೀಯಾ.. ಮುರಿಯೋಕೆ ಅದೇನು
ಹರಳು ಕಡ್ಡಿ ಅಲ್ಲ !
೨ : ಹರಳು ಕಡ್ಡಿ ಅಲ್ಲ.... ಜೋಳದ ಕಡ್ಡಿ..
ಲೇಯ್ ಬರ್ತೀಯೇನೋ .....!
೩ : ಬಾರೋ.. ಒಂದು ಕೈ ನೋಡೇ ಬಿಡ್ತೀನಿ !..
ಬಾರೋ.. (ಒಬ್ಬ ಹಿಡಿಯುವನು) ಲೇಯ್ ಬಿಡ್ರೋ
ನನ್ನ ಕೈಯ್ನ!
೨ : ಲೇಯ್ ನನ್ನ ಕೈ ಬಿಡ್ರೋ (ಇವನನ್ನು ಮತ್ತೊಬ್ಬ ಹಿಡಿದಿರುವನು)
(೨ ಮತ್ತು ೩ ಕುಸ್ತಿಗೆ ಬೀಳುವರು. ರಂಗದ ತುಂಬ ಗದ್ದಲ.)
**ಕುಳ್ಳ ೧ :** ಲೇ ಪಿಂಕು, ಟಿಂಕು ಬಿಗೀರೊ ಅವರಿಬ್ಬರಿಗೂ ನಾಲ್ಕು ನಾಲ್ಕು
(೪ ಒಬ್ಬನಿಗೆ ೫ ಮತ್ತೊಬ್ಬನಿಗೆ ಎರಡೆರಡು ಏಟು ಕೊಟ್ಟು
ಬಿಗಿಯಾಗಿ ಹಿಡಿದುಕೊಂಡು ನಿಲ್ಲುವರು)
ಬೆಳಗ್ಗೆ ಗಣಿ ಕೆಲಸಕ್ಕೆ ಹೋದದ್ದು ಎಷ್ಟು ಜನ, ಈಗ ಹಿಂತಿರುಗಿ
ಬಂದದ್ದು ಎಷ್ಟು ಜನ ಹೇಳ್ರೋಂದ್ರೇ ಕುಸ್ತಿಗೆ ನಿಲ್ತಾರೆ ! ಮಕ್ಳು !!

೨ : ಆಂ.. ಗಣೀ ಕೆಲಸಕ್ಕೆ ಹೋದೋರು ನಾವು ಏಳು ಜನ. ವಾಪಸ್
ಬಂದೋರು... (ಅವನನ್ನು ಬಿಟ್ಟು ಎಣಿಸಿ)
ಅಯ್ಯಯ್ಯೋ ನಾಲ್ಕೇಜನ!

೩ : ಉಳಿದ ಮೂರು ಜನರನ್ನ ಆ ಗಣಿ ನುಂಗ್ತೇನ್ರೋ?

೬ + ೭ : (ಪ್ರವೇಶಿಸಿ) ಇಲ್ಲಾ ಕಣ್ರೋ, ಅಳಬೇಡಿ,
ನಾವಿಬ್ಬರೂ ಬಂದಿದೀವಿ!

೧ : ಸರಿ. ನಾಲ್ಕು + ಎರಡು ಆರು ಆಯ್ತು ! ಇನ್ನೊಬ್ಬ ?

೨ : ಮಂಗಮಾಯ !!

೩. : ಅಯ್ಯಯ್ಯೋ ಕಡೇಲಿ ಬರ್‍ತಿದ್ದೋನ್ನ ಆ ಹಾಳು ಗಣಿ
ಬಲಿತಗೊಂಡ್ತು ! (ಅಯ್ಯೋ ಎಂದು ೨+೩ ಅಳತೊಡಗುವರು)

೪ : ಲೇಯ್ ನಿಲ್ಲಿಸ್ರೋ, ಬೆಪ್ಪು ನನ್ನ ಮಕ್ಳಾ, ನಿಮಗೆ
ಕೂಡಾ ಲೆಕ್ಕಾನೇ ಬರೋಲ್ಲ, ಬರೀ ಕಳೆಯೋ ಲೆಕ್ಕಾನೆ !
ಗುಣಾಕಾರ ಭಾಗಕಾರಗಳಂತೂ ಆ ಭಗವಂತನಿಗೇ ಪ್ರೀತಿ !
ಈಗ ಮೊದಲಿಂದ ಎಣಿಸೋಣ.. ಎಲ್ಲರೂ ದುಂಡಗೆ ನಿಲ್ರಿ!
...ಮೊದಲನೆಯವನು ಪಕ್ಕದವನಿಗೆ ಒಂದೇಟು ಕೊಡಬೇಕು.
ಕೊಟ್ಟ ಕೂಡಲೆ ಏಟು ತಿಂದವನು ಒಂದು ಅನ್ನಬೇಕು. ಆಮೇಲೆ
ಎರಡನೆಯವನು ಅವನ ಪಕ್ಕದವನಿಗೆ ಏಟು ಕೊಡಬೇಕು. ಅವನು
ಎರಡು ಅನ್ನಬೇಕು.. ಹೀಗೇ ಕೊನೇ ತನಕಾ. ಗೊತ್ತಾಯ್ತಾ ?

೫ : ಇದಪ್ಪ ಸರಿಯಾದ ಪ್ಲಾನು!.. ನಿಲ್ರೋ ದುಂಡಗೆ (ನಿಲ್ಲುವರು)
ಹೂಂ ಆರಂಭಿಸಿ.. ಮೊದಲು ಎಲ್ಲಿಂದ ಆರಂಭ.. ಎಲ್ಲರಿಗಿಂತ
ಸಣ್ಣ ಕುಳ್ಳನಿಂದ ಆರಂಭವಾಗಲಿ..
ಲೋ ಟಿಂಕು ಕೊಡೊ ಒಂದು ಪಿಂಕೂಗೆ

(೭ನೆಯವನು ೬ನೆಯವನಿಗೆ ಒಂದೇಟು ಕೊಡುವನು, ೬ನೆಯವನು 'ಒಂದು'
ಎಂದು ಹೇಳದೆ ಸುಮ್ಮನೆ ನಿಂತಿರುವನು. ಅದನ್ನು ಕಂಡು ೭ನೆಯವನು
ಮತ್ತೊಂದು ಪೆಟ್ಟು ಕೊಟ್ಟು)

೭. : ಹೇಳೊ, ಒಂದು, ಅಂತಾ !

೬ : ಎರಡು (ಎಂದನ್ನುವನು)

**ಎಲ್ಲರೂ** : (ಸಿಟ್ಟಾಗಿ) ಲೇಯ್ ದಡ್ಡ ಮುಂಡೇದೆ ಒಂದು ಅನ್ನೋದು ಬಿಟ್ಟು
ಎರಡು ಅಂತೀಯಲ್ಲಾ ನಿನ್ನ ತಲೇಲಿ ಏನೈತೆ ?

೬ : ಇವನು ಎರಡು ಏಟು ಕೊಟ್ಟ ಅದಕ್ಕೆ ಎರಡು ಅಂದೆ, ಕೇಳಿ ಅವನ್ನೇ ಬೇಕಾದ್ರೆ.

**ಉಳಿದವರು** : ಹೌದೇನೋ ?

೭ : ಒಂದು ಏಟು ಕೊಟ್ಟೆ, ಲೆಕ್ಕ ಹೇಳಲಿಲ್ಲ, ಅದಕ್ಕೆ, ಇನ್ನೊಂದು ಬಿಗಿದೆ.
ಈಗ ಸರೀಗೆ ಹೇಳದೆ ಹೋದ್ರೆ.

೬ : ಹೂಂ.. ಬಿಗಿತೀಯ ಸುಮ್ನನಿದ್ರೆ. ಲೇಯ್ ನನ್ನ ಮಗನೆ, ನಿನ್ ನಿನ್
ಸೊಂಟ ಮುರಿದು ಬಿಡ್ತೀನಿ (ಮೇಲೇರ ಹೋಗುವನು)

**ಉಳಿದವರು** : ಹೌದೇನೋ ?

೭ : ಒಂದು ಏಟು ಕೊಟ್ಟೆ, ಲೆಕ್ಕ ಹೇಳಲಿಲ್ಲ, ಅದಕ್ಕೆ, ಇನ್ನೊಂದು ಬಿಗಿದೆ.
ಈಗ ಸರೀಗೆ ಹೇಳದೆ ಹೋದ್ರೆ.

೬ : ಹೂಂ.. ಬಿಗೀತೀಯ ಸುಮ್ಮನಿದ್ರೆ. ಲೇಯ್ ನನ್ನ ಮಗನೆ, ನಿನ್ ನಿನ್ ಸೊಂಟ ಮುರಿದು ಬಿಡ್ತೀನಿ
(ಮೇಲೇರ ಹೋಗುವನು)

೧ : ಎಲಾ ಇವರಾ! ಹೊಟ್ಟೆ ಹಿಟ್ಟು ಕಂಡಿಲ್ಲ, ಆಗಲೇ ಎಗರಾಡೋ ಇವರು

ಹಿಟ್ಟು ಕಂಡ ಮೇಲೆ ಹೇಗಾಡಾನಾ ! ಲೇಯ್ ಹೊಟ್ಟೆ ಹಸೀತಾ ಇದೆ ಬೇಗ ಲೆಕ್ಕ ಮುಗಿಸಿ.

೪ : ನೋಡ್ರಪ್ಪಾ ಯಾವ ತರಲೆ ತಕರಾರು ಬ್ಯಾಡ, ಎಲ್ಲರೂ ನಾನು ಹೇಳಿದ ಹಾಗೆ ಲೆಕ್ಕ ತಪ್ಪದ ಹಾಗೆ ಪೆಟ್ಟು ಬಿದ್ದ ಕೂಡಲೇ ಲೆಕ್ಕ ಹೇಳಬೇಕು ತಿಳೀತಾ. ಈಗ ಹೊಸದಾಗಿ ಶುರು ಮಾಡೋಣ

ಎಲ್ಲರೂ : ಆಗಬಹುದು ಆಗಬಹುದು.

೪ : ಲೋ ಟಿಂಕು ಕೊಡು ಒಂದು ಆ ಪಿಂಕೂಗೆ.
(ಕೊಡುವನು. ಪಿಂಕು 'ಒಂದು' ಅನ್ನುವನು. ಅದೇ ರೀತಿ ಏಳು ಜನ ಆದ ಮೇಲೆ, ಏಳನೆಯವನು 'ಏಳು' ಅಂದು ತನ್ನ ಪಕ್ಕದವನಿಗೆ ಒಂದೇಟು ಕೊಡುವನು ಪೆಟ್ಟು ತಿಂದವನು 'ಎಂಟು' ಅನ್ನುವನು ಕೂಡಲೇ ಎಲ್ಲರೂ ಅಚ್ಚರಿಗೊಳ್ಳುವರು!)

೫ : ಅರೇ ಎಂಟು ! ನಾವು ಇಷ್ಟೂ ದಿವಸ ಇದ್ದೋರೇ ಏಳು...
ಈಗ ಇದ್ದಕ್ಕಿದ್ದ ಹಾಗೆ ಎಂಟು !! ಹೆ ಹೆ ಹ್ಹೆ ಹ್ಹೆ !!
(ಕುಣಿಯುವರು)

೧ : ಮಹಾಬುದ್ಧಿವಂತ ಬಡ್ಡಿ ಮಕ್ಕಳು! ಲೋ ನಿಮ್ಮ ಮುಖಕ್ಕಷ್ಟು.. ! ಎಲ್ಲಿ ಈಗ ನಾವೆಲ್ಲ ಸಾಲಾಗಿ ನಿಲ್ಲೋಣ. ಮೊದಲು ಸಣ್ಣ ಕುಳ್ಳ ಟಿಂಕು, ಆ ಮೇಲೆ ಪಿಂಕು, ವೆಂಕು, ಮಂಕು, ಟ್ರಂಕು, ಪೆಂಕು, ನಾನು ಸುಂಕು.. (ಎಲ್ಲರೂ ಸಾಲಾಗಿ ನಿಲ್ಲುವರು) ಹೂಂ. ಹೇಳೊ ಟಿಂಕು 'ಒಂದು' ಅಂತಾ ! (ಹೇಳುವನು ಎಲ್ಲರೂ ಅದೇ ರೀತಿ ಹೇಳಿ, ಏಳು ಅಂದ ಕೂಡಲೇ ಎಲ್ಲರೂ ಒಟ್ಟಿಗೆ ಸೇರಿ ಹಿಗ್ಗಿನಿಂದ ನೆಗೆದು)

ಎಲ್ಲರು : ಭೇಷ್ ! ನಾವೆಲ್ಲರು Present Sir !!
(ಎಂದು ಕೂಗಿ ಕುಣಿದಾಡುವರು)

೭ : ನೀವು ಇಲ್ಲಿ ಕುಣೀತಾ ಇರ್ರೀ; ನಾನು ಒಳಗೆ ಹೋಗ್ತೇನೆ,
ನನ್ನ ಹೊಟ್ಟೇನಲ್ಲಿ ಕುದುರೆಗಳು ಕುಣೀತಾ ಇವೆ !

೧ : ಹೌದು, ಊಟದ ಸಮಯ ನಡೆಯಿರಿ.
ಮೊದಲು ಊಟ ಆಮೇಲೆ ನಾಟ್ಯ !
(ಎಲ್ಲರೂ ಒಳಗೆ ಹೋಗಿ ಹಿಂದಿನಿಂದ ಕಂಡಿಯಂತಹ ಬಾಗಿಲಿನಿಂದ ತೂರಿಕೊಂಡು ಮನೆ ಒಳಕ್ಕೆ ಪ್ರವೇಶಿಸುವರು. ಒಳಗೆ ಡೈನಿಂಗ್ ಟೇಬಲ್ ಅಸ್ತವ್ಯಸ್ತವಾಗಿರುವುದನ್ನು ಕಂಡು ಎಲ್ಲರೂ ಆಶ್ಚರ್ಯ ವ್ಯಕ್ತಪಡಿಸುತ್ತಾ, ತಮ್ಮ ತಮ್ಮ ಊಟದ ತಟ್ಟೆಗಳ ಮುಂದೆ ಕುಳಿತು)

೧ : ಅರೇ ನನ್ನ ಚಪಾತೀನೆ ಇಲ್ಲ!

೨ : ನನ್ನ ಚಟ್ನಿ, ಪಲ್ಯ, ಪಲಾವ್ ?

೩ : ಯಾರೋ ಕೊಟ್ರು ಬುಲಾವ್ ?

೪ : ಅಯ್ಯಯ್ಯೋ ಸೂಪೇ ಇಲ್ಲ ! ಸಾರು ಮೊದಲೇ ಇಲ್ಲ !!

೫. : ಯಾರು ತಿಂದೋರು ! ಯಾರು ?

೬ : ನಾನಲ್ಲಪ್ಪಾ, ಯಾವುದೋ ಇಲಿ ಇರಬೇಕು !

೭ : ಅಲ್ಲ.. ಅಲ್ಲ, ಇಲಿ ಅಲ್ಲ ಹುಲಿ ಇರಬೇಕು
(ಹ್ಹಾ! ಎಂದು ಎಲ್ಲರೂ ಬೆದರಿ ನಿಲ್ಲುವರು)

೧ : ಲೇಯ್ ಬೆಪ್ಪೇ, ಹುಲಿ ಬಂದ್ರೇ ಒಂದೊಂದು ತಟ್ಟೇನಲ್ಲೂ
ಒಂದೊಂದೇ ಎತ್ತಿಕೊಂಡು ತಿನ್ನುತ್ತೇನೋ.. ಯಾರದೊ !

ಮನುಷ್ಯರ ಕೆಲಸ ಇದು.

೨ : ಅರೇ ! ಅಲ್ನೋಡ್ರೋ, ನನ್ನ ಮಂಚದ ಮೇಲೆ ಯಾರೊ?...

**ಎಲ್ಲರೂ :** ಹ್ಹಾ sss!!

– ಕಣ್ಣು ಬಾಯಿತೆರೆದು, ಭಯಗ್ರಸ್ಥರಾಗಿ ಡೈನಿಂಗ್ ಟೇಬಲ್ ಬಿಟ್ಟು ಮಂಚದ ಕಡೆ ಸರಿಯುವರು. ಮಂಚದ ಮೇಲೆ ಮಲಗಿದ್ದ ಶ್ವೇತಳ ಬಳಿಗೆ ಕಳ್ಳ ಹೆಜ್ಜೆ ಹಾಕಿ ನಡೆದು ಹೋಗಿ ನೋಡಿ, ಮೆಲ್ಲಗೆ ಹಿಂತಿರುಗಿ ಬಂದು

೩ : ಇವಳೂ ....

೪ : ಷ್ ! ... ದೇವತೆ !

೫ : ಯಕ್ಷಿ !

೬ : ಗಂಧರ್ವಕನ್ಯೆ !

೭ : ಅಪ್ಸರೆ...! ರೆಂಬೆ !!

೧ : ಅಲ್ಲ ಕೊಂಬೆ ! ನಿಮ್ಮಮ್ಮನ ತಲೆ, ಸುಮ್ನೆ ನಿಂತ್ಕೋ.
ರೆಂಬೆ ಅಂತೆ ರೆಂಬೆ.. ! ರಂಭೆ ಅನ್ನು !

೭ : ಹೂಂ. ಅದೇ ಅಂದೆ !

೨ : ಊರ್ವಶಿ !

೩ : ಮೇನಕೆ, ತಿಲೋತ್ತಮೆ !

೪ : ಅವಳಜ್ಜಿ, ಅವಳಕ್ಕ !

೫ : ಲೇಯ್, ತಲೆಪ್ರತಿಷ್ಠೆ ಬೇಡ. ಇವಳು ಮನುಷ್ಯಳಂತೂ ಅಲ್ಲ !... ಮನುಷ್ಯರಲ್ಲಿ ಇಂಥಾ ಚೆಂದುಳ್ಳೆ ಚೆಲುವೇನಾ ನನ್ನ ಜೀವನದಲ್ಲೇ ನೋಡಿಲ್ಲ !

೬ : ಹೌದು... ಅಕಸ್ಮಾತ್ ದೇವಲೋಕದ ದೇವತೆ ವಿಮಾನದಿಂದ ತಪ್ ಅಂತಾ ಇಲ್ಲಿ ಬಂದು ಬಿದ್ದು...

೭ : ಇಲ್ಲಾ ಎಲಿಕಾಪ್ಟರ್‌ನಲ್ಲಿಳಿದು.. ಊಟಮಾಡಿ, ನಿದ್ದೆ ಹೊಡೀತಿದಾಳೆ.

(ಸ್ನೋವೈಟ್‌ಳಿಗೆ ನಿದ್ರಾಭಂಗವಾಗುವುದು. ಮೇಲೇಳಲು ಹೊರಳುವಳು)

೧ : ಲೆ ಲೆ ಲೇ, ನಿಲ್ಲಿಸ್ರೋ ನಿಮ್ ಮಾತು! ಎಚ್ಚರಾದಂಗೆ ಕಾಣುತ್ತೆ.
ಎದ್ದಳು ಎದ್ದಳೂ !

(ಸ್ನೋವೈಟ್ ಎದ್ದು ಕಣ್ತೆರೆದು ಅವರನ್ನು ನೋಡಿ ಬೆಚ್ಚುವಳು)

**ಎಲ್ಲರೂ :** (ನಮ್ರತೆಯಿಂದ) ದೇವರಮ್ಮ, ನಮ್ಮನ್ನು ಕಾಪಾಡು..
ಕಾಪಾಡು! ನಾವು ಮನುಸ್ರೂ! ನರ ಮನುಸ್ರೂ !
ಶಾಪಗೀಪ ಕೊಟ್ಟು ಬುಟ್ಟೀಯಾ !
ಬೇಸರ ಪಟ್ಕೊಂಡು ಮಾಯ ಆಗಿಬುಟ್ಟೀಯಾ.
ನಾವೂ ನಿನ್ನ ಅಣ್ಣ ತಮ್ಮಗಳಿದ್ದ ಹಾಗೇ..! ಹೂಂ!

**ಸ್ನೋ :** ಸಂತೋಷ ! ಅಣ್ಣಗಳಿರಾ,

**ಇಬ್ಬರು :** ಯವ್ವೇ ! ಯವ್ವೇ !! ಜೇನು ! ಜೇನು! ಜೇನುತುಪ್ಪದ ಹಾಗೆ ಸವಿ ನನ್ನ ತಾಯಿ ದನಿ ! ಹೇಳು ನನ್ನವ್ವ.

**ಸ್ನೋ :** ನಾನು ದೇವತೆಯೂ ಅಲ್ಲ, ದೆವ್ವವೂ ಅಲ್ಲ. ನಿಮ್ಮ ಹಾಗೇ ಮನುಷ್ಯಳು. ಆದರೆ ಅಭಾಗಿನಿ, ಅನಾಥೆ, ಅಡವಿಯಲಿ ಕೊಲೆಗೀಡಾಗಬೇಕಾಗಿದ್ದವಳು !

**ಇನ್ನಿಬ್ಬರು :** ಅಯ್ಯಮ್ಮೋ !

ಸ್ನೋ : ಹೌದು. ನನ್ನ ಭಾಗದ ದೈವ ನಿಮ್ಮೆಡೆಗೆ, ನಿಮ್ಮ ಕುಟೀರಕ್ಕೆ
ಕರೆತಂದು ರಕ್ಷಿಸಿತು. ನಿಮ್ಮ ಸೋದರಿ ಇವಳ ರಕ್ಷಿಸುವಿರಾ ಹೇಳಿ ?

ಎಲ್ಲರೂ : ಅಯ್ಯೋ ನನ್ನಮ್ಮ.. ನಮ್ಮ ತಾಯಿ ಹಾಗಿರು ! ... ನಿನ್ನ ಹೆಸರು?

ಸ್ನೋ : ಸ್ನೋವೈಟ್... ಎಲ್ಲರೂ ಪ್ರೀತಿಗೆ ಶ್ವೇತಸುಂದರಿ ಅಂತಾರೆ !

೧ : ಸ್ನೋವೈಟ್ ! ಶ್ವೇತಸುಂದರಿ !! ಅಮ್ಮ, ಹೆಸರಿಗೆ ತಕ್ಕಂತೆಯೇ
ಸುಂದರವಾಗಿದ್ದೀಯಮ್ಮಾ!

ಸ್ನೋ : ಆ ನನ್ನ ಸೌಂದರ್ಯವೇ ನನ್ನನೀ ದೆಸೆಗೆ ತಂದದ್ದು ! ಇರಲಿ,
ನೀವು ?

೨ : ನಾವು ಗಣಿ ಕಾರ್ಮಿಕರು, ನಾನು ಪೆಂಕು
(ಎಲ್ಲರೂ ನಾನು ಸುಂಕು, ಮಂಕು ಎಂದೆಲ್ಲ
ತಮ್ಮ ತಮ್ಮ ಹೆಸರುಗಳನ್ನು ಪಟಪಟ ಹೇಳುವರು)

೩ : ಅದು ಸರಿ ಶ್ವೇತಮ್ಮಣ್ಣೀ, ನೀನು ಇಲ್ಲಿಗೆ ಯಾಕೆ ಬಂದೆ ? ಹ್ಯಾಗೆ
ಬಂದೆ ?

ಸ್ನೋ : ನಾನೂ... ಅಣ್ಣಗಳಿರಾ, ನಿಮಗೆ ಹಸಿವೆ ಆಗಿದೆ ಅಲ್ವೇ ?

ಎಲ್ಲರೂ : ಇಲ್ಲ, ಇಲ್ಲ, ನಿನ್ನ ನೋಡಿದ ಕೂಡಲೇ ಹಸಿವೆಲ್ಲಾ
ಇಂಗ್ಹೋಯ್ತು? ಮೊದಲು ನಿನ್ನ ಕತೆ ಹೇಳು.
ಆ ಮೇಲೆ ಊಟ, ಆಟ !

ಸ್ನೋ : ಅಣ್ಣಗಳೇ,

ಹಾಡು : ಅಣ್ಣಗಳೇ, ತಮ್ಮದಿರೇ
ಕೇಳಿರಿ ಹೇಳುವೆ ಕಥೆಯ ॥ ಪ ॥
ಕಣ್ಣೀರಾ ಕೈ ತೊಳೆವಾ
ನನ್ನಯ ಬಾಳಿನ ವ್ಯಥೆಯ ॥ ಅನು. ಪ ॥

ಹುಟ್ಟಿದ ಕೂಡಲೆ ತಾಯಿಯ ತಿಂದೆ
ತಬ್ಬಲಿಯಾಗಿಯೆ ನಾ ಬೆಳೆದೆ
ತಂದೆಯ ನೋವಿಗೆ ಕಾರಣಳಾದೆ
ಎಲ್ಲರ ನಿಂದೆಗೆ ಗುರಿಯಾದೆ ॥ ೧ ॥

ಅಪ್ಪನು ಕಣ್ಣಿನ ರೆಪ್ಪೆಪೊಲಾದರು
ತುಪ್ಪವನೆರೆದೇ ಬೆಳೆಸಿದರು
ಪೋಷಣೆಗೆಂದೇ ತಾಯಿಯ ತಂದರು
ಆಕೆಯ ಮಡಿಲಲಿ ನನ್ನಿರಿಸಿದರು ॥ ೨ ॥

ಸಕ್ಕರೆ ಬೊಂಬೆಯ ತೆರದಲಿ ಬೆಳೆದೆ
ನಕ್ಕರೆ ಮಲ್ಲಿಗೆ ಹೂ ಸುರಿಯೆ
ನಡೆದರೆ ಕೊಡಗಿನ ಬೆಡಗಿಯೆ ಆದೆ
ಚೆಲುವಿನ ಚಿಲುಮೆಯು ನಾನಾದೆ ॥ ೩ ॥

ರೂಪವೆ ಶಾಪವದಾಯಿತು ನನಗೆ
ದ್ವೇಷಾಸೂಯೆಗೆ ಬಲಿಯಾದೆ.
ಕಾಯುವ ಕರುಳೇ ಕರುಬಿತು ಒಳಗೇ
ಬಣ್ಣದ ಬೆಡಗಿನ ಬೀಸಣಿಗೆ ॥ ೪ ॥

ಕೊಲಿಸಲು ಕಳುಹಲು ಭಂಟನ ಕಾಡಿಗೆ
ಕಾಣದ ಕೈಯದು ರಕ್ಷಿಸಿತು
ಬಂದೆನು ಅಲೆಯುತ ನಿಮ್ಮೀ ಬೀಡಿಗೆ

ಕಂಡೆನು ಪ್ರೀತಿಯ ಮಡಿಲನ್ನು ॥ ೫ ॥
ಬೇಡುವೆ ನಿಮ್ಮಯ ಪಾದವ ಹಿಡಿದು
ಬಿಡದಿರಿ ತಬ್ಬಲಿ ತಂಗಿಯನು
ನನ್ನಂತಹ ದೌರ್ಭಾಗ್ಯದ ಹೆಂಗಳು
ಹುಟ್ಟದಿರಲಿ ಎಂದೆನುವಳನು ॥ ೬ ॥

**ದೃಶ್ಯ ೭** **ಅಂತಃಪುರ**

(ತೆರೆಸರಿದಾಗ ಶ್ವೇತಳ ಹೃದಯವಿದೆಯೆಂದು ಭ್ರಮಿಸಿದ್ದ ಸಂಪುಟವನ್ನು (ಪುಟ್ಟ ಪೆಟ್ಟಿಗೆ) ಹಿಡಿದು ನೆಟ್ಟ ದೃಷ್ಟಿಯಿಂದ ನೋಡುತ್ತಾ ಪ್ರವೇಶಿಸುತ್ತಾಳೆ ಮಹಾರಾಣಿ. ಅನಂತರ ಗಹಗಹಿಸಿ ನಕ್ಕು)

**ಸ್ವರ್ಣ** : ಶ್ವೇತೀ...ಏನಾಯ್ತು ನಿನ್ನ ಗತಿ ! ಹ ಹ್ಹ ಹ್ಹ ಹ್ಹ ಹ್ಹ ಹ್ಹಾ !!
ನಿನ್ನ ಹೃದಯವ ತಂದು ಸೆರೆ ಹಿಡಿದು ಸೇರಿಸಿಹೆನೀ
ಪುಟ್ಟ ಸಂಪುಟದಲ್ಲಿ !.. ನೀನಿಲ್ಲವಾದೆ, ನಾನೆಲ್ಲವಾದೆ !
ಇಂದುವರೆಗಿದ್ದಳಾ ಶ್ವೇತಸುಂದರಿ ಎಂಬೊಬ್ಬ ಚೆಲುವೆ !
ಇಂದಿಹಳು ವಿಶ್ವಮೋಹಿನಿಯಾಗಿ ಏಕೈಕ ಚೆಲುವೆ ಈ ಸ್ವರ್ಣ
ಸುಂದರಿ ! ಸೊಬಗು ಸೌಭಾಗ್ಯಗಳ ಸೀಮ ಸೀಮಂತಿನಿ !
ಹ್ಹ ಹ್ಹ ಹ್ಹ ಹ್ಹ ಹ್ಹಾ !... ನಾನು.. ನಾನು ಸ್ವರ್ಣಸುಂದರಿ
ಎಂಬ ಹೆಸರಿನ ಹೆಣ್ಣು ! ನಾ ವಿಶ್ವಸುಂದರಿ, ವಿಶ್ವಸುಂದರಿ !

**ದರ್ಪಣ** : ಹ್ಹ ಹ್ಹ ಹ್ಹ ಹ್ಹ ಹ್ಹಾ ! .... ಇಲ್ಲ.. ಹ್ಹ ಹ್ಹ ಹ್ಹ ಹ್ಹ ಹ್ಹಾ

**ಸ್ವರ್ಣ** : ಓಹ್ ! ಒಡಕು, ಒಗಟೆಯ ಸೊಲ್ಲು ! ಮಾಯಾವಿ, ಮತ್ತಾರು
ಪ್ರತಿಸ್ಪರ್ಧಿ... ಹೇಳು, ಅವಳ ಬಾಯಿಗೆ ಇಂದೇ ಚರಮಗೀತೆಯ
ಹಾಡಿ ಮುಗಿಸುವೆನು !

**ದರ್ಪಣ** : ಅವಳು ಮತ್ತಾರೂ ಅಲ್ಲ ಮಹಾರಾಣಿ.. ಅವಳು ನಿನ್ನವಳೆ..
ನಿನ್ನ ಮಲಮಗಳು.. ಸ್ನೋವೈಟ್ !!

**ಸ್ವರ್ಣ** : ಸ್ನೋವೈಟ್ !... ಶ್ವೇತಸುಂದರಿ ! ಸುಳ್ಳು. ಇದು ಕುಹಕ !
ದರ್ಪಣದ ಮಾಯಾವಿ, ನೀನು ಮಹಾ ವಂಚಕ ! ಸುಳ್ಳುಗಾರ !

**ದರ್ಪಣ** : ಇಲ್ಲ ಮಹಾರಾಣಿ.. ಹಿಂದೆಯೇ ಹೇಳಿದ್ದೇನೆ,
ಸುಳ್ಳೆಂದರೇನೆಂದು ತಿಳಿದಿಲ್ಲ ನನಗೆ ! ನಾನು ನುಡಿದುದು ಸತ್ಯ !
ಶ್ವೇತೆ, ಕಾಡುಸಿದ್ಧರ ಬೆಟ್ಟದಡವಿಯಲಿ ಬದುಕಿಹಳು !

**ಸ್ವರ್ಣ** : ನನ್ನ ಕೈಯಲ್ಲಿರುವ ಈ ಹೃದಯ ಸುಳ್ಳೆ ! ನನ್ನ ಭಾಗದ ಮುಳ್ಳು
ಆ ಶ್ವೇತೆ ಸತ್ತೊರಗಿ ರಣಹದ್ದಿಗುಣಿಸಾಗಿ ಬಿದ್ದಿಹಳು
ಆ ಅಡವಿಯಲ್ಲಿ!

**ದರ್ಪಣ** : ಸುಳ್ಳು.. ಹಸೀ ಸುಳ್ಳು ! ಇಲ್ಲಿ ಶ್ವೇತಸುಂದರಿ ಎದೆಯ ಮೃದು
ಹೃದಯವಲ್ಲ... ಕುರಿಮರಿಯ ಹೃದಯ !

**ಸ್ವರ್ಣ** : ಮೋಸ, ವಂಚನೆ, ದ್ರೋಹ !.. ಪಾಪೀ... ದೂತ !!
ನಿನ್ನ ತಪ್ಪಿಗೆ ಶಿಕ್ಷೆ ಆಗಲೇ ಬೇಕು.. ಆಗಲೇ ಬೇಕು !
(ಆರ್ಭಟಿಸಿ ಜಾಗಟೆ ಬಾರಿಸುವಳು, ದೂತನ ಪ್ರವೇಶ)
ಎಲವೋ ದೂತ ! ವಂಚಕ, ಅನ್ನ ತಿಂದ ಮನೆಗೆ ಕನ್ನಹಾಕುವ
ದ್ರೋಹಿ.. ಹೇಳು, ಯಾರದೀ ಹೃದಯ ?

**ದೂತ** : ಇದೂ... ಇದೂ...

**ಸ್ವರ್ಣ** : ಕುರಿಮರಿಯ ಹೃದಯ... ಹೌದೇ ?
(ದೂತ ಮೌನದಿಂದ ತಲೆ ಬಾಗುವನು)
ಸುಳ್ಳು ಹೇಳುವುದೂ ಒಂದೇ ಕೊಲೆ ಮಾಡುವುದೂ ಒಂದೆ!
ಅಕ್ಷಮ್ಯ ಅಪರಾಧ... ನಾಳೆ ವಿಚಾರಿಸಿಕೊಳುವೆ.. ತೊಲಗಾಚೆ !
(ಮರೆಯಾಗುವನು)
ವಿಶ್ವಾಸಘಾತುಕರ ನಂಬುವುದೆ ಬಲು ಕೇಡು !
ನಾನೆ ಹೋಗುವೆನು.... ನಾನೆ ಹೋಗುವೆನು !
ನನ್ನ ಕೈಯಾರ ಅವಳ ಕುತ್ತಿಗೆ ಹಿಸುಕಿ ನನ್ನ ಭಾಗದ ಪೀಡೆ
ಇಲ್ಲವಾಗಿಸಿ ಬರುವೆ.. ಇಲ್ಲವಾಗಿಸಿ ಬರುವೆ.. ಹ್ಹ ಹ್ಹ ಹ್ಹಾ!

(ಗರಗರನೆ ತಿರುಗುವಳು, ರಂಗಭೂಮಿಯಲ್ಲಿ ಕತ್ತಲು ಬೆಳಕು ಚೆಲ್ಲಾಟ.
ಆ ಅವಧಿಯಲ್ಲಿ ಮೈ ತುಂಬ ರಿಬ್ಬನ್‌ಗಳನ್ನು ನೇತು ಹಾಕಿಕೊಂಡ
ಮಾರುವೇಷ ರಾಣಿ ಇದ್ದೆಡೆಯಲ್ಲಿ ಪ್ರತ್ಯಕ್ಷವಾಗುವುದು.
ಒಂದು ನುಡಿ ಹಾಡು ಹಾಡುವುದು.)

**ಹಾಡು** : ರಿಬ್ಬನ್ ರಿಬ್ಬನ್, ರಿಬ್ಬನ್ ರಿಬ್ಬನ್ !
ರಿಬ್ಬನ್ ರಿಬ್ಬನ್, ರಿಬ್ಬನ್ ರಿಬ್ಬನ್ !

**ದೃಶ್ಯ ೮** **ಕಾಡಿನ ಹಾದಿ**

(ಮಾರುವೇಷದ ಸ್ವರ್ಣ ರಿಬ್ಬನ್‌ಗಳನ್ನು ಮೈತುಂಬ ತುಂಬಿಕೊಂಡು,
ತಲೆಗೆ ಹ್ಯಾಟ್ ಹಾಕಿಕೊಂಡು ಲಂಗಉಟ್ಟು ಬರುವಳು)

**ಸ್ವರ್ಣ** : ರಿಬ್ಬನ್ ರಿಬ್ಬನ್ ರಿಬ್ಬನ್ ರಿಬ್ಬನ್ !
ರಿಬ್ಬನ್ ಬೇಕೆ ರಿಬ್ಬನ್
ರಬ್ಬರಿನಂಥಾ ರಿಬ್ಬನ್ !
ಅಬ್ಬಿನ ಹೊಳೆಯಾ ರಿಬ್ಬನ್
ಹಬ್ಬದೊಳೆಲ್ಲರು ಕೊಂಡೇ ಕೊಳ್ಳುವ
ರಿಬ್ಬನ್ ಬೇಕೇ ರಿಬ್ಬನ್ !
(ಕಾಡಿನ ಹಾದಿಯಲ್ಲಿ ಹಾಡಿಕೊಂಡು, ಕುಣಿದುಕೊಂಡು ಬರುವಳು.
ಅವಳ ಎದುರುಗಡೆಯಿಂದ ಏಳು ಜನ ಕುಳ್ಳರು ಹಿಂದಿನ ವೇಷ ಭೂಷಣಗಳಲ್ಲಿ
ಗಣಿ ಕೆಲಸಕ್ಕೆ ಹೋಗುತ್ತಿರುತ್ತಾರೆ. ಹಿನ್ನೆಲೆಯಲ್ಲಿ ಟಣ್ ಟಣ್ ಟಣ ಟಣ ಸಣ್ಣ
ವಾದ್ಯದ ಶಬ್ದ ಹರಿಯುತ್ತಿರಬೇಕು
ರಿಬ್ಬನ್‌ಧಾರಿಣಿಯನ್ನು ನೋಡಿ ಹಾದಿ ಬಿಡುವರು)

– (ಎಲ್ಲರ ನಿರ್ಗಮನ) –

**ದೃಶ್ಯ ೯** **ಕುಳ್ಳರ ಕುಟೀರದ ಮುಂದೆ**

ರಿಬ್ಬನ್ ರಿಬ್ಬನ್ ರಿಬ್ಬನ್ ರಿಬ್ಬನ್ !
ರಿಬ್ಬನ್ ಬೇಕೇ ರಿಬ್ಬನ್

ನೋಡಿದರೆಲ್ಲರು ಹುಬ್ಬೇರಿಸುವಾ
ಬಣ್ಣಬಣ್ಣದಾ ರಿಬ್ಬನ್ !
ಏಳು ಬಣ್ಣಗಳ ಕಾಮನ ಬಿಲ್ಲು
ನೋಡಿದರೆದೆಯಲಿ ಗುಲ್ಲೋಗುಲ್ಲು !
ಕುರುಡರು ಕುಂಟರು ಗಿಡ್ಡರು ದಡ್ಡರು
ಮೆಚ್ಚಿ ಬಯಸುವಾ ರಿಬ್ಬನ್ !
ರಿಬ್ಬನ್ ಬೇಕೇ ರಿಬ್ಬನ್ !

(ಸ್ನೋವೈಟ್ ಮನೆಯಿಂದ ಹೊರಗೆ ಬಂದು ರಿಬ್ಬನ್‌ಗಳನ್ನು ನೋಡಿ ಆಸೆ ವ್ಯಕ್ತ ಪಡಿಸುವಳು. ಆಗ)

ತಗಳಮ್ಮಣ್ಣೀ.... ತಕ್ಕೋ
ಯಾವುದು ಬೇಕೋ ತಕ್ಕೋ

**ಸ್ನೋ** : ನಾ ಬಡವಿ.. ಕೊಡಲೆನಗೆ ಕಾಸಿಲ್ಲ !

**ಸ್ವರ್ಣ** : ಕಾಸೂ ಗೀಸೂ ಬ್ಯಾಡ
ನಿನಗೀಸೂ ಟೇಪಿನ ತೋಡಾ...
ಕೊರಳಿಗೆ ಸುತ್ತೂ ಸುತ್ತೂ ಸುತ್ತು !
(ಕೊರಳಿಗೆ ಸುತ್ತಿ ಬಿಗಿಯುವಳು)
ಆಹಾ! ಏನಿದು ಚಂದ....
ಚೆಂದಾ ಚೆಂದಾ ಚೆಂದಾ !
ನೀ ಸುತ್ತೂ ಸುತ್ತೂ ಸುತ್ತೂ
ಗಿರ ಗಿರ ಗರ ಗರ
ಗಿರ ಗಿರ ಗರ ಗರ

(ಈ ರೀತಿ ಅವಳ ಕುತ್ತಿಗೆಗೆ ರಿಬ್ಬನ್‌ಗಳನ್ನು ಸುತ್ತಿ, ಶ್ವೇತಳನ್ನು ಉಸಿರು ಕಟ್ಟಿಸಿ ಬೀಳಿಸುವಳು. ಕೂಡಲೇ ಗಹಗಹಿಸಿ ನಕ್ಕು)

ಹ ಹ್ಹ ಹ್ಹ ಹ್ಹ ಹ್ಹ ಹ್ಹಾ !
ಶ್ವೇತ ಸುಂದರೀ.. ಸತ್ತು ಬಿದ್ದಿಹಳು ಪ್ರೇತ ಕಿಂಕರಿ !
ಈ ಸ್ವರ್ಣ ಸುಂದರಿ.. ವಿಖ್ಯಾತ ಸುಂದರೀ !!
ಹ್ಹ ಹ್ಹ ಹ್ಹ ಹ್ಹ ಹ್ಹಾ !
– (ನಿರ್ಗಮನ) –

**ದೃಶ್ಯ ೧೦** **ಕಾಡಿನ ಹಾದಿ**

(ಟಣ್ ಟಣ್ ಟಣ ಟಣ ಹಿನ್ನೆಲೆ ವಾದ್ಯ)

೧ : ಲೋ, ಟಿಂಕು, ಇವತ್ತು ಇಷ್ಟು ಬೇಗ ಕೆಲಸ ಬಿಡಿಸಿ ಯಾಕೊ ಕರ್ಕೊಂಡ್ ಬಂದ್ಯೋ ನಮ್ಮನ್ನೆಲ್ಲಾ ?

೭ : ಆ ರಿಬ್ಬನ್ ಮಾರೋಳ ನೋಡಿ, ನನಗ್ಯಾಕೊ ಅನುಮಾನ ಬಂತು..

೨ : ಅದಕ್ಕೆ... ?

೭ : ಅದಕ್ಕೇ ನಿಮ್ಮನ್ನ ಕರ್ಕೊಂಡ್ ಬಂದೇ ಬೇಗ ಬೇಗ !

೪ : ಏನು ನಮಗೆಲ್ಲಾ ರಿಬ್ಬನ್ ಕೊಡಿಸ್ತೀಯಾ ಜಡೆ ಹಾಕ್ಕೊಳ್ಳಾಕೆ?

(ಎಲ್ಲರೂ ಫೊಳ್ ಎಂದು ನಗುವರು)

೭ : ಮಂಕುದಿಣ್ಣೆಗಳಾ ! ನಿಮ್ಮ ತಲೇಲಿರೋದು ಮಿದುಳಲ್ಲ
ಸೆಗಣಿ... ಹಸೀ ಸೆಗಣಿ.. ಅದೂ ಎಮ್ಮೇ ಸೆಗಣಿ !
ಅಲ್ರೋ, ಶ್ವೇತಂಗೆ ಏನೋ ಎಂತೋ.. ಬೇಗ ಬೇಗ ನಡೀರಿ!

ಎಲ್ಲರೂ : ಹ್ಞಾ! ಹೌದಪ್ಪೋ, ಬೇಗ ಬೇಗ ನಡೀರಿ..

(ನಿರ್ಗಮನ)

(ಹಿನ್ನೆಲೆಯಲ್ಲಿ ಟಣ್ ಟಣ್ ಟಣ ಟಣ ಶ್ರುತಿ!..)

**ದೃಶ್ಯ ೧೧** **ಕುಳ್ಳರ ಕುಟೀರದ ಮುಂದೆ**

(ಬಿದ್ದಿರುವ ಶ್ವೇತಳನ್ನು ನೋಡಿ)

ಎಲ್ಲರೂ : ಅಯ್ಯಯ್ಯೋ ! ಕೆಟ್ಟವಲ್ಲಪ್ಪೋ !
(ಎದೆ ಎದೆ ಬಡಿದುಕೊಂಡು ಶ್ವೇತಳ ಸುತ್ತ ಬೀಳುವರು)
ಅಮ್ಮಾ... ಶ್ವೇತಾ... ಶ್ವೇತಮ್ಮಣ್ಣೀ...
ಮಾತಾಡಮ್ಮಾ... ಏನಾಯ್ತಮ್ಮಾ... ಹೇಳಮ್ಮಾ.. ಅಯ್ಯೋ !!

೧ : ದೇವರೇ ದೇವರೇ ನೀನು ಇರೋದು ನಿಜವಾದರೆ ನಮ್ಮ
ಶ್ವೇತಮ್ಮಣ್ಣೀನ ಬದುಕಿಸಪ್ಪಾ ! ನಿನಗೆ ನನ್ನ ಮುಡಿಕೊಡ್ತೀನಪ್ಪಾ
ಮುಂದಿನ ಆಷಾಡಕ್ಕೆ !

೨ : ನಾನೂ ಕೊಡ್ತೀನಪ್ಪಾ !

೩ : ಲೇಯ್ ಕೊರಳು ಕೊಯ್ತಾ ಇದೆ ರಿಬ್ಬನ್ ! ಬಿಡಿಸಿರೋ.
(ಇಬ್ಬರು ಅವಳನ್ನು ಎತ್ತಿ ನಿಲ್ಲಿಸಿಕೊಳ್ಳುತ್ತಾರೆ. ಮಿಕ್ಕವರು
ರಿಬ್ಬನ್‌ಗಳನ್ನು ಅವಳ ಕೊರಳಿಂದ ಬಿಡಿಸುತ್ತಾ, ತಾವೇ ತಮ್ಮ
ತಮ್ಮ ಮೈಗಳಿಗೆ ಸುತ್ತಿಕೊಂಡು ಬೀಳುತ್ತಾರೆ.)

ಸ್ನೋ : (ಕಣ್ತೆರೆದು) ಅಣ್ಣಂದಿರಾ !..

(ಎಲ್ಲರೂ ಹಿಗ್ಗಿ ಕುಣಿಯುತ್ತಾ)

ಎಲ್ಲರೂ : ಹ್ಞಾ ! ಜೈ ಜೈ ಜೈ ! ಶ್ವೇತ ಸುಂದರಿಗೆ ಮುದ್ದಿನ ಗಿಣಿಗೇ
ಜೈ ಜೈ ಜೈ ! ಜೈ ಜೈ ಜೈ !
(ಕೆಲವರು ಪಲ್ಟಿ ಹೊಡೆಯುತ್ತಾ, ಸರ್ಕಸ್, ಡ್ಯಾನ್ಸ್,
ಬಾಲ್ ಡಾನ್ಸ್ ಮಾಡುವರು. ಎಲ್ಲದೂ ಕೇವಲ ಹಿನ್ನೆಲೆಯ
ರಾಗ ತಾಳಗಳಲ್ಲಿ)

**ದೃಶ್ಯ ೧೨** **ಅಂತಃಪುರ**

ಸ್ವರ್ಣ : ನನ್ನ ಹಾದಿಯ ಮುಳ್ಳ ಕಿತ್ತೊಗೆದುದಾಯ್ತು !
ಸುಟ್ಟುರುಹಿ ಬೂದಿಯನು ಬೊಟ್ಟಿಟ್ಟುದಾಯ್ತು !
ನಾನಿನ್ನು ನಿತ್ಯಸುಖಿ!... ನಾನಿನ್ನು ನಿತ್ಯ ಸುಖಿ !!

ದರ್ಪಣ : ಹ ಹ್ಹ ಹ್ಹ ಹ್ಹಾ ! ಸಾಧ್ಯವಿಲ್ಲಾ !

ಸ್ವರ್ಣ : ಸಾಧ್ಯವಿಲ್ಲ !! ಏಕೆ ?

ದರ್ಪಣ : ಲೋಕೈಕ ಸುಂದರಿಯು ನೀನಲ್ಲ ಮಹರಾಣಿ !

ಸ್ವರ್ಣ : ಹೌದೇ ?

ದರ್ಪಣ : ಹೌದು... ಸುಳ್ಳಾಡಿ ತಿಳಿದಿಲ್ಲ ಎಂದು ಹೇಳಿದೆನಲ್ಲ !

ಸ್ವರ್ಣ : ಅಂತಿರಲು ಯಾರು ಆ ವಿಷಜಂತು ?

ದರ್ಪಣ : ಮತ್ತಾರು.. ? ನಿನ್ನವಳೆ ! ಆ ನಿನ್ನ...

**ಸ್ವರ್ಣ :** ಸ್ನೋವೈಟ್ ? ಶ್ವೇತಸುಂದರಿಯೇ ?

**ದರ್ಪಣ :** ಬೇರಾರು ಜಗದಲ್ಲಿ ಹೇಳು ಸ್ವರ್ಣಾ !

**ಸ್ವರ್ಣ :** ಸುಳ್ಳು, ನಾನೆ ಅವಳನು ನನ್ನ ಕೈಯಾರ ಕೊಂದಿಹೆನು.
ಉಸಿರಳಿದ ಹೆಣ ಮಾಡಿ ಗತಿಕೆಡಿಸಿ ಬಂದಿಹೆನು !

**ದರ್ಪಣ :** ಅದು ನಿನ್ನ ಹುಚ್ಚು ! ಭ್ರಮೆ !! ಮಹಾರಾಣಿ, ಶ್ವೇತ
ಬದುಕಿಹಳಲ್ಲಿ, ಆ ಪರ್ಣಕುಟಿಯಲ್ಲಿ !

**ಸ್ವರ್ಣ :** ಅಂತಾದರೆನಗಿನ್ನು ನಿದ್ದೆ ಎಂಬುದೆ ಇಲ್ಲ ! ಮನದೊಳೆದ್ದಿದೆ
ಇಂದು ಮಹಾ ಕುರುಕ್ಷೇತ್ರ ! ಆಯಿತು, ಸ್ವೈರಣೆಯು ಸತ್ತಿಂದು
ಶಾಶ್ವತ ಸಮಾಧಿಯಾಯ್ತು ! ಇಂದೆ.. ಇಂದೇ ಅವಳನ್ನು
ಮುಗಿಸಿಬಹೆನು ! ಹ್ಹಾ... ಇದೋ ಇಲ್ಲಿದೆ ಅವಳ ಮೃತ್ಯು
ಚುಂಬಕ ಸೇಬು. ಈ ವಿಷದ ಹಣ್ಣಿತ್ತು ಮಣ್ಣುಗೂಡಿಸಿ ಬರುವೆ!
ಹ ಹ್ಹ ಹ್ಹ ಹ್ಹ ಹ್ಹ ಹ್ಹಾ!

(ಗರಗರ ತಿರುಗುತ್ತಿದ್ದಂತೆಯೇ ಹಣ್ಣು ಮಾರುವ ವೃದ್ಧೆಯಾಗುವಳು
ಬೇರೊಂದು ಪಾತ್ರ ಆ ಕತ್ತಲು ಬೆಳಕು ವಿನ್ಯಾಸದಲ್ಲಿ ಅವತರಿಸುವುದು.
ಹಣ್ಣಮ್ಮೋ ಹಣ್ಣು ! ಹಣ್ಣಮ್ಮೋ ಹಣ್ಣೂ!!
(ನಿರ್ಗಮನ)

**ದೃಶ್ಯ ೧೩** **ಕುಳ್ಳರ ಕುಟೀರದ ಮುಂಭಾಗ**

ಹಣ್ಣಮ್ಮೋ... ಹಣ್ಣು ! ಹಣ್ಣು ಹಣ್ಣು ಹಣ್ಣು
ಹಣ್ಣಿನ ಮೇಲೆ ಕಣ್ಣು ! ನಂದನವನದಲಿ
ಚೆಂದದಿ ಬೆಳೆದಾ ಹೊಸ ಹೊಸ ಸೇಬಿನ ಹಣ್ಣು !
ಹಣ್ಣಮ್ಮೋ... ಹಣ್ಣು ! ಹಣ್ಣು ಹಣ್ಣು ಹಣ್ಣು !
ಹಾಲಿನ ಕಡಲಾಗ್ ಹುಟ್ಟೈತೆ !
ಜೇನನು ತಿಂದು ಬೆಳದೈತೆ !
ಪ್ಚು! ಪ್ಚು!! ಏನ್ ರುಚಿ ಏನ್ ರುಚಿ
ನನ್ನ ಸೇಬೇ ರುಚಿ ರುಚಿ !
ತಕ್ಕೊ ಅಕ್ಕಾ ಬೇಡ ರೊಕ್ಕಾ
ಮಾಲು ಮಾತ್ರ ಪಕ್ಕಾ ಪಕ್ಕ !
ಒಂಟಿ ಬೇಕಾ ಒಟ್ಟಿಗೆ ಬೇಕಾ? ಬುಟ್ಟೀನೆಲ್ಲಾ ತಕ್ಕ !
ತಕ್ಕಾ ತಾಯಿ ತಕ್ಕಾ. ಮಾಲು ಮಾತ್ರ ಪಕ್ಕಾ !

(ವಿಷದ ಹಣ್ಣನ್ನು ತೆಗೆದುಕೊಡುವಳು ಅವಳ ಹಾಡು ನರ್ತನಗಳನ್ನು ಕುತೂಹಲದಿಂದ ವೀಕ್ಷಿಸಿದ ಸ್ನೋವೈಟ್ ಪ್ರೀತಿಪಟ್ಟು – ಹಣ್ಣನ್ನು ಈಸಿಕೊಂಡು ಕಚ್ಚುವಳು. ಕೂಡಲೇ ವಿಷವೇರಿ ಕಣ್ಣು ಹೊರಳಾಡಿಸುತ್ತಾ ಕೆಳಗೆ ಬೀಳುವಳು. ಮಾರುವೇಷದ ಮಹಾರಾಣಿ ಆನಂದದಿಂದ ವಿಕಾರ ನಗೆ ನಗುತ್ತಾ ನರ್ತಿಸತೊಡಗುವಳು. ವಿಶೇಷವಾದ್ಯಗಳ ಹಿನ್ನೆಲೆಯಲ್ಲಿ ನರ್ತಿಸುತ್ತಾ ನಿರ್ಗಮಿಸುವಳು. ಹಿಂದಿನ ತೆರೆಸರಿದು ಅವಳ ಅಂತಃಪುರ ದೃಶ್ಯ. ಅಲ್ಲಿ ನಿಜ ಮಹಾರಾಣಿಯಾಗಿ ನರ್ತಿಸುತ್ತಿದ್ದಾಗ...)

**ದೃಶ್ಯ ೧೪** **ಅಂತಃಪುರ**

**ಸ್ವರ್ಣ :** ನಾನು ಸುಖಿ ನಾನು ನಿತ್ಯ ಸುಖಿ
ಏಕೆಂದರೆ, ನಾನು ತ್ರಿಲೋಕ ಸುಂದರಿ !
ಜಗದ ಚೆಲುವನ್ನೆಲ್ಲ ಎರಕಹೊಯ್ದಿಹ ದೇಹ ನನ್ನದು,
ಈ ಸ್ವರ್ಣ ಸುಂದರಿಯದು !
ಓ ದರ್ಪಣದ ಮಾಯಾವಿ, ಈಗ ಹೇಳು

ನಾನಲ್ಲವೇ ಮೂಲೋಕದೊಳಗೆಲ್ಲ ಚೆನ್ನೆ ಚೆಲುವೆ ?

**ದರ್ಪಣ :** ನಿನ್ನ ಚೆಲುವಿಕೆಗೆ ಬೆಂಕಿ ಬಿತ್ತು !
ಥೂ ಚಾಂಡಾಲಿ !

**ಸ್ವರ್ಣ :** ಎಚ್ಚರ ಮಾಯಾವಿ ! ನನ್ನ ಜಂಕಿಸಿ ನೀನು
ಬಹುಕಾಲ ಬದುಕಲಾರೆ ! ಬದುಕಲಾರೆ !
ಎಷ್ಟಾದರೂ ನಾನು ನಿನ್ನ ರೂಪಿಸಿದವಳು !
ಅವಲೋಕಿನಿಯ ಬಳಸಿ ನಿನ್ನ ಸೃಷ್ಟಿಸಿದವಳು !
ಹೆತ್ತ ತಾಯಿಯು ನಾನು. ಛೇಡಿಕೆಯು ಸಲ್ಲ.

**ದರ್ಪಣ :** ಮುದ್ದು ಮಗಳನೆ ಕೊಂದ ನೀನೊಬ್ಬ ತಾಯಿಯೇ?
ಅಲ್ಲ.. ರಾಕ್ಷಸಿ! ಹೇಳು ಸ್ವರ್ಣ ಸುಂದರಿ,
ಅನ್ಯಾಯಗೈದುದಾದರು ಏನು ಆ ಶ್ವೇತಸುಂದರಿ ?
ನ್ಯಾಯವನ್ಯಾಯಗಳ ತುಲನೆ ಮಾಡಲಿಕಾಗಿ
ನಾನಿಲ್ಲಿ ಬಂದಿರುವೆ !
ನಿನ್ನ ಮಾಯಾವಿದ್ಯೆ ಸೃಷ್ಟಿಸಿಹುದಾದೊಡಂ ನಾ ಧರ್ಮದೇವತೆ !
ಮಹಾರಾಣಿ, ನಿನ್ನ ಪಾಪದ ಕೊಡವು ತುಂಬಿ
ಹೋಯಿತು ಇಂದು ! ಇನ್ನಿಲ್ಲಿ ನಿಲಲು ನಿನಗೆಡೆಯಿಲ್ಲ !
ಆ ದೈವದೆದುರಿನಲಿ ನಿನ್ನ ಪಾಪದ ವರದಿ ಒಪ್ಪಿಸಲೆ ಬೇಕು!
ಅದಕಾಗಿ ಇಂದೆ ನಡೆ. ನಿನ್ನ ಬಾಳಿನ ನೂಲು ಸವೆದು
ಸಣ್ಣಾಗಿಹುದು! ನಿನ್ನ ಧಮನಿಯ ರಕ್ತ ವಿಷದ ಹೊನಲಾಗಿಹುದು!
ನಿನಗಿಲ್ಲವಿಲ್ಲಿನ್ನು ನಿಲ್ಲಲಿಕೆ ನೆಳಲು, ಕುಡಿಯಲಿಕೆ ನೀರು !

**ಸ್ವರ್ಣ :** ಪಾಪಿ ! ನೀನೆನ್ನ ಬಳಿದೊತ್ತು !
ನನ್ನೆಂಜಲನು ತಿಂದು ಜೀವಹಿಡಿದಿಹ ನಾಯಿ !
ಹಂಗಿಸಲು ಹಕ್ಕಿಲ್ಲ, ಭಂಗಿಸಲು ಬಲವಿಲ್ಲ, ನಾ ಮನವ ಮಾಡಿದರೆ
ಹುಟ್ಟಳಿಸಿ ಸುಟ್ಟು ಬಿಡುವೆ !!

**ದರ್ಪಣ :** ಸಾಧ್ಯವಿಲ್ಲ ಮಹಾರಾಣಿ...
ನಿನ್ನ ಕಲ್ಪನೆ ಮೀರಿ ಬೆಳೆದಿಹೆನು ನಾನಿಂದು. ನಿನ್ನ ಪುಣ್ಯದ ಪಾತ್ರೆ
ಬರಿದಾಗುವಾವರೆಗು ಸುಮ್ಮನಿದ್ದೆನು ನಾನು.
ನೀನೀಗ ಖಾಲಿ ಕೊಡ, ನೀರಿಲ್ಲದಾ ಕುಂಭ ! ಲೋಕಕಂಟಕ ವಸ್ತು
ಚೂರಾಗಲೇಬೇಕು.
ನಿನ್ನಿಂದ ಹೊರಬಂತು ಒಂದು ಲೋಕೋಕ್ತಿ :
ಪರರಿಗೆ ಕೇಡು ಬಗೆದರೆ, ತನಗೆ ಕೇಡು ತಪ್ಪದು ಎಂಬಮೃತ ವಾಣಿ!
ನಿನ್ನ ಅಂತಿಮ ಘಳಿಗೆ ಸನ್ನಿಹಿತವಾಗುತಿದೆ,
ನೀ ಸಾಯಲೇಬೇಕು !

**ಸ್ವರ್ಣ :** (ಗಾಬರಿಯಿಂದ) ಇಲ್ಲ... ನಾ ಸಾಯಲಾರೆ !...
ನಾ ಸಾಯಲಾರೆ !! ಓ ದರ್ಪಣದ ಮಾಯಾವಿ, ಕೈಮುಗಿದು
ಬೇಡುವೆನು ಬಿಟ್ಟು ಬಿಡು... ಬಿಟ್ಟು ಬಿಡು ನನ್ನ !

**ದರ್ಪಣ :** ಬಿಡಲಾರೆ.. ಎಂದಿಗೂ ಬಿಡಲಾರೆ... ಬಿಡ ಬಾರದು ! ಎಲ್ಲದಕು
ಕೊನೆಯುಂಟು... ಪಾಪಕ್ಕು ಕೊನೆಯುಂಟು !
ನಿನ್ನ ಪಾಪದ ಫಲವ ನೀನುಣಲೆ ಬೇಕು !
ಒಂದು ಕೈ ಗೈದುದನು ಮತ್ತೊಂದು ಉಣಬೇಕು !
ಉಂಡುಮುಗಿಸು. ನಿನ್ನ ವಾಮಾಚಾರ ನಿನಗಾಯ್ತು ಗ್ರಹಚಾರ !
ನಾನು ನಿನ್ನವನಿದ್ದೆ ಚೆನ್ನಾದ ಬಳಿದೊತ್ತು, ಇಂದಾದೆ ನಿನ್ನ ಭಾಗದ
ಮಿತ್ತು. ಹೂಂ ಸಾಯಲು ಸಿದ್ಧಳಾಗು !!
ಹ ಹ್ಹ ಹ್ಹ ಹ್ಹ ಹ್ಹ ಹ್ಹಾ!
ಭಯಂಕರ ಆಸ್ಫೋಟ. ಕತ್ತಲು ಬೆಳಕಿನ ವಿನ್ಯಾಸ. ಭೀಕರ ಶಬ್ದ.

ರನ್ನಗನ್ನಡಿಯಿಂದ ಏಳೆಂಟು ಜನ ಕಪ್ಪು ಬಟ್ಟೆ ಧರಿಸಿದ ಪ್ರೇತ ವೇಷಧಾರಿಗಳು ಉದ್ಭವಿಸಿ ಹೊರಬಂದು, ಕೀರುತ್ತಾ ಅರಚುತ್ತಾ ರಂಗದ ಮೇಲೆಲ್ಲಾ ಮಹಾರಾಣಿಯನ್ನು ಅಟ್ಟಿಸಿಕೊಂಡು ಓಡಾಡಿಸುವರು.

– ಇದು ಭಯಂಕರ ಪ್ರೇತ ನೃತ್ಯ ದೃಶ್ಯ ರಣವಾದ್ಯಗಳೊಂದಿಗೆ –

ಎಷ್ಟು ಭಯಾನಕವಾಗಿ ತರಬಹುದೋ ಅಷ್ಟು ತರಬೇಕು, ಅಷ್ಟೂ ಜನರು ಮಹಾರಾಣಿಯನ್ನು ನೆಲಕ್ಕೆ ಕೆಡವಿ ಸುತ್ತ ಮುತ್ತಿಗೆ ಹಾಕಿ ಕಬಳಿಸುವಂತೆ ನಟಿಸುವರು. ಮಹಾರಾಣಿ ಚೀರಿಕೊಂಡು ಮಡಿಯುವಳು.

**ದೃಶ್ಯ ೧೫** **ಕಾಡಿನ ಹಾದಿ**

(ಏಳು ಜನ ಕುಳ್ಳರು ಹಾಡುತ್ತಾ ಕುಣಿಯುತ್ತಾ ಪ್ರವೇಶಿಸುವರು)

**ಮೊದಲ ಮೂವರು** ಸ್ನೋವೈಟ್ ಸ್ನೋವೈಟ್ ಸ್ನೋವೈಟ್
ಎಲ್ಲಾ ವಿಧದಲು ಬ್ರೈಟ್ ಬ್ರೈಟ್ !
ಕತ್ತಲು ತುಂಬಿದ ಕುಳ್ಳರ ಮನೆಗೆ ಅವಳೇ ಲೈಟ್ ಲೈಟ್ ಲೈಟ್ !!

**ಎರಡರ ಮೂವರು** ಶ್ವೇತಸುಂದರಿ ನಾಟ್ಯಮಯೂರಿ ಅಚ್ಚುಮೆಚ್ಚಿನಾ ಸೋದರಿ
ಬೆಳ್ಳಿ ಬೆಳ್ಳಿ ಬೆಳುದಿಂಗಳ ಬಾಲೆ ಮುದ್ದಿನ ಮುಗುಳು
ಪ್ರೇಮ ಮಂಜರೀ !!

**೭ :** ನಡೆಯಿರಿ ನಡೆಯಿರಿ ಹೋಗೋಣ. ಚೆಂದದ ತಂಗಿಯ
ನಲಿಸೋಣ ಥೈ ಥೈ ಥೈ ಕುಣಿಯೋಣ
ಭರತನಾಟ್ಯವನು ಮಾಡೋಣ !

**ಎಲ್ಲರೂ :** ಟಿಂಕು, ಪಿಂಕು, ವೆಂಕು
ಮಂಕು, ಟ್ರಂಕು, ಪೇಂಕು
ಸುಂಕೂ ಸೇರಿ...

**೧ :** (ಅಷ್ಟರಲ್ಲಿ ಕುಣಿತ, ಹಾಡು ನಿಲ್ಲಿಸಿ,) ನಿಮ್ಮಜ್ಜಿ ಪಿಂಡ !
ನಮ್ಮ ತಂಗ್ಯಮ್ಮ ಹ್ಯಾಂಗಿದಾಳೊ ಏನೊ !
ನೋಡಾನ ಬೇಗ ಬೇಗ ನಡೀರಿ !

**ಇತರರು :** ಹೌದು ! ಓಡಿ ಓಡಿ !
ಅಮ್ಮ ಅಮ್ಮಣ್ಣಿ ! ಶ್ವೇತಮ್ಮಾ (ನಿರ್ಗಮನ)

**ದೃಶ್ಯ ೧೬** **ಕುಳ್ಳರ ಕುಟೀರದ ಮುಂದೆ**

(ಎಲ್ಲರೂ ಅದೇ ಖುಷಿಯಲ್ಲಿ ಓಡುತ್ತಾ ಬಂದು)

**ಎಲ್ಲರೂ :** ಅಮ್ಮಾ... ಅಮ್ಮಣ್ಣೀ... ಶ್ವೇ..
(ನೆಲದ ಮೇಲೆ ಬಿದ್ದಿರುವ ಶ್ವೇತಳನ್ನು ಕಂಡು, ಎಲ್ಲರೂ ಅವಳ
ಮುಖದ ಮೇಲೆ ಮುಗಿಬೀಳುವರು 'ಅಯ್ಯೋ' ಎಂದು
ಒಮ್ಮಲೇ ಚೀರುವರು)

**೧ :** ಯಾರ ಸಂಗಡಾನು ಮಾತಾಡಬ್ಯಾಡ ಅಂತ ಸಾರಿ ಸಾರಿ ಹೇಳಿದ್ವಿ
ನೀನು ಕೇಳ್ಲಿಲ್ಲ ಮಗಳೇ..
ಮಾಡಬಾರ್ದು ಮಾಡೇ ಬಿಟ್ರು ನಮಗಾಗದೋರು !
(ಖಖಖಖಖ ಎಂದು ಅಳುವನು)

**೨ :** ಅಯ್ಯೋ ಅಮ್ಮಣ್ಣೀ.. ನಮ್ಮ ಮನೆ ದೀಪ ಆಗಿದ್ದವ್ವಾ ನೀನು !
ಆ ದೀಪ ಆರಿಹೋಯ್ತು ! ಮನೆಯೆಲ್ಲಾ ಕತ್ತಲು !! ಕತ್ತಲು!

ಶ್ವೇತಾ... ಶ್ವೇತಾ ನಿನ್ನನ್ನು ಹೇಗಮ್ಮಾ ಮರಿಯೋದು ?
(ಖಖಖಖ ಅಳು)

**೩.** : ಸ್ನೋವೈಟ್ ನೀನು ಕರ್ಪೂರದ ಬೊಂಬೆ ಹಾಂಗಿದ್ದೆ ! ಯಾರಿಟ್ಟ
ಬೆಂಕಿನೋ ಕಣೆ.... ! ನೀನಿಲ್ಲವಾದೆ ! (ಖಖಖಖ ಅಳು)

**೪** : ಶ್ವೇತಾ ನಮ್ಮನ್ನೆಲ್ಲಾ ಬಿಟ್ಟು ನೀನೆಲ್ಲಿ ಹೋದೆಯಪ್ಪಾ !
ನಮ್ಮನ್ನೂ ಅಲ್ಲಿಗೆ ಕರಕೊಂಡ್ಹೋಗು!
ನೀನಿಲ್ಲದ ಮ್ಯಾಲೆ ನಾವು ಬದುಕಿದ್ದೇನು ಪ್ರಯೋಜ್ನ !

**೫** : ಶ್ವೇತಾ, ಗಿಳಿಮರಿ ಬಾಯಿ ತೆರೆದ ಹಾಗೆ ಬಾಯಿ ತೆರೀತಿದ್ದೆ!
ಕೋಗಿಲೆ ಮರಿ ಹಾಗೆ ಕರೀತಿದ್ದೆ ! ಹಂಸದ ಹಾಗೆ ನಡೀತಿದ್ದೆ

**೬** : ಎಲ್ಲಮ್ಮ... ಒಂದು ಸಾರಿ... ಒಂದೇ ಒಂದು ಸಾರಿ 'ಅಣ್ಣಾ'
ಎಂದು ಅಂದು ಬಿಡಮ್ಮಾ...

**೭** : ಶ್ವೇತಾ, ನೀನು ಸತ್ತು ನಮ್ಮನ್ನೆಲ್ಲಾ ಸಾಯಿಸಿ ಬಿಟ್ಟೆ !
ನಾವೂ ನಿನ್ನ ಜೊತೇಲೇ ಸಾಯ್ತೀವಿ ಅನ್ನ ನೀರು ಬಿಟ್ಟು!
(ಖಖಖ... ಅಳು)

(ಅಷ್ಟರಲ್ಲಿ 'ಕ್ಲಿಪ್ ಕ್ಲಾಪ್ ಕ್ಲೆಪ್' ಕುದುರೆ ಕಾಲಸಪ್ಪಳ 'ಕಟಕ್ ಕಟಕ್' ರಥಹರಿವ ಶಬ್ದ ಕೇಳಿಬರುವುದು. ಸರ್ವಾಲಂಕೃತವಾದ ರಥವೊಂದು ರಂಗದ ಮೇಲೆ ಬರುವುದು. ತುಂಬ ಸ್ಫುರದ್ರೂಪಿಯಾದ ತೇಜಸ್ವೀ ತರುಣ ರಾಜಕುಮಾರ ಆ ರಥದಿಂದಿಳಿಯುತ್ತಾ...)

**ರಾಜೇಂದ್ರ :** ಅಳಬೇಡಿ ಸೋದರರೆ... ಅಳಬೇಡಿ !
ಶ್ವೇತಸುಂದರಿ ಸತ್ತಿಲ್ಲ ತಿಳಿಯಿರಿ !
ಅವಳಿಗೆ ಸಾವೆಂಬುದೇ ಇಲ್ಲ, ದೇವ ಮಾನವ ಕುವರಿ.
ಯಕ್ಷನೊಬ್ಬನು ನನಗೆ ಎಲ್ಲವನು ಅರುಹಿದನು.
ಕಥೆಯ ಕೇಳಿದೆ ನಾನು,.. ವರಿಸಲೈತಂದಿಹೆನು!
ಶ್ವೇತಾ ಮತ್ತೆ ಚೇತನ ತುಂಬಿ ಹಾಡುವಳು ನರ್ತಿಪಳು
ಶ್ವೇತಾ... (ಕೈ ಹಿಡಿದು ಮೇಲೆತ್ತುವನು)

**ಸ್ನೋ** : (ಮೇಲೆದ್ದು) ರಾಜೇಂದ್ರ !!

ಇಬ್ಬರ ದೃಷ್ಟಿಗಳು ಪರಸ್ಪರ ಕೂಡುವುವು. ಕ್ಷಣಕಾಲದ ಮೌನ ಮರೆಯಾಗಿ ಅಮೋಘವಾದ ಅದ್ಭುತವಾದ ಆನಂದವಾದ್ಯ ಆರಂಭವಾಗುವುದು. ಶ್ವೇತಾ ಮತ್ತು ರಾಜೇಂದ್ರರಿಬ್ಬರೂ ತೋಳಲ್ಲಿ ತೋಳು ಬೆರಸಿ ನರ್ತನದ ಭಂಗಿಯಲ್ಲಿ ನಿಲ್ಲುತ್ತಾರೆ. ಅದ ನೋಡುತ್ತಾ ಬೆರಗಾಗಿ ಕುಳ್ಳರು ದೂರ ಸರಿದು ನಿಲ್ಲುವರು.

**– ದೃಶ್ಯ ಬದಲಾವಣೆ –**

ರಂಗ ಕತ್ತಲಾಗಿ ಬೆಳಗಿದಾಗ ಇದ್ದಕ್ಕಿದ್ದಂತೆಯೇ ಯಕ್ಷ ಲೋಕವೊಂದು ತೆರೆದುಕೊಂಡಿರುವುದು. ಕೋಟಿ ಕೋಟಿ ತಾರೆಗಳು ಮಿನುಗುವ ನಕ್ಷತ್ರ ಲೋಕ, ನೀಹಾರಿಕಾವಲಯ. ಆ ಜ್ಯೋತಿರ್ವಲಯದಲ್ಲಿ ಅಲ್ಲಲ್ಲಿ ಬೆಳಕಿನ ಪುಂಜ. ರಂಗ ಹಲವು ಮಹಡಿಗಳ ನಭೋಮಂಡಲದಂತೆಸಗುವುದು. ರಂಗದ ತುಂಬ ಬಿಳಿಯ ಹೊಗೆ. ಬಣ್ಣ ಬಣ್ಣದ ದೀಪಗಳ ಕಣ್ಣು ಮುಚ್ಚಾಲೆ. ಇವುಗಳ ಕೂಡೆ ಹತ್ತಾರು ಜನ ಶ್ವೇತವಸನಧಾರಿಣಿಯರ ನರ್ತನ ! ಒಬ್ಬೊಬ್ಬ ಯುವತಿಯೂ ಗಂಧರ್ವಕನ್ಯೆ ! ಅವರ ಜೊತೆಗೂಡಿ ಯಕ್ಷ ದೇವತೆಗಳ ಆನಂದ ನರ್ತನ ! ಶ್ವೇತಾ ಮತ್ತು ರಾಜೇಂದ್ರ ಮೇಲಿಂದ ನರ್ತಿಸುತ್ತಲೇ ಕೆಳಗಿಳಿದು ಬರುವರು. ಇಡೀ ರಂಗವೇ ಆಗ ನರ್ತಿಸುವುದು. ನೂರಾರು ವಾದ್ಯ ವಿಶೇಷಗಳ ಸಂಘಟಿತ ಸಂಗೀತ. ಭವ್ಯತಮ ನರ್ತನ.

– ಈ ಸ್ವಪ್ನ ಲೋಕದ ದೃಶ್ಯ ಅನ್ಯಾದೃಶವಾಗಿ ಹತ್ತು ಹದಿನೈದು ನಿಮಿಷ
ನಡೆಯುವುದು. ಅನಂತರ –

**ರಾಜೇಂದ್ರ** : ಶ್ವೇತಾ... ಶ್ವೇತ ಸುಂದರಿ.. ಚೆಲುವೆ ಓ ನನ್ನ ಸ್ನೋವೈಟ್ !!

**ಸ್ನೋ** : ರಾಜನ್.. ನೀನಾರು ದಿವ್ಯದೇಹಿ? ಸ್ವರ್ಗದಿಂದಳಿತಂದ
ದೇವತೆಯೆ ನೀನು ?

| | | |
|---|---|---|
| **ರಾಜೇಂದ್ರ** | : | ಅಲ್ಲಲ್ಲು ಚೈತ್ರಾಕ್ಷಿ ! ನಾನು ದೇವತೆ ಅಲ್ಲು,<br>ಬಿದನೂರಿನರಗುವರ, ಯುವರಾಜಪದವಿಧರ !<br>ನಿನ್ನ ನಾನೊಲಿದಿಹೆನು ! ನನ್ನವಳು ನೀನು !! |
| **ಸ್ನೋ** | : | ಅದು ಸರಿ... ಹೇಗೆ ತಿಳಿದಿರಿ ಹೇಳಿ ನನ್ನ ಹೆಸರ ? |
| **ರಾಜೇಂದ್ರ** | : | ಚೆನ್ನೆ, ಈ ಬನದ ಪಕ್ಷಿಸಂಕುಲವೆಲ್ಲ ನಿತ್ಯವೂ ಗೈಯುತಿದೆ<br>ಶ್ವೇತಾ ಶ್ವೇತಾ ಶ್ವೇತಾ ಎಂಬ ಮಧುರ ಮಂಗಲ ಘೋಷ !<br>ಅದರಿಂದೆ ನಾ ಸವಿದೆ ನಿನ್ನ ನಾಮ ಪಿಯೂಷ !!<br>ಅದೊ ನಿನ್ನ ಪೂಜ್ಯ ತಂದೆ ! |
| **ಮಹಾರಾಜ** | : | (ಪ್ರವೇಶಿಸಿ) ಶ್ವೇತಾ...! |
| **ಸ್ನೋ** | : | ಅಪ್ಪಾಜೀ (ಇಬ್ಬರೂ ಆಲಂಗಿಸಿಕೊಳ್ಳುವರು) |
| **ಮಹಾ** | : | ಎಲ್ಲ ತಿಳಿದೆನು ಮಗಳೆ ! ಕಷ್ಟ ಎಂದಿಗೂ ಸುಖದ ಸೋಪಾನ !<br>ಕೆಟ್ಟ ಕನಸೆಂದು ತಿಳಿ. ಭವ್ಯ ಭವಿತವ ನೆನೆದು, ಕಳೆದುದನು<br>ಮರೆತುಬಿಡು ! ಎಲ್ಲಿ ಇಬ್ಬರೂ ಇತ್ತ ಬನ್ನಿ !<br>(ಇಬ್ಬರ ಬಲಗೈಗಳನ್ನು ಸೇರಿಸಿ, ಹರಸುತ್ತಾ)<br>ನೂರ್ಕಾಲ ಬಾಳಿ, ನಿಮ್ಮ ಬದುಕು ಬಂಗಾರವಾಗಲಿ. |
| **ಕುಳ್ಳರು** | : | (ಎಲ್ಲರೂ) ಉಘೇ ! ಉಘೇ! ಎಂದು ಘೋಷಿಸುತ್ತಾ<br>ಹೂ ಮಳೆಗರೆಯುತ್ತಾ ಅವರ ಸುತ್ತ ತಾಳ ಹಾಕಿಕೊಂಡು ಒಬ್ಬ<br>ಇನ್ನೊಬ್ಬನ ಸೊಂಟ ಹಿಡಿದು ಬ್ರೇಕ್ ಡ್ಯಾನ್ಸ್, ಬಾಲ್ ಡ್ಯಾನ್ಸ್<br>ನಡೆಸ ಹತ್ತುವರು. ಅವರ ಕುಣಿತಕ್ಕೆ ತಕ್ಕಂತೆ ವಾದ್ಯ<br>ಮೊಳಗುವುವು ! |
| | | – ಇದ್ದಕ್ಕಿದ್ದಂತೆ ಜೋಕರ್ ಪ್ರವೇಶಿಸಿ – |
| **ಜೋಕರ್** | : | ಹೆ ಹ್ಹೆ ಹ್ಹೇ... ಹೋಗಿಬನ್ನಿ ! ಎಲ್ಲರೂ ಹೋಗಿಬನ್ನಿ !!<br>ಆದರೆ ನಮ್ಮ ಸ್ನೋವೈಟ್ ಮತ್ತು ರಾಜೇಂದ್ರರ ಮದುವೆಗೆ<br>ನೀವೆಲ್ಲರೂ ತಪ್ಪದೆ ಬನ್ನಿ !<br>ಬಾಯ್ ! ಬಾಯ್ ! |

– ಶುಭಂ –

# ಪೃಥಾ ಪವಿತ್ರೆ

**(ಅಪರೂಪದ ಆಖ್ಯಾಯಿಕೆ)**

**ಪಾತ್ರಗಳು :**

ನಟಿ (ಪೃಥೆ)

ಪಕ್ಷಿ

ಧ್ವನಿ

ರಂಗಸಜ್ಜಕೆಯ ಸ್ತ್ರೀಯರು

**ಪ್ರೇರಣೆ :**

ಕೇರಳದ ಶ್ರೀ ಜಿ. ಶಂಕರಪಿಳ್ಳೆ ವಿರಚಿತ ಮಲೆಯಾಳಂ ರೂಪಕ.

ತುಸು ಮುಂಚಾಚು ವೇದಿಕೆಯ ರಂಗಭೂಮಿ. ಅದರ ಮೇಲೆ ವೇಷಧಾರಿ ನರ್ತಕ ನರ್ತಕಿಯರು. ಅವರು ರೂಪಕದ ನೇರ ಪಾತ್ರಗಳಲ್ಲ. ರಂಗಸಜ್ಜಿಕೆಯ ಸಹಾಯಕಿಯರು. ಹಾಡುವುದು, ನರ್ತಿಸುವುದು, ಸಾಂದರ್ಭಿಕವಾಗಿ ರಂಗವನ್ನು ಸಜ್ಜುಗೊಳಿಸುವುದು, ಆಗಾಗ ಅವ್ಯಕ್ತ ಚೇತನಗಳಿಗೆ ಕಂಠದಾನಮಾಡುವುದು – ಇವು ಅವರ ಮುಖ್ಯ ಕಾರ್ಯಗಳು. ಇವುಗಳಿಗೂ ಅಭಿನಯದ ಪ್ರಧಾನಾಂಶಕ್ಕೂ ನೇರ ಸಂಬಂಧಿಸದ, ಆದರೆ ಅನಿವಾರ್ಯವೆನಿಸಿದ, ಗ್ರೀಕ್ ರುದ್ರನಾಟಕಗಳಲ್ಲಿನ ಮೇಳ (Chorus) ದಂತಹ ಪಾತ್ರವಲ್ಲದ ಪಾತ್ರವರ್ಗ.

– ರಂಗದ ಹಿಂಬದಿಯಲ್ಲಿ ಅತ್ತ ಇತ್ತ ಅಡ್ಡಾಡಲು ಎಡೆ ಇರಬೇಕು. ಮುಂಬದಿಯಲ್ಲಿ ಅಂದರೆ ತುಂಬಾ ಮುಂಬದಿಯಲ್ಲಿ ದೊಡ್ಡ ಪ್ರಮಾಣದ ರಂಗು ರಂಗಿನ ರಂಗವಲ್ಲಿ. ಅದರ ನಡುವೆ ಒಂದು ದೀಪಸ್ತಂಭ. ಧಾಳಾಗಿ ಉರಿಯುತ್ತಿರುತ್ತದೆ. –

– ತೆರೆ ಸರಿದಾಗ ಸಜ್ಜಿಕೆಯ ಸಹಾಯಕಿಯರು ತಮ್ಮೆರಡೂ ಕೈಗಳಲ್ಲಿ ಉರಿದ ಪಂಜು ಹಿಡಿದು ನರ್ತಿಸುತ್ತಿರುತ್ತಾರೆ. ಹಿಂಬದಿಯಲ್ಲಿ ಹಾಡು ಹರಿಯುತ್ತಿರುತ್ತದೆ. ನಟಿ (ಕುಂತಿ) ಅತ್ತಿತ್ತ ಅಡ್ಡಾಡುತ್ತಿರುತ್ತಾಳೆ, ಅಲ್ಲಲ್ಲಿ ರಂಗದ ಮೇಲೆ ಇರಿಸಿದ್ದ ಸಣ್ಣ ಹಣತೆಗಳನ್ನು ಎತ್ತಿತಂದು ದೊಡ್ಡ ಸ್ತಂಭದೀಪದಿಂದ ಹತ್ತಿಸಿ, ಅವುಗಳಿದ್ದ ಜಾಗಗಳಲ್ಲಿಡುತ್ತಾಳೆ. ಮಧ್ಯೆ ಮಧ್ಯೆ ಆಕಾಶದೆಡೆಗೆ ದಿಟ್ಟಿ ಹರಿಸಿ ನಿಲ್ಲುತ್ತಾಳೆ. ರಂಗ ಎಣ್ಣೆದೀಪಗಳಿಂದ ಮಿನುಗುವಾಗ ಸಂದೇಹಾತ್ಮಕ ಧ್ವನಿಯಲ್ಲಿ ವಾದ್ಯಗಳು ದನಿಗೈಯುತ್ತವೆ. ಸಜ್ಜುಗಾರರು ಹಳದಿ ತೆರೆ ಏರಿಸುತ್ತಾರೆ ಶುಭದ ಸಂಕೇತವಾಗಿ ! –

ಹಾಡು : ಪೃಥೆ ಪೃಥೆ ಪೃಥೆ
ಅವಳ ಬಾಳೆ ವ್ಯಥೆ
ಕೇಳಿರೆಲ್ಲ ಈ ಕಥೆ
ಮಹಾಭಾರತದೊಳಗತೆ ॥
ಪಾಂಡುರಾಜಗಿವಳೆ ಪತ್ನಿ
ಪಾಂಡವರಿಗೆ ತಾಯಿಯು
ಕುಂತಿಭೋಜನಲ್ಲಿ ಬೆಳೆಯೆ
ಇವಳಿಗಾಯ್ತು ಕುಂತಿಯು ॥
ಕುಂತಿ ಕುಂತಿ ಕುಂತಿ
ಪೃಥೆಯ ಹೆಸರು ಕುಂತಿ
ಪೃಥಾ ಹೆಸರು ಮರೆತರು
ಕುಂತಿ ಎಂದೇ ಕರೆದರು ॥
ರಾಧೇಯಗೆ ಆಧ್ಯಾನ
ವಿಧಿಯ ಕೈ ಬೊಂಬೆಯು
ತಪ್ಪು ಹೆಜ್ಜೆ ಇಟ್ಟಳು
ಕುಂತಿ ಕಂತಿ ಹೋದಳು ! ॥
ಕೇಳಿರೇ ಕೇಳಿರೇ
ಕುಂತಿ ಕಥೆಯ ಕೇಳಿರೇ। ಮತಿ
ವಂತೆ ಕಥೆಯ ಕೇಳಿರೇ । ಇತಿ
ವೃತ್ತ ಮುಂದೆ ಓದಿರೇ ॥

ನಟಿ (ಕುಂತಿ) ದೀಪಸ್ತಂಭದ ಬಳಿ ಬಂದು ನಿಂತು ಚಣಕಾಲ ಅದನ್ನೇ ದಿಟ್ಟಿಸಿ ನೋಡುತ್ತಾಳೆ. ಆಕಾಶದೆಡೆಗೆ ಮುಖಮಾಡಿ ಶೂನ್ಯವನ್ನು ನಿಟ್ಟಿಸಿ ನಿಲ್ಲುತ್ತಾಳೆ. ತದನಂತರ ಜ್ಯೋತಿಗೊಮ್ಮೆ ತಲೆಬಾಗಿ ವಂದಿಸಿ ಅಗ್ನಿಕುರಿತ ವೇದ ಮಂತ್ರಗಳನ್ನು ಕುರುಕುತ್ತಾಳೆ. ಸಜ್ಜಿಕೆಯವರು ಅವಳೊಡನೆ ದನಿಗೂಡಿಸುತ್ತಾರೆ.

**ನಟಿ** : ಓ ಅಗ್ನಿ,
(ಭಾವಗೀತೆ) ಎಲ್ಲರಂತೆ ನೀ ಅಧೋಮುಖದಿ
ಅವತರಿಪ ವಸ್ತುವಲ್ಲ ।
ಉರ್ಧ್ವಗಾಮಿ, ನಕ್ಷತ್ರಯಾತ್ರಿ
ಬೆಳಗಿಸಿದೆ ಇಳೆಯಲ್ಲ
ಜ್ಞಾನಕಿರುವ ಸಂಕೇತ ನೀನು

ಪರ್ಯಾಯನಾಮವಿಲ್ಲ ।
ಅಜ್ಞಾನವಳಿಸಿ, ಸುಜ್ಞಾನ ಬೆಳೆಸಿ
ಬಾಳು ಬೆಳಗಿತೆಲ್ಲ ।
ಅಗ್ನಿದೇವ ಓ ತಾರಾ ಪ್ರತಿಭೆಯೇ
ಜ್ವಲಿಸು ಬಾರೊ ತಂದೆ.
ಬೆಳಕು ತೇಜಗಳ ಬಿತ್ತಿ ಬೆಳೆವ
ಅಕ್ಷುಲ್ಲ ಪೃಥ್ವಿ ಎಂಬೆ
ಜ್ವಲಿಸು ಬಾರೊ ಪ್ರಜ್ವಲಿಸು ಬಾರೊ
ಚಿತ್ತ ತೇಜ ತನೆಯೆ!
ನೆನಪಿನಂಗಳವ ಬೆಳಗು ಬಾರೊ !
ಓ ಜ್ಯೋತಿರೂಪಿ ದೊರೆಯೇ।
– ಘಂಟೆ, ಜಾಗಟೆ ಮತ್ತು ಶಂಖಾದಿಗಳ ತೂರ್ಯರವ–
ಶುಭಮಕ್ಕೆ ಗೆಲಮಕ್ಕೆ ಸಕಲ ಮಂಗಲಮಕ್ಕೆ !
(ಜ್ಯೋತಿ ಸಮೀಪಿಸಿ)
ಓ ಜ್ಯೋತಿ,
**(ರಗಳೆ)** ಬೆಳಗುತಿರು ಅನವರತ ನಂದದೇ ಬೆಳಗುತಿರು!
ಎಲ್ಲದೂ ನಿನ್ನೊಡನೆ ಬೆಳಗುತಿರಲಿ ।
ಹೂಂ ! ಯಾರು ಬೆಳಗಿದರೇನು ! ಎಷ್ಟು ಬೆಳಗಿದರೇನು ?
ಹೆಣ್ಣಿಗೆ ಕಣ್ಣೀರೆ ಗತಿ!
ನಾನೊರ್ವ ರಂಗನಟಿ !
ಭಿನ್ನ ಮುಖವಾಡಗಳ ಧರಿಸಿರುವ ಪಾತ್ರಧಾರಿಣಿ ನಾನು!
ಪುರುಷ ನಿರ್ಮಿತ ಗಾಣದಲ್ಲಿ ಬಿದ್ದಂಥ ಎಣ್ಣೆಕಾಳು!
ನಾಟ್ಯ ವೇದಿಕೆ ಮೇಲೆ ನಾನು ಪಡೆದುದಾದರು ಏನು?
ಹೆಂಗೆಳೆಯರಪಹಾಸ್ಯ
ಪುರುಷರ ಶಹಬ್ಬಾಶ !
ನಾನು ಬರಿಯ ಪಾತ್ರಧಾರಿಣಿ ಅಷ್ಟೆ !
**(ಹಾಡು)** ನಾನೊಂದು ಹೆಣ್ಣು ಕೂಡ ॥ ಪ ॥
ಪುರುಷ ವಂಚನೆಯ ಮಂಚವೇರ್ದ
ಹತಭಾಗ್ಯ ಹೆಣ್ಣು ಕೂಡ ॥ ಅನು.ಪ ॥
ಹಕ್ಕು ಅಧಿಕಾರ ಸೊಕ್ಕು ಸಾಮರ್ಥ್ಯ
ಯಾವುದೂ ಇಲ್ಲ ನನಗೆ ।
ಪ್ರೇಮ ವಂಚನೆ ಪತಿತೆ ಪಾತಕಿ
ಬೆಂದ ಬಿಳಿಯ ಹಾಳೆ ॥ ೧ ॥
ಹಿಡಿಕೂಳನುಂಬ ಬಡದಾಸಿ ನಾನು
ಆತ್ಮಾಭಿಮಾನ ರಹಿತೆ।
ಕಣ್ಣೀರಿನಲ್ಲೆ ಕೈ ತೊಳೆಯುತಿರುವೆ
ನಿಂದನೆಗೆ ಪಾತ್ರಳಾದೆ ! ॥ ೨ ॥
ಹೆಜ್ಜೆ ಇಟ್ಟರೆ ತಪ್ಪು, ಹೆಜ್ಜೆ ತೆಗೆದರೆ ತಪ್ಪು
ಪ್ರತಿಪದಕು ಎಚ್ಚರಿಕೆ ಮಂತ್ರ ಪಠಣ!
ತಿರುಗಿದಡೆ ಪಾಶ, ಬಂಧನದ ನೇಣು
ಸಪ್ತಪದಿ ಸಂಕೋಲೆ ಬೇರೆ ಕಥನ ॥ ೩ ॥

ಏನು ಕ್ರೌರ್ಯ ಏನೆಂಥ ದೌಷ್ಟ್ಯ
ಈ ಗಂಡು ಕುಲದ ಬೊಂತೆ!
ನೀತಿ ಸಂಹಿತೆ ಕಟ್ಟು ಕಟ್ಟಳೆ
ಹೆಣ್ಣಿಗಷ್ಟಯಂತೆ! ॥ ೪ ॥
ಪುರುಷಗಿಲ್ಲ ಬಂಧನದ ಬೇಡಿ
ಸ್ವಾಚ್ಛಂದ್ಯ ಸಿಂಹವವನು!
ಎಲ್ಲ ಬೇಡಗಳು ಹೆಣ್ಣಿಗಷ್ಟೆ
ಪಂಜರದ ಪಕ್ಷಿಯವಳು ॥ ೫ ॥

**(ಗದ್ಯ)** ಇವುಗಳನು ಕಿತ್ತೊಗೆದು ನುಗ್ಗಲಾರಳೆ ಹೆಣ್ಣು ?
ಇಲ್ಲಾ............................ಇಲ್ಲಾ........................ಇಲ್ಲಾ...!

**(ರಗಳೆ)** ಸಂಪ್ರದಾಯದ ಭೂತ ಕಾವಲಿಹುದಿಲ್ಲಿ
ಎಡವಿದರೆ ಸಾಕೆಂದು ಕಾಯುತಿಹುದಿಲ್ಲಿ
ಹೆಣ್ಣು ಮಣ್ಣಾಗಿಸಲು ಬಾಣ ಹೂಡಿ
ಹೊಂಚು ಹಾಕುತ್ತಲಿದೆ ಬೋಧೆ ಬಿಲದಲ್ಲಿ !
ಅವಕಾಶ ಸಿಕ್ಕಿತೋ ಮುಗಿದು ಹೋಯಿತು ಕಥೆಯು
ಧಗಧಗಿಪ ದಳ್ಳುರಿಯ ಚಿತೆಗವಳ ಕಳಿಸಿ
ಊದಿ ಊದೂದಿ ಬರಿಬೂದಿಗೈದು
ಅವಳಾಸೆ ಕನಸುಗಳಿಗೆಲ್ಲ ಕಿಚ್ಚಿಕ್ಕಿ
ಧರ್ಮದಾ ಹೆಸರಿನಲಿ ದ್ರೋಹ ಯಜ್ಞವೊ ಇಲ್ಲಿ
ಈ ಪುಣ್ಯ ಭೂಮಿಯಲಿ, ಭರತ ಖಂಡದಲಿ !
ಹೆಣ್ಣು ಶೋಷಣೆಗೊಳಗು ಮಸಣ ಮೌನದ ಸೆರಗು
ಸಂಪ್ರದಾಯವು ಪಠಿಪ ಚರಮಗೀತೆ !

**(ಗದ್ಯ)** ಏಕೆ ? ಸೋಪಜ್ಞ ಪರಿಪೂರ್ಣೆಯಲ್ಲವೇ ಹೆಣ್ಣು ?
ತನ್ನ ತಾ ನಡೆಸಿಕೊಳ್ಳಲಾರದಷ್ಟು ಅಬಲೆಯೇ?
ಓಂ ಸ್ವಸ್ತಿ............................ಓಂ ಸ್ವಸ್ತಿ !
ಹೇಳಿ, ನೀವೇ ಹೇಳಿ.....................ನಾವಿಬ್ಬರೂ ಸೇರಿ
ಈ ಸರಪಣಿಯ ತುಂಡರಿಸಲಾರೆವೆ, ಹೇಳಿ ?
ನಾವು ಶಕ್ತರು.............................ಸಮರ್ಥರು....ದಿಟ ! ಆದರೆ
– ಎರಡು ಹೆಜ್ಜೆ ಹಿಂದೆ ಸರಿದು ನಿಧಾನವಾಗಿ ಜ್ಯೋತಿಯನ್ನು ಸಮೀಪಿಸಿ –
**ಹೊಟ್ಟೆಯೊಳಗಣ ಸಿಟ್ಟು ರಟ್ಟೆಯಲ್ಲಿಲ್ಲ !**
– ಮೌನ –

**(ರಗಳೆ)** ಅಗ್ನಿ ಸಮ್ಮುಖದಲ್ಲಿ ಕೈಯ ಮೇಲ್ ಕೈ ಇರಿಸಿ
ಧರ್ಮದಲಿ ಅರ್ಥದಲಿ ಕಾಮಕರ್ಮಗಳಲ್ಲಿ
ನಾನತಿಕ್ರಮಿಸೆ ನಾನತಿಕ್ರಮಿಸೆ ಎಂದೆಂಬ
ಸಂಕಲ್ಪ ಸ್ವೀಕರಿಸಿ ಪ್ರಾರ್ಥನೆಯ ಸಲಿಸಿದೆವು
ಪ್ರೇಮ ದಾಂಪತ್ಯವಿದು ಸ್ವರ್ಗವಾಗಲಿ ಎಂದು
ಸಂಸಾರ ಸಾಂಗತ್ಯ ಶ್ರುತಿಗೂಡಲೆಂದು !
ಆದರೆ,
ಹೆಣ್ಣ ಮಾಂಸಲವನ್ನು ಕಿತ್ತು ತಿನುತಿದೆ ಗಂಡು
ಹೆಣ್ಣು ಮಣ್ಣಾಗಿಹಳು ಸುಟ್ಟ ಸುಣ್ಣ ।
ತಣಿವುಂಡು ಬಾಳೆಲೆಯ ಬೀಸಿಕೊಂಬುವ ಬಾಳು

ಕಣ್ಣೊಡೆಯುತಿಹುದಯ್ಯೋ ದೃಶ್ಯ ತೀಕ್ಷ್ಣ !
ದೀನ ದಾಸ್ಯದ ಮೇಲೆ ಪುರುಷ ಪ್ರಭುತ್ವ
ಮೊಸಳೆ ಕಣ್ಣೀರಿನೊಲು ಸಾನುಕ್ರೋಶತ್ವ !
ಪುರುಷ ದಬ್ಬಾಳಿಕೆಗೆ ಹೆಣ್ಣೊಂದು ತುತ್ತು !
ರಣಹದ್ದುಗಳು ಕಸಿಯೆ, ಅದು ಸತ್ತು ಬಿತ್ತು !

**(ಭಾಮಿನಿ)** ಕಾಡು ಬೀಡಿನ ವೃಕ್ಷ ಧಾಮವು
ಗಂಡಸಿನ ಕೈ ರೂಕ್ಷಮೋಕ್ಷವು
ಸಿಡಿದು ಸೀಕುರಿಗೊಂಡು ಹೋಯಿತು ಮನದ ಮುದಬಳ್ಳಿ!
ಜಡಿದ ಮೊಳೆ ನಡುನೆತ್ತಿ ಸಿಡಿಸಲು
ಒಡಲ ಬಡಬಾಗ್ನಿಯನು ಹತ್ತಿಸಿ,
ಗುಡುಗುಡುಸಿ ಆರ್ಭಟವಗೈದಿತು ಗಂಡು ಪೈಶಾಚಿ॥

–ನೇಪಥ್ಯದಲ್ಲಿ ಅಗ್ನಿಸ್ತೋಮ ಮಂತ್ರಪಠಣ –

**(ಗದ್ಯ)** ಪ್ರಜ್ವಲಿತ ಪ್ರಸ್ಫುಟಿತ ದಿವ್ಯ ತೇಜೋರಾಶಿ ಓ ಅಗ್ನಿ,

**(ಹಾಡು)** ನೀರಿನಂತೆ ಹರಿಯುತಿರು
ಗಾಳಿಯಂತೆ ಬೀಸುತಿರು
ಯುದ್ಧಾಶ್ವವಾಗಿ ನೀನು
ಕೆನೆ ಕೆನೆಯುತ ಧಾವಿಸು !
ನೀಲ ನಭದ ಹಾಸಿನಲ್ಲಿ
ತಾರೆಯಾಗಿ ಮಿನುಗುತಿರು
ಬಳ್ಳಿ ತೊನೆವ ತೋಳಿನಲ್ಲಿ
ಹೂವು ಬಿರಿವ ಧಾಟಿಯಲ್ಲಿ
ಪಕಪಕ ನೀ ನಗುತಿರು

ಆದರೆ,

(ಬೇರೆ ಧಾಟಿಯಲ್ಲಿ) ಚಿಂತೆ ಚಿಂತೆಯಾದ ಜಂತೆ ಉರುಲಾದ
ಶವದ ತಿನಿಸು ಬೇಡ !
ತುತ್ತನುಣಿಸಿ ಮುತ್ತಿಟ್ಟ ತುಟಿಗೆ
ಕಿಚ್ಚಿಕ್ಕಿ ಉರುಹಬೇಡ !
ಅಸ್ತಿತ್ವವಿಲ್ಲ, ರಕ್ಷಣೆಯು ಇಲ್ಲ
ಮಸ್ತಿಷ್ಕ ಶೂನ್ಯೆ ತಾಯಿ !
ಭಕ್ಷ್ಯವಲ್ಲ ಹಡೆದೊಡಲ ಕರುಳು
ಅದು ನೋಯದಂತೆ ಕಾಯಿ.

– ಘಂಟಾನಾದ. ನಟಿ ಅತ್ತಿತ್ತ ಅಡ್ಡಾಡುತ್ತಾ –

(ಗದ್ಯ) ನಾನು ಭೂತವನು ಕಂಡವಳು
ವರ್ತಮಾನ ಸ್ಥಿತಿಯನರಿತವಳು ಕೂಡ !

**(ಸರಳ ರಗಳೆ)** ಭಯದಿಂದ ಕಂಪಿಸುವ ಈ ವರ್ತಮಾನ
ಬಂಗಾರ ಗೋಪುರದ ಸ್ವಪ್ನ ಪ್ರಾಚೀನ
ಇವುಗಳೆರಡರ ನಡುವೆ ಸಿಕ್ಕಂಥ ಹೆಣ್ಣುತನ
ಏನಾಯ್ತು ? ಏನಾಯ್ತು ? ಪಿಷ್ಟ ಚೂರ್ಣ !
ಹೆಣ್ಣು ಮಾಸತಿಯಾಗಿ ಚಿತೆಯಲ್ಲಿ ಬೆದೆ ಬೆಂದು
ಶುದ್ಧಳಾದಳು ಎಂದು, ಸಗ್ಗ ಸೇರ್ದಳು ಎಂದು
ಹದಿಬದೆಯು ತಾನಾಗಿ ಸತಿಯಾದಳೆಂದು

ಏನೇನೊ ಶಾಸನವ ಬರೆಯಿಸಿತು ಗಂಡು !

– ಚಣಕಾಲ ಮೌನ –

ನನ್ನ ತಂಗಿಯ ನಾನು ಕಾಣುವೆನು ಮುಗಿಲಲ್ಲಿ
ಚಿನ್ನದಂತಾದವಳು ಅಪರಂಜಿ ಅವಳು
ಶೂನ್ಯದಲಿ ಸಗ್ಗವನು ಕೆತ್ತ ಹೋದವಳು
ಮತ್ತೆ ಬಾರದ ಹಾದಿ ತುಳಿದು ನಡೆದವಳು.
ಗಂಡನಿಗೆ ಬಳಗಕ್ಕೆ ಅನ್ಯರಭ್ಯುದಯಕ್ಕೆ
ಕರ್ಪೂರವಾಗುರಿದು ಶ್ರೀಗಂಧವಾದವಳು
ವೀರ ಮರಣವ ಪಡೆದ ಪತಿಯ ಜತೆ ಚಿತೆಯೇರಿ
ತಂಗಾಳಿ ತೂಪಿಡುವ ಬೆಂಬೂದಿಯಾದವಳು !
ತ್ಯಾಗಜೀವಿಯು ಹೆಣ್ಣು ಧ್ಯೇಯವಾದಿನಿ ಹೆಣ್ಣು
ಪ್ರಕೃತಿಯೊಲು ತೆರೆದ ಹೃದಯಿ !
ಮೋಹ ಮದಿರೆಯು ಹೆಣ್ಣು, ಮುದ್ದು ಮುಗುಳಿನ ಮಗಳು
ಮತ್ತೆ ಕರುಣೆಯ ಕಣ್ಣು ಹಡೆದ ತಾಯಿ !

– ಮಂತ್ರ ಪಠಣದ ಧಾಟಿಯಲ್ಲಿ –

ಪೃಥೆ... ಪೃಥೆ... ಪೃಥೆ...

– ಪಠಿಸುತ್ತಲೇ ನೇಪಥ್ಯಕ್ಕೆ ನಿರ್ಗಮಿಸುವಳು –

– ರಂಗ ಸಜ್ಜಿಕೆಯರು ಹಾಡುತ್ತಾ ಹಿಂಬದಿಯ ಹಳದಿ ಪರದೆ ತೆಗೆದು ನೀಲಿ ಪರದೆ ಏರಿಸುವರು. ಅದಕ್ಕನುಗುಣವಾಗಿ ಬೆಳಕೂ ಬದಲಾಗುವುದು.

**ಹಾಡು :** ಪೃಥೆ ಪೃಥೆ ಪೃಥೆ
ಅವಳ ಬಾಳೆ ವ್ಯಥೆ
ಕೇಳಿರೆಲ್ಲ ಈ ಕಥೆ
ಮಹಾಭಾರತದೊಳಗತೆ ॥
ಕೇಳಿರೇ ಕೇಳಿರೇ
ಕುಂತಿ ಕಥೆಯ ಕೇಳಿರೇ/ಮತಿ
ಮತಿವಂತೆ ಕಥೆಯ ಕೇಳಿರೇ/ಇತಿ
ವೃತ್ತ ಮುಂದೆ ಓದಿರೇ

– ಪೃಥೆ ಈಗ ಅಲಂಕಾರ ಭೂಷಿತೆ. ಆದರೆ ಉದ್ವಿಗ್ನ ಮನಸ್ಕಳಾಗಿದ್ದಾಳೆ. ಅವಳ ಆವೇಗ ಭರಿತ ಆಗಮನಕ್ಕನುಸಾರವಾಗಿ ಮೇಳ ದನಿಗೈವುದು ವಾದ್ಯಪರಿಕರಗಳೊಡನೆ. ಬಿರುಗಾಳಿಯಂತೆ ಬೀಸಿ ಬಂದ ಕುಂತಿ ಇದ್ದಕ್ಕಿದ್ದಂತೆಯೇ ರಂಗಮಧ್ಯೆ ನಿಂತು ಆಗಸವನ್ನೀಕ್ಷಿಸುವಳು –

**ಪೃಥೆ :** (ಪಿಸು ಮಾತಿನಲ್ಲಿ)

**(ಭಾವಗೀತ)** ಅದೇ.....................ಅದೇ.....................ಅದೇ ಧ್ವನಿ !
ಅದೇ ಮಂಜು ನಿಸ್ವನ !
**'ಪೃಥೆ'** ಎಂದು ಕರೆಯುತಿದೆ
ಮಧುರ ಕಂಠ ಗಾಯನ !
ಯಾರು ? ಯಾರು? ಯಾರು ?
ಯಾರು ನನ್ನ ಕರೆದವರು?
ಪೃಥೆ ಪೃಥೆ ಎಂದು ಕರೆದು
ಅಕ್ಕರೆ ಹಾಲೆರೆದವರು ?

**(ನೇಪಥ್ಯದಲ್ಲಿ)** ಪೃಥೆ ಪೃಥೆ ಪೃಥೆ

ನೀನೆ ನನ್ನ ದೇವತೆ !
ಕೇಳಿ ನೋಡು ನಿನ್ನನೊಮ್ಮೆ
ನೆನಪು ಕೊಡದೆ ನಿನ್ನೆದೆ ?

**ಪೃಥೆ : (ಭಾವಗೀತ)** ನೆನಪಿನ ತೆರೆ ಸರಿಯುತಿದೆ
ನಿನ್ನ ಕುರುಹು ಮೂಡುತಿದೆ !
ಚೈತ್ರನೊಡನೆ ಚಿತ್ತವಿಟ್ಟ
ಚೈತ್ಯಾಕ್ಷಿಯೆ ಪಕ್ಷಿಯೇ !
ಹೆಸರ ಹಿಡಿದು ಕರೆದೆಯೇಕೆ ?
ಹಸುರ ರೆಕ್ಕೆ ತೆರೆದೆಯೇಕೆ ?
ನನ್ನಾತ್ಮದಾತ್ಮದೊಳಗು
ಪಿಸು ನುಡಿಯನೆ ನುಡಿಯುವಂತೆ
ನವಿಲು ಗರಿಯ ಹರಡಿದಂತೆ.
ಹೆಸರ ಮತ್ತೆ ಉಚ್ಚರಿಸು
ಜೇನ ಹನಿಯ ಚಪ್ಪರಿಸು
– ದನಿಯನಾಲಿಸಿದಂತೆ ನಟಿಸಿ –

**(ಗದ್ಯ)** ಹಾಂ...................................ಏನಂದೆ?
**ಪ್ರೀತಿಯ ಪಲ್ಲವಿ ಆದಳು ಹೆಣ್ಣು!**
ಓಹೊಹೋ ! ಚೆನ್ನಾಗಿದೆ ಚೆನ್ನಾಗಿದೆ !
ಅಲಂಕಾರಯುಕ್ತ ನಿನ್ನ ನುಡಿ ಬಲು ಬಲು ಚೆನ್ನಾಗಿದೆ !
**ಪ್ರೀತಿಯ.........................................................**

**ಪಕ್ಷಿದನಿ : .......................................ಪಲ್ಲವಿ ಆದಳು ಹೆಣ್ಣು !**
**ಆಗಿ ತಿಂದಳು ಮಣ್ಣು !**

**ಪೃಥೆ (ಹಾಡು)** ಭೇಷ್ ! ಭೇಷ್ ಮುದ್ದು ಮರಿ
ಪುಟ್ಟ ಚಿನ್ನಾರಿ !
ಯಾವ ನಿತ್ಯ ಸತ್ಯವನ್ನು
ನುಡಿಯಲಂಜಿ ಕುಳಿತೆನೊ
ಅದನೆ ಚಂಚು ಪುಟಗಳಿಂದ
ಘೋಷಿಸಿದೆಯೊ ಥಟ್ಟನೆ !
ಮುದ್ದು ಮರಿ ಮುದ್ದು ಮರಿ
ನೀನು ಯಾರೆ ಬಂಗಾರಿ ?
ಯಾರ ಮಡಿಲ ಒಡವೆ ನೀನು?
ಹೇಳೆ ವೈಯಾರಿ !
– ಕ್ಷಣಕಾಲ ತಡೆದು –

ಕಿವುಡುಗೇಳಿತು ಪಕ್ಷಿ
ದಿವ್ಯನಿರ್ಲಕ್ಷ್ಯತೆಯ ಸಾಕ್ಷಿ!
ನನ್ನ ನುಡಿ ಕಿವಿದೆರೆಯ ಮುಟ್ಟಲಿಲ್ಲ !
ಅದರೆದೆಯ ತಟ್ಟಲಿಲ್ಲ !
ಬಿಡದೆ ಕೇಳಿದೆ ಮತ್ತೆ
ನೀನಾರು ದೇವತೆ ?
ಹಕ್ಕಿ ತುಪ್ಪುಳದಿಂದ
ಕೆನ್ನೆಗಳ ಸವರುತ್ತ –

ಹೊರಗೆ ಬಾ ಹೇಳುವೆನು
ಬಯಲನ್ನು ಕೇಳುವೆನು !
ಎಂದಷ್ಟೆ ನುಡಿಯುತ್ತೆ
ಎತ್ತಲೋ ಅಡಗಿತ್ತು
ಮಂಗಮಾಯ!

**(ಸರಳ)** ಅಹುದು ಆ ಪಕ್ಷಿ ಗೋಚರಿಸಲಾರದು!
**ಏತಕೆನೆ.........................................ನಾನು ಬಂದದ್ದೇ ತುಂಬ ತಡವಾಗಿ !**
**ನಾನು ಪ್ರಪಂಚಕ್ಕೆ ಬಂದದ್ದೇ ಕಾನೀನನಿಗೆ ತಾಯಿಯಾಗಿ!**
ದಿನಗಳುರುಳಿದ ಮೇಲೆ
ನನ್ನ ಮಕ್ಕಳು ನನ್ನ ಸುತ್ತ ಮುತ್ತಿಗೆ ಹಾಕಿ
ಮಹಾಭಾರತಯುದ್ಧ ಮುಕ್ತಾಯವಾಯ್ತಮ್ಮ!
ಸತ್ಯಕ್ಕೆ ಗೆಲವು ದೊರೆಯಿತ್ತೆಂಬ ವಾರ್ತೆ ಮುಟ್ಟಿಸಿ
ನನಗೆ ಭಕ್ತಿಯಿಂದ ನಮಿಸಲಿಲ್ಲವೆ ಅವರು !
ಎಲ್ಲರೂ ಕೂಡಿ ವಿಜಯೋತ್ಸವವ ಆಚರಿಸಲಿಲ್ಲವ ?
– ನೇಪಥ್ಯದಲ್ಲಿ ಧರ್ಮರಾಯರಿಗೆ ಜಯವಾಗಲಿ ! ಧರ್ಮಕ್ಕೆ ಜಯವಾಗಲಿ
ಎಂಬ ಘೋಷ. ಕುಂತಿ ಎಲ್ಲದೂ ತನ್ನ ಕಣ್ಣೆದುರಿನಲ್ಲಿಯೇ
ನಡೆಯಿತೆಂಬಂತೆ ನಟಿಸಿ –

**(ವೀರಗಾಥಾ)** ಕರ್ತೃತ್ವ ಶಕ್ತಿಯಲಿ ಸಾಹಸಾದಿಗಳಲ್ಲಿ
ಪೌರುಷ ಪ್ರಯಣಯಿಗಳು ಪಂಚಪಾಂಡವರು!
ಶತ್ರುಗಳ ರುಂಡಗಳ ಚೆಂಡಾಡಿ ಬಂದವರು
ನೊರೆರಕ್ತ ಕಾಲುವೆಯ ಹರಿಸಿದವರು !
ಸೋಲಸವಿ ಕಾಣದಾ ಶೂರರೈವರು ಬಂದು
ನನ್ನಡಿಗೆ ಮುಡಿ ಚಾಚಿ ನಿಂತ ವೇಳೆ
ಮನ ತುಂಬಿ ಮುದ ತುಂಬಿ ಆನಂದ ತೊರೆ ತುಂಬಿ
ಹರಿದಾಗ ಅನುಭವವ ಹೇಳಬೇಕೆ ?
ಅವರ ಮುಡಿ ಹಿಡಿದೆತ್ತಿ ತೂಪಿರಿದು ಹರಸುತ್ತ
ಮಕ್ಕಳೇ ಶುಭದ ಮಳೆ ಕರೆಯಲೆಂದೆ !
ಮಾತು ಮುಗಿಯುವ ಮೊದಲೆ ಮೋದ ತುಂಬಿತು ನನ್ನ
ಎದೆ ಹಾಲು ತೊರೆಯಾಗಿ ಹರಿದುದಲ್ತೆ !
– ಚಣಕಾಲ ಮೌನ –

**(ಗದ್ಯ)** ಏನಿದೇನಿದು?.....ಇದ್ದಕಿದ್ದಂತೆಯೇ ಗೋಳ್ಕರೆಯ ಕೂರಲಗು!
ಬಿಕ್ಷಿ ಬಿಕ್ಕಳುತಿರುವ ಹೆಣ್ಣ ಕರುಳಿನ ಕೂಗು!

**(ಹಾಡು)** ಅಲ್ಲಿ ದೂರದಲಿ ತೊರೆಯ ತಡಿಯಲ್ಲಿ ಗೋಳಿಡುತಳೊಬ್ಬ ತಾಯಿ
ಕರುಳ ಕುಡಿಗಳನು ಕಳೆದುಕೊಂಡು ಕಣ್ಣೀರ ಕುಡಿದ ಮಾಯಿ
ನನ್ನ ವಯದವಳೆ ನನ್ನ ಭಯದವಳೆ ನನ್ನಂತೆ ಇದ್ದ ಸದಯಿ
ಕಣ್ಣಿದ್ದರೂನು ಬಿಳಿಪಟ್ಟಿ ಕಟ್ಟಿ ಒಳಗಣ್ಣ ತೆರೆದ ಹೃದಯಿ ॥
ಮುಖಬೋಡು ಬೆಂಡು ಕಾವಣವಕಟ್ಟಿ ಮುಸುಕಿತ್ತು ಮಂಜುಮೋಡ
ಕರುಳು ಕಿತ್ತುತಿನುವಂಥ ನೋಟ ಬತ್ತಲೆಯ ಬಯಲು ನೋಡ
ಓಡೋಡಿ ಬಂದೆ ಹಿಡಿದೆತ್ತಿ ಕೊಂಡೆ ಬಿಗಿದಪ್ಪಿಕೊಂಡೆನವಳ
ಕಣ್ಣೀರಕೋಡಿಹರಿಯುತ್ತಲಿತ್ತು ಮಾತಾಡಿತೆದೆಯ ಮೌನ!

ಅಕ್ಕ ಕೇಳವ್ವ ಚೊಕ್ಕ ಮಾತಿಹುದು ದುಃಖಿತೆಗೆ ನೆರವು ದುಃಖಿ !
ನಿನ್ನ ಅಳಲಿನಲಿ ನಾನು ಸಮಭಾಗಿ ಹೆತ್ತೊಡಲು ಬತ್ತದಿರಲಿ
ಪುತ್ರಶೋಕವದು ನಿತ್ಯದೊರತೆ ತಾ ನಿರುತ ಹರಿವ ಹೊನಲು
ಹೆಣ್ಣಾದ ಮೇಲೆ ಅನುಭವಿಸಬೇಕು ಇಂತೆಲ್ಲ ನೋವು ನೆರಳು!

**(ಗದ್ಯ)** ಅಹುದು.........ಈವರೆಗೆ ಇಲ್ಲಿಯೇ ಇದ್ದಂಥ ಪಕ್ಷಿ ಎಲ್ಲಿ ?
ಬಹುಶಃ ನಮ್ಮಿಬ್ಬರಳಲನ್ನು ನೋಡಲಮ್ಮದೆ ಹೇಸಿ
ಹೈಮಾಚಲೋತ್ತುಂಗ ಶೃಂಗದೆಡೆ ಗಮಿಸಿತೋ ಏನೊ!

– ಚಣಕಾಲ ಮೌನ –

ಓ ಪಕ್ಷಿ.................................................. ಈ ಬನದ ಚೈತ್ಯಾಕ್ಷಿ

**(ಭಾವಗೀತ)** ಪುಟ್ಟ ಪುಟ್ಟ ಹೆಜ್ಜೆ ಇಟ್ಟು
ಕಟ್ಟೆ ಮೇಲೆ ಕುಣಿಯುವ
ಅಟ್ಟಿಬರುವ ಗಾಳಿಯಲ್ಲಿ
ರೆಕ್ಕೆ ತೆರೆದು ಈಸುವ !
ನನ್ನ ಬಾಳ ಸಂಪುಟದಾ
ಪುಟಗಳನ್ನು ತೆರೆಯುತೆ
ಹೆಜ್ಜೆ ಹೆಜ್ಜೆಗೆಚ್ಚರಿರಲಿ
ಎಂಬ ಮಂತ್ರ ಪಠಿಸಿದೆ!
ನಿನ್ನ ಪುಕ್ಕ ಪಕ್ಕ ತೆರೆದು
ಸನ್ನೆ ಸಪ್ಪುಳವಗೈದು
ಸನಿಹಕೊಮ್ಮೆ ಬಾರೆ ತಾಯಿ
ಎಂದು ಕರೆಯ ನೀಡಿದೆ !
ಇನ್ನೇನು ನಾನು ಹೊರಡಬೇಕು
ಎನುವಷ್ಟರಲ್ಲಿ ಹಾರಿ
ನೀನೆ ನನ್ನ ಬಳಿಗೆ ಬಂದೆ
ಹರ್ಷ ಹೊನಲು ಹರಿಸಿದೆ !
ಬಾಳಿಗರ್ಥವುಂಟೆ ಉಂಟು
ವ್ಯರ್ಥವಲ್ಲ ಉಸುರಿದೆ
ಅಹುದು ಪಕ್ಷಿ ಇನಿತಾದರು
ನೀನು ನನಗೆ ಒಗಟೆ !

– ಮತ್ತೆ ಮೌನ–

**(ಬೇರೆ ಧಾಟಿಯಲ್ಲಿ)**

ನಿನ್ನ ತಿಳಿಯಲು ನಾನು ಎನಿತೆನಿತೊ ತಪಗೈದೆ
ಭೂಮಿ ಆಕಾಶಗಳನಳೆದು ಬಂದೆ!
ಘಳಿಗೆ ನಕ್ಷತ್ರಗಳು ಜಾತಕವು ಸಿಗಲಿಲ್ಲ!
ಜನ್ಮಕುಂಡಲಿ ಕೂಡ ದೊರೆಯಲಿಲ್ಲ!
ಆದರೂ ಅಕ್ಕರೆಯು ಮುಕ್ಕಾಗಲೇ ಇಲ್ಲ
ಸೋಲು ಸೊಲ್ಲಿಗು ನೀನೆ ಆದೆ ಎಲ್ಲ.
ಪುಟ್ಟಮರಿ ತಡೆಯಮ್ಮ ನೆನಪಸುಳಿ ಬಿಚ್ಚುವೆನು
ತಾಳ ಪಲ್ಲವಿಗಳಲಿ ರಾಗಿಸುವೆನು!

– ಮಧುರವಾದ ಸಂಗೀತ. ರಂಗಸಜ್ಜಿಕೆಯರು ಹಾಡತೊಡಗುವರು–

**(ಹಾಡು)** ಷೋಡಶ ವರ್ಷದ ಸಂಭ್ರಮ । ಅದು

ಹೆಣ್ಣಿನ ಬಾಳಲಿ ವಿಭ್ರಮ ॥ ಸ ॥
ಚಿಗುರಿನ ಬೆರಳಲಿ ಕಚಗುಳಿಯಿಡುವಾ
ವಸಂತಋತುವಿನ ಆಗಮನ ॥ ಅನು.ಸ॥
ಸಂಪಿಗೆ ಮೂಗಿಗೆ ಸೊಂಪಿನ ಬಿಂಕ
ಕೆಂಪಿನ ಕೆನ್ನೆಗೆ ಜೇನಿನ ಪಂಕ !
ಮಿಂಚಿನ ಸಂಚಳ ಚೆಲುಗಣ್ಣಿನಲಿ !
ಹಣೆಯಲಿ ಚಂದ್ರನ ಬೆಳುದಿಂಗಳಲಿ ॥ ೧ ॥
ಮುಖಸಂಪುಟದಲಿ ಪುಟಿಯುವ ಚಿಗರೆ
ತುಟಿತಟಿಯಲ್ಲಿ ಗಿಳಿಗಳ ಶಾಲೆ !
ಕಂಠವೆ ಕೋಗಿಲೆ ನಡಿಗೆಯು ನವಿಲೆ
ಕಾಮನ ಬಿಲ್ಲಿನ ಬಗೆಬಗೆ ಲೀಲೆ ॥ ೨ ॥
ಉಬ್ಬಿದೆ ತುಂಬೆದೆ ಎದೆಗೊಳದಲ್ಲಿ
ತಾವರೆ ಮೊಗ್ಗಿಯ ಕಿರುಮಾಟದಲಿ
ಹೊಮ್ಮಿತು ಒಳಗಿನ ಕಾಮಜ್ವಾಲೆ
ಹರಯವು ಆಡಿತು ಉಯ್ಯಾಲೆ ॥ ೩ ॥
ಉಷೆ ಹಸೆ ಬರೆದೊಲು ಹಸುರಿನ ಲೀಲೆ
ನಸೆ ಸುಸಿಲಾಡಲು ನಡುವಿನ ಮೇಲೆ
ಪೀನ ನಿತಂಬ ತುಂಬಿದ ಕುಂಭ
ಚಿಗುರಿದ ಚೆಲುವಿನ ಆನಂದ ॥ ೪ ॥

– ದೀಪಗಳು ಬದಲಾಗುವುವು. ಅದಕ್ಕನುಗುಣವಾಗಿ ಹಿಂಬದಿಯ ತೆರೆ ಕೆಂಪಾಗುವುದು ಕುಂತಿ ಈಗ ವೃದ್ಧೆಯಲ್ಲ ; ಹದಿನೆಂಟರ ತರುಣಿ. ತಾನು ತರುಣಿ ಎಂಬುದನ್ನು ತನ್ನ ಭಾವ ಭಂಗಿ ಅಭಿನಯಾದಿಗಳ ಮೂಲಕವೇ ಸಾಬೀತು ಪಡಿಸಬೇಕು.–

**ಪೃಥೆ (ಪ್ರವೇಶಿಸಿ) :** ಅಂದಿನ ದಿನದಲಿ ಚಂದದ ಬೊಂಬೆ
ನಾನಾಗಿದ್ದೆನು ಮೇನಕೆ ರಂಭೆ !
ಹೆಜ್ಜೆಯನಿಟ್ಟೆಡೆ ಭೂಮಿಗೆ ಪುಲಕ !
ಹಚ್ಚನೆ ಹಸುರಿಗೆ ಏನೋ ತವಕ !
ನಿಂದರೆ ನಿಲವಿನ ಕನ್ನಡಿ ಮುಂದೆ
ಅದಕೂ ಚುಂಬಿಸ ಬೇಕೆಂಬಾಸೆ !
ಸೋದರ ಮಾವನು ಕುಂತೀ ಭೋಜ
ಅರಮನೆಗೊಬ್ಬಳೆ ಇದ್ದೆನು ಸಾಜ
ಅಂತಿರೆ ಬಂದನು ಮುನಿ ದೂರ್ವಾಸ
ಮೂಗಿನ ತುದಿಯೇ ಮುನಿಸು ನಿವಾಸ !
ಭಯ ಭಕ್ತಿಯಲಾತಿಥ್ಯವಗೈದೆ
ಮುನಿವರಗಾಯಿತು ಹರ್ಷ ಪ್ರಸನ್ನತೆ.
ಕೂಡಲೆ ನುಡಿದನು, ಪೃಥೆ–

– ಋಷಿಯಂತೆ ಆಶೀರ್ವಾದ ನುಡಿ–

**(ಶ್ಲೋಕ)** **ಶ್ರೇಯೋಸ್ತು ಕೌಮಾರಿ ಇಷ್ಟಾರ್ಥ ಸಿದ್ಧಿರಸ್ತು**
**ಮಂತ್ರ ಪಠಣಾವಸಾನೇ ಸಂತಾನ ಪ್ರಾಪ್ತಿರಸ್ತು !**

– ಕುಂತಿಯಂತೆ ಧ್ವನಿ ಬದಲಿಸಿ –

**(ಸರಳ)** ಗರಿಗೆದರಿ ನರ್ತಿಸಿತು ಮನಮಯೂರ !

ಹರಯ ಹಾಲ್ಗಡಲಲ್ಲಿ ಈಸಿದೆನು ಪೂರ
ನೀಹಾರಿಕಾ ನಡುವೆ ನನ್ನ ಗುರುತಿಸಿಕೊಂಡೆ
ಸಗ್ಗ ಸಲಗನ ಕೋಡ ಹಿಡಿದೆಳೆದು ತಂದೆ !
ಜಗದ ಹೆಗಲಿನ ಮೇಲೆ ನೊಗ ಹೇರ ಹೋದೆ
ಮಿಂದೊಮ್ಮೆ ಮಡಿಯುಟ್ಟು ಸೂರ್ಯನನು ನೆನೆದೆ !

**(ಲಯಗತಿ)** ಸತ್ತ್ವವೀರ್ಯ ಸೂರ್ಯದೇವ
ನನ್ನ ಬಳಿಗೆ ಬಂದ
ಬರುವ ಮುನ್ನ ಕಣ್ಣ ಕೊರೆವ
ತೇಜವೊಂದ ಕಳುಹಿದ!
ಕಣ್ಣ ಮುಚ್ಚಿ ಕೈಯ ಬಿಚ್ಚಿ
ನಡುಗುತಿದ್ದ ನನ್ನನು
ಅಪ್ಪಿ ಅಪ್ಪಿ ಮುತ್ತಿಡುತ್ತ
ಸಗ್ಗವನ್ನೆ ತಂದನು !
ಚಣದ ಭೋಗ ಗಣನೆಯಿಲ್ಲ
ಮನವು ತುಂಬಿತೆಂದೆನು
ಬೆಳಕಿನುಂಡೆ ಕೈಯೊಳಿತ್ತು
ಮಂಗಮಾಯವಾದನು !

– ಚಣಕಾಲ ಮೌನ –

ಕತ್ತಲು ಮುತ್ತಿದ ನಡು ಹಗಲಲ್ಲಿ
ಸುತ್ತಣ ಸೋನೆಯ ಜಡಿಮಳೆಯಲ್ಲಿ
ಅತ್ತವು ದಿಗ್ಭಿತಿಗಳೆಲ್ಲ !
ನೆತ್ತಿಯ ದೇವನೆ ಹೊಣೆ ಎನೆ ನಾನು
ಅಪ್ಪಳಿಸಿತು ಅತಿ ಬಿರುಗಲ್ಲ !

– ಮತ್ತೆ ಮೌನ –

ತೊಲಗಾಚೆ ತೊಲಗಾಚೆ ತೊಲಗಾಚೆ ನೆನಪೇ
ಮತ್ತೆ ಮರುಕಳಿಸುತ್ತ ಕೊಲುವೆಯೇಕೆ ?
ಎಲ್ಲವೂ ಮುಗಿದಿಹುದು ಮತ್ತೇಕೆ ಸುಳಿವೆ
ಸುಳಿದು ಹಂಗಿಸಿದಲ್ಲಿ ಹಿತವೇನೊ ಮನಕೆ ?

– ಮೌನ –

**ಆರ್ಯೋಕ್ತಿ ಸಟೆಯಲ್ಲ :**
**ನೆನಪು ಸಾಯುವುದಿಲ್ಲ !**

ಆದರೆ,
ನಾನು ಹೇಳುತ್ತೇನೆ.

**ನೆನಪುಗಳು ಬದುಕಿರಲಿ ! ನೆನಪುಗಳು ಬದುಕಿರಲಿ !**
**ಏತಕೆನೆ ..............................ನೆನಪು ಕಹಿಯಲ್ಲ !**

– ಮೌನ –

ಪಕ್ಷಿ ಅಂತಸ್ಸಾಕ್ಷಿ, ಶಿವ ಸಾಕ್ಷಿ ಬಾರಾ
ಚಿರನೂತ್ನ ಚೇತನವೆ ಬಾನಾಡಿ ಬಾರಾ
ಬಂದೊಮ್ಮೆ ನೆನಪುಗಳ ತೆರೆದಿಡಲು ಬಾರಾ
ಕಥೆ ಮುಂದೆ ಸಾಗಲಿಕೆ ನೆರವಾಗು ಬಾರಾ !!
ಏನೆಂದೆ ? ..............................ಏನಂದೆ ಓ ಪಕ್ಷಿ,
ತಾಯಿ ಎಂದೇ?

**ಓಹ್! ಎನಿತು ಸವಿಯದರಲ್ಲಿ ತಾ– ಯಿ, ಯಲ್ಲಿ !**

ಆದರೀ ತಾಯಿ ಆಗಿಹಳು ನಾಯಿ !

ತಾಯಿ ಶಬ್ದವ ಸವಿಯೆ ವ್ಯವಧಾನವಿರಲಿಲ್ಲ ಪಕ್ಷಿ !
ನನಗಲ್ಲವಾದರೂ ನನಗಾಗಿ ಬದುಕುವರ ಸಲುವಾಗಿ
ಅದರ ಅಪವಾದವನು ದೂರಮಾಡಲಿಕಾಗಿ
ನದಿಗೆ ಕಂದನ ಬಿಸುಡೆ ನಿರ್ಧಾರಗೈದೆ !
ನನ್ನಂತರಂಗದಾ ಗುಟ್ಟನ್ನು ಗಂಟಿಟ್ಟು,
ನೀರಿನಲೆಯಲಿ ಮುಚ್ಚಿ ಬಚ್ಚಿಡಲು ನಡೆದೆ
ನದಿಯ ದಂಡೆಯ ಮೇಲೆ ಒಬ್ಬಳೇ ನಿಂತೆ.

– ರಂಗವನ್ನು ಮಬ್ಬುಗತ್ತಲಾವರಿಸುವುದು. ಕಪ್ಪು ಬಣ್ಣದ ಪರದೆ ಮೇಲೇರುವುದು. ಕೀಟಗಳ ಕಿರುಚಾಟ, ನದಿ ಹರಿವ ತೊರೆತ, ಅಲೆಗಳಪ್ಪಳಿಸುವ ಶಬ್ದ, ಗೂಗೆಗಳ ಕೂಗು ಇತ್ಯಾದಿ. ಇವುಗಳನ್ನು ದ್ವಿಗುಣಗೊಳಿಸುವಂತೆ ವಾದ್ಯಗಳ ರೋದನ.

ಕುಂತಿ ಧಾವಣಿಯೊಂದನ್ನು ಮುಸುಕಿ ಹಾಕಿಕೊಂಡು, ತನ್ನ ಮಗುವಿರುವ ಕವುದಿಯನ್ನು ಎದೆಗಪ್ಪಿಕೊಂಡು ನೇಪಥ್ಯದೆಡೆಗೆ ಭಯಭರಿತ ಕಣ್ಣು ಹರಿಸಿ, ಎಸೆಯಲು ಸಿದ್ಧಳಾದವಳಂತೆ ನಟಿಸುತ್ತಾ –

ಕಲ್ಲಾಗು ಎದೆಯೇ ಕಲ್ಲಾಗು !
ವಜ್ರಕಿಂ ಮಿಗಿಲಾದ ಕಾಠಿಣ್ಯ ನಿನ್ನನಾವರಿಸಿರಲಿ
ಇಂದಿನೊಂದರೆಗಳಿಗೆ ಮಾತ್ರ !
ಮಾತೆ ಎಂಬವಳೆದೆಯ ಮಮತೆ ಮೋಹದಬಳ್ಳಿ
ಮುರುಟಿ ಹಾಳಾಗಲಿ ! ಸರ್ವವೂ ಶೂನ್ಯದಲಿ
ಇಲ್ಲವಾಗಲಿ ಇಂದು !

– ಚಣ ಕಾಲ ಮೌನ–

ಇಲ್ಲ.........ಇಲ್ಲ........ಇದು ಸಲ್ಲ !
ಇದುವೆ ಬಂಬಲುಗರುಳಿನೆಳೆಯ ಕುಡಿ !
ಲೋಕ ತೇಜದ ಸೂರ್ಯ ಸಂಜನಿತ ಪಿಂಡವಿದು
ನೀರಿಗೆಸೆಯುವ ಕ್ರೌರ್ಯ ಮೂಡುವುದೆ ಬೇಡ !

– ಏನನ್ನೋ ಆಲಿಸಿದವಳಂತೆ ನಟಿಸಿ –

ಹ್ಞಾಂ ! ಏನೆಂದೆ ಪಕ್ಷಿ ?
ಮುಳುಗಿಸುವ ಬದಲು ತೇಲಿಸುವುದೊಳಿತೆಂದೆ !
ಆಗಲಿ............................................ ಅಂತೆಗೈವೆ !

– ತೆಪ್ಪ ಪೆಟ್ಟಿಗೆಗಳನ್ನು ಅಣಿಮಾಡುವವಳಂತೆ ನಟಿಸಿ –

ಪುಟ್ಟ ತೆಪ್ಪದ ಮೇಲೆ ಕಂದವನು ಪಟ್ಟಿರಿಸಿ
ನೀರ ತೋಳಿನ ಮೇಲಿ ತೇಲಿಬಿಟ್ಟೆ !
ಅಲೆ ಏರಿ ಅಲೆ ಇಳಿದು ತೊಟ್ಟಿಲನು ತಾ ತೂಗೆ
ನನ್ನೆದೆಯ ಬೆಳಕನ್ನೆ ಚೆಲ್ಲಿಬಿಟ್ಟೆ !
ತಾಯ್ತನಕೆ ನಾನಿತ್ತ ಆ ತಿಲಾಂಜಲಿಗೆ
ನನಗೆ ನಾನೇ ನಾಚಿ ತಲೆಗುತ್ತಿ ನಿಂತೆ !
ಆಕಾಶ ಅಲುತಿತ್ತು, ದಿಗ್ಭಿತ್ತಿ ಛೇಡಿಸಿತು
ನಿಂದಿಸಿತು ಬಿಳಿಮೋಡ ಸವತಿಯಂತೆ !

– ಮೌನ –

ಮುಂದೆ ನಾನೇನೇನೊ ಆದೆ,
ಸೊಸೆ, ಪತ್ನಿ, ಓರಗಿತಿ, ಅತ್ತೆ, ಮುತ್ತಜ್ಜಿ !

ಆದರೆ,

ನಿಜದ ಮಗುವಿಗೆ ನಾನು ತಾಯಾಗಲಿಲ್ಲ !
ಈ ಕೊರಗು ಕೂಗಿದರು ನಾನವನ ಮರೆಯಲೂ ಇಲ್ಲ !
ಅವಗೆ, ಕೆಚ್ಚಿನಚ್ಚಾದವಗೆ, ನನ್ನಿಕಾರನಿಗೆ,
ಒಂದೆ ಚಿತ್ತದಿ ನೆನೆಯೆ ಯೋಗ್ಯನಾದವಗೆ
ಅಂದೊತ್ತಿ ಮುತ್ತಿಟ್ಟ ನೆನಪು !
ಓ ಪಕ್ಷಿ,
ಮೌನವೇತಕೆ ತಳೆದೆ !
ನೋಡಲ್ಲಿ.........................ಯಾರು ನಿಂದಿಹರಲ್ಲಿ? .............ನೆನಪಿದೆಯೆ?
ಅವನೆ ತ್ಯಕ್ತ ಮಗುವಿನ ತಂದೆ, ಅತಿರಥ!
'ಅತಿರಥ'

**ಧ್ವನಿ** : ಮಹರಾಣಿ

**ಪೃಥೆ** : ಹೇಗಿರುವೆ ದೊರೆಯೆ?

**ಧ್ವನಿ** : ಪೃಥೆ ಮಾನವನು ಕೈ ಬಿಟ್ಟರೂ ಮಹದೇವ ಬಿಡನು ತಿಳಿ !

**ಪೃಥೆ** : ಅಂದರೆ ?

**ಧ್ವನಿ** : ಅಂದರೆ.....................ನೈಸರ್ಗದೇವತೆಯು ನಿರ್ಜೀವಿಯಲ್ಲ !
ಅವಳಿಗೂ ಆತ್ಮವಿದೆ, ಸ್ಪಂದಿಸುವ ಶಕ್ತಿಯಿದೆ!
**ಹೆತ್ತವಳು ಎಸೆದರೂ ಹೊತ್ತು ಕಾವುದು ದೈವ !**
ಯಾವುದೋ ರೂಪದಲಿ ಮುಂದೆ ಬಂದು.

– ಮೌನ–

ನೆನಪು ಕಪ್ಪೆಗಳಂತೆ !
ಸದಾ ಕುಪ್ಪಳಿಸುವುದೇ ಅದರ ಜಾಯಮಾನ !
ಹೂಂ !
**ಗಂಡನೊಡನಿದ್ದರೂ ಗರತಿ ನಾನಾಗಲಿಲ್ಲ !**
**ಮಗುವನ್ನು ಹಡೆದರೂ ತಾಯಿಯೆನ್ನಿಸಲಿಲ್ಲ !**
ನಿಯೋಗ ಪದ್ಧತಿಯ ನೆಪದಲ್ಲಿ ಮಕ್ಕಳೆಲ್ಲರ ಹಡೆದೆ!
ಯಾವ ಗಂಡಸು ತಾನೆ ಇದನೊಪ್ಪ ಬಲ್ಲ
ಅನ್ಯರಂಶದ ಶಿಶುವ ತನ್ನದೆನಬಲ್ಲ !
ಒಪ್ಪುವುದು ಪಾಂಡುವಿಗಷ್ಟೇ ಸಾಧ್ಯವಿತ್ತು!
ಒಪ್ಪಿದನು ಅಪ್ಪಿದನು ನೆಲದ ಮುತ್ತಾದವನು!
ಹೆಚ್ಚೇನು ಹೇಳಲಿದೆ ? ಮುಚ್ಚಿದರೆ ಮರೆಯುವುದೆ ?
ಚೊಚ್ಚಲೊಂದರ ಹೊರತು ಮಿಕ್ಕವರ ತಾಯಾದೆ !
ಹಕ್ಕುದಾರರು ಅವರು ನನ್ನ ತಾಯ್ತನಕೆ !
ಆದರೆ.....................ಆದರೆ.......................ನನ್ನ ಮೊದಲಿನ ಕುಡಿಯು?
ಸಾಕು.............................ಸಾಕು, ಇಲ್ಲಿಗೇ ಸಾಕು ಮಾಡಲು ಬೇಕು
**ಯಾವ ಹೆಣ್ಣೂ ನನ್ನವೊಲು ಆಗದಿರಲಿ !**
ನನ್ನವೊಲು ಆಗದಿರಲಿ.

– ನಿಧಾನವಾಗಿ ನೇಪಥ್ಯದೆಡೆಗೆ ಸಾರುತ್ತಾಳೆ. ರಂಗಸಜ್ಜಿಕೆಯರು ಕೆಂಪು ಪರದೆ ಮೇಲೇರಿಸುತ್ತಾರೆ, ಅದರ ಮಧ್ಯೆ ಎರಡು ಕತ್ತಿಗಳ ಅಡ್ಡ ಚಿಹ್ನೆ ಇರುತ್ತದೆ.–

ಅಬ್ಬರದ ವಾದ್ಯದೊಡನೆ ಸಜ್ಜಿಕೆಯರ ಹಾಡು

**(ಹಾಡು)** ರಾಧೇಯಗೆ ಆಧ್ಯಾನ

ವಿಧಿಯ ಕೈಯ ಬೊಂಬೆಯು
ತಪ್ಪು ಹೆಜ್ಜೆ ಇಟ್ಟಳು
ಕುಂತಿ ಕಂತಿ ಹೋದಳು.
ಕೇಳಿರೇ ಕೇಳಿರೇ
ಕುಂತಿ ಕಥೆಯ ಕೇಳಿರೇ। ಮತಿ
ವಂತೆ ಕಥೆಯ ಕೇಳಿರೇ । ಇತಿ
ವೃತ್ತ ಮುಂದೆ ಓದಿರೆ,

**ಪೃಥೆ : (ಪ್ರವೇಶಿಸಿ)** ಖಡ್ಗ ಖಡ್ಗಕೆ ಸ್ಪರ್ಧೆ
ನೆಲಕೆ ನೆತ್ತರ ಬಯಕೆ
ನನ್ನ ಕರ್ಣನಿಗಾಯ್ತು ವೀರ ಪಟ್ಟ,
ಕೆಟ್ಟ ಬಾಯ್ಗಳು ಬೊಗುಳೆ
ಕಪ್ಪಿಟ್ಟಿತವನ ಮುಖ
ಛೇಡಿಸಿತು ಕಾನೀನನಿವನು ಪರಪುಟ್ಟ !
ಅಲ್ಲೆ ಇದ್ದಳು ತಾಯಿ
ಭಗ್ನಗೊಂಡಿಹ ಹೃದಯಿ
ಕಟ್ಟಿ ಬಿಗಿದಿತ್ತವಳ ಕೈಯಿ ಬಾಯಿ!

– ಮೌನ–

ತಳಿರ ಹಸ್ತವದೊಂದು ಭುಜತಟ್ಟಿ ಕೇಳಿತ್ತು:
'ಪೃಥೆ' ನನ್ನ ನೆನಪಾಯಿತೆ ?
ಗುರುತಿಸಿದೆನವನನ್ನು
ಕೋರೈಪ ಬೆಳಕನ್ನು !
ನನ್ನೆದುರು ಬಂದು ನುಡಿದಳು !

– ರಂಗ ಸಜ್ಜಿಕೆಯರಲ್ಲೊಬ್ಬಳು ಸೂರ್ಯನಂತಿರುವ ಮುಖವಾಡ ಧರಿಸಿ, ಅತ್ತಿತ್ತ ಅಡ್ಡಾಡುವಳು, ಕುಂತಿ ಕಣ್ಣು ಹಾಯಿಸಿ –

**ಧ್ವನಿ :** ಪೃಥೆ, ವೃಥಾ ಪರಿತಾಪ ಬೇಡ
ಕೆಟ್ಟ ಕನಸೆಂದು ಎಲ್ಲವನು ಮರೆತುಬಿಡು,
ಋತ ಪಥವ ಕಾಣದೌ ಈ ಮಣ್ಣಕಣ್ಣು !

**ಪೃಥೆ:** ತೆರಳಿದ್ದ ಪ್ರಜ್ಞೆ ಮರಳಿ ಬಂದಾಗ:
ವೈಭವದ ಹೊಗರೊಡೆದ ಆನಂದ ವರ್ತುಲವು
ಕೆಡೆದೊಡೆದು ಹುಡಿಯಾಯ್ತು, ನನ್ನ ಬಾಳಂತೆ !
ವ್ಯಷ್ಟಿ ಪ್ರತಿಷ್ಠೆ, ಕೆಟ್ಟ ಆಕಾಂಕ್ಷೆ, ಮತ್ತೆ ಸ್ವಾರ್ಥ
ಇವು ಮೂರೂ ಮನುಜನನು ಮೃಗವಾಗಿಸುವುವಂತೆ !
ನಾನೊಂದು ಮೃಗವಾದೆ, ರಣಕಹಳೆಯೂದಿದೆ.
ಸೆರೆ ರಕ್ತವನೆ ಹಂಚಿ, ಎದೆ ಹಾಲ ಕುಡಿದವರೆ,
ಸನಾಭಿಗಳೆ ಶತ್ರು ಶತ್ರುಗಳಾಗಿ
ಹೋರಟೆಗೆ ನಿಂತಾಗ ಸುಮ್ಮನಿರಲಾದೀತೆ ?
ರಣಧುನಿಯ ಮೊಳಗಿಸಿದೆ ಸಮರಕಾಗಿ!
ಎತ್ತ ನೋಡಿದಡತ್ತ ಸತ್ತ ಹೆಣಗಳ ಬಣಬೆ
ಮಜ್ಜೆ ಮಾಂಸದ ಕೆಸರು ಕರುಳ ಪೈಸರಿಕೆ!
ಭೋರ್ಗರೆದು ಹರಿದಿತ್ತು ಕೆನ್ನೀರ ಕಡಲು
ಪ್ರೇತ ಪೈಶಾಚಕ್ಕೆ ಹಬ್ಬ, ಹೆಗ್ಗಳಿಕೆ !

ನಡುವೆ ಮೂಡಿದನಲ್ಲಿ ನನ್ನಣುಗ ಕರ್ಣ,
ನಟ್ಟಿರುಳು ಕಾಣಿಸಿದ ಹೊಸ ಸೂರ್ಯನಂತೆ
ಅರ್ಜುನನ ಗಾಂಢೀವ ಅವನತ್ತ ಮುಖಮಾಡೆ
ಕೂಗಿ ಕೊಂಡೆನು ಅಯ್ಯೋ, ಇರುಳ್ಗಣ್ಣನಂತೆ !

– ತುಂಬು ದಣಿದ ದನಿಯಲ್ಲಿ–

ನೆನಪುಗಳು ಸಾಯುವುದಿಲ್ಲ ಸಾವೆಂಬುದವಕಿಲ್ಲ!
ಕಿತ್ತು ತಿನ್ನುವುವು ಮತ್ತೆ ಜೀವಹೆಣನುಂತೆ !
ಕುಂಭಸಂಭವ ಸ್ವಾಮಿ ಗರುಡಿಯಾಚಾರ್ಯ
ಅವಗಿಂತ ಮಿಗಿಲಾದ ಗುರುವಿದ್ದನೇನು?
ಎಂಥ ಗುರು ! ಹಿಂದೆ ಹುಟ್ಟಿರಲಿಲ್ಲ, ಮುಂದೆ ಸಂಭವವಿಲ್ಲ !
ಅಂಥವಗೆ ಕೊಳಗುಳದ ಕಾಣಿಕೆಯದೇನು?
ಏಕಲವ್ಯನು ಕೊಟ್ಟ ಕಡಿಬೆರಳಿನಂತೆ
ಖಂಡ ತುಂಡಾಗೆಸೆದ ರುಂಡ ಮುಂಡ!
ಅರಸಿ ಬಂದಾತ್ಮಕ್ಕೆ ನಾಯಿಪಾಡು!
ಅಯ್ಯೋ ಎಂದಿತು ಬಾನು ಕಣ್ಣೀರ ತಂದು!

**(ಹಾಡು)** ಮಹಾಭಾರತದ ಮಹಾಸಾಗರದಿ
ಆಣಿ ಮುತ್ತು ಎರಡು
ಒಂದು ಭೀಷ್ಮ ಮತ್ತೊಂದು ಕರ್ಣ,
ಭೂವ್ರ್ಯೋಮ ವ್ಯಾಪ್ತರಹುದು.
ಶರಶಯ್ಯೆಯಲ್ಲಿ ಗತ ಪ್ರಾಣನಾದ
ಅಂಬೆ ಕಣ್ಣೀರ ಕುಡಿದ !
ಕರ್ಣನಿಗೆ ಬಂತು ಸಹವಾಸ ದೋಷ
ಗಂಡಾಗಿ ಮೆರೆದು ಮಡಿದ !

– ರಂಗ ಕಪ್ಪಾಗುವುದು, ಕಪ್ಪು ಪರದೆ ಹಿಂಬದಿಯನೇರುವುದು.
ಯೋಧರ ನರಳಾಟ ಹದ್ದು ನರಿ ನಾಯಿಗಳ ಅರಚಾಟ ಇತ್ಯಾದಿ ದನಿಗಳು,
ಮಟಿಯುವುವು. ಕುಂತಿ ಬಿಳಿಬಟ್ಟೆ ಹೊದೆದು ನೆಲದ ಮೇಲೆ ಪಿಸುಮಾತಿನಲ್ಲಿ –

**ಪೃಥೆ :** **ಕಡೆಗೂ ಹೊಲಸಾದುದೇ ಭಾರತದ ಯುದ್ಧ !**
**ಪಿಳ್ಳೆ ಪೆಸರಿಲ್ಲದಂತಾಯ್ತೇ ಕೌರವ ಕುಲಶ್ರೀ !**

– ಮೌನ –

ನಡೆದ ಘಟನೆಗಳನ್ನು ಕುರುಕುತ್ತ ಸರಿದೆ
ಕರ್ಣನೊರಗಿದ್ದ ಬಳಿ ನಾನು ಮಲಗಿದ್ದೆ!
ಕಿತ್ತು ಬಂದಿತು ಕರುಳು ! ತಾಳಲಾರದೆ ನಾನು
ಕೂಗಿಕೊಂಡೆ ಮಗನೇ.....ಮಗನೇ.......!

ಧ್ವನಿ : ಅಮ್ಮ ಚಿಂತೆ ಬಿಡು ತಾಯೆ,
ಏನಾಗ ಬೇಕಿಹುದೊ ಅದು ಆಗಿಯೇ ಮುಗಿಯುವುದು !
ನಿನ್ನಿಂದ ಪರಿತ್ಯಕ್ತನಾದೆನೆಂದೆಂಬ ನೋವು ನನಗಿಲ್ಲ ಜನನಿ
ನಾನೀಗ ಅಮರ
**ಯುದ್ಧದಲಿ ಸೋತರೂ ಬದುಕಿನಲಿ ಗೆದ್ದವನು !**
**ನನ್ನಿಕಾರನು ಕರ್ಣ ಹತನಾಗಿ ಹಿತನಾದ**
**ಅವನ ಸೋಲನು ಸ್ಮರಿಸೆ ಋತುಬಳಲಿಯಾವು**
**ಜೀವನದಿಗಳು ಕೂಡ ಬಾಯಾರಿಯಾವು !**

**ಅಮ್ಮಾ,** ಕರ್ಣ ಕುಂತಿಯ ಕಂದ, ಕರ್ಣ ಕುಂತಿಯ ಕಂದ
ಎಂಬ ಹಿರಿಮೆಯ ಬಿರುದು ಅಷ್ಟೆ ಸಾಕು!

**ಒಮ್ಮೆ 'ಕಂದಾ' ಎನ್ನು ನಾನು 'ಅಮ್ಮಾ' ಎಂಬೆ!**
**ಒಮ್ಮೆ 'ಕಂದಾ' ಎನ್ನು ನಾನು 'ಅಮ್ಮಾ' ಎಂಬೆ !**

– ಎರಡು ಕಂಠಗಳೂ ದನಿಗೂಡುವುವು –

ಓಹ್ ! ಸಾಕಿದುವೆ ಸರ್ವಸ್ವ !
ನಾ ಧನ್ಯ ! ನಾನಿಂದು ಮಾನ್ಯ !
ಅಮ್ಮ, ಕಣ್ಣಲ್ಲಿ ನೀರೇಕೆ ? ಅಳಬೇಡ, ಅಳಬೇಡ,
ಅತ್ತು ನನಗೂ ನೀನು ನೋವು ತರಬೇಡ !
ಹೋಗಿ ಬಾ ತಾಯಿ, ಹೋಗಿ ಬಾ ನನ್ನಮ್ಮ !

– ರಂಗದ ಮಂದ ಬೆಳಕು ಢಾಳಾಗುವುದು. ಕೆಂಪು ಪರದೆ ಮೇಲೇರುವುದು ಕುಂತಿ ಒಂದು ಬದಿಯಲ್ಲಿ ಕೈಯಿಂದ ತನ್ನ ಬಾಯನ್ನು ಮುಚ್ಚಿಕೊಂಡು ನಿಂತಿರುವಳು. ಜನರ ಗುಜುಗುಜು ಶಬ್ದ, ಕುಂತಿಯ ಮುಖದ ಮೇಲೆ ಬೆಳಕು ಚೆಲ್ಲಿದಾಗ –

**ಪೃಥೆ** : (ನಿರ್ಧಾರದ ದನಿಯಲ್ಲಿ)
ಅಹುದು ಅದು ನನ್ನಿಚ್ಛೆಯಂತೆಯೇ ನಡೆಯಬೇಕು.
ಹಿರಿಯ ಪಾಂಡವ ಕರ್ಣ,
ಪಾಂಡವರೇ ಅವನ ಶವಸಂಸ್ಕಾರಗೈಯಬೇಕು.
– ಏನನ್ನೋ ಆಲಿಸಿದವಳಂತೆ ನಟಿಸಿ –
ಹ್ಹಾ !
ಏನೆಂದೆ ?... ನಾನು ಹೇಳುತ್ತಿದ್ದೇನೆ... ಅದರಂತೆ ನಡೆಯಲೇ ಬೇಕು
ಪಾಂಡವರು ಪಾಂಡವನ ಕೊಂದಿಹರು, ತಮ್ಮಾ
ಮುಳ್ಳಿನಿಂದಲೆ ಮುಳ್ಳ ತೆಗೆಯುವಂತೆ !

– ರೋದನ ಧ್ವನಿ, ಹಕ್ಕಿಗಳ ಗೋಳು, ಬೆಳಕು ಕಂತುತ್ತಾ ಬರುವುದು –

ಚಕ್ರಾರ ಗತಿಯಲ್ಲಿ ಸುತ್ತುತಿದೆ ಬಾಳರಥ
ಅರೆಕಾಲುಗಳ ತೆರದಿ ಮೇಲೆ ಕೆಳಗೆ
ಬೆಳಕಿನಲ್ಲಿದ್ದದ್ದು ಕತ್ತಲೆಡೆಗೆ
ಕತ್ತಲಲ್ಲಿದ್ದದ್ದು ಬೆಳಕಿನೆಡೆಗೆ
ಇಂತು ಭಾಗ್ಯದ ಪಂಕ್ತಿ, ಏಳು ಬೀಳಿನ ಶಕ್ತಿ
ಇದುವೆ ಜೀವನ ತತ್ತ್ವ, ಸತ್ಯ ಸಹಜ !
ನಿತ್ಯಾತ್ಮ ಜೀವಕೆ ಇದೆ ಭೈಷಜ !!
ನಾಟಕದ ಆರಂಭ ಮುಕ್ತಾಯ ಕಾಣುತಿದೆ
ಇಳಿಯುತಿಹುದಾಗಲೇ ! ಅಂಕಪರದೆ !
ಇಂತಿರಲು ನಾನಿಲ್ಲಿ ನಿಲ್ಲಬೇಕೇಕೆ !
ಮಂತ್ರ ಮಿನುಕುವುದೀಗ ವ್ಯರ್ಥವಲ್ತೆ ?
ದೂರ ಹೋಗಲು ಬೇಕು ದಟ್ಟಡವಿಗೆ
ಅಕ್ಕ ಭಾವರ ಕೂಡೆ ದಿನಗಳೆಣಿಸೆ!

– ಚಿಂತಿಸಿ –

ಯಾರವರು?
ನನ್ನ ಹೆಸರನ್ನು ಹಿಡಿದು ಕೂಗಿ ಕರೆದವರು ?
ಓಹ್ ! ಬೇರೆ ಇನ್ನಾರು?.........ನನ್ನಕ್ಕರೆಯ ರೇಶ್ಮೆ ಪುಕ್ಕದ ಹಕ್ಕಿ !
ಬಿಸಿಲ ಮಹಡಿಯ ಮೇಲೆ ಕುಳಿತೆನ್ನ ಕರೆಯುತಿದೆ :
ಪಯಣಕ್ಕೆ ಪಾಂಥೇಯ ಸಿದ್ಧ ಗೊಳಿಸೆಂದು !

– ಕತ್ತೆತ್ತಿ ನೇಸರನ್ನೀಕ್ಷಿಸುವಂತೆ ನಟಿಸಿ –

ಋತ ರೂಪುಗೊಂಡಂಥ ಓ ಸೂರ್ಯದೇವ

ಎಲ್ಲದನು ವೀಕ್ಷಿಸುವ ಸಾಕ್ಷಿ ನೀನು

ಅಭಿನಯದ ವೇಳೆಯಲಿ ತಪ್ಪಿದನೆ ದಿಟಹೇಳೊ

ಒಪ್ಪದಾರಪ್ಪಿಕೋ ನಟಿಯು ನಾನು !

– ನಿಧಾನವಾಗಿ ನಿಂತು ನಿಂತು ಗಮಿಸುವಳು. ರಂಗಸಜ್ಜಿಕೆಯರು ಪರದೆಗಳನ್ನು ತೆರೆದು ಮುಚ್ಚಿ ಮುಚ್ಚಿ ತೆರೆದು ಮಾಡುವರು, 'ಅಮ್ಮಾ ಅಮ್ಮಾ' ಎಂಬ ಕೂಗು ಕೇಳಿಬರುವುದು, ಕುಂತಿ ದಿಗಂತದೆಡೆ ದಿಟ್ಟಿಯಟ್ಟಿ–

ಅದೋ ಅಲ್ಲಿ ಕಾಂಬುದು ಹಕ್ಕಿ, ಸ್ವರ್ಣ ಸಂಪುಟ ಪಕ್ಷಿ !

ಅಲ್ಲಿಹುದು ಅಲ್ಲಿಹುದು ಆ ಜ್ವಲಿತಾಗ್ನಿ ಕುಂಡದಲಿ

ಅದು ಚಿತೆಯೋ ಚೈತ್ಯಾಗ್ನಿಯೋ ಯಾವುದೋ ! ನಾನರಿಯೆ !

ಯಾವುದಾದರು ಸರಿಯೆ ನಾನಪ್ಪಲೇ ಬೇಕು... ಅಪ್ಪಲೇ ಬೇಕು !

– ನಿಧಾನ ನಿರ್ಗಮನ–

ರಂಗಸಜ್ಜಿಕೆಯರು **ಭರತವಾಕ್ಯ** ಹೇಳುತ್ತಾ ನರ್ತಿಸುವರು –

**ಭರತವಾಕ್ಯ : ಹೆಣ್ಣು ಹಡೆಯಲು ಬೇಕು**

**ಗಂಡು ದುಡಿಯಲು ಬೇಕು**

**ಕೂಡಿ ಬಾಳುವ ಪಾಠ ಕಲಿಯ ಬೇಕು**

**ಮೇಲು ಕೀಳುಗಳಿಲ್ಲ**

**ಪಕ್ಷಪಾತವು ಸಲ್ಲ**

**ದಾಂಪತ್ಯ ಜೀವನವೆ ಬೇವು ಬೆಲ್ಲ !**

# ಮನೆಯೊಳಗಣ ಕಿಚ್ಚು

**ಪಾತ್ರಗಳು :**
ವಿಷ್ಣುವರ್ಧನ
ಶಾಂತಲೆ
ಲಕ್ಷ್ಮಲೆ
ಬೊಮ್ಮಲೆ
ಶಿಲ್ಪಿ ಜಕ್ಕಣಾಚಾರ್ಯ
ಕುಮಾರ ವಿಜಯ ನಾರಸಿಂಹ
ನರ್ತಕಿಯರು (ಹತ್ತಾರು ಜನ)
ನರ್ತಕರು (ಹತ್ತಾರು ಜನ)
ದೂತಿ ಇತ್ಯಾದಿ.

**ಪ್ರೇರಣೆ :**
ಡಾ॥ ಮಾಸ್ತಿಯವರ ನವರಾತ್ರಿ ಸಂಪುಟ ಮೂರರಲ್ಲಿರುವ
ಕಪ್ಪೆಚೆನ್ನಿಗಮೂರ್ತಿ ಎಂಬ ಕಥನ ಕವನ –

**ದೃಶ್ಯ : ೧** **ನೇಪಥ್ಯ**

**ಸಮೂಹಗೀತೆ :**

ವಿಜಯೋತ್ಸವ
ಇಂದು ವಿಜಯೋತ್ಸವ ॥
ಬೇಲೂರ ಬೆಳ್ಗೊಡೆಯ ಒಡೆಯ ಶ್ರೀ ವಿಷ್ಣುವಿನ
ವಿಜಯೋತ್ಸವ ಮತ್ತೆ ವಿಭವೋತ್ಸವಾ ॥

**ವಾಣಿ :** ಇಂದು ಬೇಲೂರಿನಲ್ಲಿ – ಅಷ್ಟೇಕೆ ಹೊಯ್ಸಳ ಸಾಮ್ರಾಜ್ಯದ ಮೂಲೆ ಮೂಲೆಗಳಲ್ಲಿ – ವಿಜಯೋತ್ಸವದ ಉತ್ಸಾಹ ! ಹೊಯ್ಸಳೇಶ್ವರ ವಿಷ್ಣುವರ್ಧನರು ತಲಕಾಡನ್ನಾಕ್ರಮಿಸಿಕೊಂಡಿದ್ದ ಚೋಳರನ್ನು ಬಡಿದೋಡಿಸಿ 'ತಲಕಾಡುಗೊಂಡ' ಎಂಬ ಬಿರುದಾಂತ ಆನಂದದ ದಿನ! **ವಿಜಯನಾರಾಯಣ** ದೇಗುಲದ ಶ್ರೀವಿಷ್ಣುವರ್ಧನ ಮಹಾರಾಜರಿಂದ ನಿರ್ಮಾಣವಾದ ಪ್ರವೇಶೋತ್ಸವದ ಪುಣ್ಯ ದಿನ ! ಇದು ಹೊಯ್ಸಳ ವೈಜಯಂತಿಯ ವೈಭವದ ಮಂಗಳ ದಿನ ! ಆ ವಿಜಯೋತ್ಸವದ ಆಚರಣೆಯಲ್ಲಿ....

– ರಂಗ ಬೆಳಕಾಗುವುದು – ಬೇಲೂರ ನಗರ ಬೀದಿ ದೃಶ್ಯ –

(ರಂಗದ ತುಂಬ ಅಲ್ಲಲ್ಲಿ ಬೇರೆ ಬೇರೆ ವೇಷ ಭೂಷಣಗಳ ಹತ್ತಾರು ಜನ ನರ್ತಕ ನರ್ತಕಿಯರು ನರ್ತನದಲ್ಲಿ ತೊಡಗಿರುತ್ತಾರೆ)

**ಬೇಲೂರು ರಾಜ ಬೀದಿ**

ವಿಜಯೋತ್ಸವ
ಇಂದು ವಿಜಯೋತ್ಸವ ॥
ಬೇಲೂರ ಬೆಳ್ಗೊಡೆಯ ಒಡೆಯ ಶ್ರೀ ವಿಷ್ಣುವಿನ
ವಿಜಯೋತ್ಸವ ಮತ್ತೆ ವಿಭವೋತ್ಸವ ॥

ರಜತ ರತ್ನಾಭರಣ ಕೌಸ್ತುಭಾ ಧರಣ
ಮಣಿ ಮಕುಟ ಕಟಿ ತಟಿಯ ದಿವ್ಯದಾಭರಣ
ತರುಣ ತುಲಸಿಯ ತೋರ ಹಾರ ಧರಿಸಿದನ
ಪಟ್ಟೆ ಪೀತಾಂಬರದ ಉಡೆಯುಟ್ಟ ಶ್ರೀಧರನ ॥ ೧ ॥

ಚೋಳ ಚೋರರ ತರಿದು ರಣಮಾರಿಗುಣಿಸಿತ್ತು
'ತಲಕಾಡು ಗೊಂಡ' ಎಂದೆಂಬ ಬಿರುದಾಂತ
ಪುರುಷ ಪುಂಗವ ವಿಷ್ಣು, ಶಾಂತಲೆಯ ಸಿರಿಕಾಂತ
ಶ್ರೀ ಬಿಟ್ಟಿದೇವನಾ ಹೃದಯ ಶ್ರೀಮಂತನ ॥ ೨ ॥

ಬೇಲೂರು ಹಳೆಬೀಡು ಬೆಳ್ಗೊಳದ ಚೆಲುನಾಡು
ಹೊಯ್ಸಳರ ಹೊನ್ನಾಡು ಹಸಿರು ಒಸರುವ ನಾಡು
ಎಲ್ಲೆಲ್ಲು ಎಲ್ಲೆಡೆಯು ವಿಜಯದುಂದುಭಿಗಾನ
ಮಂಗಳದ ಅಂಗಳದಿ ಆನಂದ ನರ್ತನದ ॥ ೩ ॥

ಬೀದಿ ಬೀದಿಗಳಲ್ಲಿ ಪನ್ನೀರ ಸಾರಣೆಯು
ಮುತ್ತು ರತ್ನದ ವಿವಿಧ ರಂಗವಲ್ಲೀ
ಸೌಧ ಸೌಧಂಗಳಲಿ ಕಾರಣೆಯ ಕುಡಿ ಬಳ್ಳಿ
ನೆತ್ತಿ ಎತ್ತಿದೆ ನೋಡು ವೈಜಯಂತಿ ॥ ೪ ॥

ಬನ್ನಿರೆಲ್ಲರು ಬನ್ನಿ ಹರ್ಷ ಭಾಗಿಗಳಾಗಿ
ನಾಡಿಗರೆ, ನಗರಿಕರೆ, ಬೀಡ ಬೃಂದಾರಕರೆ
ಯೋಧ ವಿಜ್ಞಾನಿಗಳೆ, ಗಾರೂಢರೆನಿಸಿದರೆ
ಗಂಧರ್ವ ಗಾಯಕರೆ, ಕಾವ್ಯಕಲೆ ಕೋವಿದರೆ

ಬನ್ನಿರೆಲ್ಲರು ಬನ್ನಿ ಪರ್ವದಲಿ ಪಾಲ್ಗೊಳ್ಳಿ ॥ ೫ ॥

(ಬೇರೆಡೆಯಲ್ಲಿ ಬೇರೊಂದು ಗುಂಪು)

ಸಂಭ್ರಮ ಸಂಭ್ರಮ ವಿಜಯದ ಸಂಭ್ರಮ
ವೇಲಾಪುರಿಯಲಿ ಸಂಭ್ರಮವೋ ॥
ಎಂದಿಲ್ಲದ ಹೊಸ ಒಸಗೆಯು ಪುಟಿದಿರೆ
ವಿಜಯೋತ್ಸವದೀ ವಿಭ್ರಮವೋ ॥ ೧ ॥

ಗುಡಿಗೋಪುರಗಳು ಮಡಿಯಾಗಿರುವುವು
ನುಡಿಗೇ ಸಿಲುಕದ ಸೊಬಗಿನಲಿ !
ಶೃಂಗಾರದ ಸುಮ ಸುಂದರ ಬನದಲಿ
ಬಂಗಾರದ ಹೊಳೆ ಹರಿಯುತಲಿ ॥ ೨ ॥

ನಾಟ್ಯ ಸರಸ್ವತಿ ಶಾಂತಲೆಯರಸಗೆ
ಆನಂದವೆ ಹಗಲಾಗಿಹುದು
ಕಲ್ಪಾಂತರದ ಶಿಲ್ಪವೆ ಧರೆಯಲಿ
ಸಾಕ್ಷಾತ್ಕಾರವ ಪಡೆದಿಹುದು ॥ ೩ ॥

ವಿಜಯ ನರಾಯಣ ರಂಗನಾಯಕೀ
ನರ್ತನ ವೇದಿಕೆಯಾಗಿಹುದು
ಬೇಲೂರಿದು ಶ್ರೀ ವೈಕುಂಠವನೆ
ಇಳೆಗಿಳಿಸಿದವೋಲ್ ತೋರುವುದು ॥ ೪ ॥

(ಬೇರೊಂದೆಡೆ ಜಾನಪದ ಧಾಟಿಯಲ್ಲಿ)

– ಜಾನಪದೀಯ ವಾದ್ಯ ಘೋಷ –

ಹೆಣ್ಣು ಬಾರೆ ನನ್ ಕಣ್ಣು ಬಾರೆ
ಬೇಲೂರ ವೈಭೋಗ ನೋಡಾಕೆ ॥
ಬೇಲೂರ ವೈಭೋಗ ನೋಡಾಕೆ ಹೋಗಾನ
ಗೆದ್ದದಿನ ಹಬ್ಬವಾಗಿ ಮಾಡೌರೆ ॥ ೧ ॥

ಓಣೀಲಿ ಓಡೋಳೆ ಜಾಲ ತುರುಬೀನೋಳೆ
ಜಿಂಕೆಯ ಮರಿಹಂಗೆ ಜಿಗಿಯೋಳೆ
ಜಿಂಕೆಯ ಮರಿಹಂಗೆ ಜಿಗಿಯೋಳೆ ! ನನ ಗೌರಿ !
ಊರೂ ಕೇರೀ ಘಮ್ ಘಮ ಧವನ ॥ ೨ ॥

ಬಿಟ್ಟೀದೇವರು ತಮ್ಮ ಪಟ್ಟದ ಹೆಂಡ್ರನ್ನ
ಕಟ್ಕೊಂಡು ಅಟ್ನೆ ಮ್ಯಾಲೆ ಕುಳುತಾರೆ
ಕಟ್ಕೊಂಡು ಅಟ್ನೆ ಮ್ಯಾಲೆ ಕುಳುತಾರೆ ! ನನ ಜಾಣೆ ।
ನಾಟ್ಯಾವ ನೋಡೋ ಜನ ನೆರಿತಾರೆ ॥ ೩ ॥

(ಕಡೆಯಲ್ಲಿ ವಿಧ ವಿಧ ನರ್ತನದಲ್ಲಿ ಇಡೀ ರಂಗಭೂಮಿ ಮೈದುಂಬುತ್ತದೆ. ಬೆಳಕು ಕ್ರಮೇಣ ಕ್ಷೀಣಿಸಿ ಕತ್ತಲಾಗುತ್ತದೆ.)

**ದೃಶ್ಯ : ೨** **ಶಾಂತಲೆಯ ಅಂತಃಪುರ**

ರಂಗಬೆಳಕಾಗುವಷ್ಟರಲ್ಲಿ – ನೇಪಥ್ಯದಲ್ಲಿ 'ತು ತ್ತು ತೂ' ಎಂಬ
ಜಯಕಹಳೆಯ ಸ್ವಾಗತ

– ಮತ್ತು ವಂದಿಮಾಗದರ ಜಯ ಘೋಷ –

ಸಮಧಿಗತ ಪಂಚಮಹಾಶಬ್ದs

ಶ್ರೀಮಹಾಮಂಡಲೇಶ್ವರಾ
ದ್ವಾರಾವತೀ ಪುರವರಾಧೀಶ್ವರಾ ಯಾದವ ಕುಲಾಂಬರ ದ್ಯುಮಣೀ
ಮಲಪರೊಳ್ಗಂಡಾ ತ್ರಿಭುವನ ಮಲ್ಲಾ
ತಲಕಾಡುಗೊಂಡ ಭುಜ ಬಳ ವೀರಾ
ಶ್ರೀ ಶ್ರೀ ಶ್ರೀ ವಿಷ್ಣುವರ್ಧನ ಹೊಯ್ಸಳದೇವಾ
ವಿಜಯೀಭವ ವಿಜಯೀಭವ ವಿಜಯೀಭವ !

– ರಂಗ ಬೆಳಗಿದಾಗ ನರ್ತಕಿಯರು ಹಾದಿಯುದ್ದಕ್ಕೂ ಹೂಚೆಲ್ಲಿ ಸ್ವಾಗತಿಸುವರು –

**ಶಾಂತಲೆ :** (ವಿಷ್ಣುವಿನ ಕೈ ಹಿಡಿದು)
ಸ್ವಾಗತವು ಸ್ವಾಗತವು ಸ್ವಾಗತವು ಪ್ರಭುಗೆ
ಸ್ವಾಗತವು ಶಾಂತಲೆಯ ಕಾಂತಿಕಂಠೀರವಗೆ
ಸ್ವಾಗತವು ವೇಲಾಪುರೀಶನಿಗೆ ಸನ್ನುತಗೆ
ಸ್ವಾಗತವು ಸ್ವಾಮಿ ಶ್ರೀ ವಿಷ್ಣುವರ್ಧನ ವಿಭುಗೆ ॥ ೧ ॥
ನಾಟ್ಯ ಸಂಗೀತಾದಿ ಲಲಿತಕಲೆ ಪೋಷಕಗೆ
ಸೂತ್ರಧಾರನೆ ಆದ ಪಾತ್ರಚಾರಿಣಿಗೇ
ಶಿಲೆಯಲ್ಲಿ ಜೀವಕಳೆ ತುಂಬಿದೀ ರಸಿಕನಿಗೆ
ಶಾಂತಲೆಯ ಪ್ರಾಂಜಲದ ಮನ ಚುಂಬಕಂಗೇ ॥ ೨ ॥

– ಶಾಂತಲೆ ಎರಡೂ ಕೈ ಹಿಡಿದು ವಿಷ್ಣುವನ್ನು ಸ್ವಾಗತಿಸಿ ರಂಗ ಮಧ್ಯದಲ್ಲಿರುವ ಪೀಠದ ಮೇಲೆ ಕೂರಿಸಿ ಪಕ್ಕದಲ್ಲಿ ಕೂರುವಳು ।

**ನರ್ತಕಿಯರು :**
ಕರುನಾಡ ಕುಲತಿಲಕ ಶಶಿಶೇಖರ
ವಿಷ್ಣುವರ್ಧನ ದೇವ ಮಹಿಮಾಕರ ॥
ವೀರ ಹೊಯ್ಸಳದೇವ ಧೀರೋದಾತ್ತನೆ
ದ್ವಾರಾವತಿಯಲಿ ನೆಲೆ ನಿಂತವನೆ
ತಲಕಾಡ ಕೊಂಡವನೆ ಮಲೆವರ ಮೆಟ್ಟಿದನೆ
ಭುಜಬಲ ವೀರನೆ ಗಜವೇಂಟೆಕಾರನೆ ॥ ೧ ॥
ಸಕಳ ಕಳಾ ಚತುರೆ ವಿಶದ ವೈಶಿಷ್ಟ್ಯೆ
ಅಕಳಂಕ ಚಾರಿತ್ರೆ ಪರಮ ಪವಿತ್ರೆ
ನಾಟ್ಯಮಯೂರಿ ವಿದುಷಿ ವಿದ್ಯಾಧರೆ
ಶಾಂತಲ ದೇವಿಯ ಮನದ ಮಂದಾರವೆ ॥ ೨ ॥

– ಆನಂದ ನರ್ತನದಲ್ಲಿ ವಿಷ್ಣು ಶಾಂತಲೆಯರೂ ಭಾಗಿಗಳಾಗುತ್ತಾರೆ. ನರ್ತಿಸುತ್ತಾ –

**ವಿಷ್ಣು :** ಶಾಂತೀ...
**ಶಾಂತಲೆ :** ಸ್ವಾಮೀ...
**ವಿಷ್ಣು :** ಏನೀ ಮಹಾನಂದವೆ
ಓ ಶಾಂತಲೆ
ಏನೀ ಸಂಭ್ರಮ ಸೌಖ್ಯವೆ ॥
ಉತ್ಸಾಹ ಉಕ್ಕುಕ್ಕಿ ಚುಕ್ಕೆ ಬಾನಲಿ ಬೆರೆದು
ನಕ್ಷತ್ರಗಳ ನಗಿಸಿ ಹಾಲ್ದಿಂಗಳೆರಚಿ
ದಿಕ್ಕು ದಿಕ್ಕಿನ ಕೊಂಕುಳಲ್ಲಿ ಕಚಗುಳಿಯಿಕ್ಕಿ
ಪಕಪಕನೆ ನಗಿಸುತಿದೆ ನಗೆಯ ಮಲ್ಲಿಗೆ ಸೂಸಿ ॥
**ಶಾಂತಲೆ :** ಆಸೆ

ಆಸೆ ಆಸೆ ॥
ಮಾನವನಿಗೆನಿತೊ ಆಸೆ
ಆಕಾಶದಗಲದಾಸೆ ।
ಭಾವಕ್ಕೆ ರೂಪದಾಸೆ
ಕುಂಚಕ್ಕೆ ಕೊನರುವಾಸೆ ॥
ದುಂಬಿಗೇ ಹೂವಿನಾಸೆ
ಹೂವಿಗೆ ಮುಡಿಗೇರುವಾಸೆ ।
ಕೋಗಿಲೆಗೆ ಚೈತ್ರನಾಸೆ
ಚೈತ್ರಂಗೆ ಚೆಲುವಿನಾಸೆ ॥
ನದಿಗಳಿಗೆ ಕಡಲಿನಾಸೆ
ಆಗಸಕೆ ನೆಲದ ಆಸೆ ।
ಕಾಮಿನಿಗೆ ಪುರುಷನಾಸೆ
ಪುರುಷಂಗೆ ಪ್ರಿಯಳ ಆಸೆ ॥
ಈಶ್ವರಗೆ ವಿಶ್ವದಾಸೆ
ವಿಶ್ವಕ್ಕೆ ಮೋಕ್ಷದಾಸೆ ॥
ಸೂರ್ಯನಿಗೆ ಬೆಳಗುವಾಸೆ
ನಕ್ಷತ್ರ ನಗುವ ಆಸೆ ।

**(ಗದ್ಯ)** : ನಾನು ಪಟ್ಟದರಸಿ, ಆದರೂ ಬಂಜೆ ಮಹಾಪ್ರಭು ! ವಂಶೋದ್ಧಾರಕ ಕುಮಾರನನ್ನು ಹಡೆದು ಕೊಡದ ಹತಭಾಗ್ಯಳಾನು !

**ಹಾಡು** ಕುರುಡನಿಗೆ ಕಣ್ಣಿನಾಸೆ
ಈ ಬಂಜೆಗೇ ಮಗುವಿನಾಸೆ ॥ ಆಸೆ ॥

– ಹಿನ್ನೆಲೆಯಲ್ಲಿ ಹಾಡು (ಜಾನಪದ ಧಾಟಿ) –

ಬಾಲರಿಲ್ಲದ ಮ್ಯಾಲೆ ಬಾಲದ್ಯಾತರ ಜನ್ಮಾ
ಬಾಡೀಗಿ ಎತ್ತು ದುಡಿದ್ಹಾಂಗ ॥
ಬಾಡೀಗಿ ಎತ್ತು ದುಡಿದ್ಹಾಂಗ । ಬಾಳೆಲೆಯ
ಹಾಸುಂಡು ಬೀಸೀ ಎಸೆದ್ಹಾಂಗ ॥

**(ಗದ್ಯ)** ಆ ಕಾರಣ, ಬಂಜೆ ಬಂಜೇ ಎಂಬ ಶಾಪದಿಂದ ಮುಕ್ತಿ ಪಡೆಯಲು ಆಶಿಸಿ, ಆ ಚೆನ್ನಕೇಶವನನ್ನೇ ಮೊರೆ ಹೊಕ್ಕಿದ್ದೇನೆ. ಅನಾಥ ರಕ್ಷಕನಾದ ಅವನೇ ನನ್ನ ಮಗನಾಗಲಿ ಎಂದು ಬೇಡಿದ್ದೇನೆ.

**(ಹಾಡು)** ಕಳೆದಿರುಳ ಕನಸಿನಲ್ಲಿ
ಶಿಲೆಯಲ್ಲಿ ಮೂಡಿ ಬಾರೊ
ಕೇಶವನೆ ಕ್ಲೇಶ ಕಳೆಯೊ
ವಾಸವನೆ ರೂಹು ತಳೆಯೊ ॥

**(ಗದ್ಯ)** ಎಂದು ಬೇಡಿ ಒಪ್ಪಿಸಿದ್ದೇನೆ. ಅವನ ಸಮ್ಮತಿಯಂತೆ –

**(ಹಾಡು)** ಈ ಅರಸಿತಿಗೆ ಕಣ್ಣನಾಸೆ
ಚೆಲುವನ್ನ ಚೆನ್ನನಾಸೆ ॥
ಶಿಲೆಯಲ್ಲಿ ನಿಲಿಸುವಾಸೆ
ಕೇಶವನ ಕಡೆಸುವಾಸೆ ॥ ಆಸೆ ॥

**ವಿಷ್ಣು** : ಆಯ್ತು ಶಾಂತಲೆ,
ಶಿಲ್ಪ ರೂಪದಲ್ಲಿ ಶ್ರೀ ಚೆನ್ನಕೇಶವ ಸ್ವಾಮಿ ಮೂಡಿ ನಿಲಲಿ
ಅವಗೊಂದು ನೆರಳಾಗಿ ದೇಗುಲವು ನಿರ್ಮಾಣವಾಗಲಿ !

**ಶಾಂತಲೆ :** ನನ್ನದೂ ಅದೇ ಕಲ್ಪನೆ ಪ್ರಭು
ತಲಕಾಡು ವಿಜಯೋತ್ಸವದ ನೆನಪಾಗಿ ಬೇಲೂರಲ್ಲಿ ತಾವೊಂದು
ವಿಜಯನಾರಾಯಣನ ಭವ್ಯ ದೇಗುಲವನ್ನು ನಿರ್ಮಿಸಿದಿರಲ್ಲವೆ !
ಆ ಗುಡಿಯ ಹಿಂಬದಿಯೆ ನಾನೊಂದು ಚೆನ್ನಕೇಶವನ ದೇಗುಲವ
ಕಟ್ಟಿಸುವೆ ! ಅಲ್ಲಿ, ಚೆಲುವ ಚೆನ್ನಿಗನನ್ನು ಶಿಲ್ಪರೂಪದಲಿ ಶಿಶುವಾಗಿ
ಪಡೆಯಬೇಕೆಂದಿಹೆನು. ನನಗಂತೂ ಮೃಣ್ಮಯದ ಮಗುವಿಲ್ಲ,
ಅದಕಾಗಿ ಚಿನ್ಮಯನ ಚೆನ್ನಕೇಶವನನ್ನು ನನಗೆ ಮಗನೆಂದೆನಿಸಿ
ಬಂಜೆತನ ನೀಗುವೆನು ! ಮುದ್ದು ಮೋಹನನನ್ನು
ಮಗನಾಗಿ ನಾ ಪಡೆದು ಜನ್ಮವನು ಸಾರ್ಥಕಗೊಳಿಸಿಕೊಳ್ಳುವೆನು !

**ವಿಷ್ಣು :** ನಿನ್ನಿಚ್ಛೆ ಪೂರ್ಣಗೊಳ್ಳಲಿ ಶಾಂತಿ, ಆಸೆ ಹಣ್ಣಾಗಲಿ !
ಇದೊ, ಈಗಲೇ ನೆರವೇರಿಸುವೆ. ಯಾರಲ್ಲಿ ?
(ದೂತಿಯೊಬ್ಬಳು ಬರುವಳು ಕೈಮುಗಿದು ಶಿರಬಾಗಿ ನಿಲ್ಲುವಳು)
ಈ ಕೂಡಲೆ ಪ್ರಧಾನ ಸ್ಥಪತಿ ಜಕ್ಕಣರನ್ನು ಬರಹೇಳು.

**ದೂತಿ :** ಅಪ್ಪಣೆ (ವಂದಿಸಿ ನಿರ್ಗಮಿಸುವಳು)

**ಶಾಂತಲೆ :** ಆನಂದಂ ಪರಮಾನಂದಂ
ಆನಂದಂ ಬ್ರಹ್ಮಾನಂದಂ ॥
ಶಂಖ ಚಕ್ರ ಗದೆ ಕೌಸ್ತುಭ ಹಾರದ
ಪಾಂಚಜನ್ಯಧರ ಪಾರ್ಥಸಾರಥಿಯ
ಶಿಲ್ಪ ಕಲ್ಪನೆಯ ಶ್ರೀಕರ ಮೂರ್ತಿಯ
ಇಳೆಗರ್ಪಿಸುವೀ ಸುದಿನವ ನೆನೆವುದೆ ॥
(ಆನಂದ ನರ್ತನ ಚಣಕಾಲ. ಅಷ್ಟರಲ್ಲಿ ಜಕ್ಕಣನ ಆಗಮನ)

**ಜಕ್ಕಣ :** ಮಹಾಪ್ರಭುಗಳಿಗೆ ಜಯವಾಗಲಿ !
ಮಹಾ ಮಾತೆಯವರಿಗೆ ಜಯವಾಗಲಿ ॥

**ಶಾಂತಲೆ :** ಆಚಾರ್ಯ, ನಿಮಗೆ ಸ್ವಾಗತ, ಅಂತೆಯೇ
ಮಹಾಮಣಿಹವೊಂದನ್ನು ನೀವು ಪೂರೈಸಿಕೊಡಬೇಕು.

**(ಹಾಡು)** ಶ್ರೀ ಚೆನ್ನಕೇಶವನ ಸೌಂದರ್ಯ ಮೂರುತಿಯ
ಸೌಮ್ಯಕೇಶವನನ್ನು ನೀವ್ ನೀಡಬೇಕು
ಶಿಲೆಯ ಸೆರೆಯಿಂದವನ ಬಿಡಿಸಿ ಮೂಡಿಸಬೇಕು
ಕಲೆಯ ಬಲೆಯಲಿ ಮತ್ತೆ ಸೆರೆಹಿಡಿಯಬೇಕು ॥
ಜಗದೊಳಗೆ ಇನ್ನಿಂಥ ಸೌಮ್ಯ ಮೂರ್ತಿಯ ಕಾಣೆ
ಎಂದೆನಿಸಿ ಶಿಲೆಯಲ್ಲಿ ಮೂಡಿಸಲು ಬೇಕು.
ವೈಕುಂಠದಿಂದಿಳಿವ ವೇಂಕಟನ ಕೊಡಬೇಕು
ಸೌಮ್ಯನಾಯಕಿಯರಸನಚ್ಯುತನ ತರಬೇಕು ॥

**(ಗದ್ಯ)** ಆಚಾರ್ಯ, ಚೆನ್ನಕೇಶವ ಮೂರ್ತಿ ನಾನೀವ ಕಾಣಿಕೆಯು.
ಆ ಮೂರ್ತಿ ಶಿಲ್ಪಕಲ್ಪದ ಚೆಲುವನಾಗಿ ನಲಿಯಲಿ.
ಮತ್ತೆ.... (ಗಂಭೀರಳಾಗಿ) ಮತ್ತೆ.....
ಈ ಶಾಂತಲೆಯ ಬಂಜೆತನವನು ನೀಗಿ
ಪುತ್ರವತಿ, ಪುಣ್ಯವತಿ ಸ್ವಾಮಿಯನ್ನೇ ತನ್ನ
ಮಗನಾಗಿ ಪಡೆದವಳು, ಹಡೆದವಳು ಭಾಗ್ಯವತಿ
ಎಂದೆನಿಸುವಂತೆ ನೀನೆಸಗಬೇಕು.

**ಜಕ್ಕಣ :** ಅಂತೆ ಆಗಲಿ ತಾಯಿ, ತಮ್ಮ ಬಯಕೆಯ ದೈವ

ಮೂರ್ತರೂಪವ ತಳೆದು ರಾರಾಜಿಸುತ್ತಿರಲಿ !
ಆ ದೈವ ಒಲಿದೆನ್ನ ಭಾವಗರ್ಭದಿ ಮೂಡಿ,
ಈ ಶಿಲ್ಪಿ ಜಕ್ಕಣನ ಹಸ್ತವಿನ್ಯಸ್ತದಲಿ
ರೂಪಧಾರಣಗೈದು ಭಕ್ತಿದೀಪ್ತಿಯು ಬೆಳಗಿ
ಪ್ರಾಣ ಪ್ರಕಟಿತವಾಗಿ ದಿವ್ಯ ತೇಜೋ ಮೂರ್ತಿಯಾವಿರ್ಭಾವ
ಮೈತಳೆಯಲಿ, ನಿಮ್ಮಿಂದ ನಿತ್ಯ ಪೂಜೆಗೊಳಲಿ !
ಶುಭ ಮುಹೂರ್ತವೊಂದರಲಿ ತಮ್ಮ ಹೆಸರಲಿ ನಾನು
ಸಂಕಲ್ಪ ಸ್ವೀಕರಿಸಿ ಆ ಮಹಾ ಮಣಿಹದಲ್ಲುದ್ಯುಕ್ತನಾಗುವೆನು.
ಮಾತೆಪಿತರಾಶೀರ್ವಾದ ನಿರುತವಿರಲಿ !

**ಶಾಂತಲೆ :** ಆಚಾರ್ಯ,
ಮುದ್ದು ಕೃಷ್ಣನ ಭಾವ ಮುಖದಲ್ಲಿ ಮೂಡಿರಲಿ
ಬೆಣ್ಣೆ ಕದ್ದಂಥವನ ಕಣ್ಣ ಬೆದರಿಕೆಯಿರಲಿ
ರಕ್ಕಸರ ಕೊಂದಂಥ ದಕ್ಷತೆಯು ಕೂಡಿರಲಿ
ಕೈಯ ಮುರಳೀನಾದ ಅನುರಣಿತವಿರಲಿ ! ॥
ಯಮುನಾ ತರಂಗಿಣಿಯ ಮರಳ ರಾಶಿಯ ಮೇಲೆ
ರಾಸಕ್ರೀಡೆಯನಾಡೊ ಚೆಲುವು ಚಿಮ್ಮಿರಲಿ
ಗೋಪಿಯರ ಕೋಪ–ಭಯ ಅವನ ಕಣ್ಣಲ್ಲಿರಲಿ
ಬೃಂದಾವನಾನಂದ ಗೋವಿಂದನೈತರಲಿ ॥
(ಕೂಡಲೆ ನರ್ತಕಿಯರು ಕೃಷ್ಣನ ಸುತ್ತ ರಾಸಲೀಲೆ ನಡೆಸುವ ದೃಶ್ಯ
Flash Back ನಲ್ಲಿ)

**ನರ್ತಕಿಯರು :** ರಾಸಲೀಲೆ
ಸುಹಾಸಲೀಲೆ
ವಸಂತಮಾಸದೊಸಗೆ ತಂದ ಭಾಸಲೀಲೆ ॥ ರಾಸ ಲೀಲೆ ॥
ಮುದ್ದು ಮೋಹನ
ಘನ ಶ್ಯಾಮನ
ತೋಳಸೆರೆಯ ಬಂಧನ ಆಪ್ಯಾಯನ ॥ ರಾಸ ಲೀಲೆ ॥
ನಂದಗೋಪನ
ಚೆಲುವ ಚಿಣ್ಣನ
ಬೆಣ್ಣೆದೇಹದಲ್ಲಿ ಬೆರೆಯೆ ಅದುವೆ ಪಾವನ ॥ ರಾಸ ಲೀಲೆ ॥
ಗೆಜ್ಜೆ ನುಡಿಯು ಘಲ್ಲೆನೆ
ಎದೆಯೊಳೇನೊ ಝಲ್ಲೆನೆ
ಮನದ ಕೊನೆಗೆ ಮುಲುಕು ತಂದ
ಸುರತ ಲೀಲೆ ಇದು ರಾಸಲೀಲೆ ॥ ರಾಸ ಲೀಲೆ ॥
(ನರ್ತಿಸುತ್ತಾ ನಿಷ್ಕ್ರಮಿಸುವರು, ಶಾಂತಲೆ ಬಣ್ಣನೆಯನ್ನು ಮುಂದುವರಿಸುವಳು)

**ಶಾಂತಲೆ :**
ನವನೂತ್ನ ಮಂದಿರದ ಗರ್ಭಗುಡಿ ಪೀಠದಲಿ
ಒಪ್ಪಿ ತಾ ನಲವಿನಲಿ ಸದ್ಭಾವ ಭಂಗಿಯಲಿ
ವರದ ಹಸ್ತವನೆತ್ತಿ ಜಗವನ್ನು ಹರಸುತಲಿ
ಕರಿವರದ ಶ್ರೀಕೃಷ್ಣ ಚೆನ್ನಕೇಶವ ನಿಲಲಿ ॥

**ಜಕ್ಕಣ :** ಅಪ್ಪಣೆಯು ಮಹತಾಯಿ
ಸೌಮ್ಯನಾಯಕಿಯಾಜ್ಞೆ ಎಂದೆ ಗಣಿಸುವೆನು ॥

(ಜಕ್ಕಣನ ನಿರ್ಗಮನ – ಅನಂತರ ಶಾಂತಲೆ ಮತ್ತು ವಿಷ್ಣು ನರ್ತಿಸುವರು)

**ಹಾಡು :**

ಆಡು ಆಡು ಆಡು
ಜಾಗರವನಾಡು ನವಿಲೆ ॥ ಪ ॥
ಗರಿಗರಿಯ ನಿರಿಯ ಕೆದರಿ
ನಲಿದಾಡು ಸೋಗೆ ನವಿಲೆ ॥ ಅನು. ಪ ॥
ಎಳೆ ಹುಲ್ಲ ಮೇಲೆ ಮಕಮಲ್ಲ ಬಾಲೆ
ಮಲಗಿಹಳು ಕೆಣುಕು ನವಿಲೆ
ಮಳೆ ಬಿಲ್ಲಿನೊಂದು ಕಾವಣವ ಕಟ್ಟಿ
ಕಾಮನನು ಕಳುಹು ನವಿಲೆ ॥ ೧ ॥
ಹೊಂಬಾಳೆ ತುಂಬಿ ಹೊರಸೂಸಿ ನಗಲಿ
ರಂಗೋಲೆ ಬರೆದು ನವಿಲೆ
ಬಾಳೆಲೆಯ ತೋಳು ತೂಗಾಡುತಿರಲಿ
ತೋರಣವ ಸೃಜಿಸು ನವಿಲೆ ॥ ೨ ॥
ಅಲ್ಲೆ ಅಲ್ಲೆ ತೆರೆ ತೆರೆಯ ಮೇಲೆ
ನಸು ಬೆಳಕ ಬಾಲಲೀಲೆ
ಹಸುರೆಲ್ಲ ಹೂವು ಚಿಗುರೆಲ್ಲ ಮಾವು
ಬತ್ತಲೆಯ ಮರಕೆ ಸೀರೆ ॥ ೩ ॥
ಎಲ್ಲೆಲ್ಲು ಚೆಲುವು ಕಾಮಂಗೆ ಗೆಲವು
ಸೌಂದರ್ಯ ಸುಗ್ಗಿ ಸೂರೆ
ನೋಟಕ್ಕೆ ಸೋತು ಬೇಟಕ್ಕೆ ಕಾತು
ನಿಂದಿಹವು ಬೆಟ್ಟದೋರೆ ॥ ೪ ॥
ಶಿವ ಸುಟ್ಟ ಕಾಮ ಮೂಡಿಸಿದ ಪ್ರೇಮ
ಸಂತಾನ ಕೋಟಿ ಕೋಟಿ
ಅಳಿವಿಲ್ಲ ಅವಗೆ ತಿಳಿ ಸೊಬಗು ನವಿಲೆ
ಬಾಳಲ್ಲಿ ಇರಲಿ ಪ್ರೀತಿ ॥ ೫ ॥

**ದೃಶ್ಯ : ೩** **ಅರಮನೆಯ ಕೈಸಾಲೆ**

ಗುಡುಗು ಮಿಂಚು ಸಿಡಿಲುಗಳ ಆರ್ಭಟದೊಡನೆ ಈ ದೃಶ್ಯ ಆರಂಭವಾಗುತ್ತದೆ. ರಂಗದ ಮೇಲೆ ಕತ್ತಲು – ಬೆಳಕು ವಿನ್ಯಾಸ. ಅದಕೆ ತಕ್ಕಂತೆ ಶಬ್ದಜಾಲ ! ಚಂಡೆ, ಜಾಗಟೆ, ಭೇರಿಗಳನ್ನು ಬಳಸಬಹುದು. ಒಟ್ಟಿನಲ್ಲಿ ಭೀಕರತೆಯ ಸ್ಪಷ್ಟ ಪರಿಣಾಮ ಪ್ರೇಕ್ಷಕರ ಮೇಲಾಗುವಂತೆ ಇಲ್ಲಿನ ಸನ್ನಿವೇಶ ರೂಪಿತವಾಗಬೇಕು.

– ನರ್ತಕ, ನರ್ತಕಿಯರ ಕಥಕ್ಕಳಿ –

**(ಹಾಡು)** ಭೂಮಿ ನಡುಗುತಿದೆ ಬಾನು ಬಿರಿಯುತಿದೆ ಸಾಗರಗಳೇಳು ಕುದಿದು
ಪ್ರಳಯಾಗ್ನಿ ಜ್ವಾಲೆ ನಾಲಗೆಯ ಚಾಚಿ ದಿಕ್ತಟವು ಸುಟ್ಟು ಉರಿದು ॥
ಬಿರುಗಾಳಿ ಎರಗೆ ನೆಲವೆಲ್ಲ ಸುರುಳಿ ಕಟ್ಟಿಹುದು ಧೂಳಿಕೋಟೆ !
ಪಾತಾಳದಿಂದ ಭೇತಾಳದಂತೆ ಲಾವಾರಸದ ಊಟೆ ॥

ನಕ್ಷತ್ರವೆಲ್ಲ ಪಳಪಳನೆ ಉದುರೆ ಬರಮೋಡ ಆಳಿತೆಲ್ಲ
ಗಿರಿ ಶಿಖರ ಮುರಿದು ಕೆಡೆದಿತ್ತು ಧರೆಗೆ ಬತ್ತಿದವು ನದಿಗಳೆಲ್ಲ ॥

ಚಂಡಕಿರಣನುದ್ಧಂಡತನಕೆ ಬ್ರಹ್ಮಾಂಡ ಒಡೆಯುತಿಹುದು
ರುಂಡಮಾಲೆ ಧರಿಸಿದನ ತಾಂಡವಕೆ ಸಿಡಿಮದ್ದು ಸೂಸುತಿಹುದು ॥

ಏನೊ ಪ್ರಳಯ ಎಂಥದೋ ವಿಲಯ ಹಾಳಾಯ್ತು ಜ್ಯೋತಿವಲಯ
ಶಾಂತಲೆಯ ಬಾಳ್ಗೆ ಮುಳುವಾಯ್ತು ಚೆನ್ನಕೇಶವನ ದೇವ ನಿಲಯ ॥

**ದೃಶ್ಯ : ೪** **ಲಕ್ಷ್ಮಲೆಯ ಅಂತಃಪುರ**

(ಲಕ್ಷ್ಮಲೆ ಮತ್ತು ಬೊಮ್ಮಲೆಯರ ನರ್ತನ)

**ಲಕ್ಷ್ಮಲೆ :** ಧಿಕ್ಕಾರ ಧಿಕ್ಕಾರ ದರ್ಪ ದೌರ್ಜನ್ಯಕ್ಕೆ
ಸವತಿಯರ ಕಡೆಗಣಿಸಿ ನಡೆವುದಕ್ಕೆ ॥ ಪ ॥
ನಾನು ನಾನೆಂದೆಂಬ ನಾನೆಲ್ಲವಹುದೆಂಬ
ಕ್ಷುಲ್ಲ ಬುದ್ಧಿಯ ಹೆಣ್ಣು ಮೆರೆವುದಕ್ಕೆ ॥ ಅನು. ಪ ॥
ಹೆಣ್ಣು ಹೆಣ್ಣಿಗೆ ಶತ್ರು ಸ್ವಾರ್ಥತೆಯ ತವರು
ಕಣ್ಣಿಂಗೆ ಮಣ್ಣೆರಚಿ ಬಾಳ ನಡೆಸುವಳು
ಶಾಂತಲೆಯ ವರ್ತನೆಗೆ ರೋಸಿ ಹೋಗಿದೆ ಮನವು
ತಕ್ಕ ಶಾಸ್ತಿಯಗೈಯೆ ತವಕಿಸುತ್ತಿಹುದು ॥ ೧ ॥
ಏನಿದೀ ಪರಿಹಾಸ ಈ ವಿಪರ್ಯಾಸ
ಸಲ್ಲದೆಡೆ ಗೌರವವ ಸಲ್ಲಿಸುವ ಆಭಾಸ
ಇಲ್ಲವಾಗಿಸಬೇಕು ಕೇಳು ಬೊಮ್ಮಲೆ ತಂಗಿ
ಸೊಕ್ಕು ಮುರಿಯಲೆ ಬೇಕು ಬರಲಿ ರೋಷ ॥ ೨ ॥

**ಬೊಮ್ಮಲೆ:** ಚೆನ್ನಾಗಿ ಹೇಳಿದಿರಿ ಅಕ್ಕ ಲಕ್ಷ್ಮಲ ದೇವಿ
ಶಾಂತಲೆಯ ಗರ್ವಕ್ಕೆ ಶಾಸ್ತಿಯಾಗಲೆ ಬೇಕು
ಪುತ್ರನನು ಹೆತ್ತವರು ಪಟ್ಟವನು ನಡೆಸುವರು
ನಿಮಗೊಬ್ಬ ಮಗನುಂಟು ವಿಜಯನರಸಿಂಹ ।
ನೀವೆ ಪಟ್ಟದ ರಾಣಿ ಎನಿಸಲರ್ಹರು ಅಕ್ಕ, ಅವಳಲ್ಲ !
ಅವಳೋರ್ವ ಬಂಜೆ
ಬಂಜೆ ಎಂದೂ ವಧ್ಯೆ, ವಂದ್ಯೆಯಲ್ಲ !

**ಲಕ್ಷ್ಮಲೆ :** ಬೊಮ್ಮಲಜಿ ಮುದಿ ರಾಣಿಯಾದರೂ
ಶಾಂತಲೆಯ ಕುಲುಕೇನು, ಮಿನುಕೇನು !
ಹೊಸದಾಗಿ ಹಸೆಮಣೆಯನೇರಿದವಳೊಯ್ಯಾರ !
ಅಬ್ಬಬ್ಬ ! ಅವಳ ವರ್ತನೆ! ನನಗೆ ನಾಚಿಕೆಯಮ್ಮ !

**ಬೊಮ್ಮಲೆ:** ಲಜ್ಜೆಗೆಟ್ಟವಳಕ್ಕ ! ಅವಳ ಬೆಡಗೇನು ! ಬಿನ್ನಾಣವೇನು !
ಅಕ್ಕ, ಶಾಂತಲೆಗೆ ಚೆಲುವುಂಟು ತಲೆ ಇಲ್ಲ !
ಗುಡಿಕಾರ್ಯ ಮುಗಿದಿಹುದು ಇನ್ನೇನು ಎರಡು ದಿನ...
ಎರಡೆ ದಿನದಲಿ ಅವಳ ಹೆಸರಿನಲಿ ಚೆನ್ನಕೇಶವ ಮೂರ್ತಿ ಸ್ಥಾಪಿತವು !
ಒಂದು ಗುಡಿ ಅರಸರದು ಮುಂಭಾಗದಲ್ಲಿಹುದು
ವಿಜಯ ನಾರಾಯಣನ ಹೆಸರಿನಲ್ಲಿ,
ಮತ್ತೊಂದು ಅರಸಿಯದು
ಹೆಸರು : **ಶ್ರೀ ಚೆನ್ನಕೇಶವನಂತೆ !**
ಹ್ಞೂಂ ! ನಮ್ಮದಿಹುದೇನಿಲ್ಲಿ ? ಹುಳು ಹುಟ್ಟಿ ಸತ್ತಂತೆ

ಲೆಕ್ಕಕ್ಕೆ ಇಲ್ಲ., ಪಟ್ಟಮಹದೇವಿಯದೆ ಆಡಳಿತವೆಲ್ಲ !

**ಲಕ್ಷ್ಮಲೆ :** ಸೊಮ್ಮನಡಗಿಸಬೇಕು, ಬೊಮ್ಮಲಾದೇವಿ !
ನೀವು ಪಲ್ಲವರ ರಾಜಪುತ್ರಿಯರು. ವಿಷ್ಣುವರ್ಧನರ ಕಿರಿಯ ರಾಣಿ !
ನಿಮಗಿಲ್ಲ ಗೌರವ ! ನಮ್ಮ ಅರಮನೆಯಲ್ಲೂ
ಅವಳಿಗೇ ಸಲ್ಲುವುದು ಮನ್ನಣೆಯ ಹಿರಿಯ ಮಣೆ !
ನಾನು ರಾಮಾನುಜರು ಸಾಕಿ ಸಲಹಿದ ಶಿಶುವು
ನಟ್ಟ ನಡುವಿನ ರಾಣಿ, ನನಗಿಲ್ಲ ಮರ್ಯಾದೆ !
ಬೆಲೆವೆಣ್ಣ ಬಾಳುವೆಯು ಸಹಿಸಲಳವಲ್ಲ !
ಬೊಮ್ಮಲಜಿ, ಅರಸರೊಲವೆಲ್ಲ ಶಾಂತಲೆಗೆ ಮೀಸಲು !
ಅವಳದೇ ಬಹುಪಾಲು ! ಸಿಂಹಪಾಲು !!
ನಾವೊ ಬಡದಾಸಿಯರು !... ಹೂಂ...
ಎಂತಾದರೂ ಸರಿಯೆ ಅವಳ ಸೊಕ್ಕಡಗಿಸಲೆ ಬೇಕು !

**ಇಬ್ಬರೂ :** (ನರ್ತಿಸುತ್ತಾ)
ಅಡಗಿಸಲೆ ಬೇಕು, ಸೊಕ್ಕಡಗಿಸಲೆ ಬೇಕು
ಸೊಗಲಾಡಿ ಶಾಂತಲೆಯ ಹುಡಿಗೈಯಬೇಕು ॥
(ತಮಟೆ : ಟಣ ಟಣಾ ಟಣ್ ಟಣ್, ಟಣ ಟಣಾ ಟಣ್ ಟಣ್)
ಗುಡು ಗುಡುಸಿ ಮೆರೆಯುವಳ ಎದೆಮೆಟ್ಟಬೇಕು !
ಅಡಿಗಡಿಗೆ ಹಂಗಿಸುವ ಕೋಡುಡಿಯಬೇಕು !
(**ಡೋಲು:** ಢಮ ಢಮಾ ಢಮ್ ಢಮ್, ಢಮ ಢಮಾ ಢಮ್ ಢಮ್)
ಮೀಂಚುಳ್ಳಿ ವಂಚಕಿಯ ಸಂಚಳಿಸಬೇಕು
ಭಂಜನೆಗೆ ಭರತವಾಕ್ಯವನಾಡಬೇಕು !

(**ತಾಳ** : ಚಳ ಚಳಾ ಚಳ್ ಚಳ, ಚಳ ಚಳಾ ಚಳ್ ಚಳ್)

(ನರ್ತನ ಆವರ್ತನಗೊಂಡು ನೆಲೆಗೆ ಬಂದ ಮೇಲೆ, ಮಂಗಳ ದ್ರವ್ಯಗಳನ್ನು ಹಿಡಿದ ಈರ್ವರು ಸುವಾಸಿನಿಯರು ಲಾಸ್ಯಗೈಯುತ್ತಾ ಆಗಮಿಸುವರು)

**ನರ್ತಕಿಯರು :**

ಚೆಲುವೆ ಚಿಮ್ಮುತಿರಲಿ ! ಎಲ್ಲೆಡೆಯು
ಒಲವೆ ಮೂಡಿ ಬರಲಿ ॥
ಬಾನಾಡಿಯಂತೆ ತೇಲಾಡುವಂತೆ
ನಿಶ್ಚಿಂತ ನಿಲವು ಇರಲಿ ॥
ನೆಲ ಮುಗಿಲಿನಲ್ಲಿ ಜಲಧಾರೆಯಲ್ಲಿ
ಎಳೆ ಮಿಂಚು ಕುಂಚದಲ್ಲಿ
ಹೂ ಅರಳುವಲ್ಲಿ ಮಧು ಸುರಿಯುವಲ್ಲಿ
ಮುತ್ತಿಡುವ ದುಂಬಿಗಳಲಿ ॥
ಎಲ್ಲೆಲ್ಲು ಒಲವೆ ನೆಲೆ ನಿಲ್ಲುತಿರಲಿ
ದ್ವೇಷಾಂಶ ದೂರವಿರಲಿ
ಅನುರಾಗ ಸೂತ್ರ ಸೌಭದ್ರವಿರಲಿ
ಸುಖ ಶಾಂತಿ ತೃಪ್ತಿ ತರಲಿ ॥
ಓಂ ಸಹನಾವವತು ಸಹನೌಭುನಕ್ತು ಸಹವೀರ್ಯಂ ಕರವಾವಹೈ
ತೇಜಸ್ವಿನಾವಧೀತ ಮಸ್ತು ಮಾ ವಿದ್ವಿಷಾವಹೈ ॥
ಓಂ ಶಾಂತಿ..... ಶಾಂತಿ...... ಶಾಂತಿ ಃ

**ಇಬ್ಬರೂ :** ದೇವಿ ದ್ವಯರಿಗೆ ಸ್ವಾಗತವ ಕೋರುವೆವು

**ಲಕ್ಷ್ಮಲೆ :** ನೀವೂ.....

**ನರ್ತಕಿ ೧:** ಪಟ್ಟ ಮಹಾದೇವಿ ಶಾಂತಲಾ ದೇವಿಯರ ಪುಟ್ಟ ದಾಸಿಯರು !

**ಲಕ್ಷ್ಮಲೆ :** ಇಲ್ಲಿಗೆ ಬಂದ ಕಾರ್ಯ ?

**ನರ್ತಕಿ ೨:** ಅತ್ಯಂತ ಮಹತ್ವದ್ದು ತಾಯಿ ! ಪಟ್ಟ ಮಹಾದೇವಿಯವರು
ತಮ್ಮ ಹೆಸರಿನಲ್ಲಿ ನಿರ್ಮಿಸಿದ ಶ್ರೀ ಚೆನ್ನಕೇಶವನ ದೇಗುಲದ
ಉದ್ಘಾಟನೋತ್ಸವವು ಬರುವ ಸ್ಥಿರವಾದ ಶುಭ ಲಗ್ನದಲ್ಲಿ.

**ನರ್ತಕಿ ೧:** ಶ್ರೀ ವಿಷ್ಣುವರ್ಧನರ ಕಿರಿರಾಣಿ ಬೊಮ್ಮಲಾದೇವಿಯರಿಗೆ
ಪ್ರಣಾಮಗಳು, ದೇವಿಯರೆ, ತಮ್ಮ ಅಂತಃಪುರಕೆ ಆಹ್ವಾನಿಸಲು
ಬರಲಪ್ಪಣೆಯೆ ತಾಯಿ ?

**ಬೊಮ್ಮಲೆ:** ಮಂಜರಿ, ಇಲ್ಲಿಯೇ ಇಹೆವಲ್ಲ. ಅಲ್ಲಿಗೇ ಬರುವಂಥ
ಅಗತ್ಯ ಎಲ್ಲಿದೆ ಹೇಳು ?

**ನರ್ತಕಿ ೧:** ತಮ್ಮ ಸೌಜನ್ಯ ! ಅಮ್ಮ, ಪಟ್ಟ ಮಹಾದೇವಿಯರು
ಪ್ರೀತಿ ಪತ್ರದ ಕೂಡೆ ಮುತ್ತು ರತ್ನದ ಹಾರ
ಪಟ್ಟೆ ಪೀತಾಂಬರವು ಖಿಲ್ಲತ್ತು ಪದಕಗಳು
ಎಲ್ಲವೂ ಮುಂಗಡದ ಉಡುಗೊರೆಯ ಕಳಿಹಿಹರು.

**ನರ್ತಕಿ ೨:** ಬಾಗಿನವ ನಾಳೆ ಅವರೆ ಕಯ್ಯಾರ ಕೊಡುವರಂತೆ

**ನರ್ತಕಿ ೧:** ಶಾಂತಲಾದೇವಿಯರು, ತಾವೆ ಬಾಗಿನವಿತ್ತು
ನಿಮ್ಮೀರ್ವರನು ಆಹ್ವಾನಿಸುವರಂತೆ ! ಅದಕಾಗಿ ತಮ್ಮ ಸಮಯವ
ತಿಳಿದು ಬಹುದೆಂದು ನಮ್ಮನಟ್ಟಿದರು.

**ಲಕ್ಷ್ಮಲೆ :** ಏನೇನು? ಬಾಗೀನವನೀಯುವರೆ ?
ನಮ್ಮನಾಹ್ವಾನಿಸಲು ನಮ್ಮರಮನೆಗೆ ಬಂದಪರೆ ?
ಛೆ ! ಛೆ ! ಎಷ್ಟಾದರೂ ನಾವು ದಾಸಿಯರು !
ಅವರು ಮಹರಾಣಿಯರು !
ದಾಸಿಯರಿಗೇತಕ್ಕೆ ಹಿರಿಪಾರುಪತ್ತೆ ! ಸಲ್ಲದಿಹ ಗೌರವ !!

**ಬೊಮ್ಮಲೆ:** ಅಕ್ಕಾಜಿ, ಪಟ್ಟಮಹಾದೇವಿಯರ ಹಂಸಪಾದಂಗಳಿಗೆ
ನೋವಾಗುವುದೆ ಬೇಡ. ನಾವೆ ನವನೂತ್ನ ದೇಗುಲವ ವೀಕ್ಷಿಸಲು
ಗುಡಿಯ ಬಳಿ ಹೋಗೋಣ ಹೇಗೂ ನಾಳೆ ನಿತ್ಯ ಪದ್ಧತಿಯಂತೆ
ಪಟ್ಟದರಸಿಯರಲ್ಲಿಗೈತಹರು. ಅಲ್ಲಿಯೇ ನಾವು ವೈಯಕ್ತಿಕಾಹ್ವಾನ,
ಉಡುಗೊರೆಗಳೆಲ್ಲವನು ಸ್ವೀಕಾರಗೈದರಾಯ್ತು !

**ಲಕ್ಷ್ಮಲೆ :** ನಾವೂ.. ನಾಳೆ... ಗುಡಿಯ ಬಳಿ...

**ಬೊಮ್ಮಲೆ:** ಅಹುದಕ್ಕಾ, ಅಳಿಯನ ಕುರುಡು ಬೆಳಗಾಗ ತಿಳಿಯುವುದು
ನೋಡೋಣ ! ದೇಗುಲದ ವಿನ್ಯಾಸ, ಸುವಿಳಾಸವೆಲ್ಲವನು.
ಉದ್ಘಾಟನಾ ದಿನಕೆ ಮೊದಲೆ ಪರಿವೀಕ್ಷಣೆಯು
ಕ್ಷೇಮಕರ ! ಒಪ್ಪಿಗೆಯೆ ಅಕ್ಕಾಜಿ ?

**ಲಕ್ಷ್ಮಲೆ :** ಆಗಲಿ ಬೊಮ್ಮಲಜಿ... ಸಖಿಯರಿರಾ,
ನಾವೀರ್ವರೂ ನಾಳೆ ದೇಗುಲದ ಬಳಿ ಬಹೆವು !
ಹೊಸ ದೇಗುಲವ ನಾವೊಮ್ಮೆ ವೀಕ್ಷಿಸುವ ಅಪೇಕ್ಷೆ !
ಅಲ್ಲಿಗೈತರಲಪ್ಪಣೆಯ ಬೇಡುವೆವು !
ನಮ್ಮ ಪ್ರಾರ್ಥನೆಯನ್ನು ಪಟ್ಟ ಮಹಿಷಿಯರಿಗೆ ಮುಟ್ಟಿಸಿರಿ.

**ದೃಶ್ಯ : ೫** **ಅರಮನೆಯ ಮೊಗಸಾಲೆ**

(ನರ್ತಕಿಯರು ಹಾಡುತ್ತಾ, ನರ್ತಿಸುತ್ತಾ ರಂಗದ ಮುಂಭಾಗಕ್ಕೆ ಬರುವರು
ಹಿಂಬದಿಯ ತೆರೆ ಬೀಳುವುದು, ಒಳಗಡೆ ಮುಂದಿನ ದೃಶ್ಯ ಸಿದ್ಧತೆ ನಡೆಯುವುದು)

**ಹಾಡು** :

ಕುಣಿ ಕುಣಿ ಕುಣಿ ಕುಣಿ ನೀರನಟಿ
ಬೃಂದಾವನದಾನಂದವೆ ಪುಟಿವೊಲು
ಕುಣಿ ಕುಣಿ ಕುಣಿ ಕುಣಿ ನೀರನಟಿ ॥ ಪ ॥
ಚಿಲುಮೆಯ ಚೆಲುವಿನ ತೋಳನು ಚಾಚಿ
ಭಾವದ ಭಂಗಿಗೆ ತಿಳಿಮನ ಹಾಸಿ
ಜುಳು ಜುಳು ಜುಳು ಜುಳು ನಾದಾಮೋದದಿ
ವರ್ಣ ಪರ್ಣಗಳ ದೆಸೆದೆಸೆಗೆರಚುತೆ ॥ ೧ ॥
ಸೀರ್ಪನಿ ಸಿಂಪಡಿಸೆಲ್ಲೆಡೆ ಬಿಡದೆ
ಇಬ್ಬನಿ ಮಣಿಗಳು ಹಸುರೆಲೆ ತಲೆಗೆ
ಮಿನ ಮಿನ ಮಿನುಗುವ ಮಿಂಚಿನ ಮಳೆಗೆ
ಮೋಹನ ಮುರಳೀ ನಾದವ ಬೆರೆಸುತೆ ॥ ೨ ॥
ಮಾಗಿಯ ಯೋಗಿಗೆ ಮಂಗಳವಾಗಲಿ
ಬರುವ ವಸಂತಗೆ ಶುಭವಿರಲಿ
ಕಡಲಿನ ಕ್ಷೋಭೆಗೆ ಶಮವೈತರಲಿ
ಶಾಂತಿಯು ನೆಲೆಸಲಿ ಎಂದೆನ್ನುತಲಿ ॥ ೩ ॥

– ನಿರ್ಗಮನ –

**ದೃಶ್ಯ : ೬** **ಶ್ರೀಚೆನ್ನಕೇಶವ ದೇವಾಲಯ**

– ಇದೊಂದು ಭವ್ಯತಮ ದೃಶ್ಯ –

ತುಂಬಾ ಅಲಂಕೃತವಾದ ಚೆನ್ನಕೇಶವನ ದೇಗುಲ. ಸ್ತಂಭರಾಜಿಗಳಂತೆ ಅಲ್ಲಲ್ಲಿ ಇಬ್ಬಿಬ್ಬರು ನರ್ತಕರು ಪರಸ್ಪರ ಬೆನ್ನಿಗೆ ಬೆನ್ನುತಾಕಿಸಿ ತೋಳುಗಳಲ್ಲಿ ತೋಳು ಜೋಡಿಸಿ ಕಂಬದಂತೆ ನಿಂತಿರುತ್ತಾರೆ. ಅವರಿಗೆ ಅಂಟಿಕೊಂಡಂತೆ ಪ್ರೇಕ್ಷಕರ ಕಡೆ ಮುಖ ಮಾಡಿಕೊಂಡು, ಪ್ರತಿಕಂಬದ ಮುಂದೆಯೂ ಓರೊರ್ವ ನರ್ತಕಿಯು ನೃತ್ಯ ಭಂಗಿಯಲ್ಲಿ ಶಿಲಾಬಾಲಿಕೆಯಂತೆ ನಿಂತಿರುತ್ತಾಳೆ. ಈ ಬಗೆಯ ನಾಲ್ಕಾರು ಮಾನವ ಸ್ತಂಭಗಳು ಮತ್ತು ಹತ್ತಾರು ಮದನಕೈ ವಿಗ್ರಹಗಳು ಅಲ್ಲಲ್ಲಿ. ಮಧ್ಯ ಭಾಗದಲ್ಲಿ ವರ್ತುಲಾಕಾರದಲ್ಲಿ ನಿಂದ ನರ್ತಕಿಯರು ಸುವಿಶಾಲ ನವರಂಗ ನಿರ್ಮಿಸಿರುತ್ತಾರೆ. ಆ ಹಿಂದೆ ತಮ್ಮ ತಮ್ಮ ತೋಳುಗಳನ್ನು ಚಾಚಿದ ನರ್ತಕಿಯರು ಶುಕನಾಸಿ ದ್ವಾರ ನಿರ್ಮಾಣಗೈದಿರುತ್ತಾರೆ. ಒಳಗಡೆ ಗರ್ಭಗುಡಿ. ಅಲ್ಲಿ ಎತ್ತರವಾದ ಪೀಠದ ಮೇಲೆ ಶ್ರೀಚೆನ್ನಕೇಶವ ಮೂರ್ತಿ ! ಮೂರ್ತಿಯ ಮುಂಭಾಗದಲ್ಲಿ ಶಿಲ್ಪಿ ಜಕ್ಕಣಾಚಾರ್ಯ ಉಳಿ ಸುತ್ತಿಗೆ ಹಿಡಿದು ಕುಳಿತು ಕಟ್ ಕಟ್ ಶಬ್ದಗೈಯುತ್ತಿರುತ್ತಾನೆ.

ತೆರೆ ಸರಿಯುವ ಮೊದಲೇ ಮಂಗಳ ಶ್ಲೋಕ ಮಟಿಯುತ್ತಿರುತ್ತದೆ. ನಾಲ್ಕಾರು ಜನ ನರ್ತಕಿಯರು ದೇವಾಲಯದ ಒಳ ಹೊರಗೆ ಅಡ್ಡಾಡುತ್ತಿರುತ್ತಾರೆ. ಮಸಕು ಮಸುಕಾಗಿದ್ದ ರಂಗ ಕ್ರಮೇಣ ಬೆಳಕಾಗುವುದು.

ಯಂಶೈವಾಸ್ಸಮುಪಾಸತೇ ಶಿವ ಇತಿ ಬ್ರಹ್ಮೇತಿ ವೇದಾಂತಿನೋ
ಬೌದ್ಧಾ ಬುದ್ಧ ಇತಿ ಪ್ರಮಾಣ ಪಟವಃ ಕರ್ತೇತಿ ನೈಯಾಯಿಕಾಃ
ಅರ್ಹಶ್ಚೇತಿ ಹ ಜೈನ ಶಾಸನ ಮತಿಃ ಕರ್ಮೇತಿ ಮೀಮಾಂಸಕಾಃ
ಸ್ಸೋಯಂ ವೋ ವಿದಧಾತು ವಾಂಛಿತಫಲಂ ಶ್ರೀಕೇಶವಸ್ಸದಾ ॥

– ಶ್ಲೋಕ ಮುಗಿಯುತ್ತಿದ್ದಂತೆಯೇ ಹಾಡು ಆರಂಭವಾಗುತ್ತದೆ. ನರ್ತಕ
ನರ್ತಕಿಯರು ಹಾಗೂ ಭಾವ ಭಂಗಿಗಳಲ್ಲಿ ನಿಂತಿದ್ದ ದೇಗುಲದ ದ್ವಾರ
ಸ್ತಂಭಗಳೆಲ್ಲವೂ ನರ್ತಿಸ ತೊಡಗುತ್ತವೆ. ಇಡೀ ದೇವಾಲಯವೇ ನೃತ್ಯ
ವಿಲಾಸದಲ್ಲಿ ಬೆಳಕಿನ ವಿನ್ಯಾಸದೊಡನೆ ಬೆಳಗುತ್ತದೆ. ಬೀಜಿಮ್ ವೇಳೆಯಲ್ಲಂತೂ

ಗೀತ ನರ್ತನಗಳು ಗಗನ ಮುಟ್ಟುತ್ತವೆ. ಅತ್ಯದ್ಭುತ ವೈಭವೋಪೇತ
ನರ್ತನವಾಗಿರಬೇಕು. –

**ಹಾಡು** :

ಶೃಂಗಾರಮಾಗಿಹುದು ಬಂಗಾರ ದೇಗುಲವು
ಶ್ರೀ ಚೆನ್ನಕೇಶವನ ವೈಕುಂಠವು ॥ ಪ ॥
ಕಲ್ಲರಳಿ ಹೂವಾಗಿ ಮಂಗಳದ ಮನೆಯಾಗಿ
ತಿಂಗಳಿನ ತೆನೆಯಾಗಿ ತೊನೆಯುತಿಹುದು ॥ ಅನು. ಪ ॥
ನಕ್ಷತ್ರದಕ್ಷಿಯೊಲು ಅಕ್ಷಯನ ಗುಡಿಪಾಯ
ಯಕ್ಷಕನ್ನಿಕೆಯರ ನಾಟ್ಯ ಜಾಲ
ಹೊಯ್ಸಳ ಶೈಲಿಯ ವೈಜಯಂತಿಯೊ ಎನೆ
ತಲೆ ಎತ್ತಿ ನಿಂತಿರುವ ಕಲಶ ಶೈಲ ॥ ೧ ॥
ದ್ವಾರ ಪಟ್ಟಾವಳಿಯ ಮೇಲುಕಟ್ಟಿನ ಭಾರ
ಇಕ್ಕೆಲದ ಒಕ್ಕಲು ಜಯ ವಿಜಯರು
ಸ್ತಂಭ ಸ್ತಂಭದ ರಾಜಿ ನಡುವೆ ತೇಜಃ ಪುಂಜಿ
ಭುವನೇಶ್ವರೀ ದೇವಿ ತಾ ಮೆರೆವಳು ॥ ೨ ॥
ನವರಂಗ ಬದಿಯಲ್ಲಿ ವೈಕುಂಠ ಶ್ರೀ ದ್ವಾರ
ಸುತ್ತ ಮುತ್ತೆಲ್ಲವು ಜಾಲಂಧ್ರಗಳು
ಶುಕನಾಶಿ ಗರ್ಭಗುಡಿ ಇಕ್ಕೆಲವು ಕಲೆಯ ಕುಡಿ
ಸೌಮ್ಯ ಕೇಶವನ ರಮ್ಯ ದೇವಾಲಯವು ॥ ೩ ॥

**ಜಕ್ಕಣ** : (ಗರ್ಭಗುಡಿಯ ಶ್ರೀ ಚೆನ್ನಕೇಶವನ ಶಿಲ್ಪದ ಮುಂದೆ ಕುಳಿತು)
ಜಗದ್ರಕ್ಷಕನೆ, ಅಣುರೇಣು ತೃಣ ಕಾಷ್ಠದಲ್ಲೂ
ನೂತನ ಚೇತನವಾಗಿ ಸ್ಪಂದಿಸುವ ಓ ಪರಾತ್ಪರ ಶಕ್ತಿಯೇ !
ಶ್ರೀ ಚೆನ್ನಕೇಶವನೆ, ಲೋಕ ವಸ್ತುಗಳಿಗೆ ರೂಪ ಕೊಟ್ಟವ ನೀನು
ನಿನಗಿಂದು ಹುಲುಮನುಜ ಮುಖಭಾವ ತಿದ್ದುವನು !
ಜಗಕೆಲ್ಲ ಕಣ್ಣಾದ ನಿನಗೆ ದೃಷ್ಟಿಯನು ದಾನಗೈಯುತಲಿಹನು !
ಇದಕೆ ಕ್ಷಮೆಯಿರಲಿ. ಓ ತಂದೆ, ಶಾಂತಲಾ ದೇವಿಯರ ಆಸೆ
ಹಣ್ಣಾಗುವಂತೆ ಮಾಡು !
ನನ್ನೀ ಬೆರಳುಗಳಿಗೆ ಚೈತನ್ಯ ನೀಡು !
(ಹಾಡು ಹರಿಯುವಾಗ ನರ್ತಕ ನರ್ತಕಿಯರ ನಾಟ್ಯ ನಡೆಯುವುದು)

**ಹಾಡು** :

ಶ್ರೀ ಚೆನ್ನಕೇಶವಾ
ಸಕಲ ಕಳಾರ್ಣವ ॥
ವಿಮಲ ಚರಣತಲ ಸನ್ನುತ ವಿಭವಾ ॥ ಶ್ರೀ ಚೆನ್ನಕೇಶವಾ ॥
ಶಂಖ ಚಕ್ರಧರ ಶಾಲಿನಿ ಶಾರ್ಙ್ಗವ
ದೀರ್ಘಾಲಿಂಗನ ಪುಣ್ಯ ಪ್ರಭಾವ
ಕೋಟಿ ಸೂರ್ಯ ಪ್ರಭಾಮಯ ಮಂಡಲ
ವರದ ಹಸ್ತ ಶ್ರೀ ಕರುಣಾ ಪ್ರಾಂಜಲ ॥ ಶ್ರೀ ಚೆನ್ನಕೇಶವಾ ॥
ಅಣುರೇಣುವಿನ ಅಂತರ್ಯ ಸದನ
ಮುಗ್ಧ ಮನೋಹರ ಸೌಂದರ್ಯ ವದನ
ವಿಶ್ವ ಮೋಹನ ಸಕಲ ಕಾರಣ
ತ್ರಿಜಗದ್ವಂದಿತ ಪಾವನ ಚರಣ ॥ ಶ್ರೀ ಚೆನ್ನಕೇಶವಾ ॥

(ಹಾಡುತ್ತಲೆ ಶಿಲ್ಪಕ್ಕೆ ದೃಷ್ಟಿ ದಾನ ಮಾಡುವುದರಲ್ಲಿ ಮಗ್ನನಾಗಿರುತ್ತಾನೆ. ಆ ವೇಳೆಗೆ ಲಕ್ಷ್ಮಲೆ ಮತ್ತು ಬೊಮ್ಮಲೆಯರು ಆಗಮಿಸುವರು. ನರ್ತಕ ನರ್ತಕಿಯರು ನಮಿಸಿ ನಿಲ್ಲುವರು)

**ಜಕ್ಕಣ :** (ತನಗೆ ತಾನೇ ಅನನ್ಯ ಭಕ್ತಿ ಭಾವದಿಂದ ಕನ್ನಡ ಶ್ಲೋಕವನ್ನು ಕುರುಕುತ್ತಿರುತ್ತಾನೆ.)

ಯಾವ ದೇವನ ಶೈವರರ್ಚಿಪರೊ ಶಿವನೆಂದು
ಬ್ರಹ್ಮನೆಂದಾವನಂ ವೇದಾಂತಿಗಳು ಭಜಿಸುವರೊ
ಬುದ್ಧನೆಂದೊರೆದು ಬೌದ್ಧರಾರಾಧಿಪರೊ
        ಪ್ರಮಾಣ ಸಮರ್ಥರಾ ನೈಯಾಯಿಕರು ಕರ್ತನೆಂದು
ಆವನಂ ಜೈನರರ್ಹಂತನೆಂದೆನುತ ಪೂಜಿಪರೊ
        ಕರ್ಮಮೆಂದೆನುತೆ ಮೀಮಾಂಸಕರುಪಾಸಿಸುವರೊ
ಅವನೇ ಅವನೇ ಆ ದೇವ ದೇವನೆ ಆದ ಶ್ರೀಕೇಶವೇಶನು ನಿಮ್ಮ
        ಇಷ್ಟಾರ್ಥಗಳನೆಂದೂ ದಯೆಗೆಯ್ಯುತಿರಲಿ ॥

**ಲಕ್ಷ್ಮಲೆ :** ಆಚಾರ್ಯರೆ, ಓ ಜಕ್ಕಣಾಚಾರ್ಯರೆ !
ಇದೋ ನೋಡಿ, ನಾವು ಬಂದಿಹೆವು

**ಬೊಮ್ಮಲೆ:** ಬಂದರೇನವಗೆ ಭಯವುಂಟೆ ! ಅಕ್ಕಾಜಿ
ಕಲ್ಲುಕುಟಿಗನಿಗೆಷ್ಟು ಅಹಮಿಕೆಯು ನೋಡಿದಿರಾ

**ಲಕ್ಷ್ಮಲೆ :** ಇರಲಿ ಬಿಡಿ ಬೊಮ್ಮಲಜಿ, ಕಲೆಗಾರರೇ ಹಾಗೆ !
ಮತ್ತೆ ಕೂಗಿದರಾಯ್ತು. ಸ್ಥಪತಿಗಳೇ...

**ಜಕ್ಕಣ :** ಓಹ್ ! ನಾಡಾಳುವ ಪ್ರಭು ಪತ್ನಿಯರು !
ದಯಮಾಡಿಸಬೇಕು ದಯಮಾಡಿಸಬೇಕು !
ಪಟ್ಟಮಹಿಷಿಯರ ಜೊತೆಗೂಡಿ ಆಗಮಿಸುವಿರಿ
ಎಂದು ಭಾವಿಸಿದ್ದೆ. ತಪ್ಪಾಯ್ತು. ಈ ಸಾಮಾನ್ಯನಿಂದ
ಪ್ರಭುತ್ವಕ್ಕೇ ಅಪಚಾರವಾಯ್ತು. ಮನ್ನಿಸಬೇಕು ಕೃಪೆದೋರಿ.

**ಬೊಮ್ಮಲೆ:** ಸ್ಥಪತಿ, ಏನೇನಗೈದಿರುವೆ ? ಕೈವಾಡವೆಸಗಿರುವೆ ?

**ಜಕ್ಕಣ :** ಎಸಗಲಿಕೆ ನಾನಾರು ? ಮಿಸುಗಲಿಕೆ ನಾನಾರು ?
ತಾಯಿ, ಎಲ್ಲಕೂ ಅವನು ಕಾರಣನು !
ನೋಡುವವನೂ ಅವನೆ, ನೀಡುವವನೂ ಅವನೆ !
ಇದೊ ಬನ್ನಿ, ಗರ್ಭಗುಡಿ ಬಳಿ ಬನ್ನಿ....
ನೋಡಿದಿರಾ ಸ್ವಾಮಿಯನು ! ಇವನು ಮಂಗಳ ಮೂರ್ತಿ,
ಸೌಮ್ಯನಾಯಕಿಯ ಪತಿ, ಶ್ರೀಚೆನ್ನಕೇಶವ ದೇವ
ನೂರಾರು ಶಿಲ್ಪಿಗಳು ದೇಗುಲವ ಕಟ್ಟಿದರು
ನಾನಿವನ ನಿರ್ಮಿಸಲು ಮಾಸವನೆ ತಳೆದೆ !
ನಿನ್ನೆ ಸ್ನಾನಾದಿಗಳ ಮುಗಿಸಿ, ಉಪವಾಸದಿಂದಿರ್ದು
ನನ್ನ ಪರಮಾರಾಧ್ಯ ದೈವ ಆ ವಿಶ್ವಕರ್ಮ ಬ್ರಹ್ಮನನು
ಧೇನಿಸುತ ವ್ರತ ಪೂಜೆ ಮುಗಿಸಿದೆನು.
ತದನಂತರೀ ಸ್ವಾಮಿ, ಚೆನ್ನಕೇಶವನ ಬಳಿ ನಿಂದು
ಕರಣಗಳ ಸೆರೆ ಹಿಡಿದು ಅಷ್ಟದಳ ಕಮಲದಲಿ
ಇಷ್ಟದೈವವ ನಿರಿಸಿ ಕುಂಡಲಿನಿಯ ಕೆಣಕಿ
ಬ್ರಹ್ಮಯೋಗದೊಳಿದ್ದು, ನನ್ನಾಂತರ್ಯದಾ ಚೈತ್ಯ
ಚೇತನವನ್ನು ಸ್ಪಷ್ಟ ಜಾಗ್ರತೆಗೊಳಿಸಿ ಶಿಲ್ಪಶ್ರೀಯೊಳು

ನಿಲಿಸಿ, ದೃಷ್ಟಿದಾನವಗೈದು, ಪ್ರಾಣ ಪ್ರತಿಷ್ಠೆಯನು
ನೆರವೇರಿಸಿದೆನಿಂದು. ಈ ಮೂರ್ತಿ ಜೀವಂತ ಶಿಶುವಾಗಿ
ಶಶಿಯಾಗಿ, ಚೆನ್ನಕೇಶವನಿಹನು ಬನ್ನಿ ತಾಯಿ, ದಯಮಾಡಿ.

**ಬೊಮ್ಮಲೆ:** ಅದಿರಲಿ ಜಕ್ಕಣರೆ, ನಿಮ್ಮ ಸೌಮ್ಯಕೇಶವನ ಪಾದದಡಿ ಇಹುದೇನು?

**ಜಕ್ಕಣ :** ಪೀಠ ! ಎತ್ತರದ ಬಿತ್ತರದ ಭದ್ರಮಂಗಲ ಪೀಠ

**ಬೊಮ್ಮಲೆ:** ಅದು ಗೊತ್ತು; ಪೀಠದೊತ್ತಿನಲಿಹುದು, ಅದು ಏನು ಫಲಕ ?
ಅಕ್ಷರದ ರೂಪದಲಿ ಕೊರೆದಿರುವುದೇನು ?

**ಜಕ್ಕಣ :** ಅದು ಕವಿ ಕೊಟ್ಟ ಅರ್ಪಣದ ಶ್ಲೋಕ.

**ಬೊಮ್ಮಲೆ:** ತುಸು ಓದೋಣವಾಗಲಿ !

**ಜಕ್ಕಣ :** ರಾಣಿ, ಮಹರಾಣಿ, ಶ್ರೀ ಪಟ್ಟದರಸಿ ಶಾಂತಲಾ ದೇವಿಯರು,
ಶ್ರೀವಿಷ್ಣುವರ್ಧನರ ಮನೋರಾಗ ಸಾಗರವ
ವರ್ಧಿಸುವ ಚಂದ್ರಲೇಖೆ, ಭರತಾಗಮದ ತಿರುಳು,
ಮಂಗಳಾಭ್ಯುದಯಕರ ಲಕ್ಷಣಗಳಭಿರಾಮೆ,
ವಿನಯದಿಂ ನಮಿಸುತಿಹ ರಾಜಪತ್ನೀ ಜನರ
ಲಂಬ ನೀಲಾಳ ಕಾಳಂಬಿ ಪದನಖ ಕಿರಣೆ
ಸವತಿಗಂಧವಾರಣೆ.........

**ಬೊಮ್ಮಲೆ:** ಸಾಕು ನಿಲ್ಲಿಸು ಸ್ಥಪತಿ...... !
**'ಸವತಿಗಂಧವಾರಣೆ !,** ಏನಿಹುದು ಅದರರ್ಥ ?

**ಜಕ್ಕಣ :** ತಾವು ತಿಳಿದವರು. ಆದರೂ ಬೆಸಸಿದಿರಿ ಹೇಳುವೆನು :
ಸವತಿಯರು ಸೊಕ್ಕಿದರೆ.. ಅವರಿಗೆ ಹಿರಿಯರಸಿ ಮದ್ದಾನೆ !
ಅಂತೆನೆ.........

**ಬೊಮ್ಮಲೆ:** ಮುಂದಿನದು ಬೇಕಿಲ್ಲ ಸ್ಥಪತಿ, ಮಹರಾಣಿಯರು ಮದ್ದಾನೆಯಾದರೆ
ಅದರ ಕುಂಭಸ್ಥಳವ ಬಗೆದು ಇಬ್ಬಗಿ ಮಾಡಿ ರತ್ನಗಳ ಸೂರೆಗೊಳ್ಳುವ
ಹಸಿದ ಸಿಂಹಗಳಾವು ! ತಿಳಿಯಿತೆ ? ಇರಲಿ ; ಅಕ್ಕಾಜಿ,
ಅರ್ಥವಾಯಿತು ಶ್ಲೋಕ ; ಹೆಚ್ಚೇನುಬೇಕು ?

**ಲಕ್ಷ್ಮಲೆ :** ಬೇಕಿಲ್ಲ, ಕೈಯಲ್ಲಿಹ ಹುಣ್ಣಿಗೆ ಕನ್ನಡಿಯ ನೆರಬೇಕೆ?...
(ಆವೇಶ ಭರಿತಳಾಗಿ)
ಎಲಾ ಸೊಕ್ಕೆ ! ಎನಿತುಗ್ರವಾಗಿಹುದು ನಿನ್ನತುಳ ಸಾಮರ್ಥ್ಯ !
ಹೂಂ ! ಇವಳೊಬ್ಬಳೇ ವಿಷ್ಣುವರ್ಧನ ಮನೋರಾಗ
ಸಾಗರವನಭಿವರ್ಧಿಸುವ ಚಂದ್ರಲೇಖೆಯೆ ?
ಇವಳೊಬ್ಬಳೇ ಮಂಗಳಾಭ್ಯುದಯಕರ
ಲಕ್ಷಣಗಳಭಿರಾಮೆಯೆ? ಇವಳೊಬ್ಬಳೇ
ಸರ್ವಮಂಗಳಸ್ಥಿತಿಯುತೆಯೆ ? ಹಾಗಾದರೆ ನಾವು ?

**ಬೊಮ್ಮಲೆ:** ಬಳಿದೊತ್ತುಗಳು ! ಪಟ್ಟ ಮಹಿಷಿಯ ಕೈಗೆ ಕಾದು
ಕೂಳುಣುವವರು ! ಹೆಸರಿಗಷ್ಟೇ ರಾಣಿಯರು ನಾವು !

**ಲಕ್ಷ್ಮಲೆ :** ಇದು ಸಹಿಸಲಳವಲ್ಲ ! ಈ ಬಾಳು ಬೇಕಿಲ್ಲ !

**ಜಕ್ಕಣ :** ಸನ್ನಿಧಾನವು ನನಗೆ ಅಪ್ಪಣೆಯನೀಯುವರೆ,
ಒಂದು ಮಾತಿನ ಅರಕೆ ಮುಂದಿಡಲು ಬಯಸುವೆನು !

**ಇಬ್ಬರೂ :** ಏನದು ?

**ಜಕ್ಕಣ :** ತಾಯಿಯರಿರಾ, ಶ್ಲೋಕವನು ಕೊಟ್ಟವನು ಓರ್ವ ಕವಿ.
ರಚನೆಯಲಿ ಉತ್ಪ್ರೇಕ್ಷೆ ಇರಬಹುದು.

ಇದು ಶಾಂತಲಾ ದೇವಿಯರಿಗರಿಯದು.

**ಲಕ್ಷ್ಮಲೆ :** ಅರಿಯದಿದ್ದರೆ ಏನು ? ಮರೆಯಲಾಗದ ಪೆಟ್ಟು !
ಸ್ಥಪತಿ, ಸೀಂಟಿ ಕಳೆಯಿರಿ ಆ ಫಲಕದಾ ಮೇಲಿರುವ ಶ್ಲೋಕವನು.

**ಬೊಮ್ಮಲೆ:** ಉಹುಂ... ಅದು ಬೇಡ ಜಕ್ಕಣಾ,
ಶಾಂತಲೆ ಎಂಬಲ್ಲಿ ಲಕ್ಷ್ಮಲೆ ಎಂದಿರಲಿ, ಅಷ್ಟೆ ಸಾಕು.
ಗಂಡುಮಗು ಉಳ್ಳವರು, ಇವರೆ ಪಟ್ಟದ ರಾಣಿ !
ಭವಿತವದ ರಾಜಮಾತೆಯರಿವರು

**ಜಕ್ಕಣ :** ಮಾತೆಯರ ಅಡಿಗಳಲಿ ಮನ್ನಣೆಯ ಬೇಡುವೆನು !
ಸನ್ನಿಧಿಯ ಆಜ್ಞೆಯಿದು ನನಗೆ ಮಾನ್ಯ. ಅಂತೆಯೇ
ಪಟ್ಟದರಸಿಯರೊಂದೆ ಹೆಸರಲ್ಲಿ ಸಂಕಲ್ಪ ಕೊಂಡಿಹೆನು.
ಓಂಕಾರ ನುಡಿದಿಹೆನು ಕಡೆದಿಹೆನು.
ಈ ಮೀಸಲಿನ ಶಿಲ್ಪಕ್ಕೆ ಹೇಸಿಗೆಯನೆಸಗಲಾರೆ !

**ಲಕ್ಷ್ಮಲೆ :** ಸ್ಥಪತಿ, ನಮ್ಮಾಜ್ಞೆ ಹೇಸಿಗೆಯೆ ?

**ಶಾಂತಲೆ :** (ಆ ವೇಳೆಗೆ ಸರಿಯಾಗಿ ಶಾಂತಲೆ ರಾಜಕುಮಾರ
ವಿಜಯನಾರಸಿಂಹನೊಡನೆ ಪ್ರವೇಶಿಸಿ)
ದೇವ ದೇವನ ಶ್ರೀಚೆನ್ನಕೇಶವನ ಗರ್ಭಗುಡಿ ಇದಿರಲ್ಲಿ
ಹೇಸಿಕೆ ಎಂಬ ಅಪಶಬ್ದ ಬಂತೇಕೆ ? ಹೇಳಿ ಸೋದರಿಯರೆ.

**ಬೊಮ್ಮಲೆ:** ಹ ಹ್ಹ ಹ್ಹ ಹ್ಹಾ ! ಇದು ಭಾಗ್ಯ ಇದು ಭಾಗ್ಯ ! ಸವತಿಯರು
ಸೋದರಿಯರಾದೆವಲ್ಲಾ ! ಇದೆ ನಮ್ಮ ಭಾಗ್ಯ !!

**ಲಕ್ಷ್ಮಲೆ :** (ತನ್ನ ಮಗ ನರಸಿಂಹನನ್ನು ತನ್ನತ್ತ ಸೆಳೆಯುತ್ತಾ)
ನರಸಿಂಹ ಇತ್ತ ಬಾ ಕಂದ, ಮದ್ದಾನೆ ತುಳಿದೀತು !

**ಶಾಂತಲೆ :** ಏನಿದೀವೈಚಿತ್ರ್ಯ ! ನನಗೊಂದೂ ತಿಳಿಯದಿದೆ !
ತಂಗಿ, ಎಲ್ಲಿಹುದು ಮದ್ದಾನೆ ? ತುಳಿವುದೇತಕೆ ಹೇಳು ?

**ಲಕ್ಷ್ಮಲೆ :** ಸ್ಥಪತಿವರ್ಯರು ಇದಕ್ಕೆ ಉತ್ತರವನೀಯುವರು.

**ಶಾಂತಲೆ :** ಜಕ್ಕಣಾಚಾರ್ಯರೆ....

**ಜಕ್ಕಣ :** ಮಾತೆಯರೆ, ಬಿನ್ನಹ. ಓರ್ವ ಪ್ರತಿಭಾಶಾಲಿ ಕವಿವರ್ಯ,
ತಮ್ಮ ವ್ಯಕ್ತಿತ್ವವನು ಸ್ಪಷ್ಟ ಅರಿತವನು, ತಮ್ಮನ್ನು
'ಸವತಿ ಗಂಧ ಹಸ್ತಿ' ಎಂದು ಶ್ಲೋಕಿಸಿದ್ದಾನೆ. ಅದು.....

**ಶಾಂತಲೆ :** ಅರ್ಥವಾಯಿತು ! ಅಷ್ಟೆತಾನೆ, ಸ್ಥಪತಿಗಳೆ
'ಶಾಂತಯಾ' ಎಂಬೆಡೆ, ಲಕ್ಷ್ಮಯಾ, ಎಂದು ತಿದ್ದಿ ಶಾಸನವ ರಚಿಸಿ !
ಮಂಗಳ ಮುಹೂರ್ತದಲಿ ಮನಸು ಮುರಿವುದು ಬೇಡ.

**ಜಕ್ಕಣ :** ಮಹಾಮಾತೆಯರು, ಕ್ಷಮಿಸೋಣವಾಗಲಿ.
ತಮ್ಮ ಹೆಸರಲಿ ಸತ್ಯ ಸಂಕಲ್ಪ ಸ್ವೀಕರಿಸಿ
ಮೂರ್ತಿ ಶಿಲ್ಪಕೆ ನಾನು ಓಂಕಾರ ಬರೆದೆ. ಈಗದನು
ಬದಲಿಸಲು ಶಿಲ್ಪ ಶಾಸ್ತ್ರವು ತಾನು ಒಪ್ಪದಿಹುದು.

**ಬೊಮ್ಮಲೆ:** ಜೋಯಿಸನ ಇಚ್ಛೆಯೊಲು
ನವಗ್ರಹಗಳೇ ಅವನ ಕೈಯಲ್ಲಿ
ಮನೆಯಿಂದ ಮನೆಗೆ ಸುತ್ತುತ್ತವಂತೆ !
ಕಲಾವಿದನ ಕೈಯ ಉಳಿ ಕವಿಯ
ಶಬ್ದವನೊಂದ ತಿದ್ದುವುದು ಅಸಾಧ್ಯವೆ ?

**ಜಕ್ಕಣ :** ಅಸಾಧ್ಯ ಅಸಾಧ್ಯ ಅಸಾಧ್ಯ

ಒಬ್ಬ ತಾಯಿಯ ಗರ್ಭಧರಿಸಿ ಬೆಳೆಸಿದ ಶಿಶುವ
ಜನನವಾಗುವ ವೇಳೆ ಬೇರೊಬ್ಬ ತಾಯ ಗರ್ಭದೊಳಿರಿಸೆ
ಸಾಧ್ಯವಪ್ಪುದೆ ಜನನಿ ?

**ಬೊಮ್ಮಲೆ:** ಇದಕಿಂತ ಮಿಗಿಲಾದ ಆಶ್ಚರ್ಯ ಬೇರೊಂದಿಲ್ಲ ಜಗದಲ್ಲಿ !
(ನಗುತ್ತಾ) ಕಲ್ಲುಬೊಂಬೆ ಶಿಶುರೂಪು ತಳೆವುದಂತೆ !
ಸ್ತ್ರೀಯ ಗರ್ಭದಲದುವೆ ಬೆಳೆವುದಂತೆ ಶಿಶುವಿನೋಪಾದಿಯಲಿ !

**ಜಕ್ಕಣ :** ಪಟ್ಟಮಹದೇವಿಯರೆ, ಕಲ್ಲಿನಲಿ ಕೊಡೆಯುತಿಹ ಈ ಮೂರ್ತಿ
ಉಳಿದವರಿಗೇನೊ ಕಲ್ಲೆ ! ಆದರಿದು ನನಗೆ ಕಲ್ಲಲ್ಲ !
ಜ್ಯೋತಿರಸವೇ ಘನಿಸಿ ಕೈಕಾಲು ಖಂಡ ನರ ಬಾಯ್ಮೂಗು
ಕಣ್ಣು ಕಣ್ಣೆಮೆಯಾಗಿ ರೂಪನ್ನೆ ಧರಿಸಿಹುದು. ನಿಮ್ಮ
ಪಾವನ ಗರ್ಭದಲಿ ಬೆಳೆಯ ಬಂದೊಂದು ಹಸುಳೆ ಇದು.
ಗರ್ಭದಲಿ ವಿಶ್ವಕರ್ಮನ ಅಂಶ ಕುಳ್ಳಿರುತ, ಹಗಲೆಲ್ಲ
ಇರುಳೆಲ್ಲ ನವಮಾಸ ಹಸುಳೆಯನು ತಿದ್ದುವಂದದಿ ನಾನು
ತಿದ್ದಿಹೆನು. ಕರ್ಮಶಾಲೆಯನು ತಾಯವರ ಪ್ರಾಂಜಲದ
ಗರ್ಭವೆಂದೇ ತಿಳಿದು ಅದರೊಳಗೆ ರಚಿಸುತಿಹ ವಿಶ್ವಕರ್ಮ
ನಾನಾಗಿ ಮೂರ್ತಿಯನು ತಿದ್ದಿದೆನು. ಅದರಿಂದ ಯಾವುದೇ
ನಿಷ್ಠುರದ ನುಡಿ ಇರಲಿ, ಕಷ್ಟವೇ ಬರಲಿ, ಗರ್ಭದಲಿ ಎಡೆಗೊಟ್ಟ
ಮಾತೆಯರೆ, ತಾವೆ ಶಿಶುಗೆ ಜನ್ಮವನಿತ್ತು ಹಸುಳೆಯನು ಉಳಿಸಿ !

**ಶಾಂತಲೆ :** ಲಕ್ಷ್ಮಲಾ ದೇವಿಯರ ಹೆಸರಿನಕ್ಕರವ ಆ ಪೀಠದಲಿ
ಕೆತ್ತಿದರೆ ಈ ಮೂರ್ತಿ ಉಳಿಯದೆ !

**ಜಕ್ಕಣ :** ಎಂದಿಗೂ ಉಳಿಯದೌ ಜನನಿ !
ಇದು ಸಾಮಾನ್ಯ ಶಿಲ್ಪವಲ್ಲವ್ವ !
ಗರ್ಭಾವತರಣ ಸಮಯದಲಿ ತೀರ್ಥಂಕರಾತ್ಮವದು
ದೇವಿಯರ ಮುಖದ ಮೂಲಕ ಗರ್ಭಕವತರಿಸುವಂತೆ
ಜಗನ್ನಾಟಕ ಸೂತ್ರಧಾರಿ ಶ್ರೀ ಚೆನ್ನಕೇಶವನ ಚೈತನ್ಯವೇ ಮೈತಳೆದು
ನಿಂದಿಹುದು ಮೂರ್ತಿಯಲಿ !
ತಮ್ಮ ಪುಣ್ಯನಾಮದಲಂದು ಉಳಿಯ ಮೇಲೆತ್ತಿದೆನು
ಬಸುರಿಗೂ ಹೆಸರಿಗೂ ಸಂಬಂಧ ಸೂತ್ರವಿದೆ
ಹೊಕ್ಕುಳ ಬಳ್ಳಿ ಒಳಗೆ ಬೆಳೆದಂತೆ ! ಅದ
ಹರಿಯಬಾರದು ತಾಯಿ ! ಭ್ರೂಣಹತ್ಯೆಯು ಪಾಪ !

**ಲಕ್ಷ್ಮಲೆ :** ಎಲ್ಲ ಗೊಡ್ಡು ಪುರಾಣ ! ಮೌಢ್ಯಕ್ಕೆ ಮತಿಯಿಲ್ಲ !

**ಬೊಮ್ಮಲೆ:** ಅಕ್ಕಾಜಿ, ಸ್ಥಪತಿಗಳ ಕಲ್ಪನೆಯು ಶಿಲ್ಪಕ್ಕಷ್ಟೇ
ಮೀಸಲೆಂದು ತಿಳಿದಿದ್ದೆ ! ರಾಜಕಾರಣದಲ್ಲೂ
ಅವರು ಪರಿಣತರೆಂದು ಈಗ ತಿಳಿದೆ.

**ಜಕ್ಕಣ :** ಇದರಲ್ಲಿ ರಾಜಕೀಯವೇನಿದೆ ತಾಯಿ ! ಇದ್ದರೆ
ಯಾರ ಸ್ವಾರ್ಥಕ್ಕಾಗಿ ? ಅದನಾದರೂ ಅರುಹಬಹುದಲ್ಲ !

**ಬೊಮ್ಮಲೆ:** ಶಾಂತಲಾದೇವಿಯವರ ಹೆಸರನ್ನು ಆಕಲ್ಪಾಂತ
ಚಿರಸ್ಥಾಯಿಗೊಳಿಸುವುದು ! ಅದಕ್ಕಿಂತ ಬೇಕೇನು ಬೇರೆ ಸ್ವಾರ್ಥ ?

**ಜಕ್ಕಣ :** ಅಲ್ಲಲ್ಲ, ಭಗವದ್ ಭಕ್ತಿಯನು ಸಾಕಾರಗೊಳಿಸಬೇಕೆಂಬ ಹಿರಿ ಆಸೆ
ತಾಯಿಯದು. ಇದರಲ್ಲಿ ಸ್ವಾರ್ಥ ಎಳ್ಳಷ್ಟೂ ಇಲ್ಲ ದೇವಿಯರೆ.

**ಲಕ್ಷ್ಮಲೆ :** ಸ್ಪಷ್ಟ ತಿಳಿದಿದೆ ಸ್ಥಪತಿ, ಧರ್ಮಕಾರಣದ ಹಿಂದೆ

ಅಡಗಿರುವ ನಿಮ್ಮ ರಾಜಕಾರಣ !
ಬೆಕ್ಕು ಕಣ್ಮುಚ್ಚಿ ಹಾಲು ಕುಡಿವಾಗ ತನ್ನನಾರೂ ನೋಡರೆಂಬುದಂತೆ !
ಅಂತಾಯ್ತು ನಿಮ್ಮೀರ್ವರೊಳಸಂಚು !

**ಶಾಂತಲೆ :** ಅಯ್ಯೋ ದೈವವೇ ! ಕಲ್ಪನೆಗೆ ಇಷ್ಟು
ಬಣ್ಣಗಳು ಇಹುವೆಂದು ನಾನು ತಿಳಿದಿರಲಿಲ್ಲ

**ಬೊಮ್ಮಲೆ:** (ಅಣಕಿಸುತ್ತಾ) ನಟನೆ, ನಾಟ್ಯಕ್ಕೆ ಮೀಸಲಿರಬೇಕು
ವಾಸ್ತವಕ್ಕಲ್ಲ ! ಅಲ್ಲವೆ ಅಕ್ಕ ! ದಳದೆರೆದ ಹೂವಡಿಯ
ಮಿಡಿನಾಗರಂತೆ ! ಗೋಮುಖ ವ್ಯಾಘ್ರತನ !!

– ಶಾಂತಲೆಯ ಕಣ್ಣುಗಳು ಕೆಂಪಾಗುವುವು; ಹುಬ್ಬು ಗಂಟಿಡುವುದು.
ತೋಳೆರಡೂ ಅಗಲ ತೆರೆದು ಕೊಳ್ಳುವುವು. ಕಾಲುಗಳನ್ನು
ಅಗಲಿಸಿ ನಿಂತು "ಸ್ಥಪತಿಗಳೇ" ಎಂದು ಗರ್ಜಿಸುವಳು.
ಅವಳ ಗರ್ಜನೆಗೆ ತಕ್ಕಂತೆ ಕಿವಿಗಡಚಿಕ್ಕುವಂತೆ ವಾದ್ಯಗಳ ಮೊಳಗು.
ಶಾಂತಲೆಯ ಬೆನ್ನಿಂದ ನಾಲ್ಕಾರು ಜನ ನರ್ತಕ ನರ್ತಕಿಯರು ಎಡಬಲಗಳ
ಮೂಲಕ ನುಗ್ಗಿ ಬಂದು ತಾಂಡವವ ನಡೆಸುವರು.
ಜಕ್ಕಣನೂ ಆವೇಶಪೂರ್ಣ. ನರ್ತನಂಗೈಯುವನು –

**ಶಾಂತಲೆ :** ಸ್ಥಪತಿಗಳೇ, ನನ್ನಾಜ್ಞೆ, ಪಟ್ಟಮಹದೇವಿಯರ ಕಟ್ಟಾಜ್ಞೆ, ಶಿಲ್ಪ
ಸೌಂದರ್ಯದಲಿ ಲಕ್ಷ್ಮಲಾ ದೇವಿಯರ ಹೆಸರು ಹಸುರಾಗಿರಲಿ,
ಅಂತೆಸಗಬೇಕಿಹುದು.

**ಜಕ್ಕಣ :** ಶಾಂತವಾಗಲಿ ಕಡಲು ! ಶಾಂತವಾಗಲಿ ಮಡಿಲು !
ನನ್ನ ತಾಯೊಡಲು ! ಕಾಲಲ್ಲಿ ತೋರಿದುದು
ಶಿರದಲಾಗುವ ನಾನು ಪಡಿನುಡಿದುದುಂಟೆ ?
ಪುಟ್ಟವಿಷಯಕ್ಕೇಕೆ ಬೆಟ್ಟದೆತ್ತರ ಚಿಂತೆ ?

**ಶಾಂತಲೆ :** ಜಕ್ಕಣರೆ, ಕಿಡಿಸಣ್ಣದಾದರೂ ಕಾಡೆಲ್ಲವನು ಸುಟ್ಟು
ಬೂದಿಗೈವಂತೆ, ದೇವನಡಿ
ಬರೆದಿರುವ ಅರ್ಪಣದ ಬರಹ ಮನಗಳನು ಒಡೆದಿಹುದು.
ನಾಳೆ ಮನೆಯನ್ನು ಒಡೆಯಬಲ್ಲುದು, ಈ ಬೆಳವಣಿಗೆ
ಸಾಮ್ರಾಜ್ಯಕ್ಕೇ ಕುತ್ತು !

**ಜಕ್ಕಣ :** ಶಾಂತಂ ಪಾಪಂ ! ಶಾಂತಂ ಪಾಪಂ (ಎರಡೂ ಕಿವಿಗಳನ್ನು
ಮುಚ್ಚಿಕೊಳ್ಳುವನು)

**ಶಾಂತಲೆ :** ಅಪ್ಪಾಜೀ, ಕೃಪೆಯಿಟ್ಟು ಲಾಲಿಸಿ.. ಅಹುದು,
ನಾನಿಲ್ಲಿರಲು ಉಭಯ ಸಂಕಟ ನಿಮಗೆ. ಇದೋ, ಇಂದೆ
ನಾ ತೆರಳುವೆನು ನನ್ನ ತವರಿನ ತಾಣ ಶಿವಗಂಗೆಗೆ !
(ಲಕ್ಷ್ಮಲೆ ಬೊಮ್ಮಲೆಯರ ಕೈಹಿಡಿದು)
ಸೋದರಿಯರೆ, ನಾನು ಕೆಲಕಾಲ ಶಿವಗಂಗೆಯಲಿ ಗುರುಗಳನು
ಪೂಜಿಸುವ ಸಲುವಾಗಿ ಹೊರಡಲನುವಾಗಿಹೆನು. ಪ್ರಭುಗಳನು ಬೇಡಿ
ಅಪ್ಪಣೆಯ ಪಡೆಯುವೆನು. ಚೆನ್ನಕೇಶವ ಮೂರ್ತಿ ಸಿದ್ಧವಾಗಿದೆ.
ಅದಕೆ, ಲಕ್ಷ್ಮಲಾ, ನಿನ್ನ ಹೆಸರನು ಬರೆದು
ಮುಗಿಸಿಕೊಡಿರೆಂದು ಆಚಾರ್ಯರಿಗೆ ಬೇಡಿಹೆನು. ಅದನು ನಿನ್ನ ಹೆಸರಲಿ
ನಿಲಿಸಿ ಶುಭ ದಿವಸ ಮೂರ್ತಿ ಪ್ರತಿಷ್ಠೆ ನೆರವೇರಿಸು. ನಿಮ್ಮೀರ್ವರಿಗೂ
ಮಂಗಳವಾಗಲಿ, ನಮ್ಮ ವಂಶದ ಬೆಳಕು, ಈ ಪುಟ್ಟ ನರಸಿಂಹ,
ರಾಜನೆನಿಸಿ ಯಶೋಭಾಗಿಯಾಗಲಿ. ನಾನಿನ್ನು ಬರುವೆ !

ನರಸಿಂಹ....

(ಮಾತು ಬಾರದೆ ಕಣ್ಣೀರು ಕರೆದು ಕಂದನನ್ನು ಅಪ್ಪುವಳು. ಮಗುವೂ ಅಪ್ಪಿ ಕಣ್ಣೀರು ಕರೆವುದು. ನಿಧಾನವಾಗಿ ನೇಪಥ್ಯದೆಡೆ ನಡೆಯುವಳು)

– ರಂಗಭೂಮಿಯಲ್ಲಿ ಚಣಕಾಲ ಮೌನ –

**ಜಕ್ಕಣ :** ಅಮ್ಮಾ... ಅಮ್ಮಾ... ಶಿಶುವ ತಿಪ್ಪೆಗೆ ಎಸೆದು
ಹೋಗಿಬಿಟ್ಟೆಯ ತಾಯಿ... ಅನಾಥನನ್ನಾಗಿಸಿದೆ ನನ್ನಮ್ಮ !
ಇನ್ನೇಕೆ ಶಿಲ್ಪಕೃತಿ... ಇನ್ನೇಕೆ ಶಿಲ್ಪಕಲೆ !
ಎಲ್ಲವಕು ಇಂದೆ ನಾ ನೀಡುವೆ ತಿಲಾಂಜಲಿ !
ಓ ದೇವರೇ, ನನ್ನನ್ನು ಕ್ಷಮಿಸು !... ತಾಯಿ ಇಲ್ಲದ
ಈ ಮಗುವು ಬದುಕಿ ಉಳಿಯುವುದೆಂತು ?

**ಬೊಮ್ಮಲೆ:** ಸ್ಥಪತಿಗಳೆ, ಈಗಲಾದರೂ ಮಹಾರಾಣಿಯರ ಆಜ್ಞೆಯನು
ನೆರವೇರಿಸಿ.

**ಜಕ್ಕಣ :** (ಆವೇಶಭರಿತನಾಗಿ) ಓ ಕ್ರೌರ್ಯವೇ, ನೈಚ್ಯತೆಯ ನೇಣುಗಳೇ ದೂರ
ಸರಿಯಿರಿ... ತೊಲಗಾಚೆ, ಸ್ವಾರ್ಥವೇ ತೊಲಗಾಚೆ !
ಓ ಕನಸೇ ಸಿಡಿದೊಡೆದು ಚೂರಾದೆಯಾ !

(ಇದ್ದಕ್ಕಿದ್ದಂತೆ ಭಯಂಕರ ಸ್ಫೋಟವಾಗುವುದು. ದೀಪಗಳು ಕಣ್ಣು ಮುಚ್ಚಾಲೆಯಾಡುವುವು. ಭೇರಿ, ಚಂಡೆ ಮೊದಲಾದ ರಣವಾದ್ಯಗಳು ಮೊಳಗುವುವು.)

– ಭಯಂಕರ ತಾಂಡವ ನೃತ್ಯ ಆರಂಭವಾಗುವುದು –

– ಜಕ್ಕಣ ಒಂದು ಕೈಯಲ್ಲಿ ಉಳಿ ಮತ್ತೊಂದರಲ್ಲಿ ಸುತ್ತಿಗೆ ಹಿಡಿದು ತಾಂಡವ ನಡೆಸುವನು –

ಅಯ್ಯಯ್ಯೋ... ಭಗ್ನವಾಯಿತೆ ನನ್ನ ಸ್ವಪ್ನಸುಂದರ ಸಗ್ಗ !
ಓ ಬನ್ನಿ... ನಕ್ಷತ್ರ ನೀಹಾರಿಕಾ ವಲಯ ಜ್ಯೋತಿಗಳೆ ಬನ್ನಿ !
ತಾಯಿ ಇಲ್ಲದ ಶಿಶುವ ಈ ಶಿಲ್ಪ ಕಂದನನು
ಸುಟ್ಟುರುಹಿ ನಿಂದಲ್ಲೆ ಬೂದಿಗೈಯಲು ಬನ್ನಿ !
ಇಲ್ಲವಾಗಲಿ ಮುಂದೆ ಶ್ರೀ ಶಿಲ್ಪ ಚಾತುರ್ಯ !
ನಗ್ನವಾಗಲಿ ನನ್ನ ಸದ್ಭಾವ ಸಜ್ಜನಿಕೆ !
ಓ ಶಿಲ್ಪ ಕಲ್ಪದ ಶಿಶುವೆ, ಗರ್ಭದಲಿ ಧರಿಸಿದ್ದ
ತಾಯಿ, ಕರುಳನೆ ಕಿತ್ತು, ಪಿಂಡವನು ಹೊರಗೆಸೆದು
ದೂರಹೋದಳು ನಿನ್ನ. ನೀ ಅನಾಥ, ತಾಯಿಯನೆ ಕಾಣದಿಹ
ತಬ್ಬಲಿಯು, ಇನ್ನೆಲ್ಲಿ ಈ ಶಿಶುಗೆ ಜೀವಕಳೆ, ಬಾಳ್ವ ನೆಲೆ !
ಓ ನನ್ನ ಕೈಯಲಿಹ ಉಕ್ಕಿನಾ ಕರಣವೇ, ಹೋಗು
ಹೊಕ್ಕುಳಿನ ಬಳ್ಳಿಯನು ಕುಕ್ಕಿ ತುಂಡರಿಸು !
ತಾಯಿ ಮಗುವಿನ ಕರುಳು ಹರಿದು ಬೇರಾಗಿಹುದು ! ಹೋಗು,
ತಾಯಿ ಹಡೆಯುವ ಮೊದಲೆ ಬಸಿರ ಹಸಿರನು ಕಿತ್ತು
ಹುಡಿಗೈದಳೆಂಬುದನು ಜಗಕೆ ಸಾರುವ ರೀತಿ ನುಚ್ಚುನುರಿ ಮಾಡು !
ಭಗ್ನವಾಗಲಿ ನನ್ನ ಕನಸಿನೀ ಕನ್ನಡಿಯು
ಭಿನ್ನವಾಗಲಿ ನನ್ನ ಶ್ರೀ ಶಿಲ್ಪದೈಸಿರಿಯು !
ಓಂ ನಮೋ ಕೇಶವಾಯ... ಓ ನಮೋ ಕೇ...
ಶವಾಯ.... ಶ... ವಾ..... ಯ !

– ಕೈಲಿದ್ದ ಉಳಿಯನ್ನೆತ್ತಿ ಶಿಲ್ಪಾಕೃತಿಯ ಮೇಲೆ ಎಸೆಯುವನು. ಅದು

ಮೂರ್ತಿಯ ಹೊಕ್ಕುಳ ಬಳಿ ಟಣ್ ಎಂದು ಶಬ್ದಗೈದು ಕೆಳಗೆ ಬೀಳುವುದು, ಅದರ
ಜೊತೆಯಲ್ಲಿ ಚೆನ್ನಕೇಶವ ಮೂರ್ತಿಯ ಹೊಕ್ಕುಳದ ಶಿಲೆ ಚಕ್ಕೆ ಎದ್ದು ಮೂರ್ತಿ
ಮುಕ್ಕಾಗುವುದು –

– ರಂಗಭೂಮಿ ನೀರವ –

ಅಯ್ಯೋ ಪಾಪೀ... ಅಯ್ಯೋ ಪಾಪೀ...
ಇನ್ನೇನು ಉಸಿರು ಬಂದೀತು, ಮೂರ್ತಿ ಮಾತಾಡೀತು ಎಂಬಂತೆ
ಕಣ್ಣ ಕರೆಯುತಲಿದ್ದ ವಿಗ್ರಹವು ಭಿನ್ನವಾಗಿಯೆ ಹೋಯ್ತು.
ಅದರ ಕಳೆ ಎಲ್ಲಿಗೋ ಹೋಗಿಹುದು ! ಬಾರದೆಡೆಗೈದಿಹುದು !
ಜಕ್ಕಣಾ, ಮಹಾ ಸ್ಥಪತಿ ಎಂಬೆಲ್ಲ ಗೌರವಗಳಿಗೆ ಪಾತ್ರನಾಗಿದ್ದವನೆ,
ಇಂದು ನೀನೇನಾದೆ ? ಏನಾದೆ ? ಶಿಶು ಹತ್ಯೆಗೈದ ಪಾತಕಿಯು
ನೀನಾದೆ ! ಭ್ರೂಣವನು ಹರಣಗೈದವ ನೀನು ! ನೀನು ಕೊಲೆಗಡುಕ
ಪೈಶಾಚ ! ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತವಾಗಲೇ ಬೇಕು ನಿನಗೆ !
ಗರ್ಭಸ್ಥ ಶಿಶುವನ್ನು ಕೊಲೆಗೈದ ಕೈಗಳನು ತುಂಡರಿಸಲೇಬೇಕು.
ತುಂಡರಿಸಲೇ ಬೇಕು ! ಅದು ನಿನಗೆ ಯೋಗ್ಯ ಪ್ರಾಯಶ್ಚಿತ್ತ
ಯೋಗ್ಯತಮ ಶಿಕ್ಷೆ ! ಯೋಗ್ಯತಮ ಶಿಕ್ಷೆ !!

– ವಿಕಟನಗೆ ನಗುತ್ತಾ ಓಡುವನು –

## ದೃಶ್ಯ : ೭ ಶಿವಗಂಗೆಯ ತಪ್ಪಲು

(ಹೊನ್ನಾದೇವಿಯ ದೇಗುಲದ ಬಹಿರ್ವಲಯ. ಅಲ್ಲಿನ ಎತ್ತರದ ಅಟ್ಟಣೆಯ ಮೇಲೆ ಶ್ವೇತವಸನ ಧಾರಿಣಿಯಾದ ಶಾಂತಲೆ ಪದ್ಮಾಸನಾಸೀನೆಯಾಗಿ ತಪೋಮಗ್ನಳಾಗಿ ಕುಳಿತಿರುತ್ತಾಳೆ. ಅಲ್ಲಿಗೆ ಆವೇಶಪೂರ್ಣ ನರ್ತನಗೈಯುತ್ತಾ ಜಕ್ಕಣಾಚಾರ್ಯ ಆಗಮಿಸುತ್ತಾನೆ. ತಾಂಡವದ ಮೇಳ ಮೊಳಗುತ್ತಲೇ ಇರುತ್ತದೆ.)

**ಜಕ್ಕಣ** : ಓ ಪೃಥ್ವಿ ಆಕಾಶ ನಕ್ಷತ್ರ ಮಂಡಲವೆ
ದಿಗ್ಭಿತ್ತಿಗಳ ಹೊತ್ತ ಅಷ್ಟದಿಗ್ಗಜಗಳೇ
ಬನ್ನಿರೌ ಪಾತಕಿಯ ಇಲ್ಲವಾಗಿಸಿರಿ... !
ಓ ತಾಯಿ ಶಾಂತವ್ವೆ, ಓ ಶಾಂತಲಾ ದೇವಿ
ನಾ ಪಾಪಿ, ಮನ್ನಿಸೌ, ಭ್ರೂಣವನು ತೆಗೆದವನು !
ಪಾಪಕ್ಕೆ ತಕ್ಕುದಿದೆ ನನಗೆ ಪ್ರಾಯಶ್ಚಿತ್ತ !
ಈ ಪಾಪಿ ಕೈಗಳನು ತುಂಡರಿಸಬೇಕು
ತುಂಡರಿಸಲೇ ಬೇಕು... ತುಂಡರಿಸಲೇ ಬೇಕು.... !

– ಒಂದು ತೆರೆದ ಕತ್ತಿ ಮೇಲೆ ತನ್ನೆರಡೂ ಕೈಗಳನ್ನು ಕತ್ತರಿಸಿಕೊಳಲು ಎತ್ತುತ್ತಾನೆ.
ಅಷ್ಟರಲ್ಲಿ ವಿಷ್ಣುವರ್ಧನನು ತನ್ನಿಬ್ಬರು ಪತ್ನಿ ಮತ್ತು ಪುತ್ರರೊಡನೆ ಆಗಮಿಸುತ್ತಾನೆ,
ಜೊತೆಯಲ್ಲಿ ಹಲವರು ನರ್ತಕಿಯರು –

**ವಿಷ್ಣು** : ನಿಲ್ಲಿ... ! ಜಕ್ಕಣರೆ, ನಿಲ್ಲಿರೈ ಸ್ಥಪತಿ !
ಬೇರೆಯವರ ಪಾಪಕ್ಕೆ ಪ್ರಾಯಶ್ಚಿತ್ತ ನಿಮಗಲ್ಲ !
ಅದು ನನಗೆ.... ನನ್ನ ಅವಿವೇಕಕ್ಕೆ !!

**ಜಕ್ಕಣ** : ಮಹಾ ಪ್ರಭುಗಳು..! ದೇವಿಯರು !! ರಾಜಕುಮಾರ ನರಸಿಂಹರು!!!

– ಸ್ತಬ್ಧನಾಗಿ ನಿಲ್ಲುವನು –

**ಲಕ್ಷ್ಮಲೆ** }
**ಬೊಮ್ಮಲೆ** } ಪೂಜ್ಯ ಸ್ಥಪತಿಗಳೆ, ಈ ಎಲ್ಲ ಅನಾಹುತಗಳಿಗೂ ಅಡಿಗಲ್ಲು
ಹಾಕಿದವರು ನಾವು ನಮಗೆ ಪ್ರಾಯಶ್ಚಿತ್ತ – ಅಲ್ಲ – ಶಿಕ್ಷೆಯಾಗಲಿ
ನಮ್ಮ ನಾಲಗೆಗಳನ್ನು ಕತ್ತರಿಸಿ ಬಿಸುಡಿ !

**ಜಕ್ಕಣ** : ರಾಣಿವಾಸದ ಸನ್ನಿಧಾನಗಳ ಕ್ಷಮೆ ಬೇಡುವೆ. ರಕ್ಷೆ ಶಿಕ್ಷೆ ನಮ್ಮ
ಕೈಯೊಳಗಿಲ್ಲ. ಆ ತಾಯಿ ನನ್ನವ್ವ ನೊಂದಿಹರು.
ಅವರನ್ನು ಬೇಡೋಣ. ಅವರ ಕ್ಷಮೆ ಕೋರೋಣ !

**ಎಲ್ಲರೂ** : ಕ್ಷಮಿಸಿ ಶಾಂತಾದೇವಿ... ಕ್ಷಮಿಸು ತಾಯಿ !

**ಶಾಂತಲೆ** : ಓಂ ನಮೋ ಆದಿನಾಥಾಯ !
ನನ್ನಾತ್ಮದಾತ್ಮಗಳೆ, ದುಗುಡವನು ದೂರವಿಡಿ ಸಾಂತ್ವನವ ಸ್ವಾಗತಿಸಿ !
ಪೂಜ್ಯ ಪ್ರಭುಗಳ ಪದಕೆ ನನ್ನ ಶಿರಬಾಗಿರಲಿ !
ಸ್ವಾಮಿ, ಈ ಶಾಂತಲೆಗೊಂದು ಬದುಕು ಬೆಳಕುಗಳನ್ನು ಕೊಟ್ಟ
ಮಹಮೂರ್ತಿಯೇ, ಭಿನ್ನವಾದನು ನನ್ನ ಕನಸಿನಾ ಕೇಶವನು !
ಚಕ್ಕೆ ಕಿತ್ತೆದ್ದು ಮುಕ್ಕಾದ ಮೇಲೆ ಆ ಮೂರ್ತಿ ಪೂಜಾರ್ಹವಲ್ಲ !
ಅವನನ್ನು ಮರೆತುಬಿಡಿ, ನಾನು ಮರೆಯುವೆನು !
ನೀವು ನಿರ್ಮಿಸಿದ ವಿಜಯ ನಾರಾಯಣನೆ ಮುಂದೆ ಬೇಲೂರಿನಲಿ
ಚೆನ್ನಕೇಶವನೆಂಬ ಅಭಿಧಾನದಲಿ ಮೆರೆಯಲಿ, ಬೆಳಗಲಿ !
ಈ ನನ್ನ ಕಡೆಯ ಬೇಡಿಕೆಯ ಸಲ್ಲಿಸಿರಿ ಪ್ರಭುಗಳೆ...
ಸೋದರಿಯರೆ,
ಬದುಕು ಕ್ರೀಡಾರಂಗ, ಸೋಲು ಗೆಲವುಗಳಲ್ಲಿ ತುಂಬ ಸಹಜ,
ಗೆದ್ದಾಗ ಹಿಗ್ಗದಿರಿ, ಸೋತಾಗ ಕುಗ್ಗದಿರಿ. ಹೆಣ್ಣು ಬಾಳಿನ ಕಣ್ಣು
ಎಂದೆಂದಿಗೂ ಅವಳು ಬೆಳಕಾಗಬೇಕು, ಉರಿಕೊಳ್ಳಿಯಾಗದಿರಲಿ !
ಏತಕೆನೆ... ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ
ನೆರೆಮನೆಯ ಸುಡದು, ಆ ಬಗೆಗೆ ಎಚ್ಚರಿಕೆ ಎಲ್ಲರಿಗು ಇರಲಿ !
ನನ್ನ ಮುದ್ದಿನ ಕಂದ, ವಿಜಯಣ್ಣ, ಓ ನನ್ನ ನರಸಿಂಹ,
ನಿನ್ನ ಬಾಳೆಂದಿಗೂ ಬೆಳಕಾಗಿ ಇರಲಿ. ಹೆಸರಾಗು, ಹಸುರಾಗು
ಹಸಿದವರಿಗನ್ನವಾಗು ! ನಿನ್ನ ಬಾಳಿನಲಿರಲಿ ಸಕಲ ಸೌಭಾಗ್ಯಗಳು !
ಪೂಜ್ಯ ಜಕ್ಕಣಾಚಾರ್ಯರೆ, ನೀವೆನಗೆ ತಂದೆ ಸಮಾನ !
ನೀವು ತುಂಬೆ ಊರಿನ ಬಳಿಯೆ, ನಿಮ್ಮ ಹುಟ್ಟೂರಾದ ಕೈದಳಕೆ
ನಡೆಯಿರಿ. ಅಲ್ಲೊಂದು ಕೇಶವನ ದೇಗುಲವ ನಿರ್ಮಿಸಿರಿ.
ಬೇಲೂರ ಪಾಪವನು ಕೈದಾಳ ತೊಳೆಯಲಿ, ತೊಲಗಿಸಲಿ !
ನಾನೀಗ ಸಲ್ಲೇಖನವ ಕೈಗೊಂಡಿಹೆನು. ಈಗಲೋ... ಆಗಲೋ !
ಆ ಮುನ್ನ ನನ್ನ ಆನಂದಕ್ಕೆ ನೀವೆಲ್ಲರೂ ಸೇರಿ, ನನಗೆ ಪ್ರಿಯವಾದ
ನಾಟ್ಯದೌತಣವನ್ನು ದಯಮಾಡಿ ನೀಡಿ. ನಾನು
ಜಿನಮೂರ್ತಿಯನು ಧೇನಿಸುತ ಅವನ ಸಾನ್ನಿಧ್ಯವನು ತೃಪ್ತಿಯಲಿ
ಸೇರುವೆನು !

– ಬೀಜಿಮ್‌ನಲ್ಲಿ ಎಲ್ಲರೂ ನರ್ತಿಸುವರು. ನರ್ತನ ಮುಗಿದ ವೇಳೆಗೆ ರಂಗ ಕತ್ತಲಾಗುವುದು. ಜ್ಯೋತಿಯೊಂದು ನಿಧಾನವಾಗಿ ನೆಲದಿಂದ ಮುಗಿಲೆಡೆಗೆ ಸಾಗುವುದು. ಆಗ ಹಿನ್ನೆಲೆಯಲ್ಲಿ –

**ಣಮೋ ಅರುಹಂತಾಣಂ**
**ಣಮೋ ಸಿದ್ಧಾಣಂ**
**ಣಮೋ ಆಯಿರಿಯಾಣಂ**

ಣಮೋ ಉವಜ್ಝಾಯಾಣಂ
ಣಮೋ ಲೋಏ ಸವ್ವ ಸಾವೂಣಂ ॥
ಓಂ ಶಾಂತಿ ಶಾಂತಿ ಶಾಂತಿ ಃ ॥

# ಅಂಬೆ

**ಪಾತ್ರವರ್ಗ**

**ಅಂಬೆ**

**ಅಂಬಿಕೆ**

**ಅಂಬಾಲಿಕೆ**

**ಭೀಷ್ಮ**

**ಸಾಳ್ವ**

**ಸತ್ಯಂ**

**ಶಿವಂ**

**ಸುಂದರಂ**

**ದೃಶ್ಯ : ೧** **ಅರಮನೆ**

**ಸತ್ಯಂ**
**ಶಿವಂ**
**ಸುಂದರಂ** } ಬನ್ನಿ ಓ ಗೆಳತಿಯರೆ
ಆಡೋಣ ಬನ್ನಿ
ನಿತ್ಯ ಬಾಳಿನ ರಾಗ
ಹಾಡೋಣ ಬನ್ನಿ ॥
ವೀಣೆ ಇಂಚರದಂತೆ ಕಣಿಯಾಗಿ ಬನ್ನಿ
ಕಿಂಕಿಣಿಯ ಝಣ ಝಣಕೆ ಕಣವಾಗಿ ಬನ್ನಿ
ಬೆಳಗಿನೊಲು ಬೆಳಬೆಳಗಿ ಹೊಳೆ ಹರಿದು ಬನ್ನಿ
ಚಿಲುಮೆಯೊಲು ಪುಟಿಪುಟಿದು ನರ್ತಿಸುವ ಬನ್ನಿ ॥
ಇದುವೆ ಮಹಾಭಾರತವು
ಸುಪ್ರಸಿದ್ಧ ಚರಿತವು
ಅಂಬೆ ಭೀಷ್ಮನನ್ನು ಕೊಂದ
ಘೋರ ಘೋರ ದೃಶ್ಯವು ॥ ೨ ॥
ತುಂಬಿದ ಸಭೆಗಾಹ್ವಾನ
ತೆರೆದ ಮನದಲಿ
'ಅಂಬೆ' ಎಂಬುದಿಹುದು
ನಮ್ಮ ನಾಟ್ಯಾಂಜಲಿ ॥ ೩ ॥

(ರಂಗದಿಂದ ಒಂದು ಬದಿಗೆ ಸರಿಯುತ್ತಿದ್ದಂತೆ. ಅವರನ್ನು ಹಿಂಬಾಲಿಸಿ ಮತ್ತೊಂದು ಬದಿಯಿಂದ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರು ನರ್ತಿಸುತ್ತಾ ಪ್ರವೇಶಿಸುತ್ತಾರೆ)

**ಅಂಬೆ** : ಬನ್ನಿ ಸೋದರಿಯರೆ
ಬನ್ನಿ ಬನ್ನಿ ಬನ್ನಿ
ಅಂಬಿಕೆ ಅಂಬಾಲಿಕೆ ನೀವಿಬ್ಬರೂ ಬನ್ನಿ ॥
ಕಾಶಿ ದೇಶದ ರಾಜಕುವರಿಯವರು ನಾವು
ಮುದ ತಂದ ರೂಪ ಜವ್ವನೆಯರಾವು ॥
ಬನ್ನಿ ಬನ್ನಿ ಬನ್ನಿ

**ಅಂಬಿಕೆ** : ಹಸುರೆಲೆಯಲಿ ಹೆಸರು ಬರೆವ
ಹೊಸ ವರುಷದ ಚೈತ್ರ
ಕಂಡೆಡೆ ಕಂಡರಿಸುತಿರುವೆ
ಹೊಸ ಬಾಳಿನ ಚಿತ್ರ ॥ ಬನ್ನಿ ಸೋದರಿಯರೆ ॥
ಮಕಮಲ್ಲಿನ ನೆಲದ ಮೇಲೆ
ಚಮುಚಮಕಿನ ಚಿತ್ತಾರ
ಎಳನೇಸರ ಕಿರಣಕುಂಚ
ಬಳಿವ ಬಣ್ಣ ಬಂಗಾರ
ದಿಕ್ ಭಿತ್ತಿಯ ಎದೆಯ ಮೇಲೆ
ಹಸುರಚ್ಚೆಯ ಸಿಂಗಾರ
ಮುಗಿಲಲೆಯಲಿ ಸುಳಿದೋಡುವ
ಛಾಯಾ ಚಿತ್ರದಾಗಾರ ॥ ಬನ್ನಿ ಸೋದರಿಯರೆ ॥
ಚಿಗುರು ಚೆಲ್ಲಾಟವಾಡೆ
ಮಲ್ಲಿಗೆ ನಗೆ ನಗುವಳು
ಬಿಂದಿಗೆ ಹೂ ಬಿರಿದು ಬಂದು

ನೀಲಾಂಜನ ತೆಗೆವಳು
ಸುಳಿ ಗಾಳಿಗೆ ಬಳ್ಳಿ ಬೆಡಗಿ
ನಿಂತು ಸೆರಗ ಸರಿಸುವಳು
ಸಂಭ್ರಮದೀ ಒಸಗೆಯಲ್ಲಿ
ವಾಸಂತಿಯು ಸುಸಿಲೆಸೆವಳು ॥ ಬನ್ನಿ ಸೋದರಿಯರೆ ॥

**ಅಂಬಾಲಿಕೆ :** ಚೈತ್ರನಂದನದಲ್ಲಿ ಚಿತ್ರಕೂಟ
ಏನೇನೋ ಹುಡುಕಾಟ ॥
ಎಲ್ಲೆಡೆಯು ಹೊಸಬೇಟ
ತೊರೆಯ ತಡಿ ತೊಡೆಯಲ್ಲಿ ಮಿಡುಕುವಾಟ ॥
ಪೊದೆ ಪೊದೆಯೂ ಬೆದೆಯ ಮೆದೆ
ಮೋದ ತುಂಬಿದ ಮಜಲು
ಕೋಗಿಲೆಯ ಕಂಠದಲಿ ಗೀತ ಪ್ರಣಯ
ಮಲ್ಲಿಗೆಯ ಬಳ್ಳಿಯಲಿ
ಮೊಳೆಹಲ್ಲು ಮೂಡಿದರೆ
ಚಿಗುರು ಗಲ್ಲದ ಮೇಲೆ ಉಗುರುಗಾಯ ॥
ಎಲ್ಲೆಲ್ಲೂ ಹೊಸ ಹರಯ
ಹೊಸ ಪ್ರಣಯ ಹೊಸ ಹುರುಪು
ಸೂರೆಯಾಗಿದೆ ಸೊಬಗು ಧಾತ್ರಿಯಲ್ಲಿ
ಓ ಹೊ ಹೋ ! ಸಾಕಿನ್ನು
ಮಾತು ಸೋತಿದೆ ನುಡಿಸೆ
ಅಪ್ಪುಗೆಯ ಹೆಪ್ಪಿರಲಿ ಬಾರೆ ಮಳ್ಳಿ ॥

**ಅಂಬೆ :** ಏನು ಚೆಲುವು ಅಂಬಿಕೆ !
ಈ ವಸಂತ ಮಧುಮಾಸ
ಗಿಡ ಬಳ್ಳಿಗು ಹೊಸ ವೇಷ !

**ಅಂಬಿಕೆ :** ಪ್ರಕೃತಿಗೆಲ್ಲ ಹೊಸ ಹರಯ
ಮನುಜರೆಮಗೆ ಪ್ರಣಯ

**ಅಂಬೆ :** ಯಾರ ನೀನು ಒಲಿದಿಹೆಯೆ ?
ಹೇಳೆ ಅಂಬಾಲಿಕೆ ;

**ಅಂಬಾ :** ಗೊಡವೆ ಬೇಡ ತಾಯಿ !
ನಿನ್ನ ಧೈರ್ಯ ನನಗೆ ಇಲ್ಲ !

**ಅಂಬೆ :** ಅಂಬಿಕೆ ನೀನು ಯಾರ... ?

**ಅಂಬಿಕೆ :** ಇಲ್ಲವಮ್ಮಾ ಇಲ್ಲ
ನಿನ್ನ ಸ್ಥೈರ್ಯ ಎನ್ನಲಿಲ್ಲ !

**ಅಂಬೆ :** ಅಂದರೇನೆ ; ಹೇಳೆ ಅಂಬಾಲಿಕೆ !

**ಅಂಬಾ :** ನೀನು ಸಾಲ್ವ ರಾಜನನ್ನು ಒಲಿದಿರುವೆ ಅಲ್ಲವೆ ?

**ಅಂಬೆ :** (ನಗು) ಹು ಹ್ಞು ಹ್ಞು ಹ್ಞು !

**ಅಂಬಿಕೆ :** ಅಕ್ಕ ನೀನು ಬಲುಪಕ್ಕ
ತುಂಬಿದೆದೆ ! ಮೈಯ ಕಾವು
ಸಾಲ್ವನೆದೆಯು ಶಮನ ಠಾವು
ಅಲ್ಲವೇನೆ ನಿನಗೆ ?

**ಅಂಬೆ :** ಅಲ್ಲಿ ನೋಡು ಅಂಬಿಕೆ !

ಹೂವಿನ ಹೊಂಬಟ್ಟಲಲ್ಲಿ
ದುಂಬಿ ಹೇಗೆ ಮಧುಪಾನವಗೈಯುತಿದೆ
ದಳದಳಗಳ ಚುಂಬಿಸಿ !

**ಅಂಬಿಕೆ** : ಅಹುದು ಸಾಲ್ವರಾಜನಂತೆ !

**ಅಂಬಾ** : ಅಂಬೆಯೆದೆಯ ದುಂಬಿಯಂತೆ !

**ಅಂಬೆ** : ಸಾಲ್ವನಂಥ ಚೆಲುವನಿಲ್ಲ ಕೇಳೆ ಅಂಬಿಕೆ
ಸಿಂಗಾರಗೊಂಡ ಕಾಮದೇವ ಅಂಬಾಲಿಕೆ ॥
ಕೋಮಲ ತನು ಕುಸುಮಬಾಣ ಮೇಘ ಶ್ಯಾಮನು
ಷೋಡಶ ಕಳೆ ಕೂಡಿದಂಥ ಪೂರ್ಣ ಚಂದ್ರನು
ಮಿನು ಮಿನುಗುವ ತಾರೆಗಳನು ಮುಡಿದ ವ್ಯೋಮನು
ತನು ಮನದಲಿ ತೀವಿ ನಿಂದ ಭಾವನಾತ್ಮನು ॥ ೧ ॥
ನನ್ನ ಹೃದಯ ನಂದನದಲಿ ಮಂದಾರದ ಕುಸುಮವು
ಅವನು ಹೃದಯ ಬಾಂದಳದಲಿ ಮಿನುಗು ತಾರೆ ಶುಕ್ರನು
ಮಲಯ ಮಂದ ಮಾರುತನೊಲು ನಿಂದಾಡುವ ನಲ್ಮೆಯು
ಅವನೆ ಭಾವ ನಾನೆ ಭಾಷೆ ಭಾವಗೀತೆಯಾಗುವೆವು ॥ ೨ ॥
ಅಪ್ಪುಗೆಯಲಿ ಹೆಪ್ಪು ಇಹುದು ತುಪ್ಪದ ಸವಿ ತುಟಿಜೇನು
ಮಿದುಗಲ್ಲದ ಬದಿಯಲ್ಲಿಯೆ ಮೂಡುವ ಗುರುತೇನು ?
ಸುಳಿದಾಡುವ ಮಂದರದೊಲು ಬಹನು ನನ್ನ ಸಾಲ್ವ
ನಳಿದೋಳಿನ ಹಾರ ಹಾಕಿ ಸ್ವಾಗತಿಸುವೆ ಚೆಲುವ ॥ ೩ ॥
ಸಾಲ್ವ ಸಾಲ್ವ ಸಾಲ್ವ
ಸಾಲ್ವ ಸಾಲ್ವ ಸಾಲ್ವ

**ದೃಶ್ಯ : ೨** **ಉದ್ಯಾನ**

**ಸಾಲ್ವ** : ನಾಚಿಕೆ, ಏಕೆ ನಯನ ಮನೋಹರಿ
ಮನ ತೆರೆದಾಡೆ ನಾಟ್ಯ ಮಯೂರಿ ॥
ಮಳೆ ಬಿಟ್ಟ ಸಂಜೆಯಲಿ ಹಸಿರು ಹಾಸಿನ ಮೇಲೆ
ಎಳೆ ಬಿಸಿಲು ಮೃದುವಾಗಿ ಮಲಗಿರುವ ವೇಳೆ
ಶತ ನೇತ್ರಗಳ ತೆರೆದು ನವಿಲು ಜಾಗವಾಡೆ
ಕೇಕೆ ಹಾಕುವ ತೆರದಿ ಗರಿಗೆದರಿ ಆಡೆ ॥ ೧ ॥
ತನು ಕಚ್ಚಿ ಮನ ಬಿಚ್ಚಿ ಸಾಗರನ ಮೆಚ್ಚಿ
ಹುಚ್ಚೆದ್ದು ಹೊಳೆಹರಿವ ಜಲಪಾತದಂತೆ
ಉಷೆ ಹಸೆಯ ಮಣೆ ಏರಿ ನಸುನಗೆಯನೆಸೆವಂತೆ
ಪ್ರಣಯ ಪ್ರದೋಷದಾ ಪ್ರಥಮ ಕಿರಣವೆ ಬಾರೆ ॥ ೨ ॥

**ಅಂಬೆ** : ಸರ್ವಾಂಗ ಶೃಂಗಾರ ಮನ ಮೋಹನ
ಬೃಂದಾರಕ ವಂದ್ಯ ಅಭಿವಂದನಾ ॥ ಪ ॥
ಸೌಂದರ್ಯ ಸಾಗರದ ಸೊಬಗಿನ ಅಲೆಯೆ
ಸಹ್ಯಾದ್ರಿ ಶ್ರೇಣಿಯ ಮಂದ ಮಾರುತವೆ
ಬಾಳ ಬಾಂದಳದಾ ಮಿನುಗುವ ತಾರೆಯೆ
ಸುಸ್ಮೃತಿ ಸುಂದರ ಬಂಧುರ ಸ್ವಪ್ನವೇ ॥ ೧ ॥
ನೀ ನಡೆವ ಎಡೆಯಲ್ಲಿ ಎದೆ ಹಾಸುವೆ

ನಡೆಮುಡಿಯ ಹಾಸಾಗಿ ನಾ ಮಲಗುವೆ
ನಿನ್ನಯ ನಡಿಗೆಗೆ ಮಿಡಿವುದೊ ನನ್ನೆದೆ
ಮೀಸಲ ಕುಸುಮವ ಮುಡಿ ಬಾರೋ ॥ ೨ ॥

**ಸಾಲ್ವ :** ಮಲ್ಲಿಗೆಯ ಚೆಲ್ಲಿದೊಲು ನಿನ್ನ ನಗು ಚೆಲುವೆ
ಬೆಳುದಿಂಗಳಿಳಿದಂತೆ ಓ ನನ್ನ ಒಲವೆ ॥
ಗುಳಿ ಬಿದ್ದ ಕೆನ್ನೆಯಲಿ ಮನವು ಸುಳಿ ಸಿಕ್ಕಿ
ತುಟಿ ಜೇನ ಸವಿ ಸವಿದು ಆಮೋದ ಉಕ್ಕಿ
ಪ್ರೇಮ ರಾಗದ ಮಧುವ ಕುಡಿದು ಬಲು ಸೊಕ್ಕಿ
ಎದೆ ತುಂಬಿ ನಿಂತಿರುವೆ ಓ ಬೆಳ್ಳಿ ಚುಕ್ಕಿ ॥

**ಅಂಬೆ :** ಅಂಬೆಯ ತುಂಬಿದ ಬಂಗಾರಗನಸೇ
ತುಂಬೆಯ ಹೂವಿನ ಸಪುರಾ ಸೊಗಸೇ ॥
ಝಣಣ ಝಣಣ ಝಣ ನಾಳೆಯೆ ಮದುವೆ
ಕಣ್‌ಮಣಿ ನಾನಿನ್ನ ಕಾಯುವೆ ॥

**ಸಾಲ್ವ :** ಬಂದೇ ಬರುವೆನು ಅಂಬೆ
ಮುದವನು ತರುವೆನು ತುಂಬೆ ॥
ಕನಸಿನ ಲೋಕಕೆ ಕೊಂಡೊಯ್ವೆ
ಸರಸದ ಸ್ವರ್ಗವನೇರಿಸುವೆ ॥
ಅಂಬೆ ಅಂಬೆ ಅಂಬೆ
ಅಂಬೆ ಅಂಬೆ ಅಂಬೆ

**ಅಂಬೆ :** ಅಗ್ನಿದೇವನಾ ಸಮ್ಮುಖದಲ್ಲಿ
ಸೂರ್ಯಚಂದ್ರರಾ ಸಾನ್ನಿಧ್ಯದಲಿ
ದಿಕ್ಪಾಲಕರು ದಿವಾವಾಸಿಗಳ
ಸಾಕ್ಷಿಯಾಗಿ ನಾ ಕೈಹಿಡಿವೆ ॥

**ಇಬ್ಬರೂ :** ರತಿಸತಿ ಮನ್ಮಥರಂತೆ
ಯತಿಪತಿ ಶಿವಶಿವೆಯರಂತೆ
ನಾವಿರ್ವರೊಂದಾಗಿ ನಲಿದಾಡುವಾ
ಬಾಳಿನ ಸಾರವ ಸವಿ ನೋಡುವಾ ॥
ಪ್ರೇಮ ಸಾಕ್ಷಾತ್ಕಾರ ಸಾಕಾರಗೊಳಿಸಿ
ಕಾಮವ ಕರಗಿಸಿ ಪರಿಶುದ್ಧರೆನಿಸಿ
ಅನುದಿನದ ಆನಂದ ಅಗಣಿತವ ಆಗಿಸಿ
ಒಲಿದೊಲಿದು ನಲವೆರೆದು ಸವಿಯಾಗುವಾ ॥

**ದೃಶ್ಯ : ೩** **ಅರಮನೆ**

**ಸತ್ಯಂ**
**ಶಿವಂ**
**ಸುಂದರಂ** } ಮದವೆ ಮದುವೆ ಮದುವೆ
ಮನಸಿಗೆ ಮುದವನು ತರುವೆ
ಅದ್ದೂರಿಯಿಂದ ಆನಂದ ತಂದ
ಅಂದದ ಚೆಂದದ ಮದುವೆ ॥
ಕಾಶಿಯ ನಗರದ ಸಿಂಗಾರ
ಅರಮನೆಯೆಲ್ಲಾ ಬಂಗಾರ
ಅಂಬೇ ಅಂಬಿಕೆ ಅಂಬಾಲಿಕೆಯರು

ಬಂದರು ತುಂಬಿದ ಸಭೆಗೆ ॥
ಇದೊ ಶೂರರು ಸೇರಿಹರಿಲ್ಲಿ
ಮೆರೆವರು ಚೆಲುವನು ಚೆಲ್ಲಿ !

**ಗದ್ಯ** : ಅಂಗ ವಂಗ ತುಂಗ ಕಳಿಂಗ
ಕಾಶ್ಮೀರ ಕಾಂಭೋಜ ಕರ್ನಾಟ
ಗಾಂಧಾರ ಗೌಡ ಆ ಹಸ್ತಿನಾವತಿ
ನೇಪಾಲ ಭೂತಾನ ಇಂದ್ರಪ್ರಸ್ಥ

**ಹಾಡು** : ಎಲ್ಲರು ಎಲ್ಲರು
ತೇಜಸ್ವಿ ತರುಣರು
ಹೆಂಗಳ ಒಲಿಯಲು ಬಂದಿಹರು ॥
ಇದುವೆ ಸ್ವಯಂವರ ಮಂಟಪ
ಅಲ್ಲಿಗೆ ಎಲ್ಲರಿಗಾಹ್ವಾನ !
ದೇಶ ವಿದೇಶದ ತೇಜೋರೂಪರು
ನೆರೆದಿಹರಿದೊ ಕೇಳ್ ಸುರಗಾನ ॥

**ಶ್ಲೋಕ** : ವಿವಾಹಂ ಅನುರಾಗ ಬಂಧಂ
ಪ್ರಣಯ ಪ್ರದೀಪಂ ಪ್ರೇಮ ಪುಷ್ಕರಾವರ್ಷಂ
ಸ್ತ್ರೀಪುರುಷ ಸಹಯೋಗ ಸಹಕಾರ ರೂಪಂ
ಗ್ರಾಹಸ್ಥ್ಯ ದೀಕ್ಷಾಂ ಸ್ಥಿತಂ ಸಂಸಾರ ಸಾರೋದಯಂ ॥

**ಹಾಡು** : ಕಾಶೀರಾಜನ ಕುವರಿಯರೆ ಘಾಸಿಯ ತೊರೆದಿಹ ಕನ್ಯೆಯರೆ
ಬನ್ನಿರಿ ಮಕ್ಕಳೆ ಮಂಟಪಕೆ
ಮಂಗಳಮಯದಾ ಅಂಗಳಕೆ ॥
ಹೆಜ್ಜೆಯ ಮೇಲೆ ಹೆಜ್ಜೆಯ ಹಾಕಿ
ಲಜ್ಜೆಯ ಅವಗುಂಠನ ಧರಿಸಿ
ಇಚ್ಛೆಯ ಮೇರೆಗೆ ಎಚ್ಚರದಿಂದಲಿ
ಆಚ್ಛಾದಿಸಿರೌ ಗುಚ್ಚದ ಹಾರವ ॥

**ಅಂಬೆ** : ಸಾಳ್ವ ಸಾಳ್ವ ಸಾಳ್ವ
ನನ್ನೆದೆಯ ಬಾಂದಳದ ಧ್ರುವತಾರೆ ಸಾಳ್ವ
ನನ್ನೊಲವೆ, ನನ್ನರಸೆ, ನನ್ನಿನಿಯ ಸಾಳ್ವ
ನಾವೆಂದೂ ಒಂದಾಗಿ ಚೆಂದಾಗಿ ಬಾಳ್ವ
ಬಾ ಇನಿಯ ಬಾ ಇನಿಯ ಬಾರೆನ್ನ ಸಾಳ್ವ
ನನ್ನ ಕಣ್ಣಿನ ಕಣ್ಣೆ ಮುದವಾಂತ ಚೆಲುವ ॥

**ಸತ್ಯಂ ಶಿವಂ ಸುಂದರಂ** : ಆ ದ್ಯಾವಾ ಈ ಪೃಥವಿ ತುಂಬಿದವ ಭೀಷ್ಮ
ಭೂಮ ವ್ಯಕ್ತಿತ್ವದಲಿ ಅಪ್ರಮೇಯನು ಭೀಷ್ಮ !
ದೇವ ಗಂಗೆಯ ಕುವರ ದೇವಮಾನವ ಭೀಷ್ಮ !
ಬಂದನದೊ ಬಂದನದೊ ಭಾಮೆಯರ ಬಳಿಗೆ
ಕೆರಳಿ ಕೇಸುರಿಗೊಂಡು ಕ್ಷತ್ರಿಯರ ಪರಿಗೆ !
ನೆಚ್ಚಿನ ಮೆಚ್ಚಿನ ಸಾಲ್ವನನ್ನು
ಅಂಬೆಯು ಹಿಂಬಾಲಿಸುತಿರಲು
ತಡೆದನು ಭೀಷ್ಮನು ತ್ವರೆಯಿಂದ
ಬರಿಸಿಡಿಲೆರಗುವ ತೆರದಿಂದ ॥

– ಸಿಡಿಲು ಗುಡುಗುಗಳ ಆರ್ಭಟ –

**ಭೀಷ್ಮ** : ತಡೆಯಿರಿ ತೊಲಗಿರಿ ಹೆಂಬೇಡಿಗಳೇ
ಪುಡಿ ಪುಡಿಗೈಯುವೆ ಒಡಲನ್ನು ।
ಫಡ ಫಡ ನೋಡಿರೆ ತುಂಡರಿಸುವೆನೋ
ಕನ್ಯೆಯ ಹಿಡಿದಾ ಕೈಗಳನು ।
ಬಗ್ಗದೆ ಕುಗ್ಗದೆ ಪ್ರತಿಭಟಿಸಿದರೆ
ನೆಗ್ಗೊತ್ತುವೆ ಮೈ ಎಲುಬೆಲ್ಲ
ಸಗ್ಗಕೆ ಸಗ್ಗವೆ ಧಾಳಿಯನಿಟ್ಟರು
ಜಗ್ಗದೆ ಹೋರುವೆ ಸಟೆ ಸಲ್ಲ ।

( ಚಣಕಾಲ ಚಂಡೆ ಸಮ್ಮೇಳಗಳ ನಿರ್ಘೋಷ
ಮತ್ತು
ರುದ್ರ ತಾಂಡವ ನೃತ್ಯ ಸಾಳ್ವ – ಅಂಬೆಯರದು )

**ಸಾಳ್ವ** : ಭೀಷ್ಮ, ಬಿಟ್ಟುಕಳೆ ಅಂಬೆಯನು
ನನ್ನ ಪ್ರೇಮದ ಪಕ್ಷಿ, ಕೊಂಡೊಯ್ವೆ ಅವಳನ್ನು !
ಯುದ್ಧರಂಗವಿದಲ್ಲ ! ಗೆದ್ದವನು ನೀನಲ್ಲ !
ಭೀಷ್ಮ, ಆಹ್ವಾನವಿಲ್ಲದಲೆ ಆಗಮಿಸಿದವ ನೀನು !
ವೈವಾಹ ಮಂಟಪಕೆ ಅಡಿಯಿಡಲು ಹಕ್ಕಿಲ್ಲ !

**ಭೀಷ್ಮ** : ಸಾಳ್ವ
ಹೆಣ್ಣು ಮಣ್ಣು ಹೊನ್ನುಗಳು ಹೇಡಿಗಳ ಸ್ವತ್ತಲ್ಲ !
ಪೌರುಷವಿದ್ದವನಿಗೆ ಪೃಥ್ವಿ,
ಬಾಹುವಿಕ್ರಮನಿಗೆ ರಾಜಪುತ್ರಿ !
ಕದ್ದು ಒಯ್ಯಲು, ಹೆಣ್ಣು ಬಿದ್ದೊಡವೆಯಲ್ಲ
ಅಂಬೆ, ಅಂಬಿಕೆ, ಅಂಬಾಲಿಕೆಯರೆನ್ನ
ಗೆಲವಿನ ಪ್ರಾಪ್ತಿ !
ಅದ ಪಡೆದು ಕೊಂಡೊಯ್ವೆ
ಅಡ್ಡ ಬಂದರೆ ಗೆಯ್ವೆ ತಕ್ಕ ಶಾಸ್ತಿ !

**ಸತ್ಯಂ**
**ಶಿವಂ**
**ಸುಂದರಂ** } ಬಿರುಸಿನ ಕಾಳಗ ಭೀಷ್ಮಗು ಸಾಳ್ವಗು
ಆಹಾ ! ಘೋರವು ಘನ ಘೋರ
ನೆಲ ನೆಗ್ಗೊತ್ತಿತು, ಆಗಸ ಬಿರಿಯಿತು
ಸಮುದ್ರ ಸರಿಯಿತು ಬಹುದೂರ !

( ಭೀಷ್ಮನು ತನ್ನ ಎಡಗೈಯಲ್ಲಿ ಮೂವರು ಸೋದರಿಯರನ್ನೂ ಒತ್ತಿ ಹಿಡಿದು,
ಬಲಗೈ ಖಡ್ಗದಿಂದ ಹೋರಾಡಿ ಗೆಲ್ಲುವನು. ಕತ್ತಿ ಬೀಸುತ್ತಲೇ ಅವರು
ಮೂವರನ್ನೂ ನೇಪಥ್ಯದೆಡೆಗೆ ಸೆಳೆದೊಯ್ಯುವನು. ಸಾಳ್ವನು ಸಿಗ್ಗಾಗಿ
ಕುಸಿಯುವನು... )

**ದೃಶ್ಯ : ೪** **ಹಸ್ತಿನಾವತಿಯ ಅರಮನೆ**

**ಭೀಷ್ಮ** : ಏನ ನಿರ್ಧರಿಸಿದೌ ಹೇಳು ಅಂಬೆ
ಕೆಟ್ಟ ಹಟ ಯಾರಿಗೂ ಒಳಿತಲ್ಲ ಎಂಬೆ.

**ಅಂಬೆ** : ಒಪ್ಪಿದೆನೊ ದೇವವ್ರತ ಒಪ್ಪಿದೆನೊ ತಂದೆ
ನಿನ್ನ ಹೇಳಿಕೆ ನಿನಗೂ ಅನ್ವಯವು ತಾನೆ ?

**ಭೀಷ್ಮ** : ನಾನೆಲ್ಲಿ ಹಟಗೈದೆ ಹೇಳು ಅಂಬೆ
ನನ್ನ ತಮ್ಮನ ಕೈಯ ಹಿಡಿ ಒಳಿತು ಎಂಬೆ !

**ಅಂಬೆ** : ಸಾಳ್ವನನು ಮನಸಾರೆ ಮೆಚ್ಚಿಹೆನು ಭೀಷ್ಮ
ಅವನೆನ್ನನೊಲಿದಿಹನು ನಾನವನ ವಸ್ತು !

**ಭೀಷ್ಮ** : ಶತ್ರುವಿಗೆ ಸೋತವನು ಸತ್ತಹೆಣವಂಬೆ
ವ್ಯರ್ಥ ಸಾಹಸ ಬೇಡ ತೆಪ್ಪಗಿರು ಎಂಬೆ !

**ಅಂಬೆ** : ಪ್ರೇಮವೆಂಬುದು ಕೇಳು ಸಂತೆ ಸರಕಲ್ಲ !
ಅದರ ಪಾವಿತ್ರ್ಯಕ್ಕೆ ಭಂಗ ತರೆ ಸಲ್ಲ
ಮನವನೊಬ್ಬನಿಗಿತ್ತು
ಮೈಯೊಬ್ಬಗೊಪ್ಪಿಸಲು ಧರ್ಮವಹುದೆ ?
ಋತವು ತಾ ಒಪ್ಪುವುದೆ ಹೇಳು ಭೀಷ್ಮ !

**ಭೀಷ್ಮ** : ಇಲ್ಲ,
ನಿಜಕು ನೀ ಮತಿವಂತೆ, ಮಡಿವಂತೆ !
ಪ್ರೇಮ ಪಾವಿತ್ರ್ಯಕ್ಕೆ ನಂಜು ನಾನಾಗೆ
ಸಾಳ್ವನನು ಸೇರು
ಪೋಗು ನಡೆ ಕೂಡು.
ಶುಭಮಕ್ಕೆ ನಿನಗೆ
ನಿನಗೆ ಮಂಗಳಮಕ್ಕೆ
ಸೌಭಾಗ್ಯವತೀ ಭವ
ಸೌಭಾಗ್ಯವತೀ ಭವ

– ನಿರ್ಗಮನ –

(ಅಂಬೆ ಆನಂದನರ್ತನ ಗೈಯುವಳು ಸತ್ಯಂ ಶಿವಂ ಸುಂದರಂ ಜೊತೆಗೂಡಿ)

**ಹಾಡು** :. ಆನಂದ ಆನಂದ ಆನಂದ
ಸಾಳ್ವನ ಸೇರುವ ಮಹದಾನಂದ ॥
ಪ್ರೀತಿಯೆ ದೇವರು, ಪ್ರಣಯಾರಾಧನೆ
ಒಲವೇ ಬಾಳಿನ ಗಾಯತ್ರಿ !
ಭಾವ ಕುಸುಮಗಳ ಮಾಲೆಯ ಹಾಕಿ
ಪ್ರೇಮ ಪಾಡುವೆವು ಹಗಲೂ ರಾತ್ರಿ !

**ದೃಶ್ಯ : ೫** **ಅರಮನೆ**

**ಸಾಳ್ವ** : ಸತ್ತ ದಿನಗಳ ಜಪಿಸಿ ಜಡವಾಗದಿರು ಮನವೆ
ಮತ್ತೆ ಹೊಸ ಚೇತನವ ತುಂಬಿಕೋ ಘನವೇ ॥
ರಣಕಾಟಿಯಂದದಲಿ ಚಿಂತೆ ಸಂತೆಯ ನೆರೆಯೆ
ನೀನತ್ತ ಸುಳಿಯದಿರು ಮರುಳು ಮನವೆ
ಬಿಸಿಲು ಕುದುರೆಯ ತೆರದಿ ಮೋಹ ಮದಿರೆಯು ಕುಣಿಯೆ
ನೆಕ್ಕದಿರಲದ ನಿನ್ನ ನೆನಪಿನಾ ರಸನೆ ॥ ೧ ॥
ಮುಗಿಲ ಮಲ್ಲಿಗೆಯಿಂದ ಸೌಗಂಧ ಸೂಸಿ ಬರೆ
ವಾಸಿಸಲು ನಾಸಿಕವು ಹಲುಬದಿರಲಿ
ಕಣ್ಣ ತಣಿಸಿದ ಮಾಟ, ಮೈಯ ಮರೆಸಿದ ಬೇಟ
ಕಿವಿಯ ತುಂಬಿದ ಗಾನ ಮತ್ತೆ ಬರದಿರಲಿ ॥ ೨ ॥

**ಅಂಬೆ** : ಬಂದೆ ಬಂದೆ ಬಳಿಗೆ ಬಂದೆ
ಆನಂದವನ್ನು ಅರಸಿ ತಂದೆ
ಸೆರೆಯ ಹರಿದು ಹೊರಗೆ ಬಂದೆ
ಸಿರಿಯ ಬಾಳ ಬದುಕೆ ಬಂದೆ
ಸಗ್ಗ ಸೊಗವ ಸೂರೆಗೆಯ್ಯೆ
ಹಿಗ್ಗಿ ಹಿಗ್ಗಿ ಬಂದೆ ॥
ಜಿಂಕೆಯಂತೆ ಜಿಗಿದು ಜಿಗಿದು
ನವಿಲಿನಂತೆ ಕುಣಿದು ಕುಣಿದು
ಚಿಟ್ಟೆಯಂತೆ ಸುಳಿದು ಸುಳಿದು
ಚಕೋರನಂತೆ ಚಂದ್ರನೆಡೆಗೆ ಓಡೋಡಿ ಬಂದೆ ॥

**ಸಾಳ್ವ** : ಕನಸಿನಲಿ ಗೋಪುರವ ಕಟ್ಟದಿರು ಅಂಬೆ
ಕೊಟ್ಟೀತು ನೋವುಗಳ ಸಹಿಸೆ ನೀ ಮುಂದೆ
ಯುದ್ಧದಲಿ ಗೆದ್ದವನು ಗಂಡು, ತಾ ಸೋತವನು ಹೆಣ್ಣು
ನಾನೀಗ ಸೋತವನು !

**ಅಂಬೆ** : ಆದರೂ ನನ್ನೆದೆಯ ಗೆದ್ದವನು ನೀನು
ನನ್ನೊಲವನೆಲ್ಲವನು ಸೂರೆಗೊಂಡವನು.
ಎನ್ನರಸ, ಚೆನ್ನರಸ ಒಲವರಸ ಸಾಳ್ವ
ಸರಸ ಸಾಗರದಲ್ಲಿ ವಿರಸದಲೆಗಳದೇಕೆ ?
ನೋಡು, ನುಡಿ, ನನ್ನೊಡನೆ ಮಾತಾಡು
ಸ್ವರ್ಗವನು ನಾಚಿಸುವ ಸುಖವನೊಡಗೂಡು.

**ಸಾಳ್ವ** : ಸುಖದ ಸೊಲ್ಲೆತ್ತದಿರು ಸಾಲ್ವನೀ ಎಡೆಯಲ್ಲಿ
ನೀ ಅಪಹೃತ ಹೆಣ್ಣು ಪರಪುರುಷಗಿತ್ತ ಎಡೆ
ಮಲಿನಗೈವುದು ಪಾಪ ದಯಮಾಡಿ ಬಿಟ್ಟು ನಡೆ.

**ಅಂಬೆ** : ಭೀಷ್ಮನಪಹರಣದಲಿ ನನ್ನದೇನಿದೆ ಪಾಲು ?
ಅಪರಾಧಿ ನಾನಲ್ಲ, ದಂಡನೆಯು ನನಗಲ್ಲ
ನೀನೇಕೆ ನಿರ್ದಯಿಯೊ ಸಾಳ್ವ ತರವಲ್ಲ !
ಶೀಲದಲಿ ನಾನಿಹೆನು ಪ್ರಾಂಜಲದ ಹಾಲು
ರೂಪದಲಿ ಚರಿತೆಯಲಿ ಎಂದಿನಂಬೆಯು ನಾನು
ಅಗ್ನಿ ಪರಿಶುದ್ಧೆ, ಗಂಗೆಯಂತಮಲೆ
ನಾ ನಿನ್ನ ಪ್ರಣಯಾರ್ಥಿ ನಾ ಹೆಣ್ಣು ನಾ ಅಬಲೆ
ದಮ್ಮಯ್ಯ ದತ್ತಯ್ಯ ಕೈ ಹಿಡಿಯೊ ಸ್ವಾಮಿ !

**ಸಾಳ್ವ** : ಎನ್ನ ಮೈ ಮುಟ್ಟಿದರೆ ಸುಟ್ಟು ಹೋಗುವೆ ನೀನು
ಅಂಬೆ, ನೀ ಪತಿತೆ ಪಾತಕಿಯು
ಶುದ್ಧ ಶೀಲೆಯೆ ಅಲ್ಲ !
ಪರಪುರುಷನಾಶ್ರಯದಿ ಕೆಲದಿನಗಳಿದ್ದವಳು !
ಬೆಂಕಿ ಇದ್ದೆಡೆಯಲ್ಲಿ ಬೆಣ್ಣೆ ಕರಗದೆ ಹೇಳು ?

**ಅಂಬೆ** : ಸಾಳ್ವಾ ಮುಚ್ಚು ಬಾಯ್ ಹೆಂಬೇಡಿ
ಗಂಡು ವೇಷದಿ ಮೆರೆವ ಹೇ ಶಿಖಂಡಿ !
ಸಾಧ್ವಿಯನು ಶಂಕಿಸಿದ ಪರಮ ಪಾತಕಿಯೆ
ಮತ್ತೊಮ್ಮೆ ಉಸುರಿದರೆ ನಾಲಗೆಯ ಇರಿದೇನು;
ಪರಿಶುದ್ಧೆ, ಪರಿಶುದ್ಧೆ ಪರಮ ಪಾವನೆ ನಾನು

ಪರಿಶುದ್ಧೆ, ಪರಿಶುದ್ಧೆ ಪರಮ ಪಾವನೆ ನಾನು
ನಾನು ಪರಿಶುದ್ಧೆ ನಾನು ಪರಿಶುದ್ಧೆ
ಪಾವನೆಯು ನಾನು
ಪಾವನೆಯು ನಾನು !

**ದೃಶ್ಯ : ೬** **ಭೀಷ್ಮನರಮನೆ**

**ಅಂಬೆ** : ಕುರುಕುಲದ ಕಣ್ಮಣಿಯೆ ಕಾರುಣ್ಯದಾ ಕಡಲೆ
ಓ ಭೀಷ್ಮ, ಪರಿಶುದ್ಧೆ, ಪರಿಶುದ್ಧೆ, ನಾನು ಪರಿಶುದ್ಧೆ
ದೇವಗಂಗೆಗು ಮಿಗಿಲು ಪ್ರಾಂಜಲದ ತೀರ್ಥ
ನಿನ್ನ ಅಭಿಮತ ಸಾಕು ಉಳಿದೆಲ್ಲವದು ವ್ಯರ್ಥ !

**ಭೀಷ್ಮ** : ತಾಯಿ ಗಂಗೆಯ ಆಣೆ ನೀನಗ್ನಿ ಪರಿಶುದ್ಧೆ
ಸಂದೇಹಕೆಡೆಯಿಲ್ಲ ಸಾಕ್ಷಿಯದು ಬೇಕಿಲ್ಲ
ಉದ್ವಿಗ್ನಳಾಗದಿರು ಉದ್ಗಾರ ತೆಗೆಯದಿರು
ಮತ್ತೆ ಬಂದೆಯದೇಕೆ ಇತ್ತ ಮರಳಿ ?

**ಅಂಬೆ** : ಮದುವೆ ನಿಲ್ಲಲು ಬಂದ ಮಡದಿಯಾಗಲು ಬಂದೆ
ನೀನೆ ಗತಿ ನೀನೆ ಮತಿ ನೀನೆ ಗಂಡನು ನನಗೆ
ಸೆರಗೊಡ್ಡಿ ಬೇಡುವೆನು ಪ್ರೇಮ ಭಿಕ್ಷುಕಿ ನಾನು
ದೊರೆತನದ ಹಿರಿಯಾಸೆ ನನಗಿಲ್ಲ ಭೀಷ್ಮ !
ಬಿತ್ತರದ ಬಾನಿನಲಿ ಬತ್ತಲೆಯ ಬಯಲಿನಲಿ
ನಂದನೋದ್ಯಾನವನೆ ಬೆಳೆವವಳು ನಾನಲ್ಲ
ಪೂರ್ಣಿಮೆಯ ಚಂದಿರನ ಕನ್ನಡಿಯ ಭಿತ್ತಿಯಲಿ
ಹೆಸರನ್ನು ಕೆತ್ತುವಾ ಬಯಕೆ ಎನಗಿಲ್ಲ !
ಬರಿಯ ಗರತಿಯ ಬಾಳ ಬಯಸುತಿಹೆನಷ್ಟೇ
ಉಡಿತುಂಬು, ಮುಡಿತುಂಬು, ಮನತುಂಬು ಬಾರ !

**ಭೀಷ್ಮ** : ಪುಸಿಯ ನಚ್ಚುಗೆಯಲ್ಲಿ ಹುಚ್ಚಳಾಗಿಹೆ ನೀನು
ನಿನಗಾಗಿ ಮರುಗುವೆನು, ನಿನಗಾಗಿ ಕರಗುವೆನು
ಮದುವೆಗೂ ಭೀಷ್ಮನಿಗು ಶುದ್ಧ ಸಲುವಳಿ ಇಲ್ಲ
ಯಾರನಾದರು ಬೇಡು, ಒಲಿ, ಲಗ್ನವಾಗು
ತಮ್ಮನನು ನೀ ಒಲಿಯೆ ಸಂತಸವು ಅಂಬೆ !

**ಅಂಬೆ** : ತಮ್ಮನನು ಒಲಿಯುವುದೆ ! ಹುಂ !
ಆ ನಿನ್ನ ಮುಖಗೇಡಿ ತಮ್ಮನನು ಒಲಿಯುವುದೆ ?
ನಿನ್ನ ನೆರಳಲಿ ಬೆಳೆದ ಪರತಂತ್ರ ಜೀವಿಯವ
ಆ ಚಿತ್ರವೀರ್ಯನು ನನಗೆ ಯೋಗ್ಯ ವರನಲ್ಲ
ಕೆಚ್ಚೆದೆಯ ಕಟ್ಟಾಳು ಮೆಟ್ಟಿ ತಂದವ ನೀನು
ನೀನಲ್ಲದನ್ಯನನು ನಾನೊಲಿವಳಲ್ಲ !
ಅರಳುತಿಹ ಕುಸುಮವನು ಹಿಸುಕದಿರು ಭೀಷ್ಮ
ಬೆಡಗಿಯೊರ್ವಳ ಬಾಳ ಹುಡಿಗೆಯ್ಯೆ ಹಿತವಲ್ಲ !

**ಭೀಷ್ಮ** : ಹಿತವಲ್ಲ ಹಿತವಲ್ಲ ಕೆಟ್ಟ ಹಟ ಹಿತವಲ್ಲ !
ಬಿಟ್ಟು ಕಳೆ ಅಂಬೆ ಭೀಷ್ಮನಾರಿಗು ಅಲ್ಲ !
ಮದುವೆ ಮಂಟಪದಲ್ಲಿ ಕೈ ಮುಟ್ಟಿ ತಂದೆ ನಿಜ

ಅದುವೆ ಆಕಸ್ಮಿಕವು ಉದ್ದೇಶವಿರಲಿಲ್ಲ
ಭೀಷ್ಮನೊ ಸಾಲ್ವನೋ ಅಂಬೆ ಅಂಬಿಕೆಯರೊ
ಯಾರಾದರೇನಂತೆ ವಿಧಿಯ ಕೈ ಬೊಂಬೆಗಳು
ಅವನು ಆಡಿಸುತಿರುವ ಹಾಹೆಗಳು ನಾವು !

**ಅಂಬೆ** : ವೇದಾಂತ ಕೇಳಲಿಕೆ ಬರಲಿಲ್ಲ ಭೀಷ್ಮ,
ನ್ಯಾಯವನು ಬೇಡುವೆನೇ ಧರ್ಮವನು ಬೇಡುವೆನು
ಕದ್ದು ತಂದವನವನೇ ಹಣ್ಣ ಮೆಲ್ಲಲು ಬೇಕು

**ಭೀಷ್ಮ** : ನನ್ನ ತಾಯಿಗೆ ನಾನು ಭಾಷೆ ಕೊಟ್ಟಿಹೆನು

**ಅಂಬೆ** : ಭಾಷೆ ಭರವಸೆ ಎಲ್ಲ ಅನುಕೂಲಸಿಂಧು !

**ಭೀಷ್ಮ** : ಇರಬಹುದು ಅನ್ಯರಿಗೆ, ಈ ಭೀಷ್ಮನಲಿ ಸಲ್ಲ !

**ಅಂಬೆ** : ಸಲ್ಲುವಂತೆಸಗುವುದೆ ಮಾನವನ ಧರ್ಮ

**ಭೀಷ್ಮ** : ಧರ್ಮಪಾಠವ ಕಲಿಯೆ ಕಾಲ ಮೀರಿಹುದಂಬೆ !
ಪ್ರೇಮಯಾಚನೆಗೈವ ನಿನಗಿಲ್ಲಿ ಎಡೆಯಿಲ್ಲ
ನನ್ನ ನಿನ್ನಯ ಹಾದಿ ಒಡೆದು ಬೇರಾಗಿಹುದು
ನೀನು ನೆಲದಲ್ಲಿ ನಾನು ಅಂಬರದಲ್ಲಿ !
ತಾಳ ಮೇಳವೆ ಇಲ್ಲ ಜತಿಯ ಜೋಡಣೆ ಇಲ್ಲ
ರಾಗ ಸಂಯೋಜನೆಗೆ ಶ್ರುತಿ ಕೂಡುತಿಲ್ಲ !
ಕೇಳಂಬೆ.
ಆಕಾಶ ನಕ್ಷತ್ರ ನೀಹಾರಿಕಾವಲಯ
ಜ್ಯೋತಿರ್ವಲಯವೇ ಕಳಚಿ ನೆಲಕುರುಳಿ ಬಿದ್ದರೂ
ನೆಲದ ನದಿ ನದ ಮೇರು ಆಕಾಶವೈದಿದರು
ಭೀಷ್ಮ ಪ್ರತಿಜ್ಞೆಯದು ಪಲ್ಲಟಿಸದೆಂದು ತಿಳಿ !

**ಅಂಬೆ** : ಒಂದು ಕೈ ನೋಡುವೆನು, ನಾನದನು ಮುರಿಯುವೆನು
ಪರಶುರಾಮರ ಕಂಡು ಪ್ರೇರಣೆಯ ನೀಡುವೆನು
ನಿನ್ನ ವಶಗೈಯುವುದು ನನ್ನಿಂದಲಾಗದಿರೆ
ಶುದ್ಧಾಗ್ನಿಯೊಳು ಬಿದ್ದು ದಗ್ಧಳಾಗುವೆನು !
ರಾಮ,
ಗಂಡುಗೊಡಲಿಯ ಗಂಡ ಓ ಪರಶುರಾಮ !
ಮುಯ್ಯೇಳು ಸೂಳ್ ಭೂಚಕ್ರಮಂ ತಿರುಪಿ
ಕ್ಷಾತ್ರಕ್ಕೆ ಪಿಳ್ಳೆ ಪೆಸರಿಲ್ಲದಂತೆಸಗಿದಾ ಧೀರ
ಸೆಳೆಗೊಂಬೆಯಲ್ಲಿರುವ ಕುಡಿಗಳನು ಸಮರ್ಥಂತೆ
ಏಟಿಗೆಣ್ಬಾಸಿರಂ ಪಿಳ್ಳೆಗಳನುರುಳಿಸಿದ
ಗಂಡುಗಲಿ ! ಓ ಭಾರ್ಗವ, ನಿನ್ನ ಶಿಷ್ಯನು ಭೀಷ್ಮ
ನಿನ್ನಣುಗ ಭೀಷ್ಮ, ಅವಗಿಂದೆ ತಿಳಿಹೇಳು
ನನ್ನೊಲಿಯುವಂತೆಸಗು ! ನನ್ನೊಲಿಯುವಂತೆಸಗು !

**ದೃಶ್ಯ : ೭** **ಬಯಲು**

**ಸತ್ಯಂ**
**ಶಿವಂ**
**ಸುಂದರಂ** } ಚಳಿಯ ಕೊಟ್ಟೆ ಕಳೆಯ ಕೊಟ್ಟೆ
ಉರಿವ ಬಿಸಿಲ ಬಣ್ಣ ಕೊಟ್ಟೆ
ಹಸುರ ಹೆಸರ ಅಳಿಸಿಬಿಟ್ಟೆ

ಹದವ ಮಾಡಿದೆ.. ಎದೆಗೆ
ಬೆದೆಯ ತುಂಬಿದೆ
ಎಂದು ಹಾಡು ಹಾಡಿಕೊಂಡು ಮಾಗಿಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.
ಸೂರ್ಯ ನೀರ ಕದಿಯುತಿದ್ದ
ಚಂದ್ರ ಹಾಲ ಕುಡಿಯುತಿದ್ದ
ತಾರೆ ಹಲ್ಲು ಕಿರಿಯುತಿತ್ತು
ನಾಣೆ ಇಲ್ಲದೆ – ತನಗೆ
ಹೇಸಿಕೊಳ್ಳದೆ
ಎಂದು ಹಾಡ ಹಾಡಿಕೊಂಡು ಮಾಗಿ ಬಂದಿದೆ
ಸುಧಾಕರನ ಸೋಗು ಹಾಕಿ ಡೊಳ್ಳು ಮೆರೆದಿದೆ.

**ಸುಂದರಂ:** ಕಾಳುಗೆಡೆಯದಿರಿ ಹೇಳಿ ಸಖಿಯರೇ
ಏನಗೈದ ಪರಶು ? ಚಂಡ ಭೀಷ್ಮನನು
ದಂಡಿಸಿದನೆ ಮೇಣೊಲಿಸಲೆತ್ನಿಸಿದನೆ ?
ಭೀಷ್ಮನೊಪ್ಪಿದನೆ ಕೈಯ ಹಿಡಿವನೆ
ಅಂಬೆ ಮನವ ತುಂಬಿ ?
ಬಾಳುವಳೆ ಅವಳು ಸತಿ ಗರತಿಯಾಗಿ
ಸಂಸಾರದಿರವ ನಂಬಿ !

**ಶಿವಂ :** ಇಲ್ಲ ಸಖಿಯೆ ಇಲ್ಲಿಲ್ಲ ಕೇಳು ಶ್ರಮವೆಲ್ಲ ವ್ಯರ್ಥವಾಯ್ತು

**ಸತ್ಯಂ :** ಹೆಣ್ಣ ತಾನು ಕಣ್ಣೆತ್ತಿ ನೋಡೆನೆಂದಾಡಿ ದೇವವ್ರತನು
ಕೋಪಗೊಂಡು ಭಾರ್ಗವನ ಕೂಡೆ ಹೋರಾಡಿ ಗೆದ್ದನವನು

**ಅಂಬೆ :** (ಪ್ರವೇಶಿಸಿ)
ಭಾರ್ಗವನ ಗೆಲಿದನೇ ಆ ದ್ರೋಹಿ ಭೀಷ್ಮ !
ಗೆದ್ದೇನ ಗಳಿಸಿದನು ಪೃಥ್ವಿಯನೆ ? ಪದವಿಯನೆ ?
ಸತ್ಕೀರ್ತಿ ಸನ್ಮಾನ ಸಾಮ್ರಾಜ್ಯವನ್ನೆ ?
ಏನ ಗಳಿಸಿದನವನು ಒಂಟಿಮರ ಗಂಟುಮರ !
ನರಕ ಕಾದಿದೆ ಅವಗೆ ಆ ಗುರುದ್ರೋಹಿಗೆ !
ಭೀಷ್ಮ, ಓ ಭೀಷ್ಮ, ಪಾತಕಿಯೆ !
'ಹೆಣ್ಣು ಕರುಣೆಯ ಕಣ್ಣು'
ಎಂಬ ಜಾಣ್ನುಡಿಯೆಲ್ಲ ಹುಡಿಯಾಗಲಿ
ಮಮತೆ ಮೋಹದ ಬಳ್ಳಿ ಸುರುಟಿ ಸೀಕರಿಗೊಂಡು
ಹಾಳಾಗಲಿ !
ಓ ಪಾಪೀ, ಓ ಪಾಪಿ ಗಾಂಗೇಯ,
ಭೀಷ್ಮಪ್ರತಿಜ್ಞೆಯೊಲು ಅಂಬೆಪ್ರತಿಜ್ಞೆಯನು ಕೇಳು :
ಘೋರವನ್ನೆಸಗುವೆನು ನಿನ್ನ ನಾ ಕೊಲ್ಲುವೆನು
ನಕ್ಷತ್ರ ಮಂಡಲಕೆ ಅಕ್ಷತೆಯನಿಕ್ಕುವೆನು
ಚುಕ್ಕೆಗಳ ತರಿತರಿದು ಪರಿದೆಲ್ಲ ಚೆಲ್ಲುವೆನು
ಸೂರ್ಯಚಂದ್ರರ ಹಿಡಿದು ಅಪ್ಪಳಿಸಿ ಬಿಸುಡುವೆನು
ಮೇರುಮಂದರಗಳನು ಹುಡಿಗೈದು ಗುಡಿಸುವೆನು
ಸಪ್ತಸಾಗರವೀಂಟಿ, ಸೀಂಟಿ ಬಿಸುಡುವೆ ನೆಲವ !
ಓ ಭೀಷ್ಮ,

ಭೀಮ ರಣರಂಗದಲಿ ಹೆಣದ ಹೆಬ್ಬಣಬೆಯಲಿ
ಮಜ್ಜೆ ಮಾಂಸದ ಸೆಜ್ಜೆ ಎಲುವಿನೊಟ್ಟಿಲ ಬೆಟ್ಟ
ನೆತ್ತರಿನ ಕಡಲಿನಲಿ ಜೀವ ಹೆಣವಾಗಿಸುವೆ !
ರಣಹದ್ದು ಹಾರಾಟ ಪೆಣದಿನಿಯ ಚೀರಾಟ
ಅಂಥೆಡೆಯ ನೀನಿದ್ದು ನರಳುವಂತೆಸಗುವೆನು !
ಶರಜಾಲ ಜರ್ಜರಿತ ಘೋರ ಯಾತನೆಯಿಂದ
ಕಣ್ಣೀರಿನಲ್ಲಿಯೇ ಕೈ ತೊಳೆಸಿ ತೀರುವೆನು !
'ಅಯ್ಯಯೋ ನಾನೊಂದು ಹೆಣ್ಣಿಗನ್ಯಾಯವನು ಮಾಡಿದೆನು
ಅಯ್ಯಯೋ ನಾನೊಂದು ಹೆಣ್ಣಿಗನ್ಯಾಯವನು ಮಾಡಿದೆನು
ಅವಳ ಬಾಳಿಗೆ ಬೆಂಕಿಕೊಟ್ಟ ಪಾತಕಿಯಾನು,
ಎಂದೆಲ್ಲ ಒರಲುತ್ತ, ಕೊರಗುತ್ತ, ನರಳುತ್ತ
ಕೊನೆ ಉಸಿರ ಸೆಳೆವಂತೆ ಶಾಪವಿತ್ತಿಹೆ ನಾನು !
ನಾನು ಅಮಾಯಕ ಹೆಣ್ಣು ಭಗ್ನ ಪ್ರಣಯಿ !!
ಗಗನ ಮಂಡಲದಲ್ಲಿ ವಿಹರಿಸುವ ಓ ಸೂರ್ಯ,
ಜಗದ ಅನ್ಯಾಯಗಳ ವೀಕ್ಷಿಸುವ ಸಾಕ್ಷಿಯೇ,
ಅಂಬೆಯಳಲಿಗೆ ನೀನೆ ಸತ್ಯ ಸಾಕ್ಷಿ !
ಭೀಷ್ಮನನ್ಯಾಯಕ್ಕೆ ನಿತ್ಯ ಸಾಕ್ಷಿ !
ನಡೆಯುವೆನು ಅಗ್ನಿದೇವನ ಬದಿಗೆ
ಅವನ ಕೆನ್ನಾಲಿಗೆಯ ಉಣಿಸು ನಾನಾಗುವೆನು
ಇದೋ ಬಂದೆ ಓ ಅಗ್ನಿ ಇದೋ ಬಂದೆ !
ನಿನ್ನ ಮಡಿಲನು ಸೇರಿ ನಾನಿಲ್ಲವಾಗುವೆನು
ನಾನೆಲ್ಲವಾಗುವೆನು ನಾನೆಲ್ಲವಾ..... !
(ಅಗ್ನಿಯಲ್ಲಿ ಬೀಳುವಳು)

**ಸತ್ಯಂ**
**ಶಿವಂ** } ಹೆಣ್ಣು ಹೆಣವಾದಳು !
ಹೆಣ ಬೂದಿಯಾಯಿತು !
ದಗ್ಧಳಾದಳು ಅಂಬೆ ಅಗ್ನಿಕುಂಡದಲಿ
ನೆನಪಷ್ಟೆ ಉಳಿದಿಹುದು ಈ ಧಾತ್ರಿಯಲ್ಲಿ !

**ಸುಂದರಂ:** ಮುಂದೆ ಭಾರತ ಯುದ್ಧ ಸಂಘಟಿಸಿದಾಗ
ತಾ ಶಿಖಂಡಿಯು ಆಗಿ ಜನಿಸಿ ಬಂದಳು ಅಂಬೆ !
ಭೀಷ್ಮರನು ಬಲಿಗೊಳಲು ಮುಂಚೂಣಿಗೈದಿದಳು
ಬಿಲ್ಲು ಬಾಣವ ಹಿಡಿದು ಟೇಂಕಾರಗೈದು !
ಕುರುಪಿತಾಮಹ ಭೀಷ್ಮರೇನನೋ ನೆನೆನೆನೆದು
ಶಸ್ತ್ರ ಸನ್ಯಾಸವನು ಸ್ವೀಕರಿಸಿ ಮಲಗಿದರು
ಶರಶಯ್ಯೆಯಲ್ಲಿ ! ಆ ಕುರುಕ್ಷೇತ್ರ ರಣರಂಗದಲ್ಲಿ !

**ಸತ್ಯಂ**
**ಶಿವಂ**
**ಸುಂದರಂ** } ಅಸತೋಮಾ ಸದ್ಗಮಯ
ತಮಸೋಮಾ ಜ್ಯೋತಿರ್ಗಮಯ
ಮೃತ್ಯೋರ್ಮಾಽಮೃತಂಗಮಯ

**॥ ಓಂ ಶಾಂತಿಃ ಶಾಂತಿಃ ಶಾಂತಿಃ ॥**

# ಬನವಾಸಿ

**ಪಾತ್ರವರ್ಗ**

**ಮಯೂರ**
**ಪಲ್ಲವಿ**
**ಅಲ್ಲಮ ಪ್ರಭು**
**ಮಾಯೆ**
**ಸಕಳೆ**
**ವಿಮಲೆ**
**ನಟ–ನಟಿ**
**ನರ್ತಕಿಯರು (ನಾಲ್ವರು)**

**ಪೀಠಿಕಾದೃಶ್ಯ**

(ಮೊದಲು ಆಲಾಪನಾ ರೂಪದಲ್ಲಿ ನಾಲ್ಕು ಸಾಲುಗಳನ್ನು ನುಡಿದು ಅನಂತರ ತಾಳಲಯಗತಿಯಲ್ಲಿ ಹಾಡುವುದು)

ನಟ–ನಟಿ : ಏನು ಚೆಲುವಿನ ನಾಡು ಚೆಲುವು ಚಿಮ್ಮುವ ನಾಡು
ನನ್ನೊಲುಮೆ ಈ ನಾಡು ಕರ್ನಾಟಕ ॥
ಹಾಲು ಹೊಳೆ ಜೇನು ಮಳೆ ನನ್ನ ತಾಯ್ ಮಡಿಲಲ್ಲಿ
ಹೊನ್ನ ಹೂಗಳ ಸೂರೆ ಸ್ವರ್ಣ ಕಟಕ ॥
ಪಡುಗಡಲ ತೀರದಲಿ ಮೂಡುಮಲೆ ನೆತ್ತಿಯಲಿ
ಬೆಡಗಿ ಬಿನ್ನಾಣವತಿ ನಲಿವ ನಾಡಿನಲಿ
ಕೊಡೆ ಹಿಡಿವ ಅಡಕೆಗಳ ತೆಂಗು ಶ್ರೀಗಂಧಗಳ
ಮಾಮರದ ಮಲ್ಲಿಗೆಯ ಕಂಪಿಹುದು ಇಲ್ಲಿ ॥
ಸಾಹಿತ್ಯ ಸಂಗೀತ ನೃತ್ಯ ಕಲೆಗಳ ಬೀಡು
ಲಲಿತ ಕಲೆ ಮೆರೆವ ನೆಲೆ ಕರ್ನಾಟಕ
ಶಿಲ್ಪ ಸೌಂದರ್ಯದಲಿ ಕಲ್ಪನೆಯ ಬಲೆ ಬೀಸಿ
ಕುಂಚ ಕುಸುರಿಯ ತೆರೆಯ ಕರ್ನಾಟಕ ॥

– ಇವರ ಹಾಡು ನರ್ತನಗಳು ಮುಗಿಯುವಷ್ಟರಲ್ಲಿ ಅವರ ವಿರುದ್ಧ ದಿಕ್ಕಿನಿಂದ ನಾಲ್ವರು ನರ್ತಕಿಯರು ನರ್ತಿಸುತ್ತಾ ಸ್ವಾಗತಿಸುತ್ತಾ ಬರುವರು –

**ನರ್ತಕಿ ೧** : ಬಾರಯ್ಯ ಮಿತ್ರನೆ ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ ಪ ॥
ತೆಂಗುಗಳು ತಲೆಯೆತ್ತಿ ಅಡಕೆಗಳು ಕೊಡೆಹಿಡಿದು
ಬಾಳೆಗಳು ಕರೆಯುತಿವೆ ತೋಳ ಬೀಸಿ
ಶ್ರೀಗಂಧ ಮಲ್ಲಿಗೆ ಮಾಕಂದ ಸಂಪಗೆ
ಕಾಫಿ ತೇಗ ಏಲಕ್ಕಿ ಕಂಪ ಸೂಸಿ ॥ ೧ ॥
ಕೃಷ್ಣೆ ಕಾವೇರಿಯರು ಹೈಮವತಿ ಕುಮುದವತಿ
ಶರಾವತಿ ತುಂಗಭದ್ರೆ ಕಣ್ವವರದೆ
ಅಮಲಪ್ರಭೆ ಘಟಪ್ರಭೆ ಎಲ್ಲ ಪ್ರಭೆಯರು ಸೇರಿ
ಕರೆಯುತಿಹರು ತೀರ್ಥ ತುಂಬಿ ತಮ್ಮ ಮಡಿಲೊಳು ॥ ೨ ॥
ಸಹ್ಯಾದ್ರಿ ಕೊಡಚಾದ್ರಿ ಚಾಮುಂಡಿ ನಂದಿಗಳು
ದತ್ತಾತ್ರೇಯ ಪೀಠ ಮುಳ್ಳೈಗಿರಿ
ಕೆಮ್ಮಣ್ಣಗುಂಡಿ ಚಾಮುಂಡಿ ನೆತ್ತಿಯಲಿ
ಮುಗಿಲು ಮಾತಾಡುತಾವೆ ॥ ೩ ॥

**ನರ್ತಕಿ ೨** : ಕನ್ನಡ ನಾಡು ಕಲೆಗಳ ಬೀಡು
ಕವಿ ಕೋಗಿಲೆಗಳ ನೆಲೆವೀಡು
ಶಿಲ್ಪದ ಕಲ್ಪದ ನಾದದ ಜಲ್ಪದ
ಸಂಗೀತದ ತೌರೀ ನಾಡು ॥ ೪ ॥
ಅಲರಿಪು ತಿಲ್ಲಾನ ರಂಗ ವಿಧಾನ
ನಾಟ್ಯಾಗಮದಾ ಉದ್ಯಾನ
ಚಂಡೆ ಮೃದಂಗ ತೋಂ ತೋಂ ತೋಂ
ತಾಳ ಮೇಳ ಗತಿ ಧೀಂ ಧೀಂ ಧೀಂ ॥ ೫ ॥

**ನರ್ತಕಿ ೩** : ಅತ್ತ ಇತ್ತ ಸುತ್ತ ಮುತ್ತ

ಕತ್ತನೆತ್ತಿ ನೋಡಲೆತ್ತ
ಕಡಲಿನತ್ತ ಕೊಡಗಿನತ್ತ
ಕರ್ನಾಟಕ ದೇಶ ಬಯಲು ಬಾರೆ
ಜೋಗ ಗುಂಡಿ ನೀರು ಜಾರೆ
ಶಿವಸಮುದ್ರದರೆಯ ಓರೆ
ಬೆಡಗೆ ಬೆಡಗು ಸುಗ್ಗಿ ಸೂರೆ !
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೧ ॥
ಏನು ಏನು ಜೇನು ಜೇನು !
ಕನ್ನಡಮ್ಮ ಕಾಮಧೇನು !
ಅವಳ ಮಡಿಲು ಮುಡಿಯ ತುಂಬ
ಅವಳ ಬೆಡಗಿನೊಡಲ ತುಂಬ
ಹೂವೆ ಹೂವು ಹೂವೇ ಹೂವು
ಚೆಲ್ಲಿ ಚೆಲ್ಲಿ ಸೂಸುತಿಹವು
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೨ ॥
ಕೈಯ ಚಾಚು ಗಿರಿಯ ಧಾಮ
ಕಾಲು ಚಾಚರಣ್ಯಧಾಮ
ಮೈಯನೊದರು ಪಕ್ಷಿಧಾಮ
ನಮ್ಮ ನಾಡು ಶಾಂತಿ ಧಾಮ
ಹಚ್ಚ ಹಸಿರ ಪಚ್ಚೆ ಕುಸುಮ
ಓ ವಿಹಾರಿ, ದೇಶಚಾರಿ ಓ ಪ್ರವಾಸಿಗ
ನೋಡು ನಮ್ಮ ನಾಡನೊಮ್ಮೆ ನೆಲದ ಬಾಸಿಗ ॥ ೩ ॥

**ನರ್ತಕಿ ೪** : ಕರು ನಾಡಿನ ಸಿರಿ ಕಣ್ಣವೆ ತೆರೆಯಿತು
ಅಲೆ ಅಲೆ ಮಲೆಗಳ ಮೇಲೆ
ಚೆಂಬೆಳಗೆಳೆಯೆಳೆ ಚಿಗುರೊಡೆಯಿತು ಅದೊ
ಹೂವಿನ ಎಸಳಿನ ಮೇಲೆ
ಗತ ಇತಿಹಾಸವು ಮಣ್ಣಿನ ಕಣದಲಿ
ಕಲ್ಲಿನ ಬಂಡೆಯ ಮೇಲೆ
ಶಾಸನವಾಗಿದೆ ಘೋಷಣೆ ಕೊಡುತಿವೆ
ಕನ್ನಡ ನಾಡಿನ ಲೀಲೆ !
ಗಂಗ ಕದಂಬ ಚಾಲುಕ್ಯರರಸರು
ರಾಷ್ಟ್ರಕೂಟರಾಳಿದರಿಲ್ಲಿ
ಹೊಯ್ಸಳ ದೊರೆಗಳು ಕೆಳದಿಯ ಪ್ರಭುಗಳು
ವಿಜಯನಗರ ಮೆರೆದದ್ದಿಲ್ಲಿ !
ಮೈಸೂರಿನ ಮಹಾರಾಜರ ನಾಡು
ಕಿತ್ತೂರರಸಿಯ ಕರುಗೂಡು
ಮಾಗಡಿ ಕೆಂಪೇಗೌಡರ ಬೀಡು
ಕೊಡಗಿನ ವೀರರ ನೆಲೆವೀಡು

**ನಾಲ್ವರೂ** :

**ವಚನ** : ದೇಶ ವಿದೇಶದ ಓ ಪ್ರವಾಸಿಗರೇ,
ಸಂಸ್ಕೃತಿ ಸೌಂದರ್ಯಗಳ ಸವಿವ ಓ ರಸಿಕರೇ
ಬನ್ನಿ ಬನ್ನಿ ಬನ್ನಿ

ಇದುವೆ ಕನ್ನಡ ನಾಡು ಭೂದೇವಿಯ ಕುಂತಳಾ
ಈ ನೆಲದೊಡನಾಡಲು ನಿಮ್ಮ ಮೈಮನ ಪ್ರಾಂಜಲಾ
ಓ ಪ್ರವಾಸೀ,
ನಮ್ಮ ಸಹೃದಯ ಸದನವಾಸೀ
ಈ ಕರ್ನಾಟಕ ಪ್ರವಾಸಿಗರ ಸ್ವರ್ಗ
ಪಡೆದು ಧನ್ಯನೆ ಆಗು. ಅದರ ಸಂಸರ್ಗ !

**ಹಾಡು** : ಬಾರಯ್ಯ ಮಿತ್ರನೆ ಬಾರೊ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ ೧ ॥
ಕನ್ನಡಿಗರೈಸಿರಿಯ ನೋಡ ಬನ್ನಿ
ಕರ್ನಾಟ ದರ್ಶನವ ಪಡೆಯ ಬನ್ನಿ ॥ ೨ ॥

**– ದೃಶ್ಯ ಬದಲಾವಣೆ –**

೧. ಓ ಪ್ರವಾಸಿ
೨. ಇದು ಬನವಾಸಿ
೩. ಇದು ಬರಿಯ ಹೆಸರಲ್ಲವೊ
೪. ಮಂತ್ರವು ಮೋಹಕ ಗಾರುಡಿ !

**ಹಾಡು** : ಚೆಲ್ವಿನ ನೆಲೆ ಕಣ್ಗಳ ಬಲೆ ಸುಖದೊರತೆಯ ಬನವಾಸಿ
ಕಾನ್‌ಮಲೆಗಳ ಕಣ್ ತಣಿಸುವ ಪಂಪನದೀ ಬನವಾಸಿ

**ವಚನ** : ತ್ಯಾಗ ಭೋಗ ಗೇಯ ಗೋಷ್ಠಿ
ನೃತ್ಯಲೀಲಾ ವಿನೋದಕ್ಕೆ ಹೆಸರಾದುದು ಬನವಾಸಿ ॥

**ಹಾಡು** : ಅಮೋದಕೆ ಪ್ರೇಮೋದಕೆ ನೆಲೆವೀಡಿದು ಬನವಾಸಿ
ಖಗ ಗಾನದ ಮೃಗಮೋದದ ಪೆಂಪಿನ ಸೆಲೆ ಬನವಾಸಿ ॥

**ವಚನ ೧** : ಮಹಾಕವಿ ಪಂಪ ಹೇಳುವುದಾದರೂ ಏನೂ ?
ಈ ಭವ್ಯ ಬನವಾಸಿಯ ವನ್ಯಪ್ರದೇಶದಲ್ಲಿ
ಮಾನವನಾಗಿ ಹುಟ್ಟುವುದೇ ಪುಣ್ಯ !
ಆ ಭಾಗ್ಯವಿಲ್ಲದೇ ಹೋದಲ್ಲಿ, ಓ ಬ್ರಹ್ಮದೇವ,
ಬನವಾಸಿಯ ವನ್ಯ ಪ್ರದೇಶದಲ್ಲಿ ಮರಿದುಂಬಿಯಾಗಿ ಹುಟ್ಟಿಸು :
ವಸಂತ ವನದ ಹೂವಿನ ಹೊಂಬಟ್ಟಲಲ್ಲಿ ಕುಳಿತು
ಮಧುವನ್ನೊಮ್ಮೆ ಹೀರಿ ಓಂಕಾರದ ಝೇಂಕಾರಗೈಯುತ್ತೇನೆ.

**೨** : ಅಂತಾದರೆ ನನ್ನ ಜನ್ಮ ಸಾರ್ಥಕ ! ಎಂದು

**೩** : ಇಲ್ಲವೇ,
ಇದೇ ಬನವಾಸಿಯಲ್ಲಿ ನನ್ನನ್ನೊಂದು ಕೋಗಿಲೆಯಾಗಿ
ಹುಟ್ಟಿಸು. ಅಲ್ಲಿನ ವಸಂತ ಪಲ್ಲವವನ್ನು ಮೆದ್ದು
ಕಂಠವನ್ನು ಕಂಚಾಗಿಸಿಕೊಂಡು.
**'ಕುಹೂ ಕುಹೂ'** ಎಂದು ಕೂಜನ ಹಾಯಿಸುತ್ತೇನೆ.

**೪** : ಅಂತಾದರೆ ನನ್ನ ಬದುಕು ಬಂಗಾರ ! ಎನ್ನುತಾನೆ.

**೧** : ಸುಮಾರು ಎರಡು ಸಹಸ್ರ ವರ್ಷಗಳಿಂದಲೂ ಪ್ರಸಿದ್ಧಿ ಪಡೆದ
ಬನವಸೆಯನ್ನು ವಿಶ್ವವಿಖ್ಯಾತ ಇತಿಹಾಸಜ್ಞ ಟಾಲೆಮಿ
ಹೆಸರಿಸಿದ್ದಾನೆ, ಹೊಗಳಿದ್ದಾನೆ.

**೨** : ಅಂತಹ ಬನವಾಸಿಯ ಬನಸಿರಿಯ ಮಡಿಲಿಂಗೆ
ನಿನಗಿದೋ ಸ್ವಾಗತ – ಸುಸ್ವಾಗತ !

**ಹಾಡು** : ಇತಿಹಾಸದ ಹೊತ್ತಗೆಯಲಿ ಬನವಾಸಿಯ ಅದ್ಭುತ

ಸ್ವರ್ಣಾಕ್ಷರಗಳಲಿ ಬರೆದ ದಿವ್ಯಾಮೃತ ಸಂಪುಟ !
ಕದಂಬರಾಜರಾಳಿದಾ ಮೃಗೇಶವರ್ಮ ಬೆಳೆಸಿದಾ
ಕನ್ನಡ ಕುಲ ಕುಡಿಗಳು ಮೆರೆದ ವೀರ ಧ್ವಜಪಟ ॥ ೧ ॥
ಪಲ್ಲವರನು ಇಲ್ಲಗೈಯೆ ಸೇನೆ ಸಜ್ಜುಗೊಳಿಸಿದಾ

(ಕಹಳೆ ಕೊಂಬು ಭೇರಿಗಳ ನಾದ)

ರತ್ನಸಿಂಹಾಸನವನು ಮೊತ್ತ ಮೊದಲು ಸ್ಥಾಪಿಸಿದಾ

(ತುತ್ತೂರಿ ಮೊಳಗು)

ಕನ್ನಡ ರಾಜೇಶ್ವರಿಯಾ ತಂದು ಮೇಲೆ ಕೂರಿಸಿದಾ
(ಮಂಗಳವಾದ್ಯಗಳ ಮೊಳಗುವುವು ಕನ್ನಡ ರಾಜರಾಜೇಶ್ವರಿಗೆ
" ಜಯವಾಗಲಿ ಜಯವಾಗಲಿ "
ಎಂಬ ಮುಗಿಲು ಮುಟ್ಟುವ ಜಯಘೋಷ ಹಿನ್ನೆಲೆಯಲ್ಲಿ)
ಕನ್ನಡ ರಾಜೇಶ್ವರಿಯಾ ತಂದು ಮೇಲೆ ಕೂರಿಸಿದಾ
ಜಗದ್ವಿಖ್ಯಾತನವನು ನಮ್ಮ ಆ ಮಯೂರ !
ಮಯೂರ ! ಮಯೂರ ! ಮಯೂರ !!

– ಮಯೂರ ರಥಾರೂಢನಾಗಿ ನಿಂತು ಖಡ್ಗವನ್ನು ಝುಳುಪಿಸುತ್ತಾ –

**ಮಯೂರ** : ಕೆಚ್ಚೆದೆಯ ಶೂರರೇ, ಕನ್ನಡಿಗರೇ,
ನಚ್ಚುಗೆಯ ಮೂಡಿಸಿಹ ಕಡುಗಲಿಗಳೇ ॥ ಪ ॥
ಝುಳುಪಿಸಿರಿ ಝುಳುಪಿಸಿರಿ ಖಡ್ಗಗಳ ಝುಳುಪಿಸಿರಿ
ಖಣಿ ಖಟಿಲು ನಾದದಲಿ ಕ್ರಾಂತಿ ಕಿಡಿ ಸೂಸಲಿ
ಕನ್ನಡಿಗರನು ತುಳಿವ ಪುಂಡು ಪಲ್ಲವರನ್ನು
ಇಲ್ಲಗೈಯಲು ಬೇಕು ಪಣ ತೊಡಿರಿ ಇಂದೇ ॥ ೧ ॥
ವಂಚಕರ ಕಾಂಚಿಯನು ನುಚ್ಚುನುರಿಗೈದು
ಕನ್ನಡ ಸಾಮ್ರಾಜ್ಯ ಸಜ್ಜುಗೊಳಲೆಂದು
ಬನವಾಸಿಯಲಿ ಮೊದಲು ಸ್ಥಾಪಿಸಲ್ಕೆಂದುಃ
ಮುಂದಾಗಿ ಬನ್ನಿರೈ ಒಂದಾಗಿ ಇಂದು ॥ ೨ ॥
ನಿಮ್ಮತನ ಕುಸಿಯುತಿದೆ ನಿಮ್ಮ ನೆಲ ಬಿರಿಯುತಿದೆ
ನಿಮ್ಮೂರಿನಾಗಸದಿ ಮೂಡಲಿದೆ ರಣಹೇತು ಧೂಮಕೇತು !
ಅದ ದೂರಮಾಡಲಿಕೆ ಖಡ್ಗ ಹಿಡಿಯಿರಿ ಇಂದೇ
ದ್ರೋಹ ದುರ್ಗವನೊಡೆಯೆ ದೀಕ್ಷೆ ತೊಡಿರೋ ॥ ೩ ॥
ನಿಮ್ಮ ನೆಲ, ನಿಮ್ಮ ಜಲ ಪಲ್ಲವರ ಸೊತ್ತಲ್ಲ
ಯಾರೆ ಮುಟ್ಟಲು ಬರಲು ಉಳಿಗಾಲವಿಲ್ಲ
ನಿಮ್ಮ ತಾಯನು ಉಳಿಸಿ. ನಿಮ್ಮ ನುಡಿಯನು ಬೆಳೆಸಿ
ಕನ್ನಡದ ನೆಲದಲ್ಲಿ ಕನ್ನಡವೆ ತುಳಸಿ ॥ ೪ ॥
ಜೈ ಭುವನೇಶ್ವರಿ ! ಜೈ ರಾಜರಾಜೇಶ್ವರಿ !!
ಜೈ ಕನ್ನಡಾಂಬೆ ! ಜೈ ಕನ್ನಡಾಂಬೆ !!

(ಜಯಘೋಷ)

**ಹಿನ್ನೆಲೆ** : ಅಷ್ಟರಲ್ಲಿ ಪಲ್ಲವ ರಾಜಕುಮಾರಿ ಪಲ್ಲವಿ ಕನ್ನಡ ರಾಷ್ಟ್ರವೀರ
ಮಯೂರನನ್ನು ಮೆಚ್ಚಿ ತನ್ನ ತಂದೆಯನ್ನು ತೊರೆದು ರಣಭೂಮಿಗೆ
ಆಗಮಿಸುತ್ತಾಳೆ. ಆಗ

**ಪಲ್ಲವಿ** : (ಪ್ರವೇಶಿಸಿ)
ಕನ್ನಡ ರಾಜರಾಜೇಶ್ವರಿಗೆ ಜಯವಾಗಲಿ !

ಕನ್ನಡ ಕುವರ ಮಯೂರನಿಗೆ ಜಯವಾಗಲಿ !!

**ಮಯೂರ** : ಪಲ್ಲವಿ ! ನನ್ನ ಪ್ರಿಯತಮೆ ಪಲ್ಲವಿ !!
ನೀನಿಲ್ಲಿ ?

**ಪಲ್ಲವಿ** : ಅಹುದು, ಸ್ವಾಮಿ ಇದ್ದೆಡೆಯಲ್ಲಿ ಸೇವಕಿಯು ತಾನೆ ?
ಮಯೂರ,
ತಂದೆಯ ಮನೆಯನು ತೊರೆದು ಬಂದಿಹೆನೊ
ಕಾಂಚಿಯ ಕಡೆಗಣಿಸಿ ಬನವಾಸಿ ಒಲಿದೆನೊ
ಕನ್ನಡದ ಕಣ್ಮಣಿಯೆ ಓ ರಾಷ್ಟ್ರವೀರ !
ಪಲ್ಲವಿಯ ಹೃದಯದಾನಂದವೆ ಮಯೂರ !!

**ಮಯೂರ** : ಆನಂದ ಆನಂದ ಆನಂದವೆ ಓ ಆನಂದವೆ !
ಒಲವೆಂಬ ಅರವಿಂದ ಅರಳಿದಾನಂದವೆ ॥ ಪ ॥
ಪಲ್ಲವಿಯು ನನ್ನವಳು ನನ್ನ ಮನೆಯ ಬೆಳಕಿವಳು
ಈ ಕದಂಬ ವಂಶಕಿಂದು ದೇವತೆ ತಾನಾದವಳು ॥ ೧ ॥
ಪಲ್ಲವರ ಹುಡಿಗೈದು ಕನ್ನಡವ ಕಟ್ಟುವೇ
ಹಿಮಾಲಯದ ಉತ್ತುಂಗ ಶೃಂಗವನೆ ಮೆಟ್ಟುವೇ ॥ ೨ ॥
ಇವಳ ಈ ನೆರವಿಂದ ಪುರಾವತವ ತಿವಿಯುವೆ
ಬನವಾಸಿಯು ಭವ್ಯವೆನಿಸೆ ನಾಡಗುಡಿಯನೆತ್ತುವೆ ॥ ೩ ॥

**ಪಲ್ಲವಿ** : ರಸಿಕ ಕಲಾಧರ ಶೃಂಗಾರ ಸಾರ
ಶಶಿವದನೆಯ ಚೆಲುವ ಚಂದ್ರ ಚಕೋರ ॥
ಮಾರಾ ಮನ್ಮಥ ಮನೋವಿಹಾರ
ತಾರಾ ಲೋಕದ ಓ ಧ್ರುವತಾರ ॥ ೧ ॥
ಪದ– ಲಯ– ವಿನ್ಯಾಸ = ಪಲ್ಲವಿ ನಾನು
ಮೃದು ಪದ ಜತಿಯಲಿ ಚರಿಸುವೆ ನೀನು
ಮಾನಸ ಮಧು ಮಹೋತ್ಸವದಲಿ ಜೇನು
ಹಾಲ್ದಿಂಗಳಿನಲಿ ನಾನೂ ನೀನು !

**ಮಯೂರ** : ಪಲ್ಲವ ಕನ್ಯೆ ಓ ಪಲ್ಲವಿಯೆ
ಬೆಲ್ಲದ ಗಲ್ಲದ ಭಾಮಿನಿಯೇ !
ಹೂಗೆನ್ನೆಗಳಾ ಕುಡಿಹುಬ್ಬುಗಳಾ
ಕವಳಿಯ ಹಣ್ಣಿನ ಕಣ್ಣವಳೇ ॥ ೧ ॥
ಚೆಂದುಟಿ ಚೆಲುವೆ ಮಾಟ ಮೈಯವಳೆ
ಉಂಗುರ ಕೂದಲ ದುಂಬಿಯಾಡುವಳೆ
ಪ್ರಣಯ ಪ್ರಬೋದಿನಿ ಪ್ರೇಮೋನ್ಮಾದಿನಿ
ನೂಪುರ ನಾದದ ನರ್ತಕಿಯೇ ॥ ೨ ॥
ಕಟಿ ತಟ ವಿನ್ಯಸ್ತ ನವನಟಿ ಚತುರೆ
ಚಟುಲ ಚಾಟುತರ ತುಟಿಪುಟದವಳೆ
ಧಿಕಿಟ ಧಿಕಿಟ ಥಕ ಧೀಂ ಧೀಂ ಎನುತಂ
ನರ್ತನಗೈಯುವ ನಾಟ್ಯ ಮಯೂರಿಯೆ ॥ ೩ ॥

– ಭರತನಾಟ್ಯದ ವಿವಿಧ ಭಂಗಿಗಳಲ್ಲಿ ಇಬ್ಬರ ನರ್ತನ. ಅನಂತರ ನಟ – ನಟಿಯರು ಎರಡು ಪೀಠಗಳನ್ನು ತಂದು ರಂಗದ ಮಧ್ಯದಲ್ಲಿಡುವರು. ಉಳಿದವರು ಅವರಿಬ್ಬರನ್ನೂ ಕೂರಿಸಿ ಹೂ ಮಳೆಗರೆವರು –

**ನಟ–ನಟಿ** : ಬನವಸಿಯ ಸುವಿಲಾಸ ವಿಲಾಸಿಯೆ
ಘನತರ ರೂಪನೆ ಚಕ್ರೇಶ

ಶ್ರೀಶನೆ ಶುಭ ಸಂಶೋಭಿತ ತೇಜನೆ
ರಸಿಕ ಮನೋಹರ ಭೂಪೇಶ ॥ ೧ ॥
ಪಲ್ಲವ ಕುವರಿಯೆ ಓ ಪಲ್ಲವಿಯೆ
ಕ್ಷುಲ್ಲರ ತೊರೆದು ನೀ ಬಂದೆ
ಕನ್ನಡ ತಾಯಿಯ ಸೊಸೆಯಾಗಿಹೆ ನೀ
ಕನ್ನಡ ಬೆಳೆಸುತ ಬಾಳೆಂದೆ ॥ ೨ ॥
ಪಲ್ಲವಿ ಮಯೂರರಿಗೆ ಜಯವಾಗಲಿ
ಜಯವಾಗಲಿ
ಜಯವಾಗಲಿ !

**ವಚನ** : ಕನ್ನಡಿಗರ ಕಣ್ಮಣಿ ಮಯೂರನ ತಾಯ್ಮಡಿಲಾದ ಬನವಾಸಿ
ವ್ಯೋಮ ಮಾರುತಿ ಅಲ್ಲಮನ ಅಡುಂಬೊಲವೂ ಆಗಿದೆ !
ಅಲ್ಲಮಾ !
ಅಧ್ಯಾತ್ಮ ಲೋಕದ ಏಕೈಕ ಧ್ರುವತಾರೆ ಅಲ್ಲಮಾ !
ಇಹದಲ್ಲಿದ್ದೇ ಪರವನ್ನು ಸಾಧಿಸಿದ
ನಾಮ ರೂಪ ಕ್ರೀ ಕಳಾಪ ವಿರಾಮ ಆ ಅಲ್ಲಮ !
ಹನ್ನೆರಡನೆಯ ಶತಮಾನದ ಐತಿಹಾಸಿಕ ವ್ಯಕ್ತಿ ಕೂಡ !
ಬಸವ, ಚೆನ್ನಬಸವ, ಸಿದ್ಧರಾಮ, ಅಕ್ಕಮಹಾದೇವಿ
ಮೊದಲಾದವರ ಕನ್ನಡ ದೀಕ್ಷಾಗುರು,
ಕನ್ನಡ ಶಿಕ್ಷಾಗುರು ! ಕನ್ನಡ ಮೋಕ್ಷಗುರು ಅಲ್ಲಮ !
ಅಣ್ಣನ ಕಲ್ಯಾಣದಲ್ಲಿ ಶೂನ್ಯಪೀಠದಧಿಪತಿಯಾಗಿ,
ಅನುಭಾವ ಮಂಟಪದ ಅಧ್ಯಕ್ಷನಾಗಿ ಮೆರೆದ ಪ್ರಭು ಅವನೆ
ಪ್ರಭುದೇವನೂ ಅವನೆ !
ಅಧ್ಯಾತ್ಮ ಪ್ರಪಂಚದಲ್ಲಿ ನವ ಮನ್ವಂತರವನ್ನು ತೆರೆದ
ಮಹಾನುಭಾವ ಅಲ್ಲಮ !
ಚೆಲುವ ಮದ್ದಲಿಗ

ಅಂದೊಂದು ದಿನ................. –
ಬನವಾಸಿಯ ಮಧುಕೇಶ್ವರ ದೇಗುಲದ ಹೊರವಲಯದಲ್ಲಿ
ನಿಂತು ಆ ಚೆಲುವ ಮದ್ದಲಿಗ ಮದ್ದಲೆ ಬಾಜಿಸ
ತೊಡಗಿದ............

– ಹಿನ್ನೆಲೆಯಲ್ಲಿ ಮದ್ದಲೆಯ ಅಸ್ಪಷ್ಟ ಶಬ್ದ ಕೇಳಿಬರುವುದು –

ಮದ್ದಲೆಯ ದನಿಕೇಳಿ ಮಂತ್ರ ಮುಗ್ಧಳಾದವಳು ಚೆಲುವಿನ ಚಿಲುಮೆ
ಆಕೆ ಮಾಯೆ
ಮುಂಗಾರಿನ ಗುಡುಗು ಕೇಳಿದ ನವಿಲಿನಂತಾಯಿತು ಅವಳ ಮನ
ಮಯೂರ
ಕೂಡಲೆ ಓಡಿದಳು, ಮದ್ದಲಿಗ ಅಲ್ಲಮಪ್ರಭುವನ್ನು ಕರೆತಂದಳು.

– ಮದ್ದಲೆಯ ಧ್ವನಿ ಜೋರಾಗುವುದು. ಆ ಮೋಹನಾಂಗಿ, ನಾಟ್ಯ ಪ್ರವೀಣೆ ಮಾಯೆ ಅದರ ಲಯಗತಿಗನುಗುಣವಾಗಿ ನರ್ತಿಸುವಳು. ಶೃಂಗಾರ, ಹಾಸ್ಯ, ಕರುಣ, ರೌದ್ರ, ವೀರ, ಭಯಾನಕ, ಭೀಬತ್ಸ, ವಿಸ್ಮಯ, ಶಾಂತ – ಈ ಬಗೆಯ ನವರಸಗಳ ಅಭಿನಯ. –

– ನರ್ತನದ ಗತಿ ಗಗನಕ್ಕೇರಿದಾಗ ಮಾಯೆ ತಾಳ ತಪ್ಪುತ್ತಾಳೆ. ಕೂಡಲೇ ಪ್ರಭು ಮದ್ದಲೆ ನುಡಿಸುವುದನ್ನು ಬಿಟ್ಟು **'ಮಾಯೆ'** ಎಂದು ಜೋರಾಗಿ ಗರ್ಜಿಸುತ್ತಾನೆ ! ಮಾಯೆ ಥಟ್ಟನೆ ನಾಟ್ಯ ನಿಲ್ಲಿಸುತ್ತಾಳೆ ಸ್ತಂಭೀಭೂತಳಾಗಿ ಚಣಕಾಲ ರಂಗದಲ್ಲಿ ರುಂದ್ರ ಮೌನ ! –

ಪ್ರಭು : ಇದು ಶುದ್ಧ ಮಾಯೆ !

ಮಾಯೆ : ಸ್ವಾಮಿ, ನನ್ನ ಹೆಸರು ಗೊತ್ತಾಯಿತು ಹೇಗೆ ?

ಪ್ರಭು : ಅದ ಕೆಳಿ ತಿಳಿಯಬೇಕೇನು ? ನರ್ತನದ ವರ್ತನೆ
ತಾನೆ ಹೇಳದೆ ? ತಾನೇ ತೋರದೆ ?

ಮಾಯೆ : ತಾಳ ತಪ್ಪಿದೆನೆ ಪ್ರಭು ?

ಪ್ರಭು : (ಜೋರಾಗಿ) ಮಾಯೆ !

ಮಾಯೆ : ಅಹುದು ಸ್ವಾಮಿ, ನಾನು ಈ ಬನವಸಿಯ ಅರಸು ಮಮಕಾರ,
ಅರಸಿ ಮೋಹಿನಿ ಇವರ ಸುಪುತ್ರಿ – ಮಾಯೆ

ಪ್ರಭು : ಆ ವಿವರವೆಲ್ಲಾ ಬೇಕಿಲ್ಲ ನನಗೆ ;
ಮಾಯೆ, ಲಯದಲ್ಲಿ ನಯವಿಲ್ಲ, ಗತಿಯಲ್ಲಿ ಗತ್ತಿಲ್ಲ. ಗುರಿಯೂ
ಇಲ್ಲ !

ಮಾಯೆ : ತಪ್ಪಾಯ್ತು ಕ್ಷಮಿಸೋಣವಾಗಲಿ !
ಅರಿಯದೆ ಮಾಡಿದ ಅಪರಾಧವನ್ನು ಗುರುಗಳೇ ಕೃಪೆ ಮಾಡಿ
ತಿದ್ದಬಹುದಲ್ಲ.

ಪ್ರಭು : ನಾ ನಿನ್ನ ಗುರುವಲ್ಲ ! ಆದರೆ ಕಲೆಗಾಗುತ್ತಿರುವ ಅಪಚಾರ ಸಹಿಸೆ.
ಅದಕ್ಕಾಗಿ.... ಹೂಂ..

– ಪ್ರಭುವೂ ಅಭಿನಯಿಸಿ ಅವಳನ್ನು ಅನುಕರಿಸುವಂತೆ ಮಾಡುವನು. ಅತ್ಯದ್ಭುತವಾದ ಸಪ್ತ ತಾಳಗಳ ಜತಿಯ ನರ್ತನ. ಅವಳು ಅವನ ಮೈ ಮುಟ್ಟಿ ಭಾವ ಬೆಡಗು ಬಿನ್ನಾಣ ವಯ್ಯಾರ ತೋರಿ ಮತ್ತೆ ತಾಳ ತಪ್ಪುವಳು. ಬೇಸರಗೊಂಡ ಅಲ್ಲಮ ದೂರ ಸರಿದು ತಾಳಗಳನ್ನು ಹಿಡಿದು ನುಡಿಸುತ್ತಾ ನಟುವಾಂಗ ನಡೆಸುವನು. ಮಾಯೆ ಆಯ ತಪ್ಪುವಳು. ಪ್ರಭು ತಾಳಗಳನ್ನು ಭರ್ರನೆ ಬಿಸಾಡುವನು. ಮತ್ತೆ ರಂಗದಲ್ಲಿ ಮೌನ! –

ಪ್ರಭು : ಮಾಯೆ !
(ಮಾಯೆ ಬೆದರಿದವಳಂತೆ ನಡುಗುತ್ತಾ ನಿಲ್ಲುವಳು)
ಭಾವದಲ್ಲೂ ಬದಲಾವಣೆ ! ಛೇ
ಏಕಾಗ್ರತೆಯ ಸುಳಿವಿಲ್ಲ !
ನಿನ್ನ ಮುಖದಲ್ಲಿ ನಿನ್ನ ಮನಸ್ಸನ್ನು ಓದಬಲ್ಲೆ !

ಮಾಯೆ : (ಕೃತಕವಾಗಿ ನಟಿಸಿ) ಅಯ್ಯಯ್ಯೋ ! ತಪ್ಪಾಯ್ತು......
ತಪ್ಪಾಯ್ತು

ಪ್ರಭು : ನಿನ್ನ ಕಣ್ಣುಗಳಲ್ಲಿ ಚಿತ್ತ ಚಾಂಚಲ್ಯದ ನೆರಳಾಡುತ್ತಿದೆ !
ಸಾತ್ವಿಕ ಆಂಗಿಕಾಭಿನಯಗಳಲ್ಲಿ ಗಾಂಭೀರ್ಯವಿಲ್ಲ.
ನೃತ್ಯ ಛಂದಸ್ಸು ಹಸಗೆಡುತ್ತಿದೆ !

ಮಾಯೆ : ಅದಷ್ಟೇ ತಾನೆ.... ?

ಪ್ರಭು : ಅಷ್ಟೇ ಅಲ್ಲ, ನಿನ್ನ
ಚರಣ ಚಾರಿಗಳು ಜಾರುತ್ತಿವೆ !

ಮಾಯೆ : ಅದು ಗೆಜ್ಜೆ ದೋಷ ಪ್ರಭು... ?

ಪ್ರಭು : ಅಲ್ಲ... ಗೆಜ್ಜೆ ಧರಿಸಿದ ಹೆಜ್ಜೆಯ ದೋಷ !

ನರ್ತಕಿ :

೧. : ಇದ್ದರೂ ಇರಬಹುದು ! ಮಾಡುವುದಾದರೂ
ಏನು ?

೨. : ಪರಿಸ್ಥಿತಿಯ ಪ್ರಭಾವರೀ ! ಹೆಣ್ಣೇನ ಮಾಡೀತು ಪಾಪ !

೩. : ನಮ್ಮೊಡತಿ ಆಯಾಸಗೊಂಡಿಹಳು !

೪. : ಅರಮನೆಗೆ ಹೋಗೋಣ... ?

– ಪ್ರಭು ಮತ್ತು ಮಾಯೆಯರು ನಡುವೆ, ಅವರ ಸುತ್ತ ನರ್ತಕಿಯರು –

ಕರ್ನಾಟಕ ಸಂಗೀತ ಸಾಮ್ರಾಟನೇ
ದಿಕ್ತಟದಿ ಅಟಮಟಿಪ ನಟರಾಜನೇ
ಶೃಂಗಾರ ಕುಲರಸಿಕ ಚಕ್ರೇಶನೇ
ಮುದ ಬೀರೋ.... ಸುಧೆ ತಾರೊ.... ಹೃದಯೇಶನೇ ॥ ೧ ॥
ಮೃದುಲ ಮೃದಂಗದ ಹೃದಯಂಗಮ ದನಿ
ಸದಮಲ ಭಾವದ ಸದ್ಗುರವೇ...
ಮದ್ದಲೆ ಸದ್ದನು ಬೆರೆಸಿದನೇ
ಮಾಯೆಯ ಎದೆಯಲಿ ನೆಲೆನಿಂತವನೇ ॥ ೨ ॥

**– ದೃಶ್ಯ ಬದಲಾವಣೆ –**

– ಪ್ರಭು ಮಾಯೆಯರ ಪ್ರವೇಶ. ಅವರ ಮುಂದೆ ಆರತಿ ಹಿಡಿದ ಇಬ್ಬರು ಸುವಾಸಿನಿಯರು ; ಪಕ್ಕದಲ್ಲಿ ಪೂವಲಿಯ ಸೂಸುವ ಇಬ್ಬರು ಎಲ್ಲರೂ ನರ್ತಿಸುತ್ತಾ ಸ್ವಾಗತಿಸುವರು –

ಸ್ವಾಗತವು ಸ್ವಾಗತವು ಸ್ವಾಗತವು ನಿಮಗೆ
ಸ್ವಾಗತವು ಮದ್ದಲೆಯ ಮುದ್ದು ಮೋಹನಗೆ ॥ ಪ ॥
ಮಾಯೆಯೊಲವಿನ ಚೆಲುವ ಚದುರ ಚೆನ್ನಿಗಗೆ
ಕಲೆಯ ಕಾಯಕವಿಡಿದ ಕವಿವರ್ಯಗೆ
ನಟುವಾಂಗ ಪಟುವಿಂಗೆ ನಾಟ್ಯವೇದದ ಗುರುಗೆ
ದಿಟದ ಮನ್ಮಥ ರೂಪಿ ಮಹನೀಯಗೆ ॥ ೧ ॥

– ಸಖಿಯರು ನರ್ತಿಸುತ್ತಲೇ ನಿರ್ಗಮಿಸುವರು.
ಮಾಯೆಯು ಶೃಂಗಾರ ನರ್ತನ ನರ್ತಿಸುತ್ತಾ ಅಲ್ಲಮನ ಮೇಲೆ ಬಿದ್ದು
ಒಲಿಸಿಕೊಳ್ಳುವ ಯತ್ನ ಮಾಡುವಳು –

ಬಿಂಕವೇಕೊ ಬಿಂಕವೇಕೊ ! ಈ ಮಾಯೆಯ
ಕಿಂಕರನೆ ಬಿಂಕವೇಕೊ
ಮಾಯೆಯೊಂದು ಚೆಲುವ ಚಿಲುಮೆ । ಚೆನ್ನಿಗನೆ
ಕಾಯ ಕರ್ಪೂರ ಪ್ರತಿಮೆ !
ಮಿದು ಗಲ್ಲಕೆ ಮುದವನೀಯೊ ! ಮೋಹನಾ
ಎದೆಯದುಮ್ಮಳವ ಕಳೆಯೊ
ತುಟಿಗೆ ತುಟಿಯ ಒತ್ತಿ
ಕಟಿಗೆ ಕೈಯ ಸುತ್ತಿ
ಕುಟಿಲ ಕುಂತಲಗಳಿಗೆ
ಚಿಗುರ ಬೆರಳ ಸೇರಿಸಿ
ಬೆರೆಯೆ ಬಾರೊ ! ಮೈಯ
ಮರೆಸು ಬಾರೊ ॥
ವಿಟಪುರುಷನೆ ನಟ ನಿತ್ಯನೆ । ನಿನಗಾಗಿ
ಬೇಟಕಾದಿದೆ ಇಲ್ಲಿ ಊಟ ಹಸಿದಿದೆ !
ಒಲಿದು ಬಂದ ಚೆಲುವೆ ನಾ
ಒಲವ ತಾರೊ ಮೋಹನ
ಇರವನೆಲ್ಲ ಕಳೆದು ನಾನು । ಇಲ್ಲವಾಗುವೆ
ನಿನ್ನೊಳೈಕ್ಯಗೊಳ್ಳುವೆ !

**ಪ್ರಭು** : ಧಿಕ್ಕಾರ ಧಿಕ್ಕಾರ ಮೋಹಕದ ಕಣ್ಣೇ
ಧಿಕ್ಕಾರ ಧಿಕ್ಕಾರ ಮತಿಗೆಟ್ಟ ಹೆಣ್ಣೇ ॥

ಕಾಮ ಸೂತ್ರವ ಹಿಡಿದ ಓ ಜಗದ ಮಾಯೆ
ಹೇಯ ಕಾರ್ಯಕೆ ಕೈಯ ಹಾಕದಿರುವ ತಾಯೆ ॥

**ಮಾಯೆ** : (ವಚನ) ಹ್ಞೂಂ ! ಅಲ್ಲಮಾ !! ನಾನಾರು ಗೊತ್ತೇ ?
ಮಾಯೆ !!!

**ಹಾಡು** : ಹರಿಯೆದೆಯ ಮೆಟ್ಟಿದೆನು
ಹರನ ಜಟೆ ಏರಿದೆನು
ಬ್ರಹ್ಮದೇವನ ಬಾಯ ಮುದ್ರಿಸಿದೆನು !
ಸುರನರೋರಗರೆಲ್ಲ
ಮರುಳ ಮುಗ್ಧರೋ ನನಗೆ
ಶರಣು ಹೊಗು ಹಟಬೇಡ ಹುಲುಮಾನವಾ ॥

**ಪ್ರಭು** : ಹರಿಹರ ಬ್ರಹ್ಮಾದಿ ದೇವ ಮಾನವರೆಲ್ಲ
ನಿನ್ನಧೀನವು ಮಾಯೆ ಇರಬಹುದು ಕೇಳು !
ನಿನ್ನನಾಡಿಸುವಂಥ ಸೂತ್ರದಾರನದಾರು
ಗೊತ್ತಿದೆಯೆ ಹೇಳು ಹೇಳು !!

**ಮಾಯೆ** : ಶರಣ ರಕ್ಷಾಮಣಿಯೆ ಕಿಂಕರ ಸುಧಾಕರನೆ
ಅರಿಯದಜ್ಞೆಯು ನಾನು ಕಾಮಮೋಹಿತಳು ॥

**ಪ್ರಭು** : ಅಯ್ಯೋ ಹುಚ್ಚೀ ಹುಚ್ಚೀ...
ಹಾಲಿಂಗೆ ಹೆಪ್ಪಿಡಲು ಬೆಣ್ಣೆ ಬಹುದಲ್ಲದೆ
ನೀರಿಗೇ ಹೆಪ್ಪಿಡಲು ಬೆಣ್ಣೆ ಬಹುದೇ ?

**ಮಾಯೆ** : ಚುಂಬಿಸು ಭೋಗಿಸು ತೃಪ್ತಿಕೊಡು ಮನದನ್ನ
ನನ್ನ ಬಾಳಿನ ಬೆಳಕೆ ಹೊಳೆಹೊಳೆವ ರನ್ನ ॥

**ಪ್ರಭು** : ಮಾಯೆ,
ಬೇವು ಬೀಜವ ಬಿತ್ತಿ ಮಾವನೆಳಸುವ ತೆರದಿ
ಕಾಳುಗೆಡೆವರೆ ? ಹೋಗು ತೊಲಗಾಚೆ ದೂರ !

**– ನಿರ್ಗಮಿಸುವನು –**

**ಮಾಯೆ** : ಪ್ರಭು... ಪ್ರಭು... ಅಲ್ಲಮಾ... ಅಲ್ಲಮಾ...

– ಕೈ ಚಾಚಿ ನಿಲ್ಲುವಳು. ರಂಗ ಕತ್ತಲಾಗುವುದು –

– ಬೆಳಕಾದಾಗ –

**ಪ್ರಭು** ; ಕರುಬರಿದ್ದೂರಿಂದೆ ಕಾಡೊಳ್ಳಿತೆಂಬಂತೆ
ಕಾಮಕೀಟಗಳಿರುವ ಮಾಯೆಯರಮನೆಗಿಂತ
ಸುಪ್ರಸನ್ನತೆ ಇರುವ ಅಡವಿಯೇ ಲೇಸು
ಎಂತಹ ಪ್ರಶಾಂತ ಪಾವಿತ್ರ್ಯವೀ ತಾಣ
ಶಾಂತಿ ನೆಲೆಸಿದೆ ಇಲ್ಲಿ
ಈ ಬನವಾಸಿ ಮಡಿಲಲ್ಲಿ !

**ಮಾಯೆ** : ಪ್ರಭೂ... ಅಲ್ಲಮಾ... ಪ್ರಭೂ...

**ಪ್ರಭು** : ಅಯ್ಯೋ –
ಬಂದಳೀಕೆ ಮಾಯೆ ಬಂದಳೀಕೆ
ಹಿಂದು ಮುಂದು ಯಾವುದೊಂದು
ತಿಳಯದೀಕೆ ಅಯ್ಯೋ ಬಂದಳೀಕೆ ॥

**ಮಾಯೆ** : ಅಲ್ಲಮಾ... ಪ್ರಭೂ... ಅಲ್ಲಮಾ...
ಮೋಸಗಾರ ಅಲ್ಲಮಾ । ನೀ

ಭಾಷೆಯಿತ್ತೆ ಅಲ್ಲಮಾ
ಆಸೆಪಟ್ಟ ಹೆಣ್ಣ ಮನವ
ಘಾಸಿಗೊಳಿಪೆ ಅಲ್ಲಮಾ ॥ ॥ ೧ ॥
ಓತುಬಂದೆ ಅಲ್ಲಮಾ । ನಾ
ಸೋತು ಬಂದೆ ಅಲ್ಲಮಾ
ಭೀತಿಯಳಿದು ಪ್ರೀತಿಯಿಂದ
ಮಾತನಾಡೊ ಅಲ್ಲಮಾ ॥ ॥ ೨ ॥
ಹಸಿರು ಹಾಸು ಹಾಸಿದೇ । ಬನ
ವಾಸಿ ಇದುವೆ ಲೇಸಿದೆ
ಸೂಸು ಬಾರೊ ಸುಸಿಲ ಹೂವ
ಭಾಸುರಾಂಗನೇ । ಎದೆಯ ನೇಸರಂಶನೇ ॥ ೩ ॥

**ಪ್ರಭು** : ಇರುಳು ಹಗಲನು ಬಯಸಿ ಪಸೆ ನಿಲಲು ಬಂತಂತೆ !
ಅಂತಾಯ್ತು ನಿನ್ನ ಗತಿ ದೂರ ಸರಿ ಮಾಯೆ !
ಕೈಗೆ ಸಿಲುಕದುದಕ್ಕೆ ಕೈ ಚಾಚ ಬರಬೇಡ
ದ್ಯುಮಣಿ ಅಲ್ಲಮ ಸಿಕ್ಕನೆಂದೆಂದೂ
ಈ ತಮದ ಮಾಯೆಗೆ !

**ಮಾಯೆ** : ಅಲ್ಲಮಾ ಅವಿವೇಕಿ ಅತಿಮೂರ್ಖ ಧೂರ್ತ
ಪಾಷಂಡ ಹೃದಯಿಯೇ ಪರಮ ವಂಚಕನೇ
ನಿರ್ಗುಣನೆ ನಿಷ್ಠುರನೆ ನಿಜದಿ ನಿಷ್ಕರುಣೀ
ಪ್ರೇಮದಾವಿಷ್ಕಾರಗೈಸಿ ನಾ ನಿನ್ನೊಲಿವೆ !
ಎಂದೆಂದಿಗೂ ಬಿಡದೆ ತೋಳ್ಗಳಲಿ ಬಂಧಿಸುವೆ
ಬಂಧಿಸುವೆ ಬಂಧಿಸುವೆ ಬಿಗಿದು ಬಂಧಿಸುವೆ
ಬಂಧಿಸುವೆ ಬಂಧಿಸುವೆ ಬಿಗಿಬಿಗಿದು ಬಂಧಿಸುವೇ ॥

**ಪ್ರಭು** : ಸಿಂಧು ಬಂಧನಕೆಂತು ಸಿಲುಕುವುದು ಮರುಳೆ
ಚೆಂದದಲಿ ಹಿಂತಿರುಗು ನೀ ಬಂದ ಬಳಿಗೇ
ದಗ್ಧವಾಗಲಿ ಕ್ಷುದ್ರ ಪಾತಕವು ಕಾಮ
ರೌದ್ರಾವತಾರದಲಿ ಅಗ್ನಿ ರಣ ಭೀಮ ॥

– ಕಾಳ್ಗಿಚ್ಚು ಹತ್ತುವುದು ಮಾಯೆ ಅದರಲ್ಲಿ ಬಿದ್ದು ದಗ್ಧಳಾಗುವಳು –
(ರಂಗ ಕತ್ತಲಾಗುವುದು. ಹಿನ್ನೆಲೆಯಲ್ಲಿ ಶಿವ–ಪಾರ್ವತಿಯರ ತಾಂಡವ ನೃತ್ಯ)

**ಹಿನ್ನೆಲೆ** : ೧ ಭುಗಿ ಭುಗಿಲ್ ಭುಗಿಲೆಂದು ಮುಗಿಲುರಿದು ಬೀಳೆ
ಝುಗ ಝುಗಾ ಝುಗಿಲೆಂದು ದಿಕ್ತಟವು ಸೀಳೆ
ಒಡೆಯೆ ಬ್ರಹ್ಮಾಂಡಾ, ನಡುಗೆ ಪಿಂಡಾಂಡ
ನಕ್ಷತ್ರ ಮಂಡಲವು ಅಕ್ಷತೆಯ ಕಾಳು
ಪ್ರಳಯ ತಾಂಡವಕಾಯ್ತು ಜಗ ಹಾಳು ಬೀಳು ॥

**ಹಿನ್ನೆಲೆ** : ೨ ಶಾಂತನಾಗೊ ಶಿವ ಶಾಂತಮೂರುತಿಯೆ
ಮಾಯೆ ಮುಗಿದಳು ಮತ್ತೆ ಮಹದೇವಿ ಮೂಡಿದಳು ॥
ತಾಮಸದ ಕಳೆ ಹರಿದು ಸಾತ್ವಿಕದ ಬೆಳೆ ಬಲಿದು
ವಿಶ್ವಶಾಂತಿಯ ಕಾಯೊ ವಿಶ್ವಾತ್ಮನೇ ॥

**(ವಚನ)** ಶಿವ ಶಿವೆಯರ ಸಂವಾದದ ಫಲವಾಗಿ ಪಾರ್ವತಿ ತನ್ನ
ತಾಮಸ ಕಳೆಯನ್ನು ಭೂಮಿಗೆ ಕಳುಹಿಸಿದಳು. ಅದು
ಮಾಯೆಯಾಗಿ ಹುಟ್ಟಿ ಅಲ್ಲಮನನ್ನು ಕಾಮದಿಂದ

ಒಲಿಸಿಕೊಳ್ಳಲೆತ್ನಿಸಿ ವಿಫಲವಾಯಿತು. ಕಾಳ್ಗಿಚ್ಚಿನಲ್ಲಿ
ಬಿದ್ದು ದಗ್ಧವಾಗಿ ಆ ತಾಮಸ ಕಳೆ ಕೈಲಾಸಕ್ಕೆ ಹೋಗಿ
ಶಿವೆಯನ್ನು ಸೇರಿಕೊಂಡಿತು. ಅನಂತರ ಶಿವನಾಜ್ಞೆಯ
ಮೇರೆಗೆ ಪಾರ್ವತಿ ತನ್ನ ಸಾತ್ವಿಕ ಕಳೆಯನ್ನು ಭೂಮಿಗೆ
ಕಳುಹಿಸಿದಳು. ಆ ಸಾತ್ವಿಕ ಕಳೆಯೇ ಅಕ್ಕಮಹಾದೇವಿ
ಯಾಗಿ ಹುಟ್ಟಿ ಅಲ್ಲಮ ಬಸವಾದಿಗಳ ಪ್ರೀತ್ಯಾದರಗಳಿಗೆ
ಪಾತ್ರವಾಗಿ ಕದಳಿಯಲ್ಲಿ ಐಕ್ಯವಾಯಿತು.

– ಎಲ್ಲರೂ ಮಂಗಳ ಹಾಡುವರು –

**ಸಮೂಹ ನರ್ತನದಲ್ಲಿ**

ಜಯ ಜಯ ಜಯ ಜಯ ಜಯ ನಾಟ್ಯಾಂಜಲಿ
ಜಯ ಜಯ ಜಯಹೇ ಜಯ ಪುಷ್ಪಾಂಜಲಿ ॥
ಬನವಸೆ ನಾಡಿನ ಭಾಗ್ಯೋದಯನೆ
ಅನಿಮಿಷ ಪೂಜ್ಯನೆ ಅಲ್ಲಮನೇ
ರಸಿಕರ ಕಾಯೋ ಪಶುಪತಿ ರೂಪನೆ
ನಿಮಿಷ ನಿಮಿಷವೂ ನೆನೆವೆವೊ ನಿನ್ನನು ॥ ಜಯ ॥

# ಬಾದಾಮಿ

**ಪಾತ್ರವರ್ಗ**

ನಾಗಶ್ರೀ
ಚಂದ್ರೋಜ
ಕುಬ್ಜವಿಷ್ಣು
ನರ್ತಕ
ನಟ–ನಟಿ
ನರ್ತಕಿಯರು

**ಪೀಠಿಕಾದೃಶ್ಯ**

**ನಟಿ** : ಬಾರಯ್ಯ ಮಿತ್ರನೆ ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ ಪ. ॥
ತೆಂಗುಗಳು ತಲೆಯೆತ್ತಿ ಅಡಕೆಗಳು ಕೊಡೆಹಿಡಿದು
ಬಾಳೆಗಳು ಕರೆಯುತಿವೆ ತೋಳ ಬೀಸಿ
ಶ್ರೀಗಂಧ ಮಲ್ಲಿಗೆ ಮಾಕಂದ ಸಂಪಗೆ
ಕಾಫಿ ತೇಗ ಏಲಕ್ಕಿ ಕಂಪ ಸೂಸಿ ॥ ೧ ॥
ಕೃಷ್ಣೆ ಕಾವೇರಿಯರು ಹೈಮವತಿ ಕುಮುದವತಿ
ಶರಾವತಿ ತುಂಗಭದ್ರೆ ಕಣ್ವೆ ವರದೆ
ಅಮಲಪ್ರಭೆ ಘಟಪ್ರಭೆ ಎಲ್ಲ ಪ್ರಭೆಯರು ಸೇರಿ
ಕರೆಯುತಿಹರು ತೀರ್ಥ ತುಂಬಿ ತಮ್ಮ ಮಡಿಲೊಳು ॥ ೨ ॥
ಸಹ್ಯಾದ್ರಿ ಕೊಡಚಾದ್ರಿ ಚಾಮುಂಡಿ ನಂದಿಗಳು
ದತ್ತಾತ್ರೇಯ ಪೀಠ ಮುಳ್ಳೈಗಿರಿ
ಕೆಮ್ಮಣ್ಣಗುಂಡಿ ಚಾಮುಂಡಿ ನೆತ್ತಿಯಲಿ
ಮುಗಿಲು ಮಾತಾಡುತಾವೆ ॥ ೩ ॥

**ನಟ** : ಕನ್ನಡ ನಾಡು ಕಲೆಗಳ ಬೀಡು
ಕವಿ ಕೋಗಿಲೆಗಳ ನೆಲೆವೀಡು
ಶಿಲ್ಪದ ಕಲ್ಪದ ನಾದದ ಜಲ್ಪದ
ಸಂಗೀತದ ತೌರೀ ನಾಡು ॥ ೪ ॥
ಅಲರಿಪು ತಿಲ್ಲಾನ ರಂಗ ವಿಧಾನ
ನಾಟ್ಯಾಗಮದಾ ಉದ್ಯಾನ
ಚಂಡೆ ಮೃದಂಗ ತೋಂ ತೋಂ ತೋಂ
ತಾಳ ಮೇಳ ಗತಿ ಧೀಂ ಧೀಂ ಧೀಂ ॥ ೫ ॥

**ಇಬ್ಬರೂ** : ಅತ್ತ ಇತ್ತ ಸುತ್ತ ಮುತ್ತ
ಕತ್ತನೆತ್ತಿ ನೋಡಲೆತ್ತ
ಕಡಲಿನತ್ತ ಕೊಡಗಿನತ್ತ
ಕರ್ನಾಟಕ ದೇಶ ಬಯಲು ಬಾರೆ
ಜೋಗ ಗುಂಡಿ ನೀರು ಜಾರೆ
ಶಿವಸಮುದ್ರದರೆಯ ಓರೆ
ಬೆಡಗೆ ಬೆಡಗು ಸುಗ್ಗಿ ಸೂರೆ !
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೧ ॥
ಏನು ಏನು ಜೇನು ಜೇನು !
ಕನ್ನಡಮ್ಮ ಕಾಮದೇನು !
ಅವಳ ಮಡಿಲು ಮುಡಿಯ ತುಂಬ
ಅವಳ ಬೆಡಗಿನೊಡಲ ತುಂಬ
ಹೂವೆ ಹೂವು ಹೂವೇ ಹೂವು
ಚೆಲ್ಲಿ ಚೆಲ್ಲಿ ಸೂಸುತಿಹವು
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೨ ॥
ಕೈಯ ಚಾಚು ಗಿರಿಯ ಧಾಮ
ಕಾಲು ಚಾಚರಣ್ಯಧಾಮ

ಮೈಯನೊದರು ಪಕ್ಷಿಧಾಮ
ನಮ್ಮ ನಾಡು ಶಾಂತಿ ಧಾಮ
ಹಚ್ಚ ಹಸಿರ ಪಚ್ಚೆ ಕುಸುಮ
ಓ, ವಿಹಾರಿ, ದೇಶಚಾರಿ ಓ ಪ್ರವಾಸಿಗ
ನೋಡು ನಮ್ಮ ನಾಡನೊಮ್ಮೆ ನೆಲದ ಬಾಸಿಗ ॥ ೩ ॥

– ನಾಲ್ವರು ನರ್ತಕಿಯರು ಬಂದು ಸೇರುವರು –

ಬಾದಾಮಿಃ ಇದು ಬಾದಾಮಿ
ವಾತಾಪಿ ಗಣಪನ ಬಾದಾಮಿ
ಚಾಲುಕ್ಯರಾಳಿದಾ ಬಾದಾಮಿ
ಪರಮೇಶ್ವರ ಆ ಪುಲಿಕೇಶಿಯಾ
ಮಂಗಳೀಶನಾ ರಾಜಧಾನಿ ॥ ಬಾದಾಮಿ ॥
ಬಂಡೆ ಬೆಟ್ಟವನೆ ಕೊರೆ ಕೊರೆದು
ಉಳಿಯಲಿ ತಿರುಳನು ತೆಗೆತೆಗೆದು
ಗುಹಾಂತರ ದೇವಾಲಯಗಳ ನಾಲ್ಕನು
ನಿರ್ಮಿಸಿರುವರು ನೋಡವರಿಲ್ಲಿ ॥ ಬಾದಾಮಿ ॥
ಅವರಾಳಿದ ಐಹೊಳೆಯಲ್ಲಿ
ದೇಗುಲವಿವೆ ನೂರಾರಲ್ಲಿ
ಬಾದಾಮಿ ಆಕಾರ ದುರ್ಗಿ ಗುಡಿ
ಮೆರೆವಳು ಬದಿಯಲೆ ಹುಚ್ಚುಮಲ್ಲಿ ॥ ಬಾದಾಮಿ ॥
ಲಾಡ್‌ಖಾನ್ ದೇಗುಲ ಮಾಲ್ಗತ್ತಿ
ಮಹಾಕೂಟ ನೋಡು ಕತ್ತೆತ್ತಿ
ಅಮಲ ಪ್ರಭೆಯಾ ತೋಳ್‌ಭಿತ್ತಿ
ಪಟ್ಟದ ಕಲ್ಲಿನ ಪ್ರಭಾವತಿ ॥ ಬಾದಾಮಿ ॥
ಕಲ್ಲು ಕಲ್ಲು ಕಥೆ ಹೇಳುವವಿಲ್ಲಿ
ಮರ ಗಿಡಗಳು ಪಿಸು ಮಾತಿನಲಿ
ಬನಶಂಕರಿ ಭವೆ ಶಿವೆ ಪರಮೇಶ್ವರಿ
ನೆಲೆ ನಿಂತಿಹಳದೊ ತೋಪಿನಲಿ ॥ ಬಾದಾಮಿ ॥

(ನೃತ್ಯ ಸಂಗೀತಗಳು ಕ್ರಮೇಣ ಕ್ಷೀಣಿಸಿ, ರಂಗಭೂಮಿ ಮಸಕು ಮಸಕಾಗುತ್ತದೆ. ಅಂತಿರುವಾಗಲೆ ಹಿನ್ನೆಲೆಯಲ್ಲಿ ತುಂಬು ಗಂಭೀರವಾಣಿಯಲ್ಲಿ ಮುಂದಿನ ಗದ್ಯಭಾಗ ಪಠಿತವಾಗುತ್ತದೆ. ಅದು ಮುಗಿಯುವವರೆಗೂ ತಾಳ ಮೇಳಗಳ ನಾಟ್ಯ ಕ್ಷೀಣ ಪ್ರಮಾಣದಲ್ಲಿ ನಡೆಯುತ್ತಲೇ ಇರಬೇಕು)

**ಹಿನ್ನೆಲೆ**

ಬಾದಾಮಿ ಚಾಲುಕ್ಯ ಚಕ್ರೇಶ್ವರ ಇಮ್ಮಡಿ ಪುಲಿಕೇಶಿಯ ಖ್ಯಾತಿ ಅಂದು ದಿಗಂತ ವಿಶ್ರಾಂತವಾಗಿತ್ತು. ಪರ್ಷಿಯಾ ದೇಶದ ಖುಸ್ರು ಪುಲಿಕೇಶಿಯ ಸಹಾಯ ಹಸ್ತ ಬೇಡಿ ಫಲಕಾರಿಯಾಗಿದ್ದ ತನ್ನ ರಾಜ್ಯವನ್ನು ದುಷ್ಟ ದಾಯಾದಿಗಳಿಂದ ಬಿಡಿಸಿಕೊಳ್ಳಲು, ಹ್ಯೂಯಾನ್‌ತ್ಸಾಂಗ್ ಎಂಬ ಚೀಣಾ ದೇಶದ ಯಾತ್ರಿಕನು ಪುಲಿಕೇಶಿಯ ಆಸ್ಥಾನದಲ್ಲಿ ಕೆಲ ದಿನಗಳಿದ್ದುದುಂಟು, ರವಿಕೀರ್ತಿ, ಚಂದ್ರೋಜ ಮೊದಲಾದ ವಿಖ್ಯಾತ ಮುತ್ಸದ್ದಿಗಳಿಗೆ, ಕವಿ ಕಲಾವಿದರುಗಳಿಗೆ ಅವನ ಆಸ್ಥಾನ ಆಡುಂಬೊಲವಾಗಿದ್ದಿತು. ಉತ್ತರಾಥಪಥೇಶ್ವರನೆಂದು ಪ್ರಸಿದ್ಧನಾಗಿದ್ದ ಕನ್ಯಾಕುಬ್ಜದ ಚಕ್ರವರ್ತಿ ಶ್ರೀ ಹರ್ಷವರ್ಧನ ದೇವನು ಬಾದಾಮಿ ಕೋಟೆಯ ಮೇಲೆ ದಂಡೆತ್ತಿ ಬಂದು, ನರ್ಮದಾ ನದಿಯ ತೀರದಲ್ಲಿ ಸೋತು ರಾಜೀ ಮಾಡಿಕೊಂಡುದುಂಟು. ಆ ವೇಳೆಯಲ್ಲಿ ಶ್ರೀ ಹರ್ಷನು ವಿಶ್ವವಿಖ್ಯಾತ ಪರಾಕ್ರಮಿ, ಧರ್ಮದೊರೆ, ಕನ್ನಡನಾಡಿನ ಪರಮೇಶ್ವರ ಪುಲಿಕೇಶಿಗಾಗಿ ತನ್ನ ಆಸ್ಥಾನ ನರ್ತಕಿ, ಯಾವ ದುಂಬಿಯೂ ಎಂಜಲಿಸದ ಪರಿಶುದ್ಧ ಪುಷ್ಪ, ನಾಟ್ಯಕಲಾ ಪ್ರವೀಣೆ ನಾಗಶ್ರೀ ಎಂಬವಳನ್ನು ವಿಜಯವಧುವಾಗಿ, ಸ್ನೇಹ ಕಾಣಿಕೆಯಾಗಿ ಅರ್ಪಿಸಿದ್ದ. ಆ ವಿಜಯವಧು ನಾಗಶ್ರೀ ಪುಲಿಕೇಶಿಯ ಆಸ್ಥಾನದ ವಿಖ್ಯಾತ ವರ್ಣಶಿಲ್ಪಿ, ಶ್ರೇಷ್ಠ ಕಲಾವಿದ ಚಂದ್ರೋಜನನ್ನು ಒಲಿದಿದ್ದಳು, ಚಿನ್ನಕ್ಕೆ ಸುಗಂಧ

ಬೆರೆತಂತೆ ಆಯಿತು ಎಂದು ಹರ್ಷಿಸಿದ ಪುಲಿಕೇಶಿ, ತನಗೆ ವಿಜಯವಧುವಾಗಿ ಬಂದ ತನ್ನ ಮಾನಸಪುತ್ರಿಯನ್ನು ಚಂದ್ರೋಜನಿಗೆ ಧಾರೆಯೆರೆದುಕೊಡಲೊಪ್ಪಿದ. ಆದರೆ ಅಜಂತದ ಗುಹಾಂತರ ದೇವಾಲಯಗಳ ಒಳ ಓವರಿಗಳಲ್ಲಿ ಭಿತ್ತಿಗಳ ಮೇಲೆ ಪುಲಿಕೇಶಿ ಮತ್ತು ಖುಸ್ರು ಇವರ ಸಾಂಸ್ಕೃತಿಕ ರಾಯಭಾರ ಕುರಿತ ಹತ್ತಾರು ವರ್ಣ ಚಿತ್ರಗಳನ್ನು ಬಿಡಿಸಬೇಕಿತ್ತು. ರಾಜನಿಂದ ಆಜ್ಞಪ್ತನಾದ ಚಂದ್ರೋಜ ಬಾದಾಮಿಯಿಂದ ಬಹುದೂರವಿರುವ ಅಜಂತಾಕ್ಕೆ ಹೋಗಿದ್ದ. ಚಿತ್ರಶಿಲ್ಪ ಪೂರ್ಣಗೊಂಡಿರಲಿಲ್ಲ. ಅಷ್ಟರಲ್ಲಿ ತನ್ನ ಮೋಹದ ಮಡದಿ ನಾಗಶ್ರೀ ನೆನಪಾದಳು. ಅಜಂತದಿಂದ ಓಡೋಡಿ ಬಂದ. ಅಂದು ರಾತ್ರಿ ಬಾದಾಮಿಯಲ್ಲಿ :

**ನಾಗಶ್ರೀ :** ಪ್ರಿಯತಮಾ, ಓ ಪ್ರಿಯತಮಾ
ನೀನೆ ಒಲವಿನ ಸರಿಗಮ ॥
ಶ್ರುತಿ ಇಲ್ಲದ ಈ ವೀಣೆಯು ಕಾದಿದೆ
ಮಿಡಿಯುವ ವೈಣಿಕ ನೀ ಬಾರ !
ರಾಗ ರಾಗಿಣಿಯರ ಮೈತ್ರಿಯೆ ಸಡಿಲಿದೆ
ಬೆಸುಗೆಯ ಒಸಗೆಯ ನೀ ತಾರಾ ॥
ದುಂಬಿಯ ಚುಂಬನಕಾಗಿಯೆ ಕಾದಿದೆ
ದಳದೆರೆದರಳಿದ ಈ ಹೂವು
ಎದೆ ಹೊಂಬಟ್ಟಲ ಮಧು ಸೊದೆ ತುಂಬಿದೆ
ಹೀರಲು ಬಾಬಾ ಬಂಡುಣಿ ಬಂಧು ॥
ಅನ್ನಕೆ ಹಸಿವು ನೀರಿಗೆ ದಾಹ
ಕಣ್ಣಿಗೆ ಹತ್ತದೊ ಆ ನಿದ್ದೆ
ಕನಸಿನ ಲೋಕದ ಕಣ್ಮಣಿ ಬಾರಾ
ವಿರಹಕೆ ನೀನೇ ಮದ್ದಲ್ತೆ ॥
ಬಾ ಬಾ ಚಂದಿರ ಬಾ ಸುಮ ಸುಂದರ
ಬಾನಾಡಿಯೆ ಬಾ ಮಿಂಚಂತೆ !
ಬಾ ಬಾ ಬಾ ಬಾ ಬಾ ಮಂದಿರಕೆ
ಸುಳಿ ಸುಳಿದಾಡುವ ಮೀನಂತೆ ॥

**ಚಂದ್ರೋಜ:** (ಪ್ರವೇಶಿಸಿ)
ಬಂದೆ ಬಂದೆ ಬಂದೆ ಬಂದೆ ಬಂದೇ ಬಂದೆನೇ
ಅಂದದವಳೆ ಚೆಂದದವಳೆ ಬಂದು ನಿಂದೆನೇ ॥
ನಲ್ಲೆ ನಲವೆ ಮೊಲ್ಲೆ ಹೂವೆ ಮಲ್ಲಿಗೆ ಹೂ ತುಟಿಯಳೆ
ಎಳೆಯ ಚಂದ್ರ ಹೊರಳಿದಂಥ ಹಾಲ್ದಿಂಗಳ ಹಣೆಯಳೆ
ಮಿನುಗು ತಾರೆ ಕಂಗಳಲ್ಲಿ ಬೆಳಕಿನ ಮಳೆಗರೆವಳೆ
ಹಾಲುಗೆನ್ನೆ ಕಬ್ಬಿನುಬ್ಬು ಕರಿಯ ಸೋರ್ಮುಡಿಯಳೆ ॥

**ನಾಗಶ್ರೀ :** ಸ್ವಾಮೀ,

**ಚಂದ್ರೋಜ :** ನಾಗಶ್ರೀ.

**ನಾಗಶ್ರೀ :** ಬಂದೇ ಬಿಟ್ಟಿರಾ ?

**ಚಂದ್ರೋಜ :** ನಿನ್ನ ಬಿಟ್ಟಿರಲು ಹೇಗೆ ಸಾಧ್ಯ ಚೆನ್ನೆ ?

**ನಾಗಶ್ರೀ :** ಅಜಂತದಾ ಚಿತ್ರಕಾರ್ಯ ಮುಗಿದುದೇ ?

**ಚಂದ್ರೋಜ :** ಎಲ್ಲಿ ಮುಗಿಯಬೇಕು ;
ಇನ್ನು ಎರಡು ಮಾಸಗಳು ಬೇಕೆ ಬೇಕು.

**ನಾಗಶ್ರೀ :** ಮತ್ತೆ ?... ಬಂದೇ ಬಿಟ್ಟಿರಿ...

**ಚಂದ್ರೋಜ :** ನಾನಾಗಿ ಬರಲಿಲ್ಲ, ನೀನೆ ನನ್ನ ಸೆಳೆದೆ !

**ನಾಗಶ್ರೀ :** ಹು ಹ್ಞು ಹ್ಞು ಹ್ಞು ! ಸಂತೋಷ !!

ಮಧುರ ಮಿಲನದ ಈ ರಸ ನಿಮಿಷವೇ
ನೈಜಾರ್ಥದ ಸ್ವರ್ಗ !
ಚಂದ್ರ, ಚಂದ್ರೋಜ, ನನ್ನ ಮಧುಚಂದ್ರವೆ !

**(ಹಾಡು–ನರ್ತನ)** ನೀನೆ ಭಾವ ನಾನೆ ಭಾಷೆ
ಭಾವಗೀತೆಯಾಗುವಾ
ನೀನು ಹೆಜ್ಜೆ ನಾನು ಗೆಜ್ಜೆ
ನಾಟ್ಯವನ್ನು ನಟಿಸುವಾ ॥
ನಾನು ಹೂವು ನೀನು ದುಂಬಿ
ಮಾಧುರ್ಯವ ಸವಿಯುವಾ
ನೀನೆ ಒಲವು ನಾನೆ ಚೆಲುವು
ಆನಂದವೆ ಆಗುವಾ ॥
ನೀನು ಬಾನು ನಾನು ಬಯಲು
ಬೆರೆದು ಬೆಳಕ ನೀಡುವಾ
ನಾನು ಮೋಡ ನೀನು ಮಿಂಚು
ಜೇನು ಮಳೆಯ ಕರೆಯುವಾ ॥
ಬಾದಾಮಿಯ ಬಂಡೆ ಮೇಲೆ
ಶಾಸನಗಳೆ ಆಗುವಾ
ಮಹಾಕೂಟೇಶನಡಿಗೆ
ಚಂದನವನೆ ಚೆಲ್ಲುವಾ ॥

**ಚಂದ್ರೋಜ :** ನಾಗು, ನನ್ನ ಹೃದಯೇಶ್ವರಿಯೆ, ಓ ನನ್ನ ನಾಗಶ್ರೀ,
ಏನು ಚೆಲುವೆಯೆ ನೀನು ! ಚೆಲುವು ಚಿಮ್ಮುವ ಚಿಲುಮೆ ।
ಸುಣ್ಣ ಬಣ್ಣದ ನುಡಿಯ ಹಂಗೆನಗೆ ಬೇಕಿಲ್ಲ ।

**ಹಾಡು :** ನಿನ್ನ ಬಣ್ಣಿಸಲೆನಗೆ ಸಿಂಗರದ ನುಡಿಯೇಕೆ ?
ನೀ ಚೆಲುವೆ ಎಂಬೊಂದು ನುಡಿ ಸಾಲದೆ ॥ ಪ ॥
ಕೋಗಿಲೆಯ ಕೂಜನಕೆ ಶ್ರುತಿ ತಂತಿ ಬೇಕೇನು ?
ಹಾಡಿದುದೆ ತಾ ಭಾವಗೀತೆಯಲ್ಲೇನು ? ॥ ಅನು ಪ. ॥
ಜಗದೊಲವು ಚೆಲುವೆಲ್ಲ ಎರಕಗೊಂಡಿಹ ದೇಹ
ಪ್ರೇಮ ಕಾರಂಜಿಯೊಲು ಪುಟಿವ ಮಾಟ !
ಸೊಬಗು ಸೋರಿದೆ ಇಲ್ಲಿ ಇವಳೆದೆಯ ಬದಿಯಲ್ಲಿ
ದಳದೆರೆದ ಹೂವಂತೆ ಇವಳ ನೋಟ ! ॥ ೧ ॥
ಇಬ್ಬನಿಯ ಮಣಿಯಾಗಿ ಮಿನುಗು ತಾರಗೆಯಾಗಿ
ಜಲಪಾತ ತುಂತುರಿನ ಮಂಜುಹೊಗೆಯಾಗಿ
ಏನು ಚೆಲುಮೆಯೆ ನೀನು ಏಳು ಬಣ್ಣದ ಬಿಲ್ಲು
ಕಣ್ಣುಗಳು ಸಾರ್ಥಕವು ನೀಲಾಂಜನೆ ! ॥ ೨ ॥
ಮನದಮಲ ತೀರ್ಥದಲಿ ನಿನ್ನ ಅಡಿಗಳ ತೊಳೆವೆ
ಪ್ರೇಮ ಕುಸುಮಗಳನ್ನು ಸೂರೆಗೈವೆ
ನಿನ್ನೊಂದು ನಗೆಗಾಗಿ ಶತಮಾನ ತಪಗೈವೆ
ಪ್ರೇಮದಧಿದೇವತೆಯೆ ಭಕುತ ನಾನು ॥ ೩ ॥
ನಾನೆಂಬುದೇನಿಲ್ಲ ನೀನು ನೀನೇ ಎಲ್ಲ
ನನ್ನ ಕನಸಿನ ರಾಣಿ ಕರಮುಗಿವೆನು
ನನ್ನದೆಂಬುದನೆಲ್ಲ ನಿನ್ನೊಡಲಿಗರ್ಪಿಸುವೆ

ನಿನ್ನಲ್ಲಿ ಒಡ ಬೆರೆದು ಐಕ್ಯನಹೆನು ॥ ೪ ॥

(ಗದ್ಯ) ನಾಗು, ನಾನು ಇಂದೇ ಹೊರಡಬೇಕಿದೆ ಅಜಂತಕ್ಕೆ !

**ನಾಗಶ್ರೀ** : ಹ್ಞಾ! ಇಂದೇ ಹೊರಡಬೇಕೆ? ಸ್ವಾಮಿ, ನನ್ನ ಜೀವವೇ ಹಾರಿ
ಹೋದಂತೆ ಭಾಸವಾಗುತ್ತಿದೆ. ನೀವಿಂದು ಇಲ್ಲಿಯೇ ನನ್ನ
ಜೊತೆಯಲ್ಲಿಯೇ ಇದ್ದು ಬಿಡಿ.

**ಚಂದ್ರೋಜ** : ನಾಗು, ನಾನು ರಾಜರಪ್ಪಣೆ ಇಲ್ಲದೆ ಕದ್ದು ಬಾದಾಮಿನಗರ
ಪ್ರವೇಶ ಮಾಡಿದ್ದೇನೆ. ಪುಲಿಕೇಶಿ ಪ್ರಭುಗಳಿಗೆ ತಿಳಿದರೆ ತಲೆದಂಡ !

**ನಾಗಶ್ರೀ** : ಅಪ್ಪಾಜಿಯವರಲ್ಲಿ ನಾನು ಬೇಡಿಕೊಳ್ಳುತ್ತೇನೆ.

**ಚಂದ್ರೋಜ** : ನಾಗು, ಪ್ರೇಮಭರದಲ್ಲಿ ಕರ್ತವ್ಯ ಭ್ರಷ್ಟರಾಗುವುದು ಬೇಡ,
ಕೇವಲ ಒಂದು ವಾರ, ತಪ್ಪಿದರೆ ಎರಡು ವಾರಗಳಲ್ಲಿ ಚಿತ್ರಕಾರ್ಯ
ಮುಗಿಸಿ ಓಡೋಡಿ ಬರುವೆ. ಬರಲೆ... ಬ.... ರ...

– ನಿರ್ಗಮನ –

**ನಾಗಶ್ರೀ** : ಬೇ... ಬೇ... ಡ (ಅವನು ನಡೆದ ಹಾದಿಯನ್ನೇ ವೀಕ್ಷಿಸುತ್ತಾ)
ಸ್ವಾಮಿಯನು ಸೆರಗಿನಲಿ ಬಚ್ಚಿಟ್ಟುಕೊಂಡಂಥ
ಇಂದಿನರುಳಿಗೆ ಯಾವ ದಾಕ್ಷಿಣ್ಯ ತಿಳಿದಿಲ್ಲ ;
ಚಂದ್ರೋಜರನು ಹೊತ್ತ ಕುದುರೆಗಿಲ್ಲವು ಕರುಣೆ ;
ಅವರ ನಡಿಗೆಗೆ ಒಂದು ಎಡೆ ಮಾಡಿಕೊಟ್ಟಂಥ
ಆ ಅಜಂತೆಯ ಹಾದಿಗಿಲ್ಲ ದಯೆಯೆಂದೂ !
ದಯೆ ಇಲ್ಲವೆಂದೂ !

**ಕುಬ್ಜ ವಿಷ್ಣು** (ಪ್ರವೇಶಿಸಿ) ಹಾದಿಗಿಲ್ಲವೆ ತರುಣಿ
ಆದರೀ ಮಾರನಿಗೆ ಮಾರುದ್ದ ದಯೆ ಇಹುದು !

**ನಾಗಶ್ರೀ** : ಹ್ಞಾ ! ಯಾರು ? ಚಿಕ್ಕಪ್ಪಾಜಿ !.. ನೀವು ?

**ಕುಬ್ಜ** : ಹೌದು ನಾನೆ. ಆದರೆ ನಾ ನಿನ್ನ ಚಿಕ್ಕಪ್ಪನಲ್ಲ ಚೆಲುವೆ ।

**ನಾಗಶ್ರೀ** : ಹ್ಞಾ । ಎಂಥ ಮಾತಿದು ತಂದೆ । ನಾನು ನಿಮ್ಮಣ್ಣ ಪುಲಿಕೇಶಿ
ಸಾರ್ವಭೌಮರ ಮಗಳು ; ಅವರ ಮಾನಸ ಪುತ್ರಿ
ಕನ್ಯ ಕುಬ್ಜದ ಅರಸು ಹರ್ಷವರ್ಧನರಿಂದ
ಕೊಡಮಾಡಲಾದಂಥ ಗೆಲವೆಣ್ಣು ನಾನು ।
ನರ್ಮದೆಯ ತಡಿಯಲ್ಲಿ ನಡೆದ ಆ ಯುದ್ಧದಲಿ
ಪುಲಿಕೇಶಿ ಅಪ್ಪಾಜಿ ಗೆಲವು ಗಳಿಸಿದಕ್ಕಾಗಿ
ಶ್ರೀ ಹರ್ಷವರ್ಧನರಿತ್ತ ಜಯವಧುವು ನಾನು !
ಪುಲಿಕೇಶಿಗಳಿಗೆಂತೊ ಅಂತೆಯೇ ಅವರ ತಮ್ಮದಿರಾದ
ವಿಷ್ಣುವರ್ಧನರೇ, ನಾನು ನಿಮಗೂ ಪ್ರೀತಿಯ ಮಗಳು,
ನಿಮ್ಮ ಮಾನಸ ಪುತ್ರಿ ನಾಗಶ್ರೀ ನಾನು ।

**ಕುಬ್ಜ** : ನಾಗಶ್ರೀ ನಾ ನಿನ್ನ ಪಿತನಲ್ಲ, ನೀನೆನ್ನ ಮಗಳಲ್ಲ
ಅಣ್ಣ ಪುಲಿಕೇಶಿಯರಿಗಿರಬಹುದು ಪ್ರಿಯಗುವರಿ ।
ನನಗೆ ನೀನಿಂದಿನಿಂ ಪ್ರೇಮ ಪಂಜರ ಪಕ್ಷಿ ।
ನೀನೊಲಿಯೆ ವರಿಸುವೆನು ।
ಒಲಿಯದಿರೆ.... ಒಲಿಯದಿರೆ ?
ನಾಗಶ್ರೀ, ಈ ಬಾದಾಮಿ ರಾಜ್ಯದಾ ಯುವರಾಜ ನಾನು
ತಿಳಿದಿರಲಿ !!

**ನಾಗಶ್ರೀ** : ಪಾಪಿ, ಯುವರಾಜನಿರಬಹುದು, ಅಧಿಕಾರವಿರಬಹುದು,

ದಂಡಿಸುವ ದರ್ಪಿಷ್ಠ ಪ್ರಭುವು ನೀನಿರಬಹುದು.
ಆದರೆನ್ನೆಡೆಯಲ್ಲಿ ಧರ್ಮವಿದೆ, ಸತ್ಯವಿದೆ.
ನನ್ನೊಲವು, ನನ್ನಿನಿಯ, ಆ ನನ್ನ ಪ್ರಾಣಪ್ರಿಯ
ಚಂದ್ರೋಜರಿಹರಯ್ಯ ।
ನಿನ್ನ ಹುಟ್ಟಡಗೀತು । ಎಚ್ಚರಾ । ಎಚ್ಚರಾ ॥

**ಕುಬ್ಜ** : ಹಹ್ಹಹ್ಹ ಹ್ಹಾ । ಅಯ್ಯೋ ಹುಚ್ಚೀ,
ನಾಟಕದ ನಟಿಯಂತೆ ಮಾತನೊಪ್ಪಿಸುತಿರುವೆ
ಅಧಿಕಾರದೆದುರಿನಲಿ ನಿಲಲು ಧೈರ್ಯವೆ ಇಲ್ಲ ಆ ನಿನ್ನ ಸತ್ಯಕ್ಕೆ.
ನಾಗಶ್ರೀ, ನಿನ್ನ ಮತ್ತಾ ನಿನ್ನ
ಚಂದ್ರೋಜರಾ ಮಾತುಗಳ ಕೇಳಿದೆನು.
ಮರೆಯಲ್ಲೆ ನಿಂತೆಲ್ಲ ಕೇಳಿದೆನು. ಆ ನಿನ್ನ ಚಂದ್ರೋಜ
ಆ ಅಜಂತದ ಹಾದಿಯಲ್ಲಿಲ್ಲ ಓ ಚೆಲುವೆ,
ಯಮಪುರಿಯ ಹಾದಿಯನು ಹಿಡಿದೀಗ ನಡೆದಿಹನು.
ನನ್ನವರು ಅವನಪರಕರ್ಮವೆಲ್ಲವ ಮುಗಿಸಿ,
ಇಷ್ಟರಲೆ ಬರುವರೌ ನನ್ನ ಅರಮನೆಗೆ,
ಅಷ್ಟರಲಿ ನೀನೆನ್ನ ತೊಡೆಯೇರು
ಬದುಕಿರುವವರೆವಿಗೂ ನನ್ನ ಗುಟ್ಟಿನ ರಾಣಿಯಾಗಿ
ಮೆರೆಯುವೆ ನೀನು !
ನಾಳೆಯಿಂದಲೆ ನಾನು ವೆಂಗಿ ದೇಶದ ರಾಜ !
ನಿನ್ನ ಕರೆದೊಯ್ವೆ, ಯಾರ ಭಯವೂ ಇರದೆ ಅಲ್ಲಿ ಬಾಳಲು
ಬಹುದು ! ಒಪ್ಪಿಗೆಯೆ ?

**ನಾಗಶ್ರೀ** : ಹ್ಹಾ ! ಏನೆಂದೆ ವಿಷ್ಣು !
ನನ್ನ ಸ್ವಾಮಿ ಚಂದ್ರೋಜರಿಗೆ ಏನಾಯ್ತು ?

**ಕುಬ್ಜ** : ಮೃತಿಯಾಯ್ತು !
ಬದುಕಲಾರದ ಜೀವ ಬಟ್ಟಬಯಲಾಯ್ತು !

**ನಾಗಶ್ರೀ** : ಅಯ್ಯೋ ಪಾಪಿ !
ಮೈ ಹೇಗೊ ಮನವೂ ಹಾಳು ಕೊಳಚೆ ಗುಂಡಿಯೊ ನಿನದು !
ಓ ಕುಬ್ಜ ವಿಷ್ಣು ! ನೀನಿಂಥ ಪಾಪಿಯೆಂದರಿತಿದ್ದೆ.
ನೀಚ ಹುಳು ನೀನೆಲ್ಲಿ ? ಪುಣ್ಯಾತ್ಮ ನಿಮ್ಮಣ್ಣ ಪುಲಿಕೇಶಿಯೆಲ್ಲಿ ?
ಈ ಚಣವೆ ಹೊರಹೊರಡು, ಅಪ್ಪಾಜಿಯವರಲ್ಲಿ
ಅರಿಕೆಗೈಯುವ ಮೊದಲೆ, ಅವರಿಂದಲೇ ತಕ್ಕ ಶಿಕ್ಷೆಯಾಗುವ
ಮೊದಲೆ, ತೊಲಗಾಚೆ !

**ಕುಬ್ಜ** : ಹುಚ್ಚೀ ಹುಚ್ಚೀ !
ಅಣ್ಣನೆಡೆ ಸಾರಲಿಕೆ ನಿನ್ನ ಬಿಟ್ಟರೆ ತಾನೆ !
ಮಂತ್ರಕ್ಕೆ ಮಾಗಾಯಿ ಕೆಳಗೆ ಬೀಳುವುದಿಲ್ಲ !!
ನನ್ನ ತೋಳ್ಸೆರೆಯಿಂದ ಹೇಗೆ ಪಾರಾಗುವೆಯೊ
ನೋಡಿಯೇ ಬಿಡುವೆ !

(ಅವಳ ಧಾವಣಿ ಹಿಡಿದೆಳೆಯುವನು. ಅವಳು ತನ್ನ ಎದೆ ಭಾಗವನ್ನು ಮುಚ್ಚಿಕೊಳ್ಳಲು ಹೋಗಿ ವಿಫಲಳಾಗಿ ಅವನ ತೋಳುಗಳಲ್ಲಿ ಸೆರೆ ಸಿಕ್ಕುವಳು. ವಿಧಿಯಿಲ್ಲದೆ ಬಲಿಯಾಗುವಳು. ರಂಗ ಒಂದು ಕ್ಷಣಕಾಲ ಕತ್ತಲಾಗಿ ಮತ್ತೆ ಬೆಳಗುವುದು. ಆಗ ಮುಡಿಗೆದರಿದ ನಾಗಶ್ರೀ ಚಂಡಿಯಂತೆ ಆರ್ಭಟಿಸಿ ಭೀಕರ ನರ್ತನ ಮಾಡತೊಡಗುವಳು)

**ನಾಗಶ್ರೀ** : ಫಡಫಡಾ ಪಾತಕಿಯೆ ಪುಡಿಗೈವೆ ನಿನ್ನ
ನಿನ್ನ ಹುಟ್ಟಡಗಿಸುವೆ ಕುಟ್ಟಿ ನುರಿಗೈವೆ ॥

– ಬೀಜಿಮ್‌ನಲ್ಲಿ ಭೀಕರ ತಾಂಡವ –

(ನರ್ತಿಸಿ ನರ್ತಿಸಿ ನರ್ತಿಸುತ್ತಲೇ ತನ್ನ ಸೊಂಟದಲ್ಲಿದ್ದ ಕಠಾರಿಯಿಂದ ಇರಿದುಕೊಂಡು ಉರುಳುವಳು. ರಂಗ ಧುತ್ತನೆ ಮೌನ ತಾಳುವುದು)

– ನರ್ತಕ, ನರ್ತಕಿಯರು –

**ಶೋಕಗೀತೆ ಹಾಡುತ್ತಾ :**

ಹಗಲೊಂದು ಇರುಳಾಯ್ತು, ಇರುಳು ನರಳಿಕೆಯಾಯ್ತು
ಕರುಳ ಹಿಂಡುವ ಕಥೆಯ ನೆನಪು ನೆರಳಾಯ್ತು !
ಕರುಳ ಹಿಂಡುವ ಕಥೆಯ ನೆನಪು ನೆರಳಾಯ್ತು !

# ಉಡುಪಿ

**ಪಾತ್ರವರ್ಗ**

ಸಂತ ಕನಕದಾಸ
ಕೃಷ್ಣ
ವಾದಿರಾಜರು
ಆನಂದ ಭಟ್ಟ
ಮುಕುಂದ ಭಟ್ಟ
ರುದ್ದ
ರೊದ್ದ
ಬಾಲಕೃಷ್ಣ
ಯಶೋದೆ
ನಟ – ನಟಿ
ನರ್ತಕಿಯರು

**ಪೀಠಿಕಾದೃಶ್ಯ**

**ನಟಿ :** ಬಾರಯ್ಯ ಮಿತ್ರನೆ ಬಾರೋ ಪವಿತ್ರನೆ
ಬಾ ತಂಗಿ ನಮ್ಮೂರ ನೋಡ ಬನ್ನಿ ॥ ಪ. ॥
ತೆಂಗುಗಳು ತಲೆಯೆತ್ತಿ ಅಡಕೆಗಳು ಕೊಡೆಹಿಡಿದು
ಬಾಳೆಗಳು ಕರೆಯುತಿವೆ ತೋಳ ಬೀಸಿ
ಶ್ರೀಗಂಧ ಮಲ್ಲಿಗೆ ಮಾಕಂದ ಸಂಪಗೆ
ಕಾಫಿ ತೇಗ ಏಲಕ್ಕಿ ಕಂಪ ಸೂಸಿ ॥ ೧ ॥
ಕೃಷ್ಣೆ ಕಾವೇರಿಯರು ಹೈಮವತಿ ಕುಮುದವತಿ
ಶರಾವತಿ ತುಂಗಭದ್ರೆ ಕಣ್ವವರದೆ
ಅಮಲಪ್ರಭೆ ಘಟಪ್ರಭೆ ಎಲ್ಲ ಪ್ರಭೆಯರು ಸೇರಿ
ಕರೆಯುತಿಹರು ತೀರ್ಥ ತುಂಬಿ ತಮ್ಮ ಮಡಿಲೊಳು ॥ ೨ ॥
ಸಹ್ಯಾದ್ರಿ ಕೊಡಚಾದ್ರಿ ಚಾಮುಂಡಿ ನಂದಿಗಳು
ದತ್ತಾತ್ರೇಯ ಪೀಠ ಮುಳ್ಳೈಗಿರಿ
ಕೆಮ್ಮಣ್ಣಗುಂಡಿ ಚಾಮುಂಡಿ ನೆತ್ತಿಯಲಿ
ಮುಗಿಲು ಮಾತಾಡುತಾವೆ ॥ ೩ ॥

**ನಟ :** ಕನ್ನಡ ನಾಡು ಕಲೆಗಳ ಬೀಡು
ಕವಿ ಕೋಗಿಲೆಗಳ ನೆಲೆವೀಡು
ಶಿಲ್ಪದ ಕಲ್ಪದ ನಾದದ ಜಲ್ಪದ
ಸಂಗೀತದ ತೌರೀ ನಾಡು ॥ ೪ ॥
ಅಲರಿಪು ತಿಲ್ಲಾನ ರಂಗ ವಿಧಾನ
ನಾಟ್ಯಾಗಮದಾ ಉದ್ಯಾನ
ಚಂಡೆ ಮೃದಂಗ ತೋಂ ತೋಂ ತೋಂ
ತಾಳ ಮೇಳ ಗತಿ ಧೀಂ ಧೀಂ ಧೀಂ ॥ ೫ ॥

**ಇಬ್ಬರೂ :** ಅತ್ತ ಇತ್ತ ಸುತ್ತ ಮುತ್ತ
ಕತ್ತನೆತ್ತಿ ನೋಡಲೆತ್ತ
ಕಡಲಿನತ್ತ ಕೊಡಗಿನತ್ತ
ಕರ್ನಾಟಕ ದೇಶ ಬಯಲು ಬಾರೆ
ಜೋಗ ಗುಂಡಿ ನೀರು ಜಾರೆ
ಶಿವಸಮುದ್ರದರೆಯ ಓರೆ
ಬೆಡಗೆ ಬೆಡಗು ಸುಗ್ಗಿ ಸೂರೆ !
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೧ ॥
ಏನು ಏನು ಜೇನು ಜೇನು !
ಕನ್ನಡಮ್ಮ ಕಾಮದೇನು !
ಅವಳ ಮಡಿಲು ಮುಡಿಯ ತುಂಬ
ಅವಳ ಬೆಡಗಿನೊಡಲ ತುಂಬ
ಹೂವೆ ಹೂವು ಹೂವೇ ಹೂವು
ಚೆಲ್ಲಿ ಚೆಲ್ಲಿ ಸೂಸುತಿಹವು
ಬಾ ಪ್ರವಾಸಿಯೇ ರಸಿಕದೇಶವಾಸಿಯೇ ॥ ೨ ॥
ಕೈಯ ಚಾಚು ಗಿರಿಯ ಧಾಮ
ಕಾಲು ಚಾಚರಣ್ಯಧಾಮ

ಮೈಯನೊದರು ಪಕ್ಷಿಧಾಮ
ನಮ್ಮ ನಾಡು ಶಾಂತಿ ಧಾಮ
ಹಚ್ಚ ಹಸಿರ ಪಚ್ಚೆ ಕುಸುಮ
ಓ, ವಿಹಾರಿ, ದೇಶಚಾರಿ ಓ ಪ್ರವಾಸಿಗ
ನೋಡು ನಮ್ಮ ನಾಡನೊಮ್ಮೆ ನೆಲದ ಬಾಸಿಗ ॥ ೩ ॥

(ನರ್ತಕಿಯರ ಪ್ರವೇಶ)

**ನರ್ತಕಿಯರು :**

ಉಡುಪಿ ಉಡುಪಿ
ಉಡುಪಿ ಉಡುಪಿ ಉಡುಪಿ ॥
ಜಗದೊಡೆಯ ಕೃಷ್ಣನುಡುಪಿ
ಅವತಾರ ಪುರುಷನುಡುಪಿ
ಅಕ್ಷಯನ ರಕ್ಷೆಯುಡುಪಿ
ಭೂ ಸ್ವರ್ಗವೆನಿಸಿದುಡುಪಿ ॥ ಉಡುಪಿ ॥
ತುಳುನಾಡ ಕ್ಷೇತ್ರ ಸಪ್ತಕಗಳಲ್ಲಿ
ತಾನೆ ತಾನಾದ ಉಡುಪಿ
ಪಡುಗಡಲ ತಡಿಯ ತಾಯ್ ತೊಡೆಯ ಮೇಲೆ
ಪವಡಿಸಿದ ಬೆಡಗಿನುಡುಪಿ
ಕೊಡೆ ಹಿಡಿದ ತೆಂಗು ಜೋಕಾಲಿ ಕೌಂಗು
ಗೋಡಂಬಿ ಬೆಳೆವ ಉಡುಪಿ
ಕರೆಕರೆಯ ಮೇಲೆ ತೆರೆ ತೆರೆಯ ಲೀಲೆ
ಮುನ್ನೀರ ಮೊಳಗಿನುಡುಪಿ
ಬೆಳ್ಳಕ್ಕಿ ಮಾಲೆ ಬೆಡಗನ್ನು ಬೀರೆ
ಸೌಂದರ್ಯ ಸೀಮೆ ಉಡುಪಿ ॥ ಉಡುಪಿ ॥
ನಡೆ ಮಡಿಯ ಮಳಲ ಹಾಸಿನಲಿ ಕಾಣೋ
ಆ ಪುಟ್ಟ ನಿಟ್ಟ ಹೆಜ್ಜೆ
ಮರೆ ಮರಗಳಲ್ಲಿ ಮೊರೆಯುವುದೊ ಗಾನ
ಮೋಹನನ ಕಾಲಗೆಜ್ಜೆ ॥ ಉಡುಪಿ ॥
ಕಂಜಾರುಪುಂಜ ಆ ಪೂರ್ಣಪ್ರಜ್ಞ
ಶ್ರೀ ಮಧ್ವಾಚಾರ್ಯರುಡುಪಿ
ಸೋದೆ ಶಿರೂರು ಅದಮಾರು ಪೇಜವರ
ಕಾಣೆಯೂರು ಪಲಿಮಾರು ಪುತ್ತಿಗೆ
ಕೃಷ್ಣಪುರವೆಂಬ ಅಷ್ಟ ಮಠಗಳಾ
ನಿತ್ಯಾನುಷ್ಠಾನದುಡುಪಿ ॥ ಉಡುಪಿ ॥
ಚಂದ್ರಮೌಳಿ ಶ್ರೀ ಅನಂತೇಶ್ವರರ
ಆನಂದ ನೆಲೆಯೊ ಉಡುಪಿ
ಉಡುಪನೆನಿಸಿದಾ ಪೂರ್ಣ ಚಂದ್ರಮಗೆ
ಶಿವನೊಲಿದ ತಾಣ ಉಡುಪಿ ॥ ಉಡುಪಿ ॥
ಮಲ್ಪೆಯಲಿ ಕೇಳೊ ನದಿ ನದಿಯ ಜಲ್ಪ
ನಡುಗಡ್ಡೆ ತೆಂಗು ದ್ವೀಪ
ಷಟ್ಕೋಣ ರಚನೆ ಆ ದೇವ ಕರುಣೆ

ಬೇಸಾಲ್ವು ಶಿಲೆಯ ಸ್ತಂಭ
ಸೇಂಟ ಮೇರಿ ದ್ವೀಪಗಳ ಗುಂಪು
ವಡಾಭಾಂಡೇಶನುಡುಪಿ
ಮಣಿಪಾಲವೆಂಬ ಶ್ರೀವಾಣಿ ನೆಲೆಯ
ತಾ ಪಡೆದ ಮೆರೆವ ಉಡುಪಿ ॥ ಉಡುಪಿ ॥
ಶ್ರೀ ಕೃಷ್ಣ ಮಠದ ಎದೆಯಲ್ಲಿ ಮುಂದೆ
ಪುಷ್ಕರಿಣಿ ಮಧ್ವ ಕರುಣಿ
ಸ್ವರ್ಣ ನದಿಯ ಸಂಸ್ಕರಣದಿಂದ
ಪಾವನವು ಪುಣ್ಯ ಧರಣಿ

(ನರ್ತನ ನಡೆಯುತ್ತಿರುವಂತೆಯೇ ಶಬ್ದ ಕ್ಷೀಣಿಸುತ್ತದೆ. ರಂಗದ ಮೇಲಣ ದ್ವೀಪಗಳೆಲ್ಲಾ ನಂದಿ ಒಂದೇ ಒಂದು ಹಣತೆಯಷ್ಟು ಬೆಳಕು ಮಿನಗುತ್ತಿರುತ್ತದೆ. ಆ ಮಬ್ಬಿನಲ್ಲಿ ನೇಪಥ್ಯದ ದನಿಯೊಂದು ಕರೆಕೊಡುತ್ತದೆ. 'ಏಳು ಕನಕ, ಎದ್ದೇಳು ಕನಕಣ್ಣ' ಎಂದು. ಎಚ್ಚೆತ್ತ ಕನಕದಾಸ ಕಂಬಳಿಯ ಒಳಗಿಂದ ನಿಧಾನವಾಗಿ ಮೈ ತೆರೆದು ಮೇಲೆದ್ದು ಕುಳಿತುಕೊಳ್ಳುತ್ತಾನೆ. ಆಕಳಿಸಿ, ಕಣ್ಣು ಹೊಸಕಿ ಅಂಗೈಗಳನ್ನು ನೋಡಿಕೊಳ್ಳುವಷ್ಟರಲ್ಲಿ ಅತ್ತ ಗೋಪಿಕೆಯರೊಡನೆ ಕೂಡಿ ಆಡುವ ಶ್ರೀ ಕೃಷ್ಣನ ರಾಸಲೀಲೆ ದೃಗ್ಗೋಚರವಾಗುತ್ತದೆ. ರಂಗು ರಂಗಿನ ರಾಸಲೀಲೆಯನ್ನು ಕನಕದಾಸ ತೆರೆದ ಕೈ, ತೆರೆದ ಕಣ್, ತೆರೆದ ಬಾಯವನಾಗಿ ಕುಳಿತು ವೀಕ್ಷಿಸುತ್ತಾನೆ.)

ಮೃದು ಮಧುರಾಧರ ಚುಂಬನದಿಂಚರ ॥ ೧ ॥
ಮುರಳಿಯ ಕೊರಳಿಂದಿಳಿಯುತಿದೆ
ಗೋಪಿಯರೆದೆಯಲಿ ತಾಪವ ತುಂಬಿಸಿ
ನಲ್ಲೇ...ನಿಲ್ಲೆಂದುಸುರುತಿದೆ
ಮೋಹನ ಮುರಳೀ ನಾದಾಮೋದಕೆ
ಯಮುನಾ ತೀರವೆ ಅರಳುತಿದೆ
ರಾಧಾಮಾದವರಾಲಿಂಗನಕೆ
ಬೃಂದಾವನ ಮೈ ಮರೆಯುತಿದೆ ॥ ೨ ॥
ಕುಸುಮ ಕಪೋಲಕೆ ಸುಷ್ಮ ಸುಗಲ್ಲಕೆ
ಮೆಲ್ಲನೆ ಹೂದುಟಿ ಚಾಚುತಿದೆ
ಪೀನ ಪಯೋದರ ಭಾರಧಾರಕೆ
ಸುಸಿಲಿನ ಬಿಸಿಯುಸಿರಾಡುತಿದೆ

(ನರ್ತನ ಮುಂದುವರಿಯುತ್ತಿರುವಂತೆಯೇ ಹಿನ್ನೆಲೆಯಲ್ಲಿ ವಾಣಿ ಪುಟಿಯುತ್ತದೆ)

**ವಾಣಿ** : ಹೌದು, ಬೃಂದಾವನದ ವಕ್ಷಸ್ಥಲದಲ್ಲಿ ಮೋಹನ ಮುರಳಿ ನುಡಿಸುತ್ತಾ
ಗೋಪಿಕೆಯರೊಡನೆ ರಾಸಲೀಲೆಯಾಡುವ ಜಗನ್ನಾಟಕ ಸೂತ್ರ ದಾರಿ
ಶ್ರೀಕೃಷ್ಣ ಪರಮಾತ್ಮನನ್ನು ಅತಿ ಸ್ವಪ್ನಾವಸ್ಥೆಯಲ್ಲಿ ದರ್ಶಿಸಿದ ಸಂತ
ಕನಕದಾಸನೇ ಧನ್ಯ ! ಸಂತ ಕವಿ, ಮಹಾಕವಿ ಕನಕದಾಸನು
ದೇಶಪರ್ಯಟನಾರ್ಥವಾಗಿ ಹಂಪಿಯಿಂದ ಹೊರ ಹೊರಟು ಇಂದು
ಉಡುಪಿಗೆ ಆಗಮಿಸಿದ್ದಾನೆ. ಇಲ್ಲಿ ಅವನು ಹಸಿದ ಸ್ವಾಮಿಗೆ
ಆಹಾರವಿತ್ತ ಪುಣ್ಯಪ್ರಸಂಗ ಪ್ರಸ್ತುತ ನೃತ್ಯ ರೂಪಕದ ವಸ್ತು.
ಬನ್ನಿ... ನೋಡಿ... ನಲಿಯಿರಿ...

(ನೃತ್ಯ ಮುಂದುವರಿಯುತ್ತದೆ ತುಂಬು ಬೆಳಕಿನಲ್ಲಿ)

**ಹಾಡು** : ಲಲಿತ ಲವಂಗ ಲತಾ ಪರಿಶೀಲನ
ಕೋಮಲ ಮಲಯ ಸಮೀರೇ
ಮಧುಕರ ನಿಕರ ಕರಂಬಿತ ಕೋಕಿಲ
ಕೂಜಿತ ಕುಂಜ ಕುಟೀರೇ ॥ ೪ ॥
ಚಂದನ ಚರ್ಚಿತ ನೀಲಕಲೇವರ

ಪೀತವಸನ ವನಮಾಲೀ
ಕೇಲಿ ಚಲನ್ಮಣಿ ಕುಂಡಲ ಮಂಡಿತ
ಗಂಡಯುಗ ಸ್ಮಿತಶಾಲೀ ॥ ೫ ॥

– ನರ್ತಕ ನರ್ತಕಿಯರು ನರ್ತಿಸುತ್ತಲೇ ನೇಪಥ್ಯದೆಡೆಗೆ ಸಾಗುತ್ತಾರೆ. ರಂಗಭೂಮಿ ನಿಧಾನವಾಗಿ ಮತ್ತೆ ಮಬ್ಬಿನಿಂದಾವೃತವಾಗುತ್ತದೆ. ಆಗ –

'ಏಳು ಕನಕದಾಸ ಎದ್ದೇಳೊ ಕನಕಣ್ಣ'

ಎಂಬ ವಾಣಿ ಎಚ್ಚರಿಸುತ್ತದೆ. ಕನಕದಾಸ ಬೆರಗಾಗಿ ನೋಡುತ್ತಾನೆ. ಅವನ ನೋಟದ ವಿರುದ್ಧ ದಿಕ್ಕಿನಿಂದ ಒಂದು ತುಂಬು ಬೆಳಕು ಅವನ ಮುಖದ ಮೇಲಷ್ಟೇ ಬೀಳುತ್ತದೆ. ಆಗ ಮತ್ತೊಮ್ಮೆ ಕರೆಕೊಡುತ್ತದೆ ಆ ಅಶರೀರ ವಾಣಿ –

**ವಾಣಿ** : ಏಳು ಕನಕಣ್ಣ, ಎದ್ದು ಬಾ ನನ್ನಣ್ಣ
ಏಳು ದಾಸರದಾಸ ಶ್ರೀ ಹೃದಯವಾಸ !

**ಕನಕ** : (ಬೆಳಕು ಬಂದ ದಿಸೆಯನ್ನೇ ನೆಟ್ಟ ಹಾಗೂ ಚಕಿತ ದೃಷ್ಟಿಯಿಂದ ವೀಕ್ಷಿಸುತ್ತಾ)
ಯಾರು ? ಯಾರವರು ಕರೆದವರು ?
ಅಣ್ಣ ಅಣ್ಣಾ ಎಂದು ಕೂಗಿ ಕರೆದವರು
ಪರದೇಶಿ ದಾಸನನು ವಾತ್ಸಲ್ಯ ವಕ್ಷದಲಿ
ಮುಚ್ಚಿ ಬಚ್ಚಿಟ್ಟಂತೆ ಮುದ್ದಿಸಿದವರಾರು ?

– ಕನಕ ದರ್ಶಿಸುತ್ತಿದ್ದ ಬೆಳಕೇ ರೂಹುವಡೆದಂತೆ ಕೃಷ್ಣ
ಆ ದಿಸೆಯಿಂದ ಆಗಮಿಸಿ ನರ್ತಿಸುತ್ತಾ –

**ಕೃಷ್ಣ** : ನಾನು ನಾನೇ ದಾಸ
ನಿನ್ನೆದೆಯ ವಾಸ ॥
ಶ್ರೀನಿವಾಸ ಎಂಬ
ಶ್ರೀಮಂದಹಾಸ ॥
ಗುಡಿಯೊಳಗೆ ಗುಹೆಯೊಳಗೆ
ಬಯಲು ಬತ್ತಲೆಯೊಳಗೆ
ಬೆಟ್ಟ ಗುಡ್ಡಗಳಲ್ಲಿ ದಟ್ಟಡವಿಯಲ್ಲಿ
ಅಲ್ಲಿ ಆ ಮರದಲ್ಲಿ
ಪಾಸರೆಯ ಮೇಲಲ್ಲಿ
ನದಿಯಲ್ಲಿ ಪೊದೆಯಲ್ಲಿ ಎಲ್ಲೆಡೆಯ ವಾಸ ॥

**ಕನಕ** : ಆಹಾ ! ಪರಮಾತ್ಮ !! ಕೃಷ್ಣಾ !!!
ಸಚ್ಚಿದಾನಂದ ನಿತ್ಯ ಪರಿಪೂರ್ಣನೆ !
ನಿತ್ಯ ನೃತ್ಯೋತ್ಸವದ ಮನ್ಮನೋಹಾರಿ !
ಅಣು ರೇಣು ತೃಣ ಕಾಷ್ಠದಲ್ಲಿ ಅಡಗಿರುವಂಥ
ಓ ದಿವ್ಯ ಚೇತನವೆ,
ಶಂಖ ಚಕ್ರ ಗದಾಧಾರಿಯಾದ ನರನೆ ನಾರಾಯಣನೆ,
ಲಘು ವಾಘೆಯಂ ಪಿಡಿದ ಓ ಪಾರ್ಥಸಾರಥಿಯೆ,
ನನಗರ್ಥವಾಗದಿಯ ಒಗಟೆ ನೀನು !
ಹೇಳು ಪರಮಾತ್ಮಾ, ಹೇಳು, ತಿಳಿಯ ಹೇಳೋ ತಂದೆ ;

**(ನರ್ತಿಸುತ್ತಾ)** ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ ॥ ಪ ॥
ನೀ ದೇಹದೊಳಗೊ ನಿನ್ನೊಳು ದೇಹವೋ ॥ ಅನು. ಪ॥
ಬಯಲು ಆಲಯದೊಳಗೊ
ಆಲಯವು ಬಯಲೊಳಗೊ

ಬಯಲು ಆಲಯವೆರಡು ನಯನದೊಳಗೋ ?
ಬುದ್ಧಿನಯನದ ಒಳಗೊ
ನಯನ ಬುದ್ಧಿಗಳೆರಡು ನಿನ್ನೊಳಗೊ ಹರಿಯೇ ॥ ೧ ॥
ಸವಿಯು ಸಕ್ಕರೆಯೊಳಗೊ
ಸಕ್ಕರೆಯು ಸವಿಯೊಳಗೊ
ಸವಿಯು ಸಕ್ಕರೆಯೆರಡು ಜಿಹ್ವೆಯೊಳಗೋ ?
ಕುಸುಮದೊಳು ಗಂಧವೊ ಗಂಧದೊಳು ಕುಸುಮವೊ
ಕುಸುಮ ಗಂಧಗಳೆರಡು ಘ್ರಾಣದೊಳಗೋ ॥ ೨ ॥
ನೀ ಮಾಯೆಯೊಳಗೊ ನಿನ್ನೊಳು ಮಾಯೆಯೋ
ನೀ ದೇಹದೊಳಗೊ ನಿನ್ನೊಳು ದೇಹವೋ
ಅಸಮಭವ ಕಾಗಿನೆಲೆಯಾದಿ ಕೇಶವರಾಯ
ಉಸುರಲೆನ್ನೊಶದ ಸರ್ವವೂ ನಿನ್ನೊಳು ಹರಿಯೇ ॥ ೩ ॥

**ಕೃಷ್ಣ** : ಕನಕಣ್ಣ, ಕಂಡರಿಯೆಯಾ,
ಅದು ಜೀವ – ದೇವರ ಒಲವು
ಐಕ್ಯಾನು ಸಂಧಾನ !
ಅಂತಿರಲಿ, ಆ ಮಾತು ಬದಿಗಿರಲಿ
ಈಗೆನಗೆ ಬಹು ಹಸಿವು, ಕಿತ್ತು ತಿನ್ನುವ ಹಸಿವು !
ಹಿಟ್ಟುರೊಟ್ಟಿಯನಿಟ್ಟು ಗುಟುಕು ನೀರೆರೆಯುವೆಯಾ ?

**ಕನಕ** : ಅಯ್ಯೋ ನನ್ನಪ್ಪ. ಅಯ್ಯೋ ನನ್ನರಗಿಣಿ,
ಹಸಿದು ಬಂದಿಹ ನಿನಗೆ ನಾ ಅಶನವೀಯಲುಬೇಕೆ ?
ದೆಸೆ ದೆಸೆಯಲೆಸೆದಿರುವ ಕ್ರಿಮಿಕೀಟ ಶಿಶುಗಳಿಗೆ
ಅಸಮ ಬಲ ನೀನೀವೆ ಉಣಿಸು ಉಪಹಾರ !
ಎಲ್ಲರಾಹಾರವೇ ನೀನಾದ ನಿನಗಿಂದು ಹಸಿವೆಯೇನೋ ಸ್ವಾಮಿ,
ಬಾ ತಂದೆ, ಬಾ ಒಲವೆ, ಬಾರೆನ್ನ ಭಗವಂತ,
ಕಂಬಳಿಯ ಗೊಂಗಡಿಯ ಒಣರೊಟ್ಟಿ ಮೆದ್ದು
ಕುಡಿಕೆ ನೀರಲಿ ದಣಿವ ನೀಗಿಕೊಳು ಬಾರಾ !
ಇದಿಕೊ ಈ ಒಣರೊಟ್ಟಿ, ಕೋ ತಂದೆ ತಿಂದು ತಣಿ !
ಹಂಪೆಯಾಳ್ದನ ಮಡಲಿನಿಂದೊಲಿದು ತಂದದ್ದು !
ಇದಿಕೊ ಈ ಜಲತೀರ್ಥ, ಮಧ್ವ ಪುಷ್ಕರಿಣಿಯಿಂ
ಮೊಗೆ ಮೊಗೆದು ತಂದದ್ದು.

(ಕಂಬಳಿಯ ಒಳಪದರದಿಂದ ರೊಟ್ಟಿ ತೆಗೆದುಕೊಡುತ್ತಾನೆ. ಕೃಷ್ಣ ಮೆಲ್ಲಗೆ ಮೆಲ್ಲುತ್ತಾ)

**ಕೃಷ್ಣ** : ಕನಕಣ್ಣ, ನಿನ್ನ ಹಾಡನ್ನು ಕೇಳೆ
ಅಮಿತವಾದಾನಂದ ! ಪಾಡುವೆಯಾ ?

**ಕನಕ** : ಆಗಲಿ ನನ್ನಪ್ಪಾ,

**(ಕೀರ್ತನೆ)** : ಮಗನೆಂದಾಡಿಸುವಳು ಮೊಗ ನೋಡಿ ನಗುವಳು ॥ ಪ ॥
ಜಗದುದ್ಧಾರನ ಮೊಗ ಮೊಗದೊಳಿರಿಸಿಕೊಂಡು ॥ ಅನು. ಪ. ॥

(ಹಾಡು ಹರಿಯುವಾಗ ಒಂದು ಬದಿಯಲ್ಲಿ ಬಾಲಕೃಷ್ಣ ಮತ್ತು ಯಶೋದೆಯರ ನರ್ತನ ಹಾಡನ್ನನುಸರಿಸಿ ನಡೆಯುವುದು. ಆಗ ಕೃಷ್ಣ ಕನಕರು ಕುಳಿತಿದ್ದ ಭಾಗ ಕತ್ತಲಾಗುವುದು)

ಕಾಲಲಂದುಗೆ ಗೆಜ್ಜೆ ತೋಳ ಮಣಿಯ ದಂಡೆ
ಫಾಲದ ಅರಳೆಲೆಯು ಕುಣಿಯೆ ।
ನೀಲದುಡುಗೆಯುಟ್ಟ ಬಾಲನೆ ಬಾರೆಂದು

ಪಾಲುಣಿಸುವ ಪುಣ್ಯವೆಂತು ಪಡೆದಳಯ್ಯಾ ॥ ೧ ॥
        ಬಣ್ಣ ಸರಗಳೆಡೆ ರನ್ನದ ನೇವಳ
        ಹೊನ್ನ ಘಂಟೆಯು ಘಣ ಘಣರೆನಲು
        ಪನ್ನಗಶಯನನೆ ಕುಣಿಯೊಮ್ಮೆ ಕುಣಿಯೆಂದು
        ಕುಣಿಸಿ ನಗುವ ಪುಣ್ಯವೆಂತು ಪಡೆದಳಯ್ಯಾ ॥ ೨ ॥
ಪೊಡವಿಯ ಈರಡಿ ಮಾಡಿದ ದೇವನ
ಕುಡಿ ಬೆರಳನೆ ಕರದಲಿ ಪಿಡಿದು
ಅಡಿಯಿಡು ಮಗನೆ ಮೆಲ್ಲಡಿಯಿಡು ಎನುತಲಿ
ನಡೆಗಲಿಸುವ ಪುಣ್ಯವೆಂತು ಪಡೆದಳಯ್ಯಾ ॥ ೩ ॥
        ಶಂಖ ಚಕ್ರ ಗದಾ ಪದುಮ ಧಾರಕನ
        ಪಂಕಜ ಮಿತ್ರ ಶತಕೋಟಿ ತೇಜವನು
        ಸಂಖ್ಯೆ ಇಲ್ಲದ ಆಭರಣಗಳ ತೊಡಿಸಿ
        ಅಲಂಕರಿಸುವ ಪುಣ್ಯವೆಂತು ಪಡೆದಳಯ್ಯಾ ॥ ೪ ॥
ಸಾಗರ ಶಯನನ ಭೋಗೀಶನ ಮೇಲೆ
ಯೋಗನಿದ್ರೆಯೊಳಿಪ್ಪ ದೇವನನು
ಆಗದು ನಿಗಮಗಳರಸಿ ಕಾಣದ ವಸ್ತು
ತೂಗಿ ಪಾಡುವ ಪುಣ್ಯವೆಂತು ಪಡೆದಳಯ್ಯಾ ॥ ೫ ॥
        ಪನ್ನಗ ಶಯನನ ಉನ್ನತ ಮಹಿಮನ
        ಸನ್ನುತ ಭಕುತರ ಸಲಹುವನ
        ಪನ್ನಗಾರಿವಾಹನ ಕಾಗಿನೆಲೆಯಾದಿ
        ಚನ್ನಕೇಶವನನೆಂತು ಪಡೆದಳಯ್ಯಾ ॥ ೬ ॥

(ಹಾಡು ನರ್ತನಗಳು ಮುಗಿದು, ಆ ಎಡೆ ಕತ್ತಲಾಗುವುದು. ಕೃಷ್ಣ ಕನಕರಿದ್ದ ಭಾಗ ಬೆಳಕಾಗುವುದು)

**ಕೃಷ್ಣ** : ಓಂ ! (ತೇಗುವನು)
        ತೃಪ್ತನಾದೆನೊ ಕನಕ
        ಕೊಡು ಕುಡಿವೆ ಉದಕ !

**ಕನಕ** : ಒಣ ರೊಟ್ಟಿ, ಹಸಿ ಖಾರ
ಬಡ ಕುರುಬನಾಹಾರ !
ಮೆಚ್ಚಾಯಿತೇ ಸ್ವಾಮಿ
ತೃಪ್ತಿ ತಂದಿತೆ ತಂದೆ ?

**ಕೃಷ್ಣ** : ಕನಕ,
ರುಕ್ಮಿಣಿಯ ಕೈತುತ್ತು ಇದಕಿಂತ ಮಿಗಿಲಲ್ಲ !
ಹಸಿದವಗೆ ಅಕ್ಕರೆಯು ಬೆರೆತ ಅಲ್ಪವೆ ಕಲ್ಪ
ಅದುವೆ ಸುಗ್ರಾಸಭೋಜನವು ಅಮೃತ ಸ್ಯಂದಿ !!
(ಚಣ ಕಾಲ ತಡೆದು)
ಅದು ಸರಿಯೊ ಕನಕಣ್ಣ,
ನಿನ್ನ ಅನ್ನವ ನಾನು ಕಿತ್ತು ತಿಂದೆ ?
ನಿನಗೇನು ? ನಿನ್ನ ಗತಿಯೇನು ?

**ಕನಕ** : ನಿನ್ನ ತೃಪ್ತಿಯೆ ನನಗೆ ತೃಪ್ತಿಯಲ್ಲವೆ ತಂದೆ ?
ನೀನುಂಡ ಬಳಿಕ ನನ್ನುದರದಾ ಗೊಡವೆ ನನಗಿಲ್ಲವೆಂದೆ !

**ಕೃಷ್ಣ** : ಹಾಗಲ್ಲ.

ಒಬ್ಬರಾಹಾರವನು ಕಸಿದು ತಿಂಬುದು ಪಾಪ !
ಕೋ ಒಡವೆ, ನನ್ನುಡುಪು ಆಭರಣ,
ಉಡುಪಿ ನಗರದೊಳಿಹನು ಬಹು ದೊಡ್ಡ ವ್ಯಾಪಾರಿ
ಅವಗಿತ್ತು. ಹಣಪಡೆದು, ಬೇಕಾದ ಉಣಿಸು ಕೊಳ್ !
ಹ್ಞೂ, ತೆಗೆದುಕೋ ಕನಕಣ್ಣ !
(ಕನಕ ಕೈ ಚಾಚದಿರಲು ಕೃಷ್ಣ ಒತ್ತಾಯ ಪೂರ್ವಕವಾಗಿ ಒಡವೆ ವಸ್ತ್ರಗಳಿದ್ದ ಗಂಟನ್ನು ಅವನ ಕೈಗಿರಿಸುತ್ತಾ)
ಅಂಜದಿರು, ಅಂಜದಿರು, ಅಂಜಿ ಹಿಂಜರಿಯದಿರು
ಕೋ ಕನಕ, ಕನಕಣ್ಣ,
ನೀನಿದನು ಕೊಳ್ಳದಿರೆ ಎನ್ನ ಮೇಲಾಣೆ !

**ಕನಕ** : ಹ್ಞಾ !
ಆಣೆ ಇಟ್ಟೆಯ ತಂದೆ !
ಕೈಗೆ ಬಂದಾ ತುತ್ತು ಬಾಯಿಗಿಲ್ಲವಾಯ್ತೆ !
ದೇವ ದೇವನ ತಣಿಸಿ ಪಡೆದ ಪುಣ್ಯದ ಪಾಲು
ಎನಗಿಲ್ಲವಾಯ್ತೆ !
ನಾ ತೆಗೆದುಕೊಳ್ಳದಿರೆ ನೊಂದುಕೊಳ್ಳುವೆ ನೀನು !
ಕೊಂಡೆನೇ ಈ ಪಾತಕಿಯ ಭಾಗ್ಯ ಬಯಲಾಯ್ತು !
ಆಗಬೇಕಾದುದನು ತಡೆಯಲಿಕೆ ನಾನಾರು ?
ನಾನೊಂದು ನರಕೀಟ !
ಕೊಡು ಸ್ವಾಮಿ, ಕೊಳ್ಳುವೆನು ।
ತಿನಿಸ ಕೊಳ್ಳುವೆ ತಾರೊ
ಹೊನ್ನಿನಾಭರಣಗಳ ಮುಡಿಕಟ್ಟ ತಾರೊ
(ಕೃಷ್ಣ ಕೊಡುವನು)
ನೀನಿತ್ತ ಒಡವೆಗಳ ಕಂಬಳಿಯ ಒಳಗಿಡುವೆ
ನಾಳೆ ಬೆಳಗಿನ ವೇಳೆ ಮಾರಿ ಬರುವೆ.
ಆಹಾರ ಕೊಂಡು ತರುವೆ !
ನಾಳೆಯೂ ನಿನಗಿತ್ತು ಉಣಿಸಿ ನಲಿವೆ ।
ನಡೆ ತಂದೆ, ನಡೆ ನನ್ನ ಉಸಿರೆ
ನನ್ನೆದೆಯ ಮಂದಿರದ ಪುಣ್ಯ ಪರಮೇಷ್ಠಿಯೇ,
ಹೋಗು ನಿನ್ನಾಲಯಕೆ !
ನಿನ್ನಡಿಯ ಗುಡಿಯಲ್ಲಿ ಪವಡಿಪೆನು
ನಡೆ ನನ್ನೊಲವಿನೊಲವೆ !

(ಕೃಷ್ಣ ನರ್ತಿಸುತ್ತಾ ನಿರ್ಗಮಿಸುವನು. ಬೀಜಿಮ್‌ನಲ್ಲಿ ನರ್ತನ ನಡೆಯಬೇಕು ಚಣಕಾಲ, ಅದನ್ನೇ ನೋಡುತ್ತಾ ಆನಂದಿಸಿದ ಕನಕ ಕಂಬಳಿ ಹೊದೆದು ಮಲಗುವನು. ರಂಗ ಸಂಪೂರ್ಣ ಕತ್ತಲಾಗಿ ಅರೆಚಣದಲ್ಲಿ ಮತ್ತೆ ಬೆಳಗುವುದು)

– ಅರ್ಚಕ ದ್ವಯರ ಆಗಮನ ।

(ಉದ್ಧರಣೆಯ ನೀರನ್ನು ಮುಂದೆರೆದುಕೊಂಡು, ಎಚ್ಚರಿಕೆಯ ಹೆಜ್ಜೆಯಿಡುತ್ತ)
ಗಂಗೇ ಯಮುನೇ ಚೈವ ಕೃಷ್ಣೇ ಗೋದಾವರೀ ತಥಾ...
(ಎಂದನ್ನುವಷ್ಟರಲ್ಲೇ ನಿಂತು ದೇಗುಲದ ತೆರೆದ ಬಾಗಿಲು ನೋಡಿ)

**ಆನಂದ** : ಮುಕುಂದ ಭಟ್ಟರೇ...

**ಮುಕುಂದ** : ಏನು ಆನಂದ ಭಟ್ಟರೇೀ...

**ಆನಂದ** : ಏನಿದು ! ಶ್ರೀಕೃಷ್ಣ ದೇಗುಲದ ದ್ವಾರ ತೆರೆದಿದೆಯಲ್ಲಾ !!
ಕಳೆದಿರುಳು ಮುಚ್ಚುವುದ ಮರೆತಿರೇನು ?

**ಮುಕುಂದ** : ಇಲ್ಲವಲ್ಲಾ, ನಾವಿಬ್ಬರೂ ಸೇರಿಯೇ ಭದ್ರಪಡಿಸಿದೆವಲ್ಲಾ !
**ಆನಂದ** : ಮತ್ತೆ !!! ಬಾಗಿಲಿದು ತೆರೆದಿಹುದು !
ಏನನಾಹುತವಾಗಿಹುದೊ ಕಾಣೆನೇ !
ಮುಕುಂದ ಭಟ್ಟರೆ. ಬೇಗ ಒಳಗೆ ಹೋಗಿ ನೋಡಿಕೊಂಡು ಬನ್ನಿ
ಏನಾಗಿದೆಯೋ ಏನೋ !
**ಮುಕುಂದ** : (ಒಳಗೆ ಹೋಗಿ, ತುಸು ಹೊತ್ತಾದ ಮೇಲೆ ಅಲ್ಲಿಂದಲೇ ಜೋರಾಗಿ ಕೂಗಿಕೊಳ್ಳುವನು)
ಅಯ್ಯೋ ಸರ್ವನಾಶ ! ಸರ್ವನಾಶ !!
ಸ್ವಾಮಿಯ ಮೈಮೇಲಿನ ಆಭರಣಗಳ ಅಪಹರಣ !!!
(ರಂಗ ಪ್ರವೇಶಿಸಿ)
ಆನಂದ ಭಟ್ಟರೇ ಅನಾಹುತ ! ಅನಾಹುತ !!
ಕೃಷ್ಣ ಮೂರ್ತಿಯ ಮೇಲಿದ್ದ ವಸ್ತ್ರಾಭರಣಗಳು ಕಾಣೆಯಾಗಿವೆ !!
**ಆನಂದ** : ಕೃಷ್ಣಾ ! ಕೃಷ್ಣಾ ! ಮುಕುಂದಾ ! ಮುರಾರಿ !!
ಏನಪ್ಪಾ ನಿನ್ನ ಲೀಲೆ !
**ಮುಕುಂದ** : ದಳವಾಯಿಗಳೇ, ದ್ವಾರಪಾಲಕರೇ, ಈ ಮಠದ ಕಾಪಿನವರೇ ಏಳಿ,
ಬೇಗ ಬನ್ನಿ. ಸ್ವಾಮಿಯ ಆಭರಣಗಳು ಕಳವಾಗಿವೆ !
ಕಳ್ಳನನ್ನು ಹುಡುಕಿ, ಹಿಡಿದು ಎಳೆತನ್ನಿ, ತ್ವರೆಮಾಡಿ ತ್ವರೆಮಾಡಿ !
(ದಂಡಧಾರಿಗಳಾದ ಇಬ್ಬರು ಕಾಪಿನಾಳುಗಳು ಆಗಮಿಸುವರು)
ನೋಡುತಿಹರೇನನ್ನು ? ಹುಡುಕಿರೇ ಕಳ್ಳರನು !

(ಅತ್ತ ಇತ್ತ ಒಳಗೆ ಹೊರಗೆ ರಭಸದಿಂದ ಎಲ್ಲರೂ ಓಡಾಡುವರು. ಇಬ್ಬರೂ ಒಬ್ಬನನ್ನೊಬ್ಬ ಹಿಡಿದು **'ಕಳ್ಳಸಿಕ್ಕಿದ'** ಎಂದು ಕೂಗಿ ಛೀಮಾರಿ ಮಾಡಿಸಿಕೊಳ್ಳುವರು.)

– ಕನಕನನ್ನು ಕಂಡು –

**ಮುಕುಂದ** : ಸ್ವಾಮಿ, ಇಲ್ಲಿ ನೋಡಿ ಯಾವನೋ ಮಲಗಿದ್ದಾನೆ.
ಕರಿ ಕಂಬಳಿಯ ದುಟ್ಟಗೊರವ
ಅರೆ ಬತ್ತಲೆಯ ಬೈರಾಗಿ
ಏಕ ನಾದವ ಮಿಡಿದ ತ್ರಿನಾಮಧಾರಿ
**ಆನಂದ** : ರುದ್ದ
**ರುದ್ದ** : ಸ್ವಾಮಿ
**ಆನಂದ** : ರೊದ್ದ,
**ರೊದ್ದ** : ಬುದ್ದೀ
**ಆನಂದ** : ಅವನನೆಬ್ಬಿಸಿ ಕೇಳಿ
ಕಳವೇಕೆಗೈದನೆಂದು ?
**ಮುಕುಂದ** : ಕೇಳ್ರೋ ! ಕದ್ದ ಒಡವೆಗಳನ್ನು ಎಲ್ಲಿಟ್ಟಿದ್ದಾನೆ ಕೇಳ್ರೋ !
**ರುದ್ದ** : ರೊದ್ದ, ನೀನೆ ಕೇಳ್ಲಾ
**ರೊದ್ದ** : ನನಗೆ ಭಯ ಆಯ್ತದಪ್ಪಾ ! ನೀನೆ ವಸಿ ಎಬ್ಬುಸ್ಲಾ !
ಅಮ್ಯಾಕೆ ನಾನೆ ಕೇಳ್ತೀನಿ.
**ರುದ್ದ** : ಹಂಗಾರೆ, ಬರೇ ಎಬ್ಬಿಸೋದು ನನ್ ಕೆಲ್ಸ
ಕೇಳೋದು ಕೀಳೋದು ನಿನ್ ಕೆಲ್ಸ !
**ರೊದ್ದ** : ಹಾಗೇ ಆಗ್ಲಿ... ಎಬ್ಬುಸು ಮೊದ್ಲು,

(ರುದ್ದ ಕನಕನ ಹತ್ತಿರ ಹೋಗುವನು. ಮಬ್ಬುಗತ್ತಲಲ್ಲಿ ಅವನಿಗೆ ಕರಡಿಯಂತೆ ಕಾಣುವುದು)

**ರುದ್ದ** : (ಚೀರಿಕೊಂಡು, ಹೌಹಾರಿ ಹಿಂದೆ ನೆಗೆದು, ಬಿದ್ದು ಎದ್ದು ಧಾವಿಸಿ

ಬಂದು)

ಅಯ್ಯಯ್ಯಮ್ಮೋ ಲೇ ರೊದ್ದಾ ಅದು ಮನಸಾ ಅಲ್ಲ, ಕರಡೀ!

ಕರೇ ಕರಡಿ ! ಕಲ್ಡೀ !!....

(ರೊದ್ದನು ಹಾರಿ ಬೀಳುತ್ತಾನೆ. ಅವನನ್ನು ಹಿಡಿದು ಇವನು, ಇವನನ್ನು ಹಿಡಿದು ಅವನು ಇಬ್ಬರೂ ಹಿಂದೆ ಹಿಂದಕ್ಕೆ ಎಳೆದಾಡಿ, ಬಿದ್ದು ಒದ್ದಾಡಿ ಬೋರಿಡುತ್ತಾರೆ.)

**ಮುಕುಂದ** : ಏಯ್ ! ಮುತ್ಠಾಳ್ರಾ, ಅದು ಕರಡಿ ಆದ್ರೆ ನಿಮ್ಮಲ್ಲಿ
ಭರ್ಜಿಗಳಿಲ್ಲವೇ? ಇರಿಯಿರಿ.

**ಆನಂದ** : ಕರಡಿ ಎಲ್ಲಿಂದ ಬರಬೇಕಪ್ಪಾ !
ಅದು ಕರಡಿ ಅಲ್ಲ, ಸರಿಯಾಗಿ ನೋಡಿ,

**ರುದ್ದ** : ನಾನ್ ಸರಿಯಾಗೇ ನೋಡಿವ್ನಿ ಬುದ್ದೀ.. ಅದು ನಮ್ಮಪ್ಪನಾಣೆ
ನಮ್ಮವ್ವನಾಣೆ, ನನ್ಹೆಂಡ್ರಾಣೆ ಕಲ್ಡೀನೇ ! ಸ್ವಾಮೀ
ಅದು ಕರೇ ಕಲ್ಡಿ !!

**ಮುಕುಂದ** : ರೊದ್ದ ನೀನೊಮ್ಮೆ ಪರೀಕ್ಷಿಸಿ ನೋಡು.

**ರೊದ್ದ** : ಹ್ಞಾ !... ನಾ.. ನಾ.. (ಮೂಗಿನಲ್ಲಿ ಪದಗಳನ್ನು ಉಚ್ಚರಿಸುತ್ತಾ)
ನ.... ನ... ನ... ನಾ.... ನಾ.... ನಾ.... ?

**ಮುಕುಂದ** : ಹೂಂ, ನೀನೇ.. ಹೋಗೋ ಮೊದ್ಲು.

**ರೊದ್ದ** : (ಹೆದರಿ) ಓಯ್ತೀನಿ.. ಓಯ್ತೀನಿ... !
ಅಮ್ಮಾ.. ಅಮ್ಮಮ್ಮಾ... ಅದೇನಾದ್ರೂ ಕಲ್ಡೀ ಅಲ್ದೇ...

**ರುದ್ದ** : ದೆವ್ವಾ... !

**ರೊದ್ದ** : (ಹೌಹಾರಿ ಹಿಂದೆ ನೆಗೆದು) ಅಯ್ಯಯ್ಯಮ್ಮೋ, ದೆವ್ವಾ ದೆವ್ವಾ
ಕಂಬಳಿ ದೆವ್ವಾ ! ಭರ್ಜರಿ ದೆವ್ವಾ !

(ರಂಗದ ತುಂಬ ಇಬ್ಬರ ಹಾರಾಟ ಚೀರಾಟ)

**ಮುಕುಂದ** : ಬಡಕೋಬೇಕು, ಲೋ ಪಾಪಿ ! ಅದಲ್ವೋ ದೆವ್ವ
ನೀನೇ ಒಂದು ದೊಡ್ಡ ದೆವ್ವಾ !

**ರೊದ್ದ** : ಇಲ್ಲಾ... ಇಲ್ಲಾ... ಅದು ಕೃಷ್ಣಪರಮಾತ್ಮನ
ಆಣೆಗೂ ಕರೀ ಕಂಬ್ಳಿ ದೆವ್ವಾ !

**ರುದ್ದ** : ಅಂಗಾರೆ ಭರ್ಜಿ ಐತಲ್ಲಾ, ಅದರಾಗೆ ಇರಿಯ್ಲಾ.

**ರೊದ್ದ** : ಬಲ್ ಜಾಣಾ ನೀನು ! ಕಲ್ಡೀ ಆದ್ರೆ ಇರೀ ಬೈದು.
ದೆವ್ವನ್ನಿರಿಯಾಕಾಯ್ತದಾ ? ನಮ್ಮ ನೆಳಲಿನ ಸಂಗಡ
ನಾವೇ ಕುಸ್ತಿ ಮಾಡಿದಂಗೆ ! ದೆವ್ವ ಇರಿದರೆ ಚುಚ್ಚಲ್ಲ.
ಕಡಿದರೆ ಕಚ್ಚಲ್ಲ, ಕುಟ್ಟಿದರೆ ನುಚ್ಚಲ್ಲ ! ನನ್ನಪ್ಪಾ
ನನ್ ಕೈಯಾಗಾಗಲ್ಲಪ್ಪಾ !

(ಅಷ್ಟರಲ್ಲಿ ಕನಕ ಕಂಬಳಿ ಒಳಗಿಂದ ಎಚ್ಚೆತ್ತು ಮಿಸುಕಾಡುವನು)

**ರುದ್ದ** : ಅಗಾಳಪ್ಪಾ, ಎದ್ದೇಳ್ತಾ ಐತೆ ದೆವ್ವಾ !

(ಕೂಡಲೇ ಇಬ್ಬರೂ ಅಯ್ಯಯ್ಯಮ್ಮೋ. ಅಯ್ಯಯ್ಯಮ್ಮೋ ಎಂದು ಅರಿಚಿ ಎದ್ದು ಬಿದ್ದು ರಾಣಾರಂಪ ಮಾಡುವರು)

**ಆನಂದ** : ಲ್ರೋ ಮೂರ್ಖ ಶಿಖಾಮಣಿಗಳೇ, ನೀವು ಭಟರು, ಭರ್ಜಿ
ಹಿಡಿದ ಕಾವಲುಗಾರರು. ನಿಮ್ಮನ್ನು ನೇಮಿಸಿದವರ ಕೈಗೆ
ತೊಡಿಸಬೇಕು ಕಡಗಾನ ! ನೋಡಿ. ಅದು ಕರಡೀನೂ
ಅಲ್ಲ. ದೆವ್ವಾನೂ ಅಲ್ಲ ! ಮನುಷ್ಯಾ !! ಮನುಷ್ಯಾ !!

**ಕನಕ** : ಶರಣು ಮಹಾತ್ಮರೆ, ಏನಿದೀ ಕೋಲಾಹಲ ?

**ರುದ್ದ** : ಎಲಲಾ ಕಲ್ಡೀ ಅಲ್ಲಾ... ?

**ರೊದ್ದ** : ದೆವ್ವಾ ಅಲ್ಲಾ.. ??

| | | |
|---|---|---|
| **ಕನಕ** | : | ಅಲ್ಲ, ನಾನೂ ನಿಮ್ಮ ಹಾಗೆ ಇರುವ ಮನುಷ್ಯ ಅಣ್ಣಗಳಿರಾ ! |
| **ರುದ್ದ** | : | ಲೇಯ್ ಅಣ್ಣ ಪಣ್ಣ ಅಂತಾ ಬಣ್ಣದ ಮಾತಾಡ ಬ್ಯಾಡ ನೀನು ಯಾರನ್ನ ಕೇಳಿ ಈ ಮಠದೊಳಗೆ ಬಂದೆ ? ಹೇಳು. |
| **ರೊದ್ದ** | : | ಯಾರನ್ನ ಕೇಳಿ ದೇವರ ಮೈಮೇಲಿನ ಒಡವೆ ಕದ್ದೆ ? ಹೇಳು. |
| **ರುದ್ದ** | : | ಮೊದಲು ನಿನ್ನ ಹೆಸರು ಹೇಳು. |
| **ರೊದ್ದ** | : | ಆಮೇಲೆ ನಿಮ್ಮಪ್ಪನ ಹೆಸರು ಹೇಳು. |
| **ಕನಕ** | : | ನನ್ನ ಹೆಸರು... ಕನಕ ! |
| **ರೊದ್ದ** | : | ಹ್ಞಾ ! ಕನಕ ! ಗುರುಗಳೇ ಕನಕ ಅಂದರೆ ಏನು ? |
| **ಮುಕುಂದ** | : | ಚಿನ್ನ ! |
| **ರೊದ್ದ** | : | ನೋಡಿದ್ರಾ, ಕದ್ದ ಈ ಕಳ್ಳನೇ ಚಿನ್ನದ ಒಡವೆ ಕದ್ದೆ ಅನ್ನೋದು ಬಿಟ್ಟು ಸಂಸ್ಕೃತದಾಗೆ... ಅದೇ ನಿಮ್ಮ ಬಾಸೇಗೇ 'ಕನಕ ಕದ್ದೆ' ಅಂತಿದಾನೆ ! |
| **ಆನಂದ** | : | ಇರಲಿ, ತಾಳಿ, ಏನಯ್ಯಾ, ನೀನು ಸ್ವಾಮಿಯ ಒಡವೆಗಳನ್ನು.... |
| **ಕನಕ** | : | ಕದಿಯಲಿಲ್ಲ ಸ್ವಾಮಿ, ಅವನೇ ನನ್ನ ಕೈಗಿತ್ತ !... ಇದೋ ನೋಡಿ ಎಲ್ಲವೂ ಇಲ್ಲಿವೆ !! |
| | | (ಗಂಟನ್ನು ಮುಂದಿಡುವನು) |
| **ರುದ್ದ** | : | ಸುಳ್ಳು ! ಸುಳ್ಳು !!.. |
| **ರೊದ್ದ** | : | ಅಪ್ಪಟಾಸುಳ್ಳು, ಹಸೀಸುಳ್ಳು, ಬಿಸೀಸುಳ್ಳು, ಕಸೀಸುಳ್ಳು, ಕಳ್ಳ ಸುಳ್ಳು ಮುಳ್ಳುಸುಳ್ಳು, ಸುಳ್ಳೂಂದ್ರೆ ಸುಳ್ಳು ತಾಜಾಸುಳ್ಳು ! |
| **ರುದ್ದ** | : | ಸ್ವಾಮಿ, ಇವನು ಕಳ್ಳನೂ ಹೌದು, ಸುಳ್ಳನೂ ಹೌದು. |
| **ರೊದ್ದ** | : | ಲೋ, ನಮ್ಮ ಕೃಷ್ಣ ಬೆಣ್ಣೆ ಕಳ್ಳ ನಿಜ, ಆದರೆ ನಿನ್ನ ಹಾಗೆ ಸುಳ್ಳು ಹೇಳ್ತಿರಲಿಲ್ಲ ! |
| **ರುದ್ದ** | : | ನೀ ನೋಡಿದ್ದೆಯೇನೋ ? ಕಂಡವನ ಹಾಗೆ ಬೊಗುಳ್ತಾನೆ ! |
| **ರೊದ್ದ** | : | ಕೃಷ್ಣ ಬೆಣ್ಣೆಕಳ್ಳ, ಇವನು ಒಡವೆ ಕಳ್ಳ.. ಸರಿಯಾಗೈತೆ ! |
| | | (ಕುಣಿದಾಡುವರು) |
| **ಮುಕುಂದ** | : | ಲ್ರೋ ! ನಿಲ್ಲಿಸಿರಯ್ಯಾ ನಿಮ್ಮ ತಲೆಹರಟೆ ! |
| **ಇಬ್ಬರೂ** | : | ಅಪ್ಪಣೆ ಬುದ್ಧೀ ! ಗಪ್ ಚಿಪ್, ಬಾಳೇ ಹಣ್ಣಿನ ಚಿಪ್ !! (ಇಬ್ಬರು ಕೈಗಳಿಂದ ಬಾಯಿಮುಚ್ಚಿಕೊಂಡು ನಿಲ್ಲುವರು) |
| **ಆನಂದ** | : | ಅಪ್ಪಾ, ನೀನೇಕೆ ಸ್ವಾಮಿಯ ಮೈಮೇಲಿನ ಒಡವೆಗಳನ್ನು ಕದ್ದೆ ? |
| **ಕನಕ** | : | ಇಲ್ಲಾ ಸ್ವಾಮಿ, ಪರಮಾತ್ಮನ ಪಾದಸಾಕ್ಷಿಯಾಗಿಯೂ ನಾನು ಕದಿಯಲಿಲ್ಲ. ಅವನೇ ನನಗೆ ಕೈಯಾರ ಕೊಟ್ಟ !! |
| **ರುದ್ದ** | : | ಎಂಥಾ ಸೋಜಿಗದ ಮಾತಪ್ಪಾ ಇದು ! ನಾವು ಇಷ್ಟು ವರ್ಸಾ ಸ್ವಾಮಿ ಸೇವಾ ಮಾಡ್ತಾ ಇದೀವಿ, ಒಂದಿನಾನೂ ಒಂದು ಕಾಸು 'ಕ್ವಾ' ಅಂತಾ ಕೈಯೆತ್ತಿ ಕೊಡ್ಲಿಲ್ಲ. ಇವನಿಗೆ ಒಂದೇ ಒಂದು ರಾತ್ರಿಗೆ ಒಲ್ದು ಕೊಟ್ ಬುಟ್ನಂತೆ ! ಬಲೇ ಡೋಂಗಿ ಬಡ್ಡೀಮಗ ! |
| **ರೊದ್ದ** | : | ನಾವು ಭಕ್ತಾದಿಗಳ ಹತ್ರ ಹಲ್ಲು ಕಿರಿದು ಎರಡು ಕಾಸು ಗಿಟ್ಟಿಸೋದೇ ಕಷ್ಟ. ಅಂತಾದ್ರಲ್ಲೀ ದೇವರಿಂದ ಪಡೆಯೋದೆಲ್ಲಿ ಬಂತು !... ಸ್ವಾಮಿ, ಇವನು ಬರೇ ಕಳ್ಳಾ ಅಲ್ಲಾ, ಖನಾತಿ ಕಳ್ಳಾ !! |
| **ಕನಕ** | : | ಇಲ್ಲಾ... ಇಲ್ಲಾ... ನಾನು ಕಳ್ಳನಲ್ಲ (ನೊಂದುಕೊಂಡು)<br>ಕಳ್ಳನೆಂದೆನ್ನ ನೀವ್ ಕರೆಯದಿರಿ, ದೂರದಿರಿ.<br>ಕಳವೆಂದರೇನೆಂದು ನಾನರಿಯೆ, ನಾನರಿಯೆ !! |
| **ಆನಂದ** | : | ಕನಕ, |

ನಿನಗಾವ ಶಿಕ್ಷೆಯನು ನಾವು ವಿಧಿಸುವುದಿಲ್ಲ
ಕಳ್ಳ ನೀನಾಗಿರುವೆ ತಪ್ಪನೊಪ್ಪಿಕೊ ಸಾಕು !

**ಕನಕ** : ಅಪ್ಪಪ್ಪಾ ! ತಪ್ಪು ಮಾಡಿಲ್ಲ ತಂದೆ !
ನಾ ಕಳವು ಗೈದವನಲ್ಲ, ನಾ ಕಳ್ಳನಲ್ಲ !

**ಮುಕುಂದ** : ಆನಂದ ಭಟ್ಟರೆ,
ಬರಿಯ ಮಾತಿಗೆ ಇವನು ಬಾಯಿ ಬಿಡುವವನಲ್ಲ ;
ತಕ್ಕುದನೆ ಗೈಯಬೇಕು...
ರುದ್ದ, ರೊದ್ದ
ಏನ್ ಮುಖ ನೋಡ್ತಿದ್ದೀರೋ ? ....
ಬಿಗಿಯಿರೋ ಇವನನ್ನು ಕಂಬಕ್ಕೆ !

**ರುದ್ದ** : ಹ್ಞಾ ! ಹ್ಞಾ ! ಬಿಗಿಯಿರಿ ಬಿಗಿಯಿರಿ,

**ರೊದ್ದ** : ಕಂಬಕ್ಕೆ ಬಿಗಿಯಿರಿ,

– ಎಂದು ಕೂಗುತ್ತಾ ಒಬ್ಬನು ಕನಕನನ್ನು ಹಿಡಿದೆಳೆದು ಕಂಬದ ಬದಿ ನಿಲ್ಲಿಸಿಕೊಂಡು ನಿಲ್ಲುವನು. ಮತ್ತೊಬ್ಬನು ಅವನನ್ನು ಸೇರಿಸಿ ಕಂಬಕ್ಕೆ ಹಗ್ಗ ಸುತ್ತುವನು, ಅವನು 'ಲೋ ರೊದ್ದ ಪೆದ್ದ ನನ್ನನ್ನು ಬಿಗಿದು ಬಿಟ್ಟಿಯಲ್ಲೋ' ಎಂದು ಒರಲಿದಾಗ ಹಿಂದಕ್ಕೆ ಬಿಚ್ಚುತ್ತಾ ಹೋಗಿ ಬಿಚ್ಚಿದ ಹಗ್ಗವನ್ನೆಲ್ಲಾ ತನಗೇ ಸುತ್ತಿಸಿಕೊಂಡು ಬೀಳುವನು.
ಆಗ ಮೊದಲನೆಯವನು ಇವನನ್ನು ಬಿಚ್ಚಿ–

**ರುದ್ದ** : ಸ್ವಾಮಿ, ಇವನು ಬರೇ ಕಳ್ಳ ಸುಳ್ಳ ಅಲ್ಲಾ,
ಶುದ್ಧ ಮಾಟಗಾರ !

**ರೊದ್ದ** : ನೋಡಿ ಸ್ವಾಮಿ, ಹಗ್ಗಕ್ಕೂ ಬುದ್ಧಿಕಲಿಸಿ ಬಿಟ್ಟೌನೆ !
ಅದು ನಮ್ಮನ್ನೇ ಬಿಗಿಯಾಕ ಬರುತ್ತೆ !

**ರುದ್ದ** : ಈಗ ನೋಡಿ, ಕೊರಡೆ ತಗಂಡು ನಾಕು ಬಿಗಿದ್ರೇ...

(ಇಬ್ಬರೂ ಕನಕನನ್ನು ಕೊರಡೆಯಿಂದ ಹೊಡೆಯತೊಡಗುವರು. ಏಟುಗಳು ಬಿದ್ದ ಹಾಗೆಲ್ಲಾ ಕನಕ ಕೃಷ್ಣಾ ಕೃಷ್ಣಾ ಕೇಶವ ಮುಕುಂದ, ಮುರಾರಿ, ಎಂದೆಲ್ಲ ಕೂಗಿಕೊಳ್ಳುವನು. ಚಣಕಾಲ ಕ್ರಿಯೆ ಹಾಗೇ ಜರುಗುವುದು. ಅಷ್ಟರಲ್ಲಿ ಇದ್ದಕ್ಕಿದ್ದ ಹಾಗೆ ವಾದಿರಾಜರು ಹೊರಗಡೆಯಿಂದ ಕೂಗಿಕೊಂಡು ಧಾವಿಸಿ ಬರುವರು)

**ವಾದಿ** : ನಿಲ್ಲಿ... ನಿಲ್ಲಿ.. ಹೊಡೆಯುವುದನ್ನು ನಿಲ್ಲಿಸಿ !
ಅಯ್ಯೋ ಪರಮಾತ್ಮನನ್ನು ಹೊಡೆಯುವುದನ್ನು ನಿಲ್ಲಿಸಿ !!

**ಮುಕುಂದ** : ಓಹ್ ! ವಾದಿರಾಜರು ! ವಾದಿರಾಜರು !

**ಆನಂದ** : ವಾದಿರಾಜರಿಗೆ ಜಯವಾಗಲಿ ! ಜಯವಾಗಲಿ !!

**ವಾದಿ** : ನನ್ನ ಜಯ ಅಂತಿರಲಿ, ಆನಂದ, ಮುಕುಂದ
ಏನಿದೀ ಅನ್ಯಾಯ ! ನೀವಿಂತು ಎಸಗುವುದೆ ?
ಶ್ರೀಕೃಷ್ಣ ಪರಮಾತ್ಮ, ಆ ಜನಾರ್ದನನನ್ನು
ಕೊರಡೆಯಿಂದೆಡೆ ಬಿಡದೆ ಹೊಡೆಯುವುದು ಉಚಿತವೆ ?

**ಮುಕುಂದ** : ಗುರುವರ್ಯ, ನಾವು ಹೊಡೆಸಿದ್ದಿವನ
ಸ್ವಾಮಿ ಒಡವೆಯ ಕದ್ದ ಕಳ್ಳನನ್ನಿವನ !

**ವಾದಿ** : ಅಲ್ಲಾ.. ಇವನಲ್ಲ ಕಳ್ಳ ! ಅವನೇ, ಅವನೇ
ಆ ನವನೀತ ಚೋರ ! ಅವನೆ ಬಲುಗಳ್ಳ !!

– ಕೂಡಲೇ ಬೀಜಿಮ್ ಆರಂಭವಾಗಿ ತೀವ್ರಗತಿಯಲ್ಲಿ ಮುಂದುವರಿಯುವುದು. ರಂಗಭೂಮಿ ಕತ್ತಲಾಗುವುದು. ಕೃಷ್ಣ ಕನಕರಿಬ್ಬರೂ ಬೆನ್ನಿಗೆ ಬೆನ್ನು ಕೂಡಿಸಿ, ತಮ್ಮ ತೋಳುಗಳೆರಡನ್ನೂ ಹಿಂದು ಹಿಂದಾಗಿ ಹೆಣೆದುಕೊಂಡು ನಿಲ್ಲುವರು, ಸ್ಪಾಟ್ ಲೈಟ್ ಹರಿದಾಗ ಅವರು ಒಬ್ಬರಾದ ಮೇಲೊಬ್ಬರು ತಿರುಗುವರು. ಬೆಳಕು ಅವರ ಮೇಲೆ ಕ್ರಮವಾಗಿ ಬೀಳುವುದು. ಕೃಷ್ಣನೇ ಕನಕ, ಕನಕನೇ ಕೃಷ್ಣ – ಎಂಬ ಅಭೇದ ಕಲ್ಪಿತವಾಗುವಂತೆ ದೃಗ್ಗೋಚರವಾಗಬೇಕು. ಆಗ –

ಕಳ್ಳನವನು ಕಳ್ಳನೋ ಒಳ್ಳೆ ಕಳ್ಳನೋ
ಮಳ್ಳಿ ಹಾಂಗೆ ಮಡಕೆ ಇಳುಹೊ ಕಳ್ಳ ನಮ್ಮ ಕಳ್ಳನೋ ॥ ಪ ॥

ಬಳ್ಳಿ ಮಾಡದಲ್ಲಿ ಅಡಗಿ ಬೆಳ್ಳಿ ಬೆಡಗಿಯನ್ನು ಬಿಡದೆ
ಹಿಡಿದು ಬೆಣ್ಣೆ ಕಸಿಯುವಂಥ ಹಗಲುಗಳ್ಳನೋ ॥ ಅನು. ಪ ॥

(ಹಾಡಿನೊಡನೆ ಎಲ್ಲರೂ ನರ್ತಿಸುವರು. ಹಿನ್ನೆಲೆಯಲ್ಲಿ ಹಾಡು ಹರಿದಂತೆ ಬಾಲಕೃಷ್ಣ, ಬೆಣ್ಣೆ ಹುಡುಗಿಯರು. ಸೀರೆ ಅಪಹರಣ ಸನ್ನಿವೇಶ ಇತ್ಯಾದಿಗಳನ್ನು ಅಭಿನಯದ ಮೂಲಕ ತೋರಿಸಬಹುದು)

ಮಡುವಿನಲ್ಲಿ ಕ್ರೀಡೆಗೈವ
ತುಡುಗಿಯರಾ ಉಡುಗೆ ಕದ್ದನೋ
ಅವರ ಮನವ ಕದ್ದನೋ ॥
ತನ್ನ ಒಡವೆ ತಾನೆ ಕದ್ದು ಚೆನ್ನ ಚೆಲುವ ನಿಂದನೋ
ಸಂತ ಕನಕದಾಸರನ್ನು ಉಂತೆ ಹೊಡೆಸಿದಾತನೋ ॥
ಕೊರಡೆ ಏಟು ಬಿಡದೆ ಬೀಳೆ ತನ್ನ ಮೈಯನಿತ್ತನೋ,
ಬಾ– ಸುಂಡೆ ಮೂಡೆ ನೋವನೆಲ್ಲ ತಾನೆ ತನ್ನೊಳುಂಡನೋ ॥
ಹಸಿದು ಬಂದು ರೊಟ್ಟಿ ತಿಂದು ಒಸಗೆ ಎಮಗೆ ಇತ್ತನೋ
ಶ್ರೀಶಸ್ವಾಮಿ ಉಡುಪಿ ಕೃಷ್ಣ ದಾಸರಿಂಗೆ ದಾಸನೋ ॥

(ಹಾಡು ತಾರಕಕ್ಕೇರಿ ನರ್ತನ ತುರೀಯ ಸ್ತರಕ್ಕೇರಿದಾಗ
ಸ್ವಾಮಿ ಮಾಯವಾಗುವನು)

**ವಾದಿರಾಜ** : ಪರಮ ತಪೋಧನರೆ, ಓ ದಾಸಶ್ರೇಷ್ಠರೇ,
ಮನ್ನಿಸಿರಿ ಅಪರಾಧ, ಮನ್ನಿಸಿರಿ ಅಪಚಾರ !

**ಕನಕ** : ಕರ ಮುಗಿದು ಬೇಡುವೆನು
ಕ್ಷಮೆಯ ಯಾಚಿಸಬೇಡಿ,
ಅವನೆ ಗೈದಪಚಾರ,
ಅವಗಾಯ್ತು ಉಪಚಾರ !

**(ಹಾಡು)** ಏನು ಲೀಲೆಯೋ ಸ್ವಾಮಿ
ಎಂಥ ಮಾಯೆಯೋ ॥ ಪ ॥
ಕಪಟ ನಾಟಕ ಸೂತ್ರಧಾರಿ ಶ್ರೀ ಕೃಷ್ಣಾ ॥ ಅನು. ಪ ॥

ಒಂದು ಕೈಯಲಿ ಕೊಡುವೆ
ಕೊಟ್ಟ ಕೈಯಲೆ ಪಡೆವೆ
ಕೊಡುವವನು ಕೊಂಬವನು
ತಾನೆ ಎಂದೆನುವೆ ॥
ಕರ್ಮವಷ್ಟೇ ನಿನಗೆ
ಅಧಿಕಾರವೆಂದೆನುವೆ
ಫಲಗಳನು ಬಲಗಳನು ಎಲ್ಲ ಮೀಸಲುಗೊಳುವೆ ॥ ೧ ॥

ಒಳ್ಳೆಯವನನು ಹಿಡಿಸಿ
ಕಳ್ಳನೆಂದೆನ್ನಿಸುವೆ
ಮುಳ್ಳಿನಲಿ ಹೂವಿಹುದ
ನೀನೆ ತೋರಿಸುವೆ ॥
ಬಳ್ಳಿ ಮೊಗ್ಗೆಯ ರೀತಿ
ಎಲ್ಲರೊಳಗಡಗಿರುವೆ
ಸಲ್ಲಲಿತ ಕಾಗಿನೆಲೆ –
ಆದಿ ಕೇಶವ ಕೃಷ್ಣಾ ॥ ೨ ॥
ಕ್ಷೀರವಾರಿಧಿ ಶಯನ
ತಾಮರಸ ಧಳ ನಯನ

ಮುಗ್ಧ ಗೋಪೀ ಚಾರ
ನವನೀತ ಚೋರ ॥
ಮಾರಪಿತ ಗುಣಹಾರ
ಸಾಮಗಾನ ಪ್ರೇಮ
ಶಾಂತ ಸಾಕಾರ ಶ್ರೀ
ತುಂಬುರ ನಾರದ ಪ್ರಿಯನೇ ॥ ೩ ॥

**(ವಚನ)** ಸಾಕ್ಷಾತ್ ಕೃಷ್ಣ ಸ್ವರೂಪಿಗಳಾದ ವಾದಿರಾಜಾದಿ ಪೂಜ್ಯರೆ,
ದಯಮಾಡಿ, ನಮ್ಮ ವಂಚಿಸಿ ಮಿಂಚಿಮಾಯವಾದ
ಆ ಕಂಚೀ ಕರಿವರದನನ್ನು ಮತ್ತೆ ಭಜಿಸಿ ಸಾಕ್ಷಾತ್ಕರಿಸಿಕೊಳ್ಳೋಣ.

**(ಶ್ಲೋಕ)** ಶಾಂತಾಕಾರಂ ಭುಜಗಶಯನಂ ಪದ್ಮನಾಭಂ ಸುರೇಶಂ
ವಿಶ್ವಾಧಾರಂ ಗಗನ ಸದೃಶಂ ಮೇಘವರ್ಣಂ ಶುಭಾಂಗಮ್
ಲಕ್ಷ್ಮೀಕಾಂತಂ ಕಮಲನಯನಂ ಯೋಗಿಭಿಃ ಧ್ಯಾನಗಮ್ಯಮ್
ವಂದೇ ವಿಷ್ಣುಂ ಭವಭಯಹರಂ ಸರ್ವಲೋಕೈಕನಾಥಮ್ ॥

**(ಷಟ್ಪದಿ)** ವೇದಗೋಚರ ವೇಣುನಾದ ವಿ
ನೋದ ಮಂದರ ಕಂಸದಾನವರಿಪು ಮಹಾಮಹಿಮ ।
ಯಾದವೇಂದ್ರ ಯಶೋನಂದನ
ನಾದ ಬಿಂದು ಕಳಾತಿಶಯ ಪ್ರ
ಹ್ಲಾದ ರಕ್ಷಕ ವರದ ರಕ್ಷಿಸು ನಮ್ಮನನವರತ ॥

(ಕನಕದಾಸರು ಹೇಳಿಕೊಟ್ಟಂತೆ ಎಲ್ಲರೂ ಹಾಡುವರು.
ಆನಂದ ತುಂದಿಲರಾಗಿ ನರ್ತಿಸುವರು)

ಕೃಷ್ಣ ಕೃಷ್ಣ ಕೃಷ್ಣ ಕೃಷ್ಣ
ಉಡುಪಿ ಕೃಷ್ಣ ಕೃಷ್ಣನೇ ।
ವಿಶ್ವರೂಪಿ ವಿಶ್ವವ್ಯಾಪಿ
ವಿಶ್ವಾತ್ಮನೆ ಕೃಷ್ಣನೇ ॥
ಜಗದ್ವಂದ್ಯ ಜಗನ್ಮಾನ್ಯ
ವಿಶ್ವಪೂಜ್ಯ ಕೀರ್ತಿಯೇ
ಶಂಖ ಚಕ್ರ ಗದಾಧಾರಿ
ವಿಶ್ವ ದೇಹ ಮೂರ್ತಿಯೇ ॥
ನಮೋ ನಮೋ ಭವವಿನಾಶ
ಭಕ್ತ ಭೋ ವಿಲಾಸ
ವಿಸ್ತಾರದ ಸತ್ತ್ವರೂಪಿ
ಸಮಸ್ತವು ತಾನಾದನೇ ॥
ಕಾಗಿನೆಲೆಯ ಕೇಶವಾ
ಬೇಲೂರ ಚೆನ್ನಕೇಶವಾ
ತಿರುಪತಿಯಾ ಗಿರಿಯಲಿರುವ
ಶ್ರೀನಿವಾಸ ಮಾಧವ ॥

– ತಾರಕಕ್ಕೇರಿದಾಗ ಸ್ಫೋಟದೊಂದಿಗೆ ಶ್ರೀ ಕೃಷ್ಣನ ಸಾಕ್ಷಾತ್ಕಾರವಾಗುವುದು. ಪುಷ್ಪವೃಷ್ಟಿಯೊಂದಿಗೆ ಮಂಗಳ –

**– ತೆರೆ –**

# ಚೆನ್ನಿ ಚೆನ್ನಿ ಚೆನ್ನಲೆ

**ಪಾತ್ರವರ್ಗ**
**ಕಲ್ಲಿನಾಥ (ಶಿವ)**
**ಚೆನ್ನಲೆ**
**ಸೋಮಲೆ**
**ಸಂಗಯ್ಯ**
**ಗೆಳತಿಯರು ನಾಲ್ವರು**
**ಪುರ ಪ್ರಮುಖರು**
**– ಇತ್ಯಾದಿ**

ಪ್ರದರ್ಶನ :
**ಶಾಂಭವಿ ನೃತ್ಯಶಾಲೆ, ವಿಜಯನಗರ, ಬೆಂಗಳೂರು**

**ನಿರ್ದೇಶಕರು,**
**ನಾಟ್ಯಸರಸ್ವತಿ ವೈಜಯಂತಿ ಕಾಶಿ**

## ಪ್ರಸ್ತಾವನೆ

ಇದೊಂದು ಸತ್ಯಕಥೆ ಕಲಬುರ್ಗಿಯ ಬಳಿ ಇರುವ ಕೋಳೂರಲ್ಲಿ ಸಂಗಯ್ಯ ಎಂಬ
ಓರ್ವ ಭಕ್ತ, ಸೋಮಲೆ ಅವನ ಪತ್ನಿ, ಚನ್ನಲೆ ಅವನ ಏಕ ಮಾತ್ರ ಪುತ್ರಿ,
ಆ ಚನ್ನೆಲೆಯೇ ಶಿವನಿಗೆ ಮೆಚ್ಚಾದ ಕೊಡಗೂಸು. ಕೋಳೂರ ಕಲ್ಲಿನಾಥನಿಗೆ ಬಳ್ಳ
ಹಾಲು ಕುಡಿಸಿ ಆನಂದ ಹರಿಸಿದ ಈ ಕೋಳೂರ ಕೊಡಗೂಸಿನ ಕಥೆ ಒಂದು ಪುಣ್ಯ
ಕಥೆಯೂ ಹೌದು. ಈ ಕಥಾವಲೋಕನದಿಂದ ಲೋಕ ಪಾವನವಾಗಲಿ,
ಹುಸಿಯ ನುಡಿಯಲು ಬೇಡ ಎಂಬ ಅಣ್ಣನ ನುಡಿ ಸಾರ್ಥಕ್ಯ ಪಡೆಯಲಿ.

**ದೃಶ್ಯ : ೧** **ಆಟದ ಬಯಲು**

(ಗೆಳತಿಯರೊಡನೆ ಚೆನ್ನಲೆ ಹಾಡುತ್ತಾ ನರ್ತಿಸುತ್ತಾ)

ಕಿಲ್ ಕಿಲ್ ಕಿಲ ಕಿಲ। ಕಿಲ್ ಕಿಲ್ ಕಿಲ ಕಿಲ। ಕಿಲಿರೆ ಕಿಲಿರೆ ಕಿಲ ಕಿಲರೆ ।
ಝುಣ್ ಝುಣ್ ಝುಣ ಝುಣ । ಝುಣ್ ಝುಣ್ ಝುಣ ಝುಣ ಝುಣರು
ಝುಣರು ಝುಣ ಝುಣರೆ ॥

ಕಿಂಕಿಣಿ ಕಿಣಿ ಕಿಣಿ ಕಾಲಿನ ಗೆಜ್ಜೆ
ಝೇಂಕರಿಸುತ್ತಿದೆ ಕಡಗದ ಹೆಜ್ಜೆ
ಕಿಲ ಕಿಲ ನಗುತಿಹ ಮಾಲೆಗು ಲಜ್ಜೆ
ಕೈಬಳೆ ಝುಣುರೆನೆ ತಾಳದ ಸೆಜ್ಜೆ ॥ ೧ ॥

ಕುಣಿಯೋಣ ಕುಣಿಯೋಣ ಕುಣಿಯೋಣ
ಬಾಲ್ಯದ ದಿನಗಳ ಸವಿಯೋಣ
ತೇಲುವ ಮೋಡದ ತೆರದಲ್ಲಿ
ತಾವರೆ ತೇರಲಿ ತೇಲೋಣ ॥ ೨ ॥

**ಚೆನ್ನಲೆ** : ಬನ್ನಿರಿ ಬನ್ನಿರಿ ಗೆಳತಿಯರೇ ॥
ಬಂಗಾರ ಹೂ ತೋಟಕೆ
ಸಿಂಗಾರದ ಸಿರಿ ಸಗ್ಗಕೆ ॥ ಪ ॥

ಚಿಟ್ಟೆಗಳಾಡುವ ಪಟ್ಟಣಕೆ
ಓದುವ ಗಿಳಿಗಳ ಶಾಲೆಗೆ
ದುಂಬಿಯ ಬಂಬಲ ಶ್ರುತಿ ಜತಿ ಲಯಕೆ
ಕೋಗಿಲೆ ಗಾಯನಗೋಷ್ಠಿಗೆ ॥ ೧ ॥

ನವಿಲಿನ ಜಾಗರವಾಡೋಣ
ಗರಿಗಳ ಕೆದರುತ ಕುಣಿಯೋಣ
ಹಂಸೆಯ ನಡಿಗೆಯ ನಡೆಯೋಣ
ಜುಳು ಜುಳು ನೀರಾಟವಾಡೋಣ ॥ ೨ ॥

**ಗೆಳತಿಯರು :**

ಚೆನ್ನೆ ಚೆಲುವೆ ಚೆನ್ನಲೆ
ನಮ್ಮ ಕೈಯ ಹೂಬಳೆ
ನಿನಗೆ ನಮ್ಮ ಆಟ ಪ್ರಿಯವೆ
ಕಣ್ಣಾಮುಚ್ಚಾಲೆ !

(ಒಬ್ಬಳು ಚೆನ್ನಲೆಯನ್ನು ಎಳೆದು ತನ್ನ ತೊಡೆಯ ಮೇಲೆ ಕೂರಿಸಿಕೊಂಡು, ತನ್ನ ಎರಡೂ ಕೈಗಳಿಂದ ಅವಳ ಕಣ್ಣುಗಳನ್ನು ಮುಚ್ಚಿ)

ಕಣ್ಣಾ ಮುಚ್ಚೆ
ಕಾಡಾಗೂಡೆ
ಉದ್ದಿನ ಮೂಡೆ
ಉರುಳೇ ಹೋಯ್ತು
ನಮ್ ಹಕ್ಕಿ ಬಿಟ್ಟೇ
ನಿಮ್ಮ ಹಕ್ಕಿ ಬಚ್ಚಿಡೀ ॥ ಫೇ.... ಫೇ ॥

**ಸಂಗಯ್ಯ ಸೋಮಲೆ :** (ಪ್ರವೇಶಿಸಿ)

ಕಣ್ಣ ಮುಚ್ಚಾಲೆ ಇದು ಕಣ್ಣಾ ಮುಚ್ಚಾಲೆ
ನಮ್ಮ ಬಾಳು ಬದುಕು ಎಲ್ಲ ಕಣ್ಣಾ ಮುಚ್ಚಾಲೆ ॥ ಪ ॥
ಹುಟ್ಟು ಸಾವು ಎರಡೂ ಆಡೊ ಕಣ್ಣಾ ಮುಚ್ಚಾಲೆ
ಕಟ್ಟಿಕೊಂಡ ಸಂಸಾರ ಕಣ್ಣಾ ಮುಚ್ಚಾಲೆ ॥ ೧ ॥
ಬಿಸಿಲು ಬೆಳುದಿಂಗಳಾಡೊ ಕಣ್ಣಾ ಮುಚ್ಚಾಲೆ
ಹಗಲು ಇರುಳು ತೂಗುತಿರುವ ಜೀವ ಜೋಕಾಲೆ
ಮಲ್ಲಿ ಕಲ್ಲಿ ಕಾಳಿ ಸಿದ್ದಿ
ಗಂಗೆ ಗೌರಿ ರೇಣಿ ಮುದ್ದಿ
ಕಣ್ಣ ಮುಚ್ಚಾಲೆ ಇದು ಕಣ್ಣಾ ಮುಚ್ಚಾಲೆ ॥ ೨ ॥
ಗಂಡು ಹೆಣ್ಣು ಕಾಮ ಪ್ರೇಮ ಕಣ್ಣಾ ಮುಚ್ಚಾಲೆ
ಹೊನ್ನು ಮಣ್ಣು ಕಾಡುತಿರುವ ಕಣ್ಣಾ ಮುಚ್ಚಾಲೆ ॥ ೩ ॥
ಮೇಲುಕೀಳು ಭೇದ ಭಾವ ಕಣ್ಣಾ ಮುಚ್ಚಾಲೆ
ಹಾಲು ನೀರು ಸೇರಿ ಆಡೋ ಕಣ್ಣಾ ಮುಚ್ಚಾಲೆ ॥ ೪ ॥
ಶಿವನು ತನ್ನ ಲೀಲೆ ಮೆರೆವ ಕಣ್ಣಾ ಮುಚ್ಚಾಲೆ
ಭವದ ಭಾವ ರೂಪಿಸಿಟ್ಟ ಕಣ್ಣಾ ಮುಚ್ಚಾಲೆ ॥ ೫ ॥
ಚೆನ್ನೀ.... ಚೆನ್ನಮ್ಮಾ.... ಓ ಚೆನ್ನಲೇ !

**ಚೆನ್ನ :** ಅಪ್ಪಾಜೀ... ಅಮ್ಮಾಜಿ....
ನಾನು ಇಲ್ಲೇ ಇರುವೆ ಹೇಳಿರಿ
ಏಕೆ ಹುಡುಕಿ ಬಂದಿರಿ ?

**ಸಂಗ :** ಚೆನ್ನ ಚೆನ್ನಿ ಚೆನ್ನಲೆ
ಹಾಲು ಜೇನು ಸಕ್ಕರೆ
ನಮ್ಮ ತೋಳ ತಲ್ಪದಲ್ಲಿ
ಆಡು ಉಯ್ಯಾಲೆ.

**ಸೋಮ :** ಬನ್ನಿ ಬನ್ನಿ ಮಕ್ಕಳೆ
ನಗೆಯ ಲೋಕದೊಕ್ಕಲೆ
ತೇಲಿ ಬನ್ನಿ ಅಲೆ ಅಲೆ
ಆಡಿರಪ್ಪಾಲೆ ತಿಪ್ಪಾಲೆ ॥

**ಚನ್ನ :** ಅಪ್ಪ... ಅಮ್ಮ !
ಅಪ್ಪ ಅಮ್ಮ ತುಪ್ಪ ಜೇನು
ಅವರ ಸಕ್ಕರೆ ಬೊಂಬೆ ನಾನು
ಹೃದಯ ಪ್ರೀತಿ ಎಲ್ಲೂ ಕಾಣೆ
ಅಮ್ಮನಂತೂ ಕಾಮಧೇನು !
ಅಪ್ಪಾಜಿ,
ಹುಡುಕಿಕೊಂಡು ಬಂದಿರೇಕೆ ?
ನೀವೂ ಆಟ ಆಡಬೇಕೆ !

ಆಟದಲ್ಲಿ ಪಾಠ ಕಲಿಸಿ
ನಮ್ಮ ತಿದ್ದಿ ನಡೆಯಿಸಿ ॥

**ಸಂಗ** : ನಿಮ್ಮೊಡನೆ ಆಡಲಿಕೆ ನಾವು ಬರಲಿಲ್ಲ
ಒರೆವ ಮಾತೊಂದಿಹುದು ನಡೆಸುವೆಯ ಎಲ್ಲ ?

**ಚೆನ್ನ** : ಹೇಳಿರಪ್ಪಾಜಿ, ದಯಮಾಡಿ ಹೇಳಿ
ಪಾದವಿಟ್ಟೆಡೆಯಲ್ಲಿ ಶಿರ ಹಾಸುವೆ
ನಿಮ್ಮ ಮಾತೇ ನನಗೆ ಸರ್ವಮಾನ್ಯ !

**ಸಂಗ** : ಅಮ್ಮ ನೀನು ಕೊಡಗೂಸು
ಶಿವನ ಕೊಡಗೂಸು
ನಮ್ಮ ಮುದ್ದು ಹಸುಗೂಸು !

**ಚೆನ್ನ** : ಕೊಡುಗೂಸು !
ಅಪ್ಪಾಜಿ,
ಅವನು ಕೊಡದಾ ವಸ್ತು ಯಾವುದಿದೆ ಜಗದಲ್ಲಿ
ಎಲ್ಲವೂ ಅವನ ಕೊಡುಗೆ !
ಅವನಿತ್ತುದೆಲ್ಲವನು ಅವನಿಗರ್ಪಿಸಬೇಕು
ಎಂದು ನೀವೇ ಒಮ್ಮೆ ಹೇಳಿದಿರಿ, ಅಲ್ಲವೆ ?

**ಸಂಗ** : ಅಹುದು ಮಗಳೇ, ನಾನೆ ಹೇಳಿದ್ದೆ
ನಿನ್ನ ನೆನಪಿನ ಶಕ್ತಿ ಶ್ಲಾಘನೀಯ
ಇರಲಿ....

**ಸೋಮ** : ಕಥೆಯ ಹೇಳುವೆ ಕೇಳು ಚೆನ್ನಲೆ
ನಿನ್ನ ಜನನಕ್ಕೆ ಇಹುದೊಂದು ಹಿನ್ನೆಲೆ ॥
ಗಿರಿಯಾ ಮಲ್ಲಯ್ಯನ ನೋಡಿದೆವು
ಭ್ರಮರಾಂಬೆ ತಾಯನ್ನು ಬೇಡಿದೆವು
ಕೊಡು ತಾಯಿ ನಮಗೊಂದು
ಸುಗುಣೆ ಸದ್ಗುಣ ಶೀಲೆ
ಕೊಡಗೂಸ ದಯಪಾಲಿಸೆಂದು ॥ ಕಥೆಯ ॥
ಅವರಿತ್ತ ಕರುಣ ಪ್ರಸಾದ
ಕೊಡಗೂಸು ನೀನಾದೆ ಕಂದ
ಏಳು ತುಂಬಿತು ಬಾಲೆ ನಿನಗಿಂದು ಹಸುಳೆ
ಎಳೆ ಬಾಳೆ ಕುಡಿಯಂಥ ಕೋಮಲೆ ಬಾಲೆ ॥ ಕಥೆಯ ॥
ಉಸಿರಿತ್ತ ದೇವಂಗೆ ನವಿರೀವ ತೆರದಲ್ಲಿ
ಹರಕೆ ಸಲಿಸಲು ಗಿರಿಗೆ ಹೋಗಲೆ ಬೇಕಿದೆ ॥ ಕಥೆಯ ॥

**ಸಂಗ** : ಆದರೆ ನಮಗಿಹುದು ನೋವು ತಲೆನೋವು
ನೇಮಕ್ಕೆ ಅಪಚಾರ ತಗುಲಬಹುದೆಂದು ॥ ಕಥೆಯ ॥

**ಚೆನ್ನ** : ನೇಮವೇನು ನಿಷ್ಠೆಯೇನು ಹೇಳು ತಾಯಿ
ನಾನು ನಡೆಸಿಕೊಡುವೆನಮ್ಮ ನಂಬು ಮಾಯಿ ॥

**ಸಂಗ** : ಅಂತಿದ್ದರಿದೆ ಕೊಳ್ಳು ಈ ನಿತ್ಯ ನೇಮ
ತಪ್ಪದಲೆ ಪಾಲಿಸೇ ಮಗಳೆ ತಾಯಮ್ಮ
ಈ ಕೋಳೂರ ಕಲ್ಲಯ್ಯ ಮನೆ ದೇವರಮ್ಮ
ಅವಗೆ ಹಾಲಿನ ಸೇವೆ ಸಲಿಸಬೇಕಮ್ಮ
ತಪ್ಪದಲೆ ನಡೆಸುವೆಯ ಹೇಳು ನಮ್ಮಮ್ಮ !

**ಚೆನ್ನ** : ನಡೆಸುವೆನು ಅಪ್ಪಾಜಿ ತಪ್ಪದಲೆ ನಡೆಸುವೆನು
ಬಳ್ಳ ಹಾಲನು ತೆಗೆದು ಲಿಂಗಕರ್ಪಿಸಿ ಬರುವೆ
ಕಲ್ಲಿನಾಥಗೆ ನಮಿಸಿ ಧನ್ಯಳಹೆ ನಾನು
ಜಗದ ಪಿತನಿಗೆ ಹಾಲ ಕುಡಿಸಿ ಬರುವೆ
ಹಾಲ ಕುಡಿಸಿ ಬರುವೆ
ನಿಶ್ಚಿಂತೆಯಿಂದಲೇ ಗಿರಿಯ ಯಾತ್ರೆ ಮುಗಿಸಿ.
ನಿಮಗಕ್ಕೆ ಸುಖ ಪಯಣ ಸರ್ವ ಶುಭಮಕ್ಕೆ
(ಗೆಳತಿರೊಡನೆ ಹಾಡು)
ಶ್ರೀಶೈಲ ಹಾದಿಯಲಿ ಕಲ್ಲಿಲ್ಲ ಮುಳ್ಳಿಲ್ಲ
ಅಪ್ಪ ಅಮ್ಮರಿಗಾಗಿ ಹೂವೆ ಎಲ್ಲ
ಬಿಸಿಲು ಬೇಗೆಗಳಿಲ್ಲ ಹಸಿರು ಹಸಿರೇ ಉಸಿರು
ಕೆಂಪು ಚಿಗುರಿನ ಸೆರಗು ಬಡಿದಾವೊ ॥
ಬಳ್ಳಿಯೆಂಬೋ ಚೆಲುವೆ ಬಳುಕುತ್ತ ನಡೆದಾಳೆ
ಮರಿಹಕ್ಕಿ ಹೊಸ ಹಾಡ ಹಾಡ್ಯಾವೆ
ಬದನಮ್ಮ ಮೊಗ್ಗೀನ ಜಡೆಯ ಮುಡಿ ಬೀಸ್ಯಾಳೆ
ಪಯಣದಾಯಸವ ನೀಗ್ಯಾಳೆ ॥

**ದೃಶ್ಯ : ೨** **ದೇಗುಲ**

**ಚೆನ್ನ** : ಪೂಜೆಯ ಮಾಡಬೇಕು
ಕಲ್ಲಯ್ಯನ ಪೂಜೆಯ ಮಾಡಬೇಕು ॥ ಪ ॥
ಸದಮಲ ಭಾವವೆಂದೆಂಬ ತಿಳಿಜಲದಲ್ಲಿ
ಕೋಳೂರ ಲಿಂಗಕ್ಕೆ ಸ್ನಾನ ಮಾಡಿಸಬೇಕು
ಕಾಮನ ದಹಿಸಿದ ಹೋಮ ಭಸ್ಮಗಳಿಂದ
ಸೋಮಧರನ ಶಿರಕೆ ಧಾರಣೆಗೈಯುತ ॥ ಪೂಜೆಯ ॥
ನಾನು ನಾನೆಂದೆಂಬೊ ಹಮ್ಮುಹಲಗೆಯ ಮೇಲೆ
ನೀನು ನೀನೇ ಎಂಬ ಗಂಧ ಸಮಯಬೇಕು
ಸೊಕ್ಕು ಸೊಮ್ಮುಗಳೆಲ್ಲ ಸವೆದು ಹೋಗುವ ತನಕ
ಶ್ರೀಗಂಧ ಕರ್ದಮವ ಸವರಿ ಸವರುತ್ತಾ ॥ ಪೂಜೆಯ ॥
ಪುಷ್ಪವ ಧರಿಸಬೇಕು ನಿರ್ಮಲ ಮನದ
ಪುಷ್ಪವ ಧರಿಸಬೇಕು
ಕಾಯವಾಚ ಮನವೆಂಬ ಮೂರು ಕರಣಗಳುಳ್ಳ
ಮೂರು ದಳದ ಬಿಲ್ವ ಪತ್ರೆಯ ಮುಡಿಸುತ ॥ ಪೂಜೆಯ ॥
ಕಣ್ಗಳೆರಡು ಆರತಿಯು ತ್ರಿನೇತ್ರಗೆ
ಬೆಳಗುವ ಜ್ಯೋತಿಯ ಕುಡಿಗಳಂತೆ !
ತಾದಾತ್ಮ್ಯ ಭಾವದ ತೈಲವದರೊಳು ತುಂಬಿ
ಮಹಾಂತ ಮಹಿಮ ಶ್ರೀಕಲ್ಲಿನಾಥನಿಗೆ ॥ ಪೂಜೆಯ ॥
(ಶ್ಲೋಕದಲ್ಲಿ)
ಜಯ ಗಂಗಾಧರ, ಹರಹರ ಜಯ ಗಿರಿಜಾಧೀಶ ॥
ಶಿವ ಜಯ ಗಿರಿಜಾಧೀಶ ॥
ತ್ವಂ ಮಾಂ ಪಾಲಯ ನಿತ್ಯಂ

ತ್ವಂ ಮಾಂ ಕೃಪಯಾ ಜಗದೀಶ ॥
ಶಿವ ಕೃಪಯಾ ಜಗದೀಶ ॥

**(ಲಯದಲ್ಲಿ)**

ಕೈಲಾಸೇ ಗಿರಿಶಿಖರೇ ವರ ಕಲ್ಪದ್ರುಮ ವಿಪಿನೇ ।
ಶಿವಕಲ್ಪದ್ರುಮ ವಿಪಿನೇ ॥
ಗುಂಜತಿ ಮಧುಕರ ಪುಂಜೇ ಕುಂಜವನೇ ಗಹನೇ ॥
ಶಿವ ಕುಂಜವನೇ ಗಹನೇ ॥
ಕೋಕಿಲ ಕೂಜಿತ ಖೇಲಿತ ಹಂಸೀ ವನಲಲಿತಾ ॥
ಶಿವ ಹಂಸೀ ವನಲಲಿತಾ ॥
ರಚಯತಿ ಕಲಾ ಕಲಾಸೀ ನೃತ್ಯತಿ ಮುದ ಸಹಿತಾ ।
ಶಿವ ಶ್ರೀ ಮುದ ಸಹಿತಾ ॥
ಹರ ಹರ ಹರ ಮಹದೇವ
ಹರ ಹರ ಹರ ಮಹದೇವ ॥

(ಪೂಜೆ ಮುಗಿಸಿ, ಹಾಲು ತುಂಬಿದ ಬಟ್ಟಲನ್ನು ಲಿಂಗದ ಮುಂದೆ ಹಿಡಿದು ಮುಗ್ಧ ಭಾವದಿಂದ)

ನನ್ನಪ್ಪ,
ಅನುದಿನದ ನೇಹಕ್ಕೆ ಕುಂದು ತಾರದ ಹಾಗೆ
ನನ್ನ ಹಡೆದವರಿತ್ತ ನುಡಿಯಾಜ್ಞೆ ಸಲಿಸಲಿಕೆ
ಮೀಸಲಿಟ್ಟಿಹ ಹಾಲ ಕಾಯಿಸಿ ತಂದಿದ್ದೇನೆ
ಲೋಕೈಕನಾಥ,
ಕೃಪೆಮಾಡಿ ಸ್ವೀಕರಿಸು
ಸ್ವೀಕರಿಸಿ ನನ್ನನ್ನೂ ನಿನ್ನ ನಿಜಭಕ್ತಳೆಂದೆನಿಸು.

(ಶಿವಲಿಂಗದ ಮುಂದಿಟ್ಟು ಚಣಕಾಲ ಕೂರುವಳು, ಶಿವ ಬರಲಿಲ್ಲ, ಆಗ....)

ಬಿನದವೋ ಬೇಸರವೊ ನಾನರಿಯೆ ತಂದೆ
ಅಪ್ಪ ಅಮ್ಮದಿರಿತ್ತ ನೊರೆಹಾಲ ಸವಿದಂತೆ
ಕೆನೆ ಕೆಂಪು ಸೂಸುವೀ ಬಿಸಿ ಹಾಲು ಕುಡಿಯಯ್ಯ
ಚೊಕ್ಕ ಬಟ್ಟಲಿನಲ್ಲಿ ಮಿಕ್ಕ ಸಕ್ಕರೆ ಹಾಕಿ
ತಂದಿರುವೆನಪ್ಪಾ,
ಕುಡಿ ಹಾಲ ನನ್ನಪ್ಪ, ಕುಡಿಹಾಲ ತಂದೆ
ಕುಡಿದೆನ್ನ ಬದುಕಿಸೋ ಬೇಡಿಕೊಂಬೆ

(ಚಣಕಾಲ ಮೌನ)

ನನ್ನಪ್ಪ,
ಮುನಿಸು ಬಂದಿಹುದೇನೊ ಈ ಹಸುಳೆ ಮೇಲೆ
ಸಲ್ಲದೂ ಸಲ್ಲದು ಕೋಪವೆಂದಿಗು ಸಲದು
ನಾನು ಚಿಕ್ಕವಳು ದಿಟ ಅಲ್ಪಳೂ ಅಹುದು
ಆದರೀ ಮೀಸಲಿಗೆ ಅಲ್ಪತ್ವವಿಲ್ಲ ! ಅಮೃತತ್ವವೆಲ್ಲ !!
ನಿನ್ನಡಿಗೆ ಮುಡಿಚಾಚಿ ಬೇಡುವೆನು ತಂದೆ
ತಡೆಯದಲೆ ಕುಡಿಕುಡಿದು ಹರಸು ಎಂದೆ.

(ಮತ್ತೆ ಚಣಕಾಲ ಮೌನ ಅನಂತರ ಬಟ್ಟಲನ್ನು ದಿಟ್ಟಿಸಿ ನೋಡಿ)

ಓಹ್ !

ಅರ್ಥವಾಯಿತು ನಾನು ನಿಂತಿರುವೆನೆಂದೆ ?

ಕುಡಿಯಲಿಕೆ ನಾಚಿಕೆಯು ಅಲ್ಲವೇ ತಂದೆ ?
ಆಯ್ತಾಯ್ತು ಕಂಬದೀ ಮರೆಯಲ್ಲಿ ನಾ ನಿಲುವೆ
ಬೇಗ ನೀಂ ಕುಡಿದು ಬಿಡು.... ಹಾಂ... ಹ್ಞೂಂ !

(ಕಂಬದ ಹಿಂಬದಿಯಲ್ಲಿ ತನ್ನೆರಡೂ ಕೈಗಳಿಂದ ಕಣ್ಣುಗಳನ್ನು ಮುಚ್ಚಿಕೊಂಡು ನಿಲ್ಲುತ್ತಾಳೆ, ಚಣ ಮುಗಿದ ಮೇಲೆ...)

ಆಯಿತೆ ?
ಇನ್ನೂ ಹಾಲುಬೇಕೆ ?
ಮನೆಗೀಗಲೇ ಹೋಗಿ ಬೇಗ ತರಲೇನು ?

(ಮುಂದೆ ಬಂದು ನೋಡಿ, ಹಾಲು ಇದ್ದಂತೆಯೇ ಇದ್ದುದನ್ನು ಕಂಡು, ನೊಂದು)

ಅಯ್ಯಯ್ಯೋ! ನಾನು ಕೆಟ್ಟೆ
ಹಾಲನ್ನು ಕುಡಿದೆ ಇಲ್ಲ !
ಹ್ಞಾ! ಅರ್ಥವಾಯಿತು ಈಗ
ಬರಿಹಾಲ ಕುಡಿಯಲಿಕೆ ಬೇಸರವು ಅಲ್ಲವೆ ?
ಅಪ್ಪಪ್ಪಾ, ಹಣ್ಣು ಜೇನುಗಳನ್ನು ಹೊಂಬಾಳೆಯಲ್ಲಿಟ್ಟು
ತಂದುಕೊಡಲೇನು? ಹೇಳೊ ನನ್ನಪ್ಪ,
ಮಾತಾಡೊ ತಂದೆ !

**(ಹಾಡು)** ಮಾತಾಡು ಮಾತಾಡು ಲಿಂಗವೇ – ನೀನು
ಮಾತಾಡಲೊಲ್ಲೇಕೊ ಲಿಂಗವೆ ॥
ಚೆನ್ನೆ ಬಂದಾಕ್ಷಣಕೆ ಬನ್ನವೇ
ರನ್ನದೊಡಿಗೆಯನೀವೆ ಲಿಂಗವೆ ॥
ಮಾತಾಡು ಮಾತಾಡು ಲಿಂಗವೇ – ನೀನು
ಮಾತಾಡಲೊಲ್ಲೇಕೊ ಲಿಂಗವೆ ॥

**(ಗದ್ಯ)** ಸ್ವಾಮಿ,
ತಂದೆ ತಾಯಿಯರಿತ್ತ ಹಾಲ ಕುಡಿತಲಿದ್ದ
ನಿನಗೇಕೆ ಇಂದು ಹಟ, ಕೋಪವೇ ನನ್ನ ಮೇಲೆ ?
ನೋಡು,
ನನ್ನ ಮಾತನು ಕೇಳು, ಸುಮ್ಮನೇ ಹಾಲು ಕುಡಿ
ಹಸಿದುಂಡರೆ ಆರೋಗ್ಯ ಕೆಡುವುದಂತೆ !
ಬೇಗ ಹಾಲು ಕುಡಿ ಜಾಣಮರಿ ನೀನು
ಹೇಳಿದುದ ಕೇಳುವಾ ಮುದ್ದುಮರಿ ನೀನು !
ಛೀ ಕಳ್ಳ, ನಿನ್ನ ಕಾಟದಾಟವು ಸಾಕು
ಬೇಗೆದ್ದು ಹಾಲು ಕುಡಿ, ಹಾಲ್ ಕುಡಿದೆಯಾದರೆ
ಶಿವರಾತ್ರಿ ಹಬ್ಬಕ್ಕೆ ನಿನಗೆ ಹೊಸಬಟ್ಟೆ !
ಕೇಳು,

**(ತ್ರಿಪದಿ)** ಕಾಳ ಹಸುವಿನ ಹಾಲು ಕಾದರೇ ಕಡುರುಚಿ
ಹಾಲು ಸಕ್ಕರೆ ಎರಡು ಸರಿಮಾಡಿ ತಂದಿಹೆನು
ಚೋಳು ಕಲ್ಲಯ್ಯ ಸಲಿಸೇಳಿ ॥
ಒಳ್ಳೆ ಗಣಿಕೆಯ ಹಣ ಮೆಲ್ಲಾದೆ ನಾ ತರುವೆ
ಬೆಲ್ಲಾವ ತರುವೆ ಸವಿಗೆಂದು – ಕೋಳೂರ
ಕಲ್ಲಯ್ಯ ಹಾಲ ಸಲಿಸೇಳಿ ॥

(ಗದ್ಯ) ಕಲ್ಲಯ್ಯ,

ಕಾಡಿದರು ಬೇಡಿದರು ದಯೆಯ ಸುಳಿವಿಲ್ಲ
ನಿನಗಿಂತಲೂ ನಾನು ಕೆಟ್ಟ ಹಟಮಾರಿ
ನೀನಾಗಿಯೇ ಬಂದು ಕುಡಿಯುವಂತೆಸಗುವೆನು
ನಿನ್ನ ಶಕ್ತಿ ಹೆಚ್ಚೊ ನನ್ನ ಭಕ್ತಿಯು ಹೆಚ್ಚೊ
ತೂಗಿಯೇ ನೋಡುವೆನು.
ಮೂರುಸಲ ಮೂರೇ ಮೂರು ಸಲ ನಿನ್ನ ಹೆಸರೆತ್ತಿ ಕೂಗುವೆನು
ಬರದಿರೇ.. ಬರದಿರೇ ಇದೋ ನಿನಗೆ
ಹರಣವನ್ನರ್ಪಿಸುವೆ.

(ಹಣೆಯನ್ನು ಪಾಣಿ ಪೀಠಕ್ಕೆ ಹೊಡೆದುಕೊಳ್ಳುವಳು)

ಜೈ ಕಲ್ಲಿನಾಥಾ, ಜೈ ಕಲ್ಲಿನಾಥ, ಜೈ ಕಲ್ಲಿ.....!

(ಶಿವ ಪ್ರತ್ಯಕ್ಷನಾಗಿ, ಅವಳನ್ನು ಹಿಡಿದಪ್ಪಿಕೊಂಡು)

**ಕಲ್ಲಿನಾಥ :** ನಿಲ್ಲು ನಿಲ್ಲೆಲೆ ಚೆನ್ನೆಲೆ
ನಿಲ್ಲು ನಿಲ್ಲೆಲೆ ಮಂಗಳೆ
ಭಕ್ತಿ ಸಕ್ಕರೆ ಬೆರೆಸಿರೆ
ಹಾಲು ಬಟ್ಟಲ ಸವಿಯೊಳು
ಹಾಲನಾರೋಗಿಸುವೆನು
ಜಗವೆ ಕೌತುಕ ಪಡುವೊಲು ॥

**ಚೆನ್ನ :** (ಭಾವುಕಳಾಗಿ)
ಕಂಡೇ ಶಿವ ಕಂಡೆ
ದೇವಾದಿ ದೇವನ ದಿವ್ಯ ಪ್ರಭಾವನ ॥ ಕಂಡೆ ॥
ಜಡೆಯಲಿ ಗಂಗೆ ತೊಡೆಯಲಿ ಗೌರಿ
ಮುಡಿಯಲಿ ಚಂದ್ರನ ಮುಡಿದವನ
ರುಂಡ ಮಾಲಾಧರ ಖಟ್ವಾಂಗಧರನ
ಕೆಂಡಗಣ್ಣಿನ ಹಣೆಯ ಭಸ್ಮಾಂಗ ದೇಹಿಯ ॥ ಕಂಡೆ ॥
ಸರ್ವಭೂಷಣನ ಕಂದರ್ಪ ಹರನ
ಧೂರ್ತ ದೈತ್ಯರ ತ್ರಿಪುರ ಸಂಹಾರನಾ
ಆರ್ತ ರಕ್ಷಕನಾ ಕವಿ ಕರ್ತಾರನ
ಭಸ್ಮ ಸುಶೋಭಿತ ರುದ್ರಾಕ್ಷಿಧರನಾ ॥ ಕಂಡೆ ॥
ಶೂಲಪಾಣಿಯ ಕಂಡೆ ಫಾಲನೇತ್ರನ ಕಂಡೆ
ಲೀಲೆಯೊಳಾಡುವ ಅಭವನ ಕಂಡೆ
ನೀಲಕಂಠನ ಕಂಡೆ ಕಾಲಹರನಾ ಕಂಡೆ
ನೂಪುರಾಳಾಪದ ಯುಗಳ ಪಾದನ ಕಂಡೆ ॥ ಕಂಡೆ ॥

(ಹಾಡು, ನರ್ತನ,

ದೇವ ದೇವ, ದೇವೋತ್ತಮ, ದೇವದುರ್ಲಭ
ಕಡೆಗೂ ಈ ಬಡವಳ ಮೇಲೆ ದಯೆಬಂತೆ ತಂದೆ !
ಈಗಲಾದರೂ ಹಾಲ ಕುಡಿಯಬಹುದಲ್ಲ ?

**ಕಲ್ಲ :** ಓಹೋ !
ಅದಕ್ಕಾಗಿಯೇ ನಾನು ಹಸಿದು ಬಂದಿಹೆ ತಾಯಿ
ಕೊಡುತಂದ ಹಾಲ !

ಚೆನ್ನ : (ಬಟ್ಟಲೆತ್ತಿ ಕೊಡುತ್ತಾ)
ಕೋ ಕಲ್ಲಿನಾಥ, ಕುಡಿ ಹಾಲ ನನ್ನಪ್ಪಾ !
ಕಲ್ಲಿ : ಹಾಗೊಲ್ಲೆ ತಾಯಿ
ಚೆನ್ನ : ಮತ್ತೆ ಹೇಗೆ !
ಕಲ್ಲ : ನಾನಿನ್ನ ಹಸುಗೂಸು, ನನ್ನಮ್ಮ ನೀನು !
ನಿನ್ನ ತೊಡೆಗಳ ಮೇಲೆ ನಾನು ಪವಡಿಸುವೆ
ಕರುಣೆಯಿಂ ಹಾಲೂಡು, ಹಾಲೂಡು ತಾಯಿ,
ಚೆನ್ನ : ಅಯ್ಯೋ ನನ್ನಪ್ಪಾ !
ನನ್ನ ಕಣ್ಣಿನ ಬೆಳಕೆ, ನನ್ನ ಬಾಳಿನ ಉಸಿರೆ
ಬಾ ತಂದೆ ಅಕ್ಕರೆಯ ಹದ ಹಾಲೂಡದವೆ !
(ಕಲ್ಲಿನಾಥನನ್ನು ತೊಡೆ ಮೇಲೆ ಮಲಗಿಸಿಕೊಂಡು ನಿಧಾನವಾಗಿ ಹಾಲು ಕುಡಿಸುವಳು. ಅನಂತರ ಶಿವ ಮೇಲೆದ್ದು)
ಕಲ್ಲಿ : ತಾಯಿ, ನಿತ್ಯವೂ ಈ ರೀತಿ ಹಾಲು ಕುಡಿಸಲುಬೇಕು
ನೀ ಕೊಡುವ ಹಾಲಿಗೆ ಹಂಬಲಿಸಿ ನಾ ಬರುವೆ. ಆಗಬಹುದೆ ?
ಚೆನ್ನ : ಹಾಗೆಯೇ ಆಗಲಿ,
ನಾನಿತ್ತ ಈ ಹಾಲು ನಿನಗೆ ಸವಿಯಾಯ್ತೆ ?
ಕಲ್ಲಿ : ನನ್ನ ತಾಯಿಯ ಎದೆಯ ಸೊದೆಯ ಕುಡಿದಂತಿತ್ತು !
ಚೆನ್ನ : ದೊಡ್ಡ ಮಾತು, ಬಹುದೊಡ್ಡ ಮಾತು
ಕಲ್ಲಿ : ಹೆತ್ತವ್ವೆ, ತುತ್ತಿಟ್ಟ ನಿನ್ನೊಂದು ಮಾತು ಕೇಳಲೆ ತಾಯಿ ?
ಚೆನ್ನ : ಸಂದೇಹವೇಕೆ ? ಹೇಳು ನನ್ನಪ್ಪಾ.
ಕಲ್ಲಿ : ಹಸಿವೆಯಾಗಿತ್ತವ್ವೆ, ತುಂಬ ಹಸಿವಾಗಿತ್ತು
ಹಾಲಿತ್ತು ಬದುಕಿಸಿದೆ !
ಇದಕೆ ನಾ ಪ್ರತಿಯಾಗಿ ಬೇರೇನ ಕೊಡಲವ್ವ ?
ಚೆನ್ನ : ಸೋಜಿಗದ ಮಾತುಗಳು, ಸೋಜಿಗದ ಮಾತು !
ಅಪ್ಪಪ್ಪಾ, ನಿನ್ನ ದರುಶನಕಿಂತ ಬೇರೆ ಭಾಗ್ಯದದುಂಟೆ ?
ಬೇರೇನು ಬೇಕಪ್ಪ?
ಆದರೂ ನಿನ್ನಿಚ್ಛೆ ಸಲಿಸಲಿಕೆ ಬೇಡುವೆನು
ನನ್ನ ಸ್ವಾರ್ಥಕ್ಕಲ್ಲ, ಲೋಕದಚ್ಚರಿಗೆ !
ಕಲ್ಲಿ : ಕೇಳು ತಾಯಿ, ತಾಯಿ ಕೇಳಿದ್ದನ್ನು ಸಲಿಸದವ ಮಗನಲ್ಲ
ಚೆನ್ನ : ನಾಟ್ಯದಧಿದೇವತೆಯು ನೀನೆಂದು ಕೇಳಿಹೆನು !
ನಟನು ನೀನಂತೆ, ನಾಟ್ಯವೇ ನೀನಂತೆ !
ಅಮ್ಮ ಹೇಳುತಲಿದ್ದರಾಗಾಗ ಎನ್ನೊಡನೆ.
ಎಲ್ಲಿ, ನಿನ್ನ ನಾಟ್ಯ ವೈಖರಿಯನ್ನು ನನ್ನೆದುರು ಬಿತ್ತರಿಸು.
ಕಲ್ಲಿ : ಮಹದಾಜ್ಞೆ, ನಿನ್ನಾಣತಿಯ ನಡೆಸುವೆನು.
ಆದರೆ,
ನಾನು ನರ್ತಿಸುವಾಗ ನೀನು ತಾಳ ಹಾಕಲುಬೇಕು,
ಹಾಡಲೂ ಬೇಕು.
ಚೆನ್ನ : ಹ್ಹು ಹ್ಹು ಹ್ಹು (ನಗು)
(ಹಾಡು) ತಾಳ ಮೇಳವನರಿಯೆ ಶ್ರುತಿ ಜತಿಯ ನಾನರಿಯೆ
ರಾಗಾನುರಾಗದಾ ರಾಗಿಣಿಯರರಿಯೆ ॥
ಶಿವನೆ ಆತ್ಮರತ ಓ ಭವನೆ

ಮುನಿವರರ ಧ್ಯಾನಕೂ ಸಿಲುಕದವನೆ ॥ ೧ ॥

ಶಿವನು ಹೇಗೋ ಹಾಗೆ ರುದ್ರನೂ ಆಗಿರುವೆ
ಭದ್ರವಾದುದನೂ ಛಿದ್ರ ವಿಚ್ಛಿದ್ರಗೊಳಿಸಿರುವೆ
ದಕ್ಷಸುತೆ ಮಾತಾಯಿ ದಾಕ್ಷಾಯಿಣೀದೇವಿ
ದಗ್ಧಳಾದಾಗಲಿನ ತಾಂಡವ ತೋರೊ ॥

(ಹಿನ್ನೆಲೆಯಲ್ಲಿ ಚಂಡೆ, ಜಾಗಟೆ, ಮೃದಂಗಗಳ ನಾದ... ಶಿವ ಕಣ್ಣರಳಿಸಿ ನಾಟ್ಯಕ್ಕೆ ನಿಲ್ಲುವನು)

**(ವಚೋವೇಗದಲ್ಲಿ)**

ತಾಂಡವ ಮೂರ್ತಿಯ ನೃತ್ಯ ವಿಲಾಸಕೆ
ಭೂಮಿಯು ಗಡಗಡ ನಡನಡುಗುತ್ತಿರೆ
ಹೆಜ್ಜೆಯ ಇಟ್ಟೆಡೆ ನೆಲ ನೆಗ್ಗುತ್ತಿರೆ
ದಿಕ್ತಟಗಳು ಪಟಪಟಿಸಿ ಹಾರುತಿರೆ
ತಾರಾಲೋಕವೆ ಪಳಪಳನುದುರಲು
ಸಪ್ತ ಸಾಗರವು ಕೊತಕೊತ ಕುದಿಯಲು
ವಿಳಯ ರುದ್ರನವ ಪ್ರಳಯ ಕಪರ್ದಿಯು
ಭೀಕರ ತಾಂಡವವಾಡಿದನಾಗಳೆ !
ನೆತ್ತಿಯ ಗಂಗೆಯು ತುಳು ತುಳುಕಾಡಲು
ಹಿಮಕರ ಶೀಕರ ಚಂದ್ರಮನುರಿಯಲು
ಜಟಾಪಟಲವನು ಬಿಡದಪ್ಪಳಿಸುತೆ
ಪಟುಭಟನಾರ್ಭಟದಿಂದಲೆ ನಟಿಸಿದ
ಒಂದು ಪದಂ ಪಾತಾಳವನೊತ್ತಲ್
ಒಂದು ಪದಂ ಬ್ರಹ್ಮಾಂಡವನೆತ್ತಲ್
ತೋಂ ತೋಂ ತೋಂ ತೋಂ ತೋಂ ತೋಂ ಎನುತಂ
ಧೀಂ ಧೀಂ ಧೀಂ ಧೀಂ ಧೀಂ ಧೀಂ ಧೀಂ ಧೀಂ ಎನುತಂ
ಕುಂಬರಗುಂಡನ ತಾಳಕೆ ಕುಣಿದೊಲು
ತಾಂಡವನಾಡಿದನಾಹಾ ರುದ್ರನು !
ಭೀಕರ ಭೈರವನೋಹೋ ಭದ್ರನು !!

**(ಹಾಡು)**

ಒಲವರವಾಗಲು ಶಿವನೇ ನೀನೇ ಉಮಾಪತಿ
ಒಲವದು ತಪ್ಪಲು ನೀ ಸ್ವಾಯಂಭು ಯತಿ
ದ್ವೈತದಲು ನೀನಿರುವೆ ಅದ್ವೈತಿಯಾಗಿರುವೆ
ಅದ್ವಯನೆ ಅಚ್ಯುತನೆ ನಿನಗೆ ನಮೋ ನಿನಗೆ ನಮೋ ॥

**ಕಲ್ಲಿ** : ತಾಯಿ, ವೇಳೆಯಾಯಿತು, ನಾನು..

**ಚೆನ್ನ** : ಜಗದ್ರಕ್ಷಕನೆ, ಹಾಲು ಕುಡಿದ ಬಾಯಿ ಒರೆಸುತ್ತೇನೆ !

**ಕಲ್ಲಿ** : ಹಾಗೆಯೇ ಆಗಲಿ... (ಬಾಯಿ ಒರೆಸುವಳು)
ಹೂಂ... ಈಗ... ಬರಬಹುದೆ ?

**ಚೆನ್ನ** : ಹೋಗಿ ಬಾ ನನ್ನಪ್ಪ, ಜಗತ್ತಿನೊಳಗೆ ನಾನೊಬ್ಬಳೇ ಮಗಳಲ್ಲ !

– ಬೀಳ್ಕೊಡುವಳು –

**ದೃಶ್ಯ : ೩** **ನಿವಾಸ**

(ತೆರೆ ಸರಿದಾಗ ಚೆನ್ನಲೆ ಪೂಜೆಗೆ ಅಣಿ ಮಾಡುತ್ತಿರುತ್ತಾಳೆ, ಆಗ ತಂದೆ ತಾಯಿಯರು ಶ್ರೀಶೈಲಯಾತ್ರೆ ಮುಗಿಸಿ ಬರುತ್ತಾರೆ, ನೋಡಿದ ಕೂಡಲೆ)

**ಚೆನ್ನ** : ಅಮ್ಮಾಜಿ !.... ಅಪ್ಪಾಜಿ !!
ಇಷ್ಟು ಬೇಗ ಬಂದು ಬಿಟ್ಟಿರಾ ?

**ಸೋಮ** : ಏನಮ್ಮಾ, ಒಂದೇ ಎರಡೇ
ಮೂವತ್ತು ದಿನಗಳು ಉರುಳಿದುವಲ್ಲೇ ತಾಯಿ
ಅಷ್ಟು ದಿನ ನಿನ್ನನ್ನು ಬಿಟ್ಟದ್ದು ಸಾಲದೆ ?

**ಚೆನ್ನ** : (ಹಾಡುತ್ತಾ ಕುಣಿಯುವಳು)
ಆನಂದ ಆನಂದ ಆನಂದ
ಶ್ರೀಶೈಲ ಯಾತ್ರೆ ತಂದ ಆನಂದ ॥
ಪಾತಾಳ ಗಂಗೆಯಲಿ ತೀರ್ಥಸ್ನಾನವ ಮಾಡಿ
ಶ್ರೀಶೈಲ ನಾಥನ ಪೂಜಿಸಿದ ॥ ಆನಂದ ॥
ತುಂಬೇಯ ಹೂವಂತೆ ಭ್ರಮರಾಂಬದೇವಿ
ದುಂಬಿ ಮುಂಗುರುಳಿನ ಮಂಗಳೆ ಮಹಿಮೆ
ತುಂಗೆಯ ದಡದಂತೆ ತಂಪು ಮಡಿಲವಳು
ಮಹತಾಯಿ ಮುದತುಂಬಿ ಹಾಡಿ ಹರಸೀದಂಥ ॥ ಆನಂದ ॥

**ಸೋಮ** : ಮಗಳೆ,
ಕಲ್ಲಿನಾಥನ ಪೂಜೆಗೆಂದು ಹೊರಟಿದ್ದೀಯೆ
ಹೋಗಿ ಬಾ, ಬೇಗ ಬಾ, ಸ್ವಾಮಿಗರ್ಪಿತವಾದ
ನೈವೇದ್ಯವನು ತಾರೆ.

**ಚೆನ್ನ** : ಪುಷ್ಪ ಪ್ರಸಾದವನು ತಂದೆ ತರುವೆನು ತಾಯಿ

**ಸೋಮ** : ಅದರೊಡನೆ ಹಾಲನೂ ತರುವೆಯಲ್ತೆ ?

**ಚೆನ್ನ** : ಹಾಗೆಂದರೇನಮ್ಮ ?
ಪರಶಿವನು ಸೇವಿಸಿದ ಬಳಿಕ ಹಾಲೆಲ್ಲಿಯದು ?

**ಸಂಗ** : ಹ್ಞಾ!
ಪರಶಿವನು ಸೇವಿಸಿದ !
ಯಾರೆ ಆ ಪರಮಶಿವ ? ಯಾರ ಮಗನೆ ?

**ಚೆನ್ನ** : ಇನ್ನಾರು ಅಪ್ಪಾಜಿ ?
ಆತನೇ ನಿತ್ಯವಾರಾಧಿಸುವ ಕೋಳೂರ ಕಲ್ಲಯ್ಯ !
ಆತನೇ ದಶಭುಜ, ಪಂಚವಕ್ತ್ರ, ಸರ್ಪಭೂಷಣ ಶೂಲಿ !!

**ಸಂಗ** : ಎಂಥ ಮಾತಿದು ಮಗಳೆ,
ಸುಳ್ಳೊಮ್ಮೆ ಹೇಳಿದರು ನಂಬುವಂತಿರಬೇಕು
ಚೆನ್ನಲೆ, ಸುಳ್ಳುನುಡಿ ಸಲ್ಲ !
ಸುಳ್ಳು ಹೇಳುವುದೂ ಒಂದೇ
ಒಂದು ಕೊಲೆ ಮಾಡುವುದೂ ಒಂದೇ !

**ಚೆನ್ನ** : ಶಾಂತಂ ಪಾಪಂ ! ಶಾಂತಂ ಪಾಪಂ !!
ಅಪ್ಪಾಜಿ,
ನಾನು ಸುಳ್ಳು ಹೇಳುತ್ತಿಲ್ಲ
ನಾ ನಿಮ್ಮ ಮಗಳು
ಸತ್ಯವಂತರ ಮನೆಯ ಬೆಳೆಯ ಕುಡಿ ನಾನು

**ಸಂಗ** : ಏನಮ್ಮ ನಿನ್ನ ನುಡಿ !

ಕಲ್ಲೆದ್ದು ಬರಲುಂಟೆ !!
ಕೊಟ್ಟ ಹಾಲನು ಹಿಡಿದು ಕುಡಿಯುಲುಂಟೆ !!!

**ಚೆನ್ನ** : ಉಂಟುಂಟು ಏಕಲ್ಲ ?
ನಿಮ್ಮೊಡನೆ ನುಡಿವಷ್ಟೇ ಅವನು ಕುಡಿದುದು ಸತ್ಯ
ಹಾಡ ಹಗಲಂತೆಯೇ ಸತ್ಯಸ್ಯ ಸತ್ಯ ತಂದೆ !

**ಸಂಗ** : ಹಾಗಿದ್ದದರನಿಂದೆ ಪರಿಕಿಸಲು ಬೇಕು
ನಡೆ ಗುಡಿಗೆ ಹೋಗೋಣ
ನಮ್ಮೆದುರೆ ಶಿವಗೂಡಿ ಸತ್ಯವನು ಎತ್ತಿಹಿಡಿ
ನಡೆ... ನಡೆ...

## ದೃಶ್ಯ : ೫ ಕಲ್ಲಿನಾಥನ ದೇಗುಲ

(ಶಿವಲಿಂಗದೆದುರು ಚೆನ್ನಲೆ, ಇಕ್ಕೆಲದಲ್ಲೂ ಸಾಲಾಗಿ ಸಂಗಯ್ಯ ಸೋಮಲೆ, ಚೆನ್ನಲೆಯ ಗೆಳತಿಯರು, ಪುರ ಪ್ರಮುಖರು ಇತ್ಯಾದಿ ನೆರೆದಿರುತ್ತಾರೆ)

**ಚೆನ್ನ** : ಕಲ್ಲಿನಾಥ,
ಭಕ್ತ ಮಾನಸ ಹಂಸ ನೀನಂತೆ ! ವಾತ್ಸಲ್ಯದೊಲವಂತೆ !
ನಿನ್ನ ಕಥೆಗಳ ನಿತ್ಯ ಹೇಳುವುದ ಕೇಳಿಹೆನು
ನಾನು ಕೇಳಿದ ಕಥೆಯ ವ್ಯರ್ಥಗೊಳಿಸಲು ಬೇಡ
ಎಂಥೆಂಥ ಅಕೃತ್ಯಗಳ ಆಚರಿಸಿದವರಿಗೂ ನೀನು
ದರ್ಶನದ ಭಾಗ್ಯವನ್ನಿತ್ತು ಸಲಹಿಯೆಯಂತೆ !
ಕಣ್ಣಪ್ಪನಿತ್ತ ಹಸಿ ಮಾಂಸ ತಿಂದು ತಣಿದಿರುವೆಯಂತೆ !
ನಿಂಬಿಯಕ್ಕನು ಒನಕೆ ಮೇಲೆತ್ತಿ ಹೊಡೆದಾಗ ನೀ ನಕ್ಕೆಯಂತೆ !
ನೋವಿತ್ತರೂ ನಲಿದ ದೊಡ್ಡವನು ನೀನು.
ನನ್ನ ಮೇಲಿನಿತು ದಯೆದೋರು, ದಯೆದೋರು ತಂದೆ.
ಬಿಜ್ಜ ಮಹಾದೇವಿಯೂಡಿದೆದೆಹಾಲ ಶಿಶುವಾಗಿ ನೀ
ಸವಿದೆಯಂತೆ !
ಅದು ಪ್ರಿಯ, ನಾನು ತಂದಿಹ ಹಾಲು ಅಪ್ರಿಯವೆ ?
ಇಲ್ಲ; ಎಂದಿಗೂ ಇಲ್ಲ. ಕೃಪೆ ಮಾಡಿ ಸ್ವೀಕರಿಸು.
ಅಪ್ಪಾಜಿ ಎದೆಯಲಿಹ ಸಂದೇಹ ಪರಿಹರಿಸು.
(ಚಣಕಾಲ ಮೌನ ಕಲ್ಲಿನಾಥ ಪ್ರತ್ಯಕ್ಷನಾಗದಿರುವುದ ಕಂಡು)

**ಹಾಡು** : ದಮ್ಮಯ್ಯ ದತ್ತಯ್ಯಾ ಓ ಕಲ್ಲಿ ನಾಥಯ್ಯ
ಬಂದು ಹಾಲ್ಗುಡಿಯಯ್ಯ ಶ್ರೀ ಕಲ್ಲಿನಾಥಯ್ಯ
ತಡವೇಕೊ ತರಳೆಯಿದೊ ನೊಂದೆ ತಂದೇ
ಲೋಕನಿಂದೆಯ ಮಾಣೊ ನಾನು ಬೆದೆಬೆಂದೇ
ಶಶಿಧರನೆ, ಪಶುಪತಿಯೆ, ಹುಸಿಕಳೆಂದೆನಿಸದಿರೊ
ಅಸಮಾಕ್ಷ ಮೈದೋರು ಮೈದೋರು ಬಾರೋ !
ಮೈದೋರು ಮೈದೋರು ಬಾರೋ !
ಮೈದೋರು ಬಾರೋ ಮೈದೋರು ಬಾರೋ !!

– ಗುಡುಗು ಮಿಂಚುಗಳ ಆರ್ಭಟ –

ಚಂಡೆ, ಮದ್ದಲೆಗಳ ಆರ್ಭಟ, ಶಿವನು ಚೆನ್ನಲೆಯ
ಕೈಹಿಡಿದು ನಾಟ್ಯವಾಡತೊಡಗುತ್ತಾನೆ.

ಹಿನ್ನೆಲೆಯಲ್ಲಿ ಹಲವು ಕಂಠಗಳು
"ಓಂ ಓಂ ಶಂಕರ, ಓಂ ನಟ ಗಂಭೀರ"
ಎಂದು ಘೋಷಿಸುತ್ತಿರುತ್ತವೆ.
ಸ್ತ್ರೀಕಂಠವೊಂದು ಹಾಡು ಹಾಡುತ್ತಿರುತ್ತದೆ.

**ಹಾಡು :** ಚಂಡಕಿರಣ ಮಾರ್ತಾಂಡ ಭೈರವನೆ ಚಂದ್ರಚೂಡ ಶಿವನೇ
ಬ್ರಹ್ಮಾಂಡವೆಲ್ಲ ಶತಖಂಡಮಾಗೆ ತುಂಡರಿಸಿ ಬಿಟ್ಟ ನಟನೇ
ವ್ಯೋಮ ಪಟಲವಹ ಜಟಾಜೂಟದಲಿ ದಿಕ್ತಟವ ಥಳಿಸಿದವನೇ
ಚಂಡಿಯೊಡನೆ ತಾಂಡವವನಾಡಿ ರುಂಡಗಳ ಧರಿಸಿದವನೇ ॥
ಓಂಕಾರದಿಂದ ಝೇಂಕಾರಗೈವ ಪ್ರಣವವನೆ ನುಡಿಸಿ ನಲಿದ
ಭಕ್ತ ಬಾಂಧವನೆ ಮುಕ್ತಿದಾಯಕನೆ ಶಕ್ತಿರೂಪಿ ಶಿವನೇ
ಏಳು ಕೋಟಿ ಮಂತ್ರವನು ಕೊಟ್ಟ ಏಳೇಳು ಕೋಟಿ ಭವನೇ
ಸ್ಥಿತನಾಗೊ ತಂದೆ ಸಾಂತ್ವನವ ತುಂಬು ಹೃದಯಸ್ಥನಾಗೊ ಎಂದೇ ॥

(ಓಂಕಾರದ ಝೇಂಕೃತಿಯಲ್ಲಿ ರಂಗ ಶಾಂತವಾಗುತ್ತದೆ. ದೀಪವಾರಿ ಚಣಕಾಲ ಮೌನವಾವರಿಸುತ್ತದೆ)

**ಕಲ್ಲಿನಾಥ :** ಚೆನ್ನಲೆ,
ನೀನೆಮ್ಮ ಕೊಡಗೂಸು
ಹುಸಿಗೂಸು ನೀನಲ್ಲ
ನೀ ಮುಗ್ಧ ಭಕ್ತೆ, ಭಕ್ತಿ ಸಾಕಾರೆ !
ನೀನು ಮುದ್ದಿನ ಮುಗುಳು
ಬಾ ನನ್ನ ಹಿಮಗಿರಿಗೆ ।
ಗಿರಿಜೆಯೊಡನಾಡುತ್ತ ರುದ್ರಕನ್ನಿಕೆಯಾಗು
ನಿನ್ನ ಭಕ್ತಿಯು ಜಗಕೆ ಮಾದರಿಯದಾಗಲಿ !
ಸತ್ಯಕ್ಕೆ ಜಯವಿರಲಿ ಎಂದೆಂದಿಗೂ
ಸತ್ಯಕ್ಕೆ ಜಯವಿರಲಿ ಎಂದೆಂದಿಗೂ
ಶಾಂತಿ ಸೌಹಾರ್ದಗಳು ನಿತ್ಯವಿರಲಿ
ಶಾಂತಿ ಸೌಹಾರ್ದಗಳು ನಿತ್ಯವಿರಲಿ ॥

**ಮಂಗಲದ ಹಾಡು :**
ಓಂ ನಮಃ ಶಿವಾಯ ಓಂ ನಮಃ ಶಿವಾಯ
ಓಂ ನಮಃ ಶಿವಾಯ
ಶಿವಾಯ ನಮ ಓಂ ಶಿವಾಯ ನಮ ಓಂ
ಶಿವ ಶಿವ ಶಿವ ಶಿವ ಶಿವಾಯ ನಮ ಓಂ
ಭವ ಭವ ಭವ ಭವ ಭವಾಯ ನಮ ಓಂ
ಭವ ಭವ ಭವ ಭವ ಭವಾಯ ನಮ ಓಂ
ಶಿವ ಶಿವ ಶಿವ ಶಿವ ಶಿವಾಯ ನಮ ಓಂ
ಹರ ಹರ ಹರ ಹರ ಹರಾಯ ನಮ ಓಂ
ಓಂ ಓಂ ಓಂ

# ಬಸವಣ್ಣ ಬಂದಾನೊ !

**ಪಾತ್ರಗಳು:**

| | |
|---|---|
| ಬಸವಣ್ಣ | ಶಾಂತಮತಿ |
| ಗಂಗಾಂಬಿಕೆ | ಶರಣರುಗಳು |
| ಸಂಗಮೇಶ್ವರ ಗುರು | ಮಾರಿ |
| ಹರಳಯ್ಯ | ಮಾರಿ ಭಕ್ತರು |
| ಮಧುರಸ | ಹಳ್ಳಿ ಹೆಂಗೆಳೆಯರು |
| ಕಂಬಳಿ ನಾಗಿದೇವ | ದೂತ |
| ಮಾರಿಪೂಜಾರಿ | ಕಳ್ಳ ಲೆಂಕರಸ |
| ಬಿಜ್ಜಳ | ನಾಗರಕಲ್ಲಿಗೆ ಹಾಲೆರೆಯುವವರು |
| ಮಂಚಣ್ಣ | ಅರಳೀಕಟ್ಟೆ ಸುತ್ತುವವರು |
| ಕ್ರಮಿತ | ತಾಯತ ಕಟ್ಟುವವರು |
| ಪೆದ್ದಿ | ದೆವ್ವ ಹಿಡಿದವರು |
| ಜಗದೇಕ ಮಲ್ಲ | ದೆವ್ವ ಬಿಡಿಸುವವರು |
| ಬೊಮ್ಮರಸ | ನರ್ತಕಿಯರು |
| | –ಇನ್ನೂ ಮುಂತಾದವರು |

**ದೃಶ್ಯ : ೧** **ಸಂಗಮಕ್ಷೇತ್ರದ ದೇಗುಲ**

(ಹಾರ ಮತ್ತು ಮಂಗಲ ದ್ರವ್ಯಗಳನ್ನು ಹಿಡಿದ ಬಸವಣ್ಣ ಮತ್ತು ಗಂಗಾಂಬಿಕೆಯರ ಪ್ರವೇಶ. ಅವರ ಇಕ್ಕೆಲಗಳಲ್ಲೂ ನಾಲ್ವರು ನರ್ತಕಿಯರು. ಅವರ ಕೈಗಳಲ್ಲೂ ಹೂವು ತುಂಬಿದ ಬುಟ್ಟಿಗಳು. ತೆರೆ ಸರಿವ ಮುನ್ನವೇ ಹಿನ್ನೆಲೆಯ ಹಾಡು ಮತ್ತು ನರ್ತಕಿಯರ ನರ್ತನ ಆರಂಭವಾಗಿರುತ್ತವೆ. ನರ್ತಿಸುತ್ತಲೇ ಸುವಾಸಿನಿಯರು ಹಾದಿಯುದ್ದಕ್ಕೂ ಹೂ ಚೆಲ್ಲಿ ನಡೆಮುಡಿ ಸಿದ್ಧಗೊಳಿಸುತ್ತಾ ಹಿಂದೆ ಹಿಂದೆ ಹೋಗುತ್ತಾರೆ. ಹೋದಂತೆಲ್ಲಾ ಹಾಡಿನ ಚರಣ, ಚರಣದ ಮುಕ್ತಾಯಕ್ಕೊಮ್ಮೆ ಹಿಂಬದಿಯ ತೆರೆಗಳು ತೆರೆದುಕೊಳ್ಳುತ್ತಾ ಹೋಗುತ್ತವೆ. ಹೀಗೆ ಮೂರು ನಾಲ್ಕು ತೆರೆಗಳು ತೆರೆದುಕೊಂಡ ಮೇಲೆ ಕೊನೆಯಲ್ಲಿ ಕೃಷ್ಣ ಮತ್ತು ಅಮಲಪ್ರಭೆಯರು ಕೂಡಿ ಹರಿಯುವ ದೃಶ್ಯ. ದಟ್ಟವಾದ ಗಿಡಮರಗಳ ಸಂಗಮಕ್ಷೇತ್ರ. ಅಲ್ಲೊಂದು ಪರ್ಣಕುಟಿ. ಅದರ ಮುಂದೆ ಬಸವಣ್ಣನ ಶಿಕ್ಷಾಗುರು ಸಂಗಮೇಶ್ವರರು ಉಪಸ್ಥಿತರಿರುತ್ತಾರೆ. ಗಂಗಾ ಮತ್ತು ಬಸವರಿಬ್ಬರೂ ಗುರುಗಳ ಪಾದಮುಟ್ಟಿ ನಮಸ್ಕರಿಸುತ್ತಾರೆ. ನರ್ತಕಿಯರೂ ವಂದನೆ ಸಲ್ಲಿಸುತ್ತಾರೆ.)

**ಹಾಡು** : ಅಯ್ಯಾ ನೀನು
ನಾದ ಬಿಂದು ಕಳಾತೀತನಂತೆ
ಅಯ್ಯಾ ನೀನು॥
ವೇದ ಮಂತ್ರಕು ನಿಲುಕದನಂತೆ
ನಿಗಮಾಗಮಕೂ ಸಿಲುಕದನಂತೆ
ಧ್ಯಾನಸಮಾಧಿಗೋಚರನಂತೆ
ಭಕ್ತಿಯ ಪಾಶಕೆ ಬಂಧಿತನಂತೆ ॥ ೧ ॥
ಅಣುವಿನೊಳಗಣುವಂತೆ ಘನದೊಳು ಘನವಂತೆ
ತೇಜವು ನೀನಂತೆ ತಾಮಸ ರೂಹಂತೆ
ಜಲದಲು ಬಯಲಲ್ಲು ಚೇತನ ಶ್ರೀಯಂತೆ
ಸಚರಾಚರದಲು ಚಿನುಮಯನಂತೆ ॥ ೨ ॥
ಓಂಕಾರಮಯನಂತೆ ಝೇಂಕಾರದೊಲವಂತೆ
ನಿಷ್ಕಲ ಪರತತ್ತ್ವ ಸಾಕಾರನಂತೆ
ವಿಶ್ವೇಶ್ವರನಂತೆ ವಿಶ್ವವೆ ನೀನಂತೆ
ನಿತ್ಯ ನಿರಂಜನ ನಿರ್ಗುಣನಂತೆ ॥ ೩ ॥
ಭೂಮಿಗೆ ಬಲವಂತೆ ಆಗಸದರಹಂತೆ
ನೀರೊಳು ತಂಪಂತೆ ಗಾಳಿಗೆ ಜವವಂತೆ
ದೀಪವು ನೀನಂತೆ ದೀಪ್ತಿಯು ನೀನಂತೆ
ಭಕ್ತ ಜನಪ್ರಿಯ ಕೂಡಲಸಂಗಯ್ಯ ॥ ೪ ॥

**ಸಂಗ** : ಬಸವಣ್ಣ ಗಂಗಾಂಬಿಕೆಯರೆ, ಪ್ರಪಂಚದಲ್ಲಿದ್ದರೆ ನಿಮ್ಮಂಥ ಸತಿಪತಿಯರಿರಬೇಕು. ನಿಮ್ಮ ಅನ್ಯೋನ್ಯ ದಾಂಪತ್ಯವನ್ನು ಕಂಡು ಜಗನ್ಮಾತಾಪಿತರಾದ ಶಿವ–ಶಿವೆಯರೂ ಬಹುಶಃ ಅಸೂಯೆ ಪಟ್ಟುಕೊಳ್ಳುವರೊ ಏನೊ !

**ಬಸವ** : ಗುರುಪಿತನೆ.......

**ಸಂಗ** : ಮಾತು ಉತ್ಪ್ರೇಕ್ಷೆ ಎನಿಸಿತೆ ಬಸವೇಶ ?

**ಬಸವ** : ನಮ್ಮ ಪೂಜ್ಯ ಗುರುಗಳಾದ ಸಂಗಮೇಶ್ವರರು ಅಡಿದ
ಮಾತುಗಳೆಲ್ಲವೂ ನಮಗೆ ಆಶೀರ್ವಾದಗಳೇ !

**ಸಂಗ** : ಒಳ್ಳೆಯದು. ಏನು ಇದ್ದಕ್ಕಿದ್ದ ಹಾಗೆ; ನಮ್ಮ ಈ ಕೂಡಲ ಕ್ಷೇತ್ರಕ್ಕೆ ಬಂದ ಕಾರಣ ?

**ಬಸವ** : ನಾನು ವಿದ್ಯಾಭ್ಯಾಸ ಮಾಡಿದ ಈ ಕ್ಷೇತ್ರದ ಒಡನಾಟ ತಪ್ಪಿ ಬಹಳ ದಿನಗಳಾದ್ದರಿಂದ ಗುರುಪಿತನ ದರ್ಶನ ಹಾಗೂ ಆಶೀರ್ವಾದಗಳನ್ನು ಪಡೆಯಲು ಬಂದಿದ್ದೇವೆ.

**ಸಂಗ** : ತುಂಬಾ ಸಂತೋಷ, ಗಂಗಾ, ಕಲ್ಯಾಣದಲ್ಲಿ ನಿಮ್ಮ ತಂದೆ ಬಲದೇವ ಮಹಾಮಂತ್ರಿಗಳು ಕ್ಷೇಮವಷ್ಟೇ ?

**ಗಂಗಾ** : ಗುರುಪಿತನೆ, ಅಪ್ಪಾಜಿ ಶಿವೈಕ್ಯರಾಗಿ ಮೂರು ವಾರಗಳಾದವು.

**ಸಂಗ** : ಶಿವ ಶಿವಾ !....

– ಕಿವಿ ಮುಚ್ಚಿಕೊಳ್ಳುವರು –

ಗಂಗಮ್ಮ ಶರಣರನ್ನು ಮರಣದಲ್ಲಿ ಕಾಣಬೇಕಂತೆ ! ನಿಮ್ಮ ತಂದೆ ಬಲದೇವ ಮಹಾಮಂತ್ರಿಗಳು ಮಹಾಶರಣರು. ಅಂಥವರ ಮರಣರು ಮಹಾನವಮಿ ತಾಯಿ.

**ಬಸವ** : ಅಹುದು ಗಂಗಾ, ಪಂಚಭೂತಗಳಿಂದ ನಿರ್ಮಿತವಾದ ದೇಹ ಪಂಚಭೂತಗಳಿಗೇ ಮೀಸಲಲ್ಲವೆ ?

**ಗಂಗಾ** : ಆದರೂ ಈ ಭೌತಜೀವ ತನಗಾದ ನಷ್ಟವನ್ನು ನೆನೆದು ರೋದಿಸುತ್ತದೆ ಸ್ವಾಮಿ.

**ಸಂಗ** : ಒಪ್ಪುತ್ತೇನೆ ತಾಯಿ, ಆದರೆ ತಿಳಿದುಕೊ, ಹುಟ್ಟು ಸಾವುಗಳು ಮುಖ್ಯವಲ್ಲ, ಆ ಎರಡರ ನಡುವಣ ಬಾಳು ಮುಖ್ಯ. ಅಂತಹ ಬಾಳು ಬಾಳಿದರು ಪೂಜ್ಯ ಬಲದೇವ ಮಹಾಮಂತ್ರಿಗಳು.

**ಬಸವ** : ಈಗ ಸಂಗಮೇಶ್ವರ ಗುರುಗಳ ದಿವ್ಯ ಸಾನ್ನಿಧ್ಯದಲ್ಲಿ ನನ್ನದೊಂದು ಪ್ರಾರ್ಥನೆ.

**ಸಂಗ** : ಹೇಳು ಬಸವಣ್ಣ.

**ಬಸವ** : ಗುರುಪಿತನೆ, ಮಂಗಳವೇಡೆಯಿಂದ ನಾವೀಗ ಕಲ್ಯಾಣಕ್ಕೆ ಹೊರಟಿದ್ದೇವೆ. ಮಂಗಳವೇಡೆಯ ಮಾಂಡಲಿಕರಾಗಿದ್ದ ಬಿಜ್ಜಳ ಪ್ರಭುಗಳು ಈಗ ಕಲ್ಯಾಣರಾಷ್ಟ್ರದ ಸಾಮ್ರಾಟರಾಗಿದ್ದಾರೆ. ಕಲ್ಯಾಣ ಚಾಲುಕ್ಯ ಚಕ್ರಾಧಿಪತ್ಯ ಅಸ್ತಂಗತವಾದ ಮೇಲೆ ಕಳಚೂರ್ಯವಂಸ ಗಾದಿಯನ್ನೇರಿದೆ: ಬಿಜ್ಜಳ ಮಹಾಪ್ರಭುಗಳು ಈಗ ಕರ್ನಾಟಕ ರತ್ನ ಸಿಂಹಾಸನವನ್ನಲಂಕರಿಸಿದ್ದಾರೆ. ನನಗೆ ಮಹಾರಾಜರಿಂದ ಕರೆ ಬಂದಿದೆ. ನಾವಿಬ್ಬರೂ ಕಲ್ಯಾಣಕ್ಕೆ ಹೊರಟಿದ್ದೇವೆ. ತಮ್ಮ ಅನುಮತಿ ಆಶೀರ್ವಾದಗಳಿಗಾಗಿ ಬಂದಿದ್ದೇವೆ. ಹರಸಬೇಕು ಕೃಪೆದೋರಿ.

**ಸಂಗ** : ತುಂಬಾ ಸಂತೋಷ. ಹೋಗಿ ಬನ್ನಿ. ಬಸವಣ್ಣ ನಾನು ನಿನಗೆ ನಿಮಿತ್ತ ಮಾತ್ರ ಗುರು. ನೀನು ಲೋಕ ಗುರುವಾಗಬೇಕು. ದೀನ ದಲಿತರ ಶೋಷಣೆ, ಹೆಣ್ಣಿನ ಕಣ್ಣೀರು, ಜಾತಿ ಸೂತಕ ಮೊದಲಾದ ಸಾಮಾಜಿಕ ಪಿಡುಗುಗಳನ್ನು ತೊಡೆದು ಹಾಕಬೇಕು. ಮನುಕುಲಕ್ಕೆ ಮಾನವೀಯತೆಯ ಮಹಾಪಾಠ ಕಲಿಸಬೇಕು; ನೀನು ಮಹಾತ್ಮನಾಗಬೇಕು. ಸಾಧ್ವೀ ಶಿರೋಮಣಿ ಗಂಗಮ್ಮನ ನೆರವು ಸದಾ ನಿನ್ನ ಬೆಂಬಳಿ ಇರಲಿ. ಹೋಗಿ ಬನ್ನಿ. ಕಲ್ಯಾಣ ನಗರಿಯ ಸೌಭಾಗ್ಯವೇ ನೀವಾಗಿ ಬಾಳಿ. ಶುಭಮಕ್ಕೆ, ಜಯಮಕ್ಕೆ, ಸಕಲ ಮಂಗಲಮಕ್ಕೆ.

– ಆಶೀರ್ವದಿಸುವರು –

## ದೃಶ್ಯ : ೨ — ಬಯಲು

(ರಂಗದ ತುಂಬ ಕತ್ತಲು. ಆದರೆ ನೆತ್ತಿಯ ಮೇಲೊಂದು ಚೆಂಬೆಳಕು. ನರ್ತಕಿಯರು ಹಲವರು ಅದನ್ನುದ್ದೇಶಿಸಿ ನರ್ತನದ ಭಾವಭಂಗಿಯಲ್ಲಿ ನಿಂತಿರುವರು)

**ಶ್ಲೋಕ** : ರಾಗ : ಭೂಪಾಳಿ–

ಓ ಬೆಳಕೆ ಬಾ ಬೆಳಕೆ
ಜಗದಾದಿ ಮುಂಬೆಳಕೆ॥
    ದೀನ ದಲಿತೋದಯದ
    ಹೊಂಬೆಳಕೆ ಚೆಂಬೆಳಕೆ
    ತೊಳಗಿ ಬಾ ಬೆಳಗಿ ಬಾ
    ಇಳೆಯ ತಿಳಿಗೆಯ್ಯೆ ಬಾ॥

**ಹಾಡು** : (ನರ್ತನ)

ಬಸವಾ ಬಾ ಬಾ
ವಸುಧೆಗೆ ನಿನ್ನಯ
ಜಸವನು ತೋರಲು ಬೇಗನೆ ಬಾ ಬಾ ॥
    ಕನ್ನಡ ನುಡಿಯಿದು
    ಸಣ್ಣಾಗುತ್ತಿದೆ
    ಚೆನ್ನಿಗ ಬಸವನೆ ಪೊರೆಯಲು ಬಾ ಬಾ ॥
    ಕನ್ನಡ ಜನರಿಗೆ

ಕನ್ನಡ ಮಂತ್ರವ
ನಿನ್ನಯ ವಚನದಿ ಕಲಿಸಲು ಬಾ ಬಾ ॥
ಅನ್ನವೆ ಹಸಿದಿದೆ
ನೀರ್ ಬಾಯಾರಿದೆ
ಗಾಳಿಯು ಬಯಸಿದೆ ಬೀಸಣಿಗೆ ॥
ಈ ಆಭಾಸಕೆ
ದೇಶವೆ ನಲುಗಿದೆ
ಮಾನವತೆಯ ಮೇಲೆತ್ತಲು ಬಾ ಬಾ॥

**ಶರಣ ೧** : ಅಣ್ಣಾ ಇಲ್ಲಿ ನೋಡಿ ಈ ವಿಚಿತ್ರಾನ !
(ಅಲ್ಲಿ ಮುಂದೆ: ಅರಳಿಕಟ್ಟೆ ಸುತ್ತುತ್ತಿರುವ, ಹುತ್ತಕ್ಕೆ ಹಾಲು-ತುಪ್ಪ ಬಿಡುವ, ನಾಗರಕಲ್ಲಿಗೆ ಹಾಲೆರೆಯುವ ದೃಶ್ಯಗಳು)

**ಬಸವ** : ಅಯ್ಯೋ ಕಲ್ಲುಗಳಿಗೆ ಹುತ್ತಕ್ಕೆ ಹಾಲುಬೇಕೆ ? ಅದೇ ಹಾಲನ್ನು ಈ ಬಡಮಕ್ಕಳ ಬಾಯಿಗಳಿಗೆ ಹಣಿಸಬಾರದೆ ? ಕಲ್ಲು ದೈವಗಳಿಗೆ ಸಲ್ಲುವ ಪೂಜೆ ಈ ಜೀವಂತ ದೈವಗಳಿಗಿಲ್ಲ.

**ವಚನ** : ಕಲ್ಲು ನಾಗರ ಕಂಡರೆ ಹಾಲನೆರೆಯೆಂಬರಯ್ಯಾ
ದಿಟದ ನಾಗರ ಕಂಡರೆ ಕೊಲ್ಲು ಕೊಲ್ಲೆಂಬರಯ್ಯಾ
ಉಂಬುವ ಜಂಗಮ ಬಂದರೆ ನಡೆನಡೆ ಎಂಬರಯ್ಯಾ
ಉಣ್ಣದ ಲಿಂಗಕ್ಕೆ ಬೋನವ ಹಿಡಿವರಯ್ಯಾ
ಕೂಡಲಸಂಗಮದೇವಾ॥

**ಶರಣ ೨** : ಇತ್ತ ನೋಡೋಣವಾಗಲಿ .....
ಅಲ್ಲಿ-
- ಚೌಡೇಶ್ವರಿ ಮುಂದೊಬ್ಬ ಮೀಸೇವಾಲ ಮಕ್ಕಳಿಗೆ ತಾಯತ ಕಟ್ಟುವ
- ದೆವ್ವ ಬಂದಿದೆಯೆಂದು ಹೆಣ್ಣೊಂದಕ್ಕೆ ಬೆಂಕಿಯಿಂದ ಸುಡುವ, ಚಾಟಿಯಿಂದ, ಬೆತ್ತದಿಂದ ಹೊಡೆಯುವ
- ಕುಡುಕ ಗಂಡ ತೂರಾಡಿಕೊಂಡು ಬಂದು ಹೆಂಡತಿಯನ್ನು ಸಿಕ್ಕ ವಸ್ತುವಿನಿಂದ ಬಡಿಯುವ

ನಾನಾ ರೂಪದ ದೃಶ್ಯಗಳು

**ಬಸವ** : ಸಂಗಮನಾಥ, ಇದಕ್ಕೆ ಕೊನೆ ಇಲ್ಲವೇ ತಂದೆ ! ಹೆಣ್ಣಿಗೂ ಒಂದು ಆತ್ಮ ಇಲ್ಲವೆ ? ಅವಳಿಗೂ ಬೇಕು-ಬೇಡಗಳಿಲ್ಲವೆ ! ಅವಳಿಗೂ ಬದುಕಿನ ಬಗೆಗೆ ಕಲ್ಪನೆಗಳಿಲ್ಲವೆ ? ಎಲ್ಲದೂ ಗಂಡಸಿಗೆ ಮೀಸಲೆ ? ಹೆಣ್ಣಿನ ಕಣ್ಣೀರು ನನ್ನ ಕಣ್ಣಲ್ಲಿ ರಕ್ತ ಬರಿಸುತ್ತದೆ. ಈ ದಲಿತಾನುಭವ ಹರಳಯ್ಯ, ಕಂಬಳಿ ನಾಗಿದೇವ ಶರಣರಿಗಾಗಿದೆ. ಶೋಷಣೆ ಹಿಂಸೆಗಳ ಅನುಭವ ಅಕ್ಕಮಹಾದೇವಿಯರಿಗಾಗಿದೆ. ಈ ಸುಲಿಗೆಗೆ ಕೊನೆ ಎಂದು ?

**ಶರಣ ೩** : ಅಣ್ಣನವರೆ, ನದಿಯಲ್ಲಿ ಮುಳುಗೇಳುವ ಈ ವ್ಯಕ್ತಿಗೆ ಸ್ವರ್ಗ ಪ್ರಾಪ್ತವಾಗುವುದಂತೆ ಸತ್ತ ಮೇಲೆ !

**ಬಸವ** : ಹಾಗಿದ್ದರೆ ನಿತ್ಯವೂ ನದಿಯಲ್ಲಿ ಮುಳುಗೇಳುವ ಕಾಗೆಗಳಿಗೂ ಮೀನುಗಳಿಗೂ ಸ್ವರ್ಗ ಸ್ಥಿತವಾದಂತಾಯಿತು ! ಅಲ್ಲವೆ ? ಕೇಳಿ –

**ವಚನ** : ನಿಮ್ಮನರಿಯದ ಕಾರಣ ಕೈಯಲ್ಲಿ ಹುಲ್ಲು
ನಿಮಗೆರಗದ ಕಾರಣ ಕೊರಳಲ್ಲಿ ನೇಣು !!
ಹಿಂಡಲೇಕೋ ? ತೊಳೆಯಲೇಕೋ ?
ಮುಳು ಮುಳುಗಿ ಮೂಗ ಹಿಡಿಯಲೇಕೋ ?
ಕೂಡಲಸಂಗನ ಶರಣರಲ್ಲಿ
ಡೋಹರ ಕಕ್ಕಯ್ಯನಾವ ತೊರೆಯಲ್ಲಿ ಮಿಂದ ?

ಆದ್ದರಿಂದ, ಶಿವಸ್ವರೂಪಿಗಳೇ, ಸ್ವರ್ಗದ ಮೋಹ, ನರಕದ ಭೀತಿ ಇವೆರಡೂ ನಮ್ಮ ಜನರ ತಲೆಯಿಂದ ಹೊರ ಹೋಗದಿದ್ದರೆ ಅವರ ಬೌದ್ಧಿಕ ವಿಕಾಸ ಆಗುವುದೇ ಇಲ್ಲ. ಎಲ್ಲಿದೆ ಸ್ವರ್ಗ, ಎಲ್ಲಿದೆ ನರಕ ಎಲ್ಲವೂ ಇರುವುದು ಇಲ್ಲಿಯೇ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರು. ಮೊದಲು ಇಲ್ಲಿ ಸಲ್ಲುವ ಕೆಲಸ ಮಾಡಲಿ. ಪರದ ಚಿಂತೆ ಬೇಡ. ಅದು ಮನೆ ಅಲ್ಲ ; ಇದೇ ಮನೆ, ಅದು ಸುಮ್ಮ ಸುಮ್ಮನೆ ! 'ಸತ್ತು ಬೆರೆಸಿಹೆನೆಂದರೆ ಕಬ್ಬಿನ ತುದಿಯ ಮೆಲಿದಂತೆ !' ಕಬ್ಬಿನ ಸಾರ ಇರುವುದು

ಅದರ ಬುಡದಲ್ಲಿ ಕಾಂಡದಲ್ಲಿ ತುದಿಯಲ್ಲಲ್ಲ. ಜೀವನದ ಸಾರವೂ ಅಷ್ಟೆ. ಇರುವುದೇ ಇಲ್ಲಿ, ಅಲ್ಲಲ್ಲ. ನನ್ನ ದೃಷ್ಟಿಯಲ್ಲಿ ಪರವೆಂಬುದೇ ಇಲ್ಲ, ಇಹವೇ ಎಲ್ಲ.

**ಶರಣ ೧** : ಈ ಮೂರ್ಖರು ಎಷ್ಟು ಹೇಳಿದರೂ ತಿಳಿದುಕೊಳ್ಳುವುದಿಲ್ಲ ಅಣ್ಣನವರೆ.

**ಬಸವ** : ಕಟ್ಟಿದ ಬುತ್ತಿ ಹೇಳಿದ ಬುದ್ಧಿ ಎರಡೂ ಒಂದೇ; ಬಹುದಿನಗಳವರೆಗೆ ಅವು ಉಳಿಯುವುದಿಲ್ಲ. ಅವರಿಗೆ ತಿಳಿಯ ಹೇಳುವ ಮೊದಲು ನಮ್ಮ ನಮ್ಮ ಅತ್ಮ ವಿಶ್ಲೇಷಣೆ ಮಾಡಿಕೊಳ್ಳೋಣ. ಅದು ಶ್ರೇಯಸ್ಕರ ಕೇಳಿ:

**ವಚನ** : ಲೋಕದ ಡೊಂಕ ನೀವೇಕೆ ತಿದ್ದುವಿರಿ ?
ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ
ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ
ನೆರೆಮನೆಯರ ದುಃಖಕ್ಕೆ ಅಳುವವರ ಮೆಚ್ಚ
ಕೂಡಲ ಸಂಗಮದೇವ.

ಆದ್ದರಿಂದ ಸಮಾಜ ಸುಧಾರಣೆಗೆ ಮೊದಲು ವ್ಯಕ್ತಿ ಸುಧಾರಣೆ
ಆಗಬೇಕು. ವ್ಯಕ್ತಿ ಕೇಂದ್ರಿದವಾದದ್ದು ಶರಣ ಸಮಾಜ ವ್ಯಕ್ತಿ
ಸುಧಾರಣೆಗೆ ಆದ್ಯತೆ ಕೊಡುತ್ತದೆ.

– ನರ್ತಕಿಯರ ನರ್ತನ –

**ಹಾಡು** : ಕಲ್ಯಾಣ ಕಲ್ಯಾಣ ಕಲ್ಯಾಣ
ಅಣ್ಣನ ನೆಚ್ಚಿನ ಕಲ್ಯಾಣ। ಬಸ–
ವಣ್ಣನ ನೆಚ್ಚಿನ ಕಲ್ಯಾಣ॥
ಕಲ್ಯಾಣ ಕಲ್ಯಾಣ ಕಲ್ಯಾಣ
ಕನ್ನಡ ಕನ್ನಡಿ ಕಲ್ಯಾಣ। ಇದು
ಅಣ್ಣನ ಕ್ರಾಂತಿಯ ಕಲ್ಯಾಣ॥

ಬಸವಣ್ಣ ಬಂದಾನೋ
ಹೊಸಬಾಳು ತಂದಾನೋ
ಕಸವಾಗಿ ಬಿದ್ದವರ
ರಸವಾಗಿ ಮಾಡಿದನೋ॥

ಬಸವಣ್ಣ ಬಂದಾನೋ
ಹೊಸ ಬೆಳಕು ತಂದಾನೋ
ಹಸಿದವರ ಬಾಯ್ಗಳಿಗೆ
ಬಿಸಿಯನ್ನವಾದಾನೋ॥

– ಹಾಡು ಮುಗಿಯುವಷ್ಟರಲ್ಲಿ ಓರ್ವಮಾರಿ ಪೂಜಾರಿ ಒಬ್ಬ ಹೆಂಗಸಿನ
ತಲೆ ಮೇಲೆ ಮಾರಮ್ಮನನ್ನು ಹೊರಿಸಿಕೊಂಡು ಬೇವಿನ ಸೊಪ್ಪು
ಝುಳಪಿಸುತ್ತಾ, ಆರ್ಭಟಿಸುತ್ತಾ ತಮಟೆ ಬಡಿಸಿಕೊಂಡು ಪ್ರವೇಶಿಸುವನು. –

ಮಾ ತಾಯಿ ಬರುತಾಳೆ
ಮಾ ತಾಯಿ ಬರುತಾಳೆ॥

ಮಲೆ ಮಾರಿ ಬರುತಾಳೆ
ಉರಿ ಮಾರಿ ಬರುತಾಳೆ
ಝುರಿಯಾಗಿ ಹೊಳೆ ಹರಿದು
ಉರಿಮಾರಿ ಬರುತಾಳೆ॥

– ಎಲ್ಲರೂ ಸಾಮೂಹಿಕವಾಗಿ "ಹಲೋ ಉಲಿಫ್ಯ"
ಎಂದು ಕೂಗಿ ಕುಪ್ಪಳಿಸುವರು –

ಮಾ ತಾಯಿ ಬರುತಾಳೆ
ಮಾ ತಾಯಿ ಬರುತಾಳೆ॥

ಗಂಡ ಗಂಡರನೆಲ್ಲ
ದಿಂಡುರುಳು ಉರುಳಿಸುವ
ಕೆಂಡದುಂಡೆಯ ಕಣ್ಣ
ದುಂಡುರುಬೆ ಬರುತಾಳೆ
(ಹಲೋ ಹುಲಿಫ್ಯ)

ಮಾ ತಾಯಿ ಬರುತಾಳೆ
ಮಾ ತಾಯಿ ಬರುತಾಳೆ

ಹೊಂಬಾಳೆ ಹಿಡಕೊಂಡು
ಭೂತಾಳೆ ಮುಡುಕೊಂಡು
ಭೂತಳಕೆ ತಾಯಿ ಬರುತಾಳೆ
(ಹಲೋ ಹುಲಿಫ್ಯ)

ಮಾ ತಾಯಿ ಬರುತಾಳೆ
ಮಾ ತಾಯಿ ಬರುತಾಳೆ

ಬೆಟ್ಟದಟ್ಟಣೆ ಇಳಿದು
ಕಟ್ಟೆಗರಿ ಬರುತಾಳೆ
ಹಟ್ಟೇರಿಯ ಮಾರಿ ಬರುತಾಳೆ ಬರುತಾಳೆ
(ಹಲೋ ಹುಲಿಫ್ಯ)

– ಪೂಜಾರಿಗೆ ಆವೇಶ ಬಂದುಬಿಡುತ್ತದೆ. ಮೈದುಂಬಿ ಕುಣಿಯುತ್ತಾನೆ. ನಿಂಬೆಹಣ್ಣನ್ನು ನೆಲದ ಮೇಲಿಟ್ಟು ಹೋಳು ಮಾಡುತ್ತಾನೆ. ಬಾಯಿಂದ ಹೊಂಬಾಳೆ ಉಗುಳುತ್ತಾ, ಹಲ್ಲು ಕಡಿಯುತ್ತಾ ಕಣ್ಣು ಕೆಂಪಗೆ ಮಾಡಿಕೊಂಡು 'ಬೇಕು ಬೇಕು' ಎಂದು ಆರ್ಭಟಿಸುತ್ತಾನೆ. ಪಕ್ಕದಲ್ಲಿದ್ದ ಭಕ್ತ ಭಕ್ತಿಯಿಂದ ದೇವಿಯನ್ನು ಕೇಳುತ್ತಾನೆ

**ಭಕ್ತ** : ಏನು ಬೇಕವ್ವಾ ?

**ಪೂಜಾರಿ** : ಹಾವರ !...... ಹಾವರಾ !!

**ಭಕ್ತ** : ಹಾವರಾ ! ನೋಡ್ರಪ್ಪಾ ಅವ್ವಾ, ಹಾವ್ರಾ ಬಯಸೌಳೆ ಹಾವರ
ಬೇಕಂತೆ ! ಹಾವರಾ ಅಂದರೆ ಬಲಿ .... ಬಲಿ !

**ಪೂಜಾರಿ** : ಮರೀ ಮರೀ

**ಭಕ್ತ** : ಕುರೀಮರಿ ಬೇಕಂತಪ್ಪೋ!

**ಪೂಜಾರಿ** : ಕೋಳೀ..... ಕೋಳೀ.....

**ಭಕ್ತ** : ಆಗಲಿ ನಮ್ಮವ್ವ ಕೋಳಿ ಕುತ್ತಿಗೆ ಮುರಿದು, ರಕ್ತ ಹಿಂಡ್ತೀನಿ. ಈ ಬುಂಡೇಲಿರೊ ಹೆಂಡಾನೆಲ್ಲ ಛಟಾ ಉಕ್ಕುಸ್ತೀನಿ, ದಾವಣಿಕುರಿ ತಂದು ಬಲಿಕೊಡ್ತೀನಿ. ಹರಕೆ ಸಂದಮ್ಯಾಕೆ ನಮಗೆ ಒಳ್ಳೇದು ಮಾಡು.

**ಬಸವ** : ಪೂಜಾರಿ,
ಮರನ ಗೋಟಿಗೆ ಬರ್ಪ ಕಿರುಕುಳದ ದೈವಕ್ಕೆ
ಕುರಿಯನಿಕ್ಕಿಹೆವೆಂದು ನಲಿನಲಿದಾಡುವರು
ಕುರಿ ಸತ್ತು ಕಾವುದೆ ಹರ ಮುಳಿದವರ ?

ಕುರಿ ಬೇಡ, ಮರಿಬೇಡ
ಬರಿಯ ಪತ್ರೆಯ ತಂದು

ಮರೆಯದೆ ಪೂಜಿಸು ನಮ್ಮ ಕೂಡಲಸಂಗಮದೇವನ॥

**ಪೂಜಾರಿ** : ಹೇ! ಹೋಗಯ್ಯೋ! ನಾನು ಅವ್ವನ ಕೂಟ, ಈ ಬೇವಿನಮರದಮ್ಮನ ಕೂಟ ಮಾತಾಡ್ತಿದೀನಿ...... ಇವನೇನೊ ಹೇಳಾಕ್ ಬಂದ. ಹೋಗೋಗ್ !

**ಬಸವ** : ಏನು ಹಾಳೀ ದೈವಗಳು !
ಆಗಳೂ ಲೋಗರ ಮನೆಯ ಬಾಗಿಲ
ಕಾಯ್ದುಕೊಂಡಿಪ್ಪವು ಕೆಲವು ದೈವಂಗಳು
ನಾಯಿಗಿಂತಲೂ ಕರಕಷ್ಟ ಕೆಲವು ದೈವಂಗಳು

ಲೋಗರ ಬೇಡಿಕೊಂಡುಂಬ ಈ ದೈವಂಗಳು
ತಾವೇನ ಕೊಡುವುವು ಕೂಡಲಸಂಗಮದೇವಾ॥

(ಅಷ್ಟರಲ್ಲಿ ಒಂದು ಕುರಿ, ಒಂದು ಕೋಳಿ ಹಿಡಿದು ತರುವರು.
ಅದನ್ನು ನೋಡಿ ಬಸವಣ್ಣ.....)

ಪೂಜಾರಿ, ನಿನ್ನ ದಮ್ಮಯ್ಯ
ಮೂಕಪ್ರಾಣಿಗಳನ್ನು ಕೊಲ್ಲುವುದು ಬೇಡಪ್ಪಾ
ಈ ದೇವತೆ ನಿನಗೂ ತಾಯಿ, ನನಗೂ ತಾಯಿ ಈ ಕುರಿ
ಕೋಳಿಗಳಿಗೂ ತಾಯಿ. ಹೆತ್ತ ತಾಯಿಯೇ ಮಕ್ಕಳನ್ನು ತಿನ್ನ
ಬಯಸುವಳೆ ? ಹೇಳು.

**ಪೂಜಾರಿ** : ಹೆಂಗೋ ಅದೆಲ್ಲಾ ನಂಗೊತ್ತಿಲ್ಲ. ಅವ್ವನಿಗೆ ಹಾವರಾ ಕೊಡಲೇಬೇಕು

**ಬಸವ** : ಹಾಗಾದರೆ, ನಿನ್ನ ಮಗನನ್ನು ಕೇಳ್ತಾಳೆ ಬಲಿ ಕೊಡ್ತೀಯಾ ?

(ಯವ್ವೋ ಯಪ್ಪೋ ಎಂದು ಪೂಜಾರಿ ಮಾರಿ ಜೊತೆ ಓಡುವನು)

– ನರ್ತಕಿಯರ ಹಾಡು ಮತ್ತು ನರ್ತನ –

ಬಸವಣ್ಣ ಬಸವಣ್ಣ ಬಸವಣ್ಣ
ಕಲ್ಯಾಣದಣ್ಣ ಬಸವಣ್ಣ॥
ಹನ್ನೆರಡನೆಯ ಶತಮಾನ। ಅದು
ಚಿನ್ಮಯ ಚೇತನದಭಿಯಾನ
ಅಂದವತರಿಸಿದನೋ ಬಸವಣ್ಣ
ಎಲ್ಲರ ಅಣ್ಣ ಬಸವಣ್ಣ ॥ ೧ ॥

ಬಸವಣ್ಣ ಬಸವಣ್ಣ ಬಸವಣ್ಣ
ಕಲ್ಯಾಣದಣ್ಣ ಬಸವಣ್ಣ
ಕನ್ನಡ ಕಾರಣ ಪುರುಷ ಅವ
ಚಿನ್ನದ ನಾಡಿನ ಹರುಷ
ಹೆಣ್ಣಿನ ಬಾಳಿಗೆ ಕಣ್ಣಾದ
ದಲಿತೋದಯದ ಹರಿಕಾರ ॥ ೨ ॥

ಬಸವಣ್ಣ ಬಸವಣ್ಣ ಬಸವಣ್ಣ
ಕಲ್ಯಾಣದಣ್ಣ ಬಸವಣ್ಣ॥
ಕಾಯಕ ಯೋಗಿ ಬಸವಣ್ಣ
ದಾಸೋಹ ಮೂರುತಿ ಬಸವಣ್ಣ
ನಡೆ ನುಡಿಯಲ್ಲಿ ಮಡಿಯಾದವನು
ಲಿಂಗ ಮೆಚ್ಚುವೊಲು ಬದುಕಿದಂಥವನು ॥ ೩ ॥

(ಹಾಡು ಮುಗಿಯುವಷ್ಟರಲ್ಲಿ ಒಳಗಡೆಯಿಂದ 'ಬಸವಣ್ಣನವರು ಬರುತ್ತಿದ್ದಾರೆ ದಾರಿಬಿಡಿ' ಎಂಬ ಕೂಗು. ಸವರ್ಣೀಯರು ಜನರ ಗುಂಪನ್ನು ಸೀಳಿ ಪ್ರವೇಶಿಸುತ್ತಾರೆ. ಆ ವೇಳೆಗೆ ಹರಳಯ್ಯ, ಮಧುವರಸ ಮತ್ತು ಕಂಬಳಿ ನಾಗಿದೇವರುಗಳೂ ಬಂದಿರುತ್ತಾರೆ. ಅವರನ್ನು ತಡೆದು)

**ಶರಣ ೧** : ಲ್ರೋ, ಹೊಲೆ ಮಾದಿಗ ಮುಂಡೇವ, ಅಣ್ಣನವರನ್ನು ಮುಟ್ಟಿ ಮೈಲಿಗೆ ಮಾಡ್ತಾ ಇದ್ದೀರಾ. ನಡೆಯಿರಿ ಅತ್ತ.... ದೂರನಿಲ್ಲಿ ಮುಟ್ಟಬೇಡಿ.

**ಶರಣ ೨** : ಅಲ್ಲೇನು ನೋಡ್ತೀರೊ, ದೊಣ್ಣೆ ಇಲ್ವಾ ! ಬಡೀರೊ ನಾಲ್ಕು !

– ದೊಣ್ಣೆ ಎತ್ತುವರು ಅಷ್ಟರಲ್ಲಿ ಬಸವಣ್ಣ ಮುಂದೆ ಬಂದು ತಡೆದು –

**ಬಸವ** : ಹ್ಞಾ ! ಹ್ಞಾ !! ಅಣ್ಣಗಳಿರಾ, ಇವರಾರು ?

ಒಬ್ಬ : ಇವನು ಹೊಲೆಯ ಹರಳ ಬಸವಣ್ಣ !

ಮತ್ತೊಬ್ಬ : ಇವನು ಮಾದಿಗ ಕಂಬಳಿ ನಾಗಿದೇವ ಅಣ್ಣಾ !

ಬಸವ : ಛೇ ! ಛೇ ! ಹಾಗೆಲ್ಲಾ ಹೀಯ್ಯಾಳಿಸಿ ನುಡಿಯಬಾರದು.

ವಚನ : ಸೆಟ್ಟಿಯೆಂಬೆನೆ ಸಿರಿಯಾಳನ ?
ಮಡಿವಾಳನೆಂಬೆನೆ ಮಾಚಯ್ಯನ ?
ಡೋಹಾರನೆಂಬೆನೆ ಕಕ್ಕಯ್ಯನ ?
ಆನು ಹಾರುವನೆಂದರೆ
ಕೂಡಲಸಂಗಯ್ಯ ನಗುವನಯ್ಯಾ !

ಹರಭಕ್ತ ಹರಳಯ್ಯನವರು ಶಿವನ ಕೃಪೆಗೆ ಪಾತ್ರರಾದವರು. ಪರಶಿವನಿಗೆ ನಿತ್ಯವೂ ಅಂಬಲಿ ಉಣಿಸಿ ಸಂತುಷ್ಟಿಪಡಿಸುತ್ತಿರುವ ಈ ಮಹಾನುಭಾವರು ಕಂಬಳಿ ನಾಗಿದೇವರು ಇಂತಹ ಮಹಾತ್ಮರನ್ನು ತುಚ್ಛೀಕರಿಸಿ ಮಾತನಾಡುವುದು ಸರಿಯಲ್ಲ.

ಮಗದೊಬ್ಬ : ಅಣ್ಣ, ಇವರು ಹೀನಕುಲದವರು, ಅಸ್ಪೃಶ್ಯರು !

ಬಸವ : ಕೇಳಲಾರೆ, ಕೇಳಲಾರೆ, ಕ್ಷಮಿಸಿ:

ವಚನ : ಕೊಲ್ಲುವವನೇ ಮಾದಿಗ
ಹೊಲಸು ತಿಂಬುವವನೇ ಹೊಲೆಯ
ಕುಲವೇನೊ ? ಆವಂದಿರ ಕುಲವೇನೊ ?
ಸಕಲ ಜೀವಾತ್ಮರಿಗೆ ಲೇಸನೇ ಬಯಸುವ
ನಮ್ಮ ಕೂಡಲ ಸಂಗನ ಶರಣರೇ ಕುಲಜರು॥
ಜಾತಿ ಎಂಬುದು ಭಾರತಕ್ಕೆ ಯಾರೋ ಕೊಟ್ಟ ಶಾಪ. ಅದು ವಿಶಾಪಗೊಳ್ಳದೆ ದೇಶಕ್ಕೆ ಏಳಿಗೆ ಇಲ್ಲ ; ಮನುಕುಲಕ್ಕೆ ಮಂಗಳವೂ ಇಲ್ಲ.

ಒಬ್ಬ : ಇವರನ್ನು ಮುಟ್ಟಿದರೆ ನಾವು ಮೈಲಿಗೆ ಆಗ್ತೇವಪ್ಪಾ !

ಬಸವ : ಅಣ್ಣಾ, ನೀನು ಮೆಟ್ಟಿರುವ ಚಪ್ಪಲಿಯನ್ನು ಯಾರು ಮಾಡಿದ್ದು ?

ಒಬ್ಬ : ಇವನೇ ಇವನೇ ಈ ಮಾದಿಗ !

ಬಸವ : ಹ್ಹಾ ! ಇವರು ತಯಾರಿಸಿದ ಚಪ್ಪಲಿಯನ್ನು ನೀನು ಮೆಟ್ಟಿದೆ. ಅದರಿಂದ ನಿನ್ನ ಮೈ ಮೈಲಿಗೆ ಆಗಲಿಲ್ಲ. ಆದರೆ ಇವರನ್ನು ಮುಟ್ಟಿದರೆ ಮಾತ್ರ ಮೈಲಿಗೆ ತಟ್ಟುತ್ತದೆ ! ಇದಾವ ನ್ಯಾಯ, ಇದಾವ ಧರ್ಮ, ಅಣ್ಣಾ, ಸಂಗಮನಾಥನ ಸೃಷ್ಟಿಯಲ್ಲಿ ಯಾವುದೂ ಮಡಿ ಅಲ್ಲ, ಯಾರೂ ಮೈಲಿಗೆ ಅಲ್ಲ. ಕೇಳಿ:

ವಚನ : ನೆಲನೊಂದೇ ಹೊಲೆಗೇರಿ ಶಿವಾಲಯಕೆ
ಜಲವೊಂದೇ ಶೌಚ ಆಚಮನಕ್ಕೆ
ಕುಲವೊಂದೇ ತನ್ನ ತಾನರಿದವಂಗೆ
ಫಲವೊಂದೇ ಷಡುದರುಶನ ಮುಕ್ತಿಗೆ
ನಿಲವೊಂದೇ ಕೂಡಲಸಂಗಮದೇವಾ
ನಿಮ್ಮನರಿದವಂಗೆ॥

– ಆದ್ದರಿಂದ ಮೇಲು ಕೀಳು ಎಂಬ ದುರ್ಭಾವನೆ ದೂರವಾಗಬೇಕು. ನಾವೆಲ್ಲರೂ ಒಬ್ಬ ದೇವನ ಮಕ್ಕಳು. ಜಾತಿ ಹೀನನ ಮನೆಯ ಜ್ಯೋತಿ ತಾ ಹೀನವೇ ? ನೀವು ಆ ಜ್ಯೋತಿಯಂತಾಗಬೇಕು. ಒಂದಾಗಿ ಚೆಂದಾಗಿ ಬದುಕುವುದನ್ನು ಕಲಿಯಬೇಕು. ಶರಣ ಶ್ರೇಷ್ಠರೆ, ಇವರ ಅಜ್ಞಾನವನ್ನು ಮನ್ನಿಸಿ ಆಶೀರ್ವದಿಸಿ.

ಹರಳ : ಬಸವ ಪ್ರಭು, ಅನುಗ್ರಹ ಆಶೀರ್ವಾದಗಳು ತಮ್ಮಂತಹ ದೇವಮಾನವರ ಅರ್ಹತೆಗಳು; ಸಾಮಾನ್ಯರಾದ ನಮ್ಮವಲ್ಲ. ಇರಲಿ; ಅಣ್ಣನವರೆ ಮೂರು ಮಹತ್ವದ ವಿಷಯಗಳನ್ನು ತಮ್ಮಲ್ಲಿ ಅರಿಕೆ ಮಾಡಿಕೊಳ್ಳಲು ಬಂದಿದ್ದೇವೆ.

ಬಸವ : ದಯಮಾಡಿ ಅಪ್ಪಣೆ ಕೊಡಿಸಿ ಹರಳಯ್ಯನವರೆ.

ಹರಳ : ಪ್ರಭೋ, ತಮಗಾಗಿ ನನ್ನ ತೊಡೆಯ ಚರ್ಮ ತೆಗೆದು ಉಂಗುಷ್ಠ ಮಾಡಿ ಈ ಪಾದರಕ್ಷೆಗಳನ್ನು ಸಿದ್ಧಪಡಿಸಿ ತಂದಿದ್ದೇನೆ. ಇವುಗಳನ್ನು ತಮ್ಮ ಪಾದ ಅಲಂಕರಿಸೋಣವಾಗಲಿ ನನ್ನಪ್ಪಾ.

– ಬಟ್ಟೆಯ ಒಳಗಿಂದ ತೆಗೆದು ಕೊಡುವನು–

ಬಸವ : ಈ ಪಾದರಕ್ಷೆಗಳನ್ನು ನನಗಾಗಿ ಸಿದ್ಧಪಡಿಸಿ ತಂದಿರಾ ?

ಹರಳ : ಅಹುದು ಅಣ್ಣನವರೆ,

ಬಸವ : ಪೂಜ್ಯರೆ, ತಮ್ಮ ಭಕ್ತಿಕಾಯಕದಿಂದ ಸಿದ್ಧವಾದ ಈ ಪಾದರಕ್ಷೆಗಳು ಸಂಗಮನಾಥನಿಗಷ್ಟೇ ಮೀಸಲಾದವುಗಳು ! ನಾನು ಇವುಗಳನ್ನು ಮೆಡಲು ಯೋಗ್ಯನಲ್ಲ ; ತಲೆಯ ಮೇಲೆ ಹೊತ್ತು ಮೆರೆಯಲು ಅರ್ಹನು !

– ತಲೆಯ ಮೇಲಿಟ್ಟು ಹರ್ಷಿತನಾಗುವನು –

ಈಗ ಒಂದಾಯಿತು ! ಎರಡನೆಯ ಆದೇಶ ?

ಮಧು : ಪೂಜ್ಯ ಬಸವರಸರೆ, ನಾನು ಹೇಳುತ್ತೇನೆ. ಪೂರ್ವಾಶ್ರಮದಲ್ಲಿ ನಾನು ಉಚ್ಚ ಕುಲದವನು, ಹರಳಯ್ಯನವರು ನೀಚ ಕುಲದವರು. ನಾವಿಬ್ಬರೂ ಇಂದು ಒಂದಾಗಿ ಮನುಜಕುಲಕ್ಕೆ ಸೇರಿದವರಾಗಿದ್ದೇವೆ.

ಬಸವ : ಬಳ್ಳ ಹಾಲು ಕುಡಿದಷ್ಟು ಸಂತೋಷವಾಯಿತು. ಮಧುವರಸರೆ,

ಮಧು : ಸ್ವಾಮಿ.

ಬಸವ : ಹರಳಯ್ಯನವರೆ,

ಹರಳ : ಪ್ರಭು,

ಬಸವ : ಇಂದಿನ ಸಮಾಜದಲ್ಲಿರುವ ಉಚ್ಚ ನೀಚ ಭಾವನೆಗಳನ್ನು ತೊಡೆದು ಹಾಕಬೇಕೆಂದು ನಾನು ಯೋಜಿಸಿದ್ದೆ. ಅದನ್ನು ನೀವು ಕಾರ್ಯರೂಪಕ್ಕೆ ತಂದಿದ್ದೀರಿ. ನನ್ನದು ಸಿದ್ಧಾಂತ, ತಮ್ಮಿಬ್ಬರದು ಪ್ರತ್ಯಕ್ಷ ಪ್ರಯೋಗ. ಇಂದು ನೀವು ಈ ಜಗತ್ತಿಗೆ ಆದರ್ಶ ವ್ಯಕ್ತಿಗಳಾಗಿದ್ದೀರಿ. ಕೆಳಗಿನವರನ್ನು ಮೇಲೆತ್ತುವುದು ಎಷ್ಟು ಕಷ್ಟವೊ, ಮೇಲಿನವರಿಗೆ ತಿಳುವಳಿಕೆ ಕೊಡುವುದು ಅಷ್ಟೇ ಕಷ್ಟ. ಮಧುವರಸರ ಉದಾತ್ತತೆಗೆ ನಾನು ಶಿರಬಾಗುತ್ತೇನೆ.

ಹರಳ : ಇದರ ಜೊತೆಗೆ ಮತ್ತೊಂದು ಹರ್ಷದ ಸುದ್ದಿ.

ಬಸವ : ಅಪ್ಪಣೆಯಾಗಲಿ ಹರಳಯ್ಯನವರೆ.

ಹರಳ : ನನ್ನ ಮಗ ಶೀಲವಂತನಿಗೂ ಮಧುವರಸರ ಮಗಳು ಲಾವಣ್ಯಳಿಗೂ ಮದುವೆ ನಿಶ್ಚಯಿಸಿದ್ದೇವೆ. ಮದು ಮಕ್ಕಳಿಬ್ಬರೂ ಸತಿಪತಿಗಳಾಗಲು ಒಪ್ಪಿದ್ದಾರೆ.

ಬಸವ : ಹಾಲು ಜೇನಿನ ಜೊತೆಗೆ ಸಕ್ಕರೆಯು ಬೆರೆತಂತಾಯಿತು. ವಿವಾಹ ಕಾರ್ಯ ಶೀಘ್ರವಾಗಿ ನೆರವೇರಲಿ.

ಮಧು : ಅದಕ್ಕಾಗಿ ಶುಭಲಗ್ನವೊಂದನ್ನು ಹುಡುಕುತ್ತಿದ್ದೇವೆ ಅಣ್ಣನವರೆ.

ಬಸವ : ಅದಕ್ಕೇಕೆ ಹುಡುಕಾಟ. ಕೇಳಿ:

ವಚನ : ಎಮ್ಮವರು ಬೆಸಗೊಂಡರೆ
ಶುಭಲಗ್ನವೆನ್ನಿರಯ್ಯಾ;
ರಾಶಿ ಕೂಟ ಋಣಸಂಬಂಧವುಂಟೆಂದು
ಹೇಳಿರಯ್ಯಾ;
ಚಂದ್ರಬಲ ತಾರಾಬಲವುಂಟೆಂದು
ಹೇಳಿರಯ್ಯಾ;
ನಾಳಿನ ದಿನಕಿಂದಿನ ದಿನ
ಲೇಸೆಂದು ಹೇಳಿರಯ್ಯಾ;
ಕೂಡಲಸಂಗಮದೇವನ
ಪೂಜಿಸಿದ ಫಲ ನಿಮ್ಮದಯ್ಯಾ ॥

ಆದ್ದರಿಂದ, ಶರಣ ಶ್ರೇಷ್ಠರೆ, ಶಿವನ ಕರುಣೆ ಅಪಾರ. ಅವನ ಸೃಷ್ಟಿಯಲ್ಲಿ ಯಾವುದೂ ಅಕಾಲವಲ್ಲ, ಎಲ್ಲವೂ ಸಕಾಲವೆ. ಕಾಲವನ್ನು ಕೆಟ್ಟದನ್ನಾಗಿಸುವವರು ನಾವೇ. ರಾಹುಕಾಲ, ಗುಳಿಕಕಾಲ, ಯಮಗಂಡಕಾಲ ! ಸಂಗಮನಾಥ ಈ ಮೌಢ್ಯಕ್ಕೆ ಕೊನೆ ಎಂದು ತಂದೆ ! ಶರಣರೆ, ಇಂದೇ ಅನುಭವ ಮಂಟಪದಲ್ಲಿ ಸಕಲ ಶರಣ ಶರಣೆಯರ ಸಮ್ಮುಖದಲ್ಲಿ ವಿವಾಹ ಕಾರ್ಯ ನಡೆಯಲಿ ನಡೆಯಿರಿ.

**ದೃಶ್ಯ : ೩** **ಕಲ್ಯಾಣದ ರಾಜಬೀದಿ**

(ನರ್ತಕಿಯರು ಹೂಬುಟ್ಟಿ, ಹಣ್ಣಿನ ತಟ್ಟೆ ಹಿಡಿದು
ಹಾಡುತ್ತಾ ನರ್ತಿಸುತ್ತಾ ಬರುವರು)

**ನರ್ತ** : ಕಲ್ಯಾಣ ಕಲ್ಯಾಣ ಕಲ್ಯಾಣ
ಅಣ್ಣನ ನೆಚ್ಚಿನ ಕಲ್ಯಾಣ। ಬಸ–
ವಣ್ಣನ ಕೆಚ್ಚಿನ ಕಲ್ಯಾಣ॥
ಕಲ್ಯಾಣ ಕಲ್ಯಾಣ ಕಲ್ಯಾಣ
ಕನ್ನಡ ಕನ್ನಡಿ ಕಲ್ಯಾಣ। ಇದು
ಅಣ್ಣನ ಕ್ರಾಂತಿಯ ಕಲ್ಯಾಣ॥

**ನರ್ತಕಿ** : ೧. ಅಹಾ! ಬಸವಣ್ಣನವರಿಂದ ಕಳ್ಳನೂ ಒಳ್ಳೆಯವನಾಗುತ್ತಾನೆ.
೨. ಮೈಗಳ್ಳರೂ ದುಡಿದು ತಿನ್ನುವಂತಾಗಿದ್ದಾರೆ.
೩. ಕಾಗೆ ಕೋಳಿಗಳಂತೆ ಎಲ್ಲರೂ ಹಂಚಿತಿನ್ನುವುದನ್ನು ಕಲಿತರು ಅಣ್ಣ ಕಲಿಸಿದ ಕಾಯಕ ಮತ್ತು ದಾಸೋಹಗಳಿಂದ.
೪. ಆ ಮಹಾಮಾನವನಿಂದ ತುಳಿತಕ್ಕೆ ಸಿಕ್ಕ ದಲಿತನ ಉದ್ಧಾರವಾಯಿತು ! ಶೋಷಣೆಗೆ ಒಳಗಾದ ಹೆಣ್ಣಿಗೊಂದು ಬದುಕು ಸಿಕ್ಕಿತು ! ಎಲ್ಲರ ಬಾಳು ಬಂಗಾರವಾಯಿತು.

**೧** : ಕಲ್ಯಾಣ ನಿಜವಾದ ಅರ್ಥದಲ್ಲಿ ಕಲ್ಯಾಣವೇ ಆಯಿತು !

**೨** : ಎಲ್ಲ ಆದದ್ದು ಬಸವಣ್ಣ ಕಲ್ಯಾಣಕ್ಕೆ ಬಂದದ್ದರಿಂದ.

**೩+೪** : ಹೌದು ಹೌದು:

**ಹಾಡು** : ಬಸವಣ್ಣ ಬಂದಾನೋ
ಕಸವಾಗಿ ಬಿದ್ದವರ
ರಸವಾಗಿ ಮಾಡಿದನು
    ಬಸವಣ್ಣ ಬಂದಾನೋ
    ಹೊಸ ಬೆಳಕು ತಂದಾನೋ
    ಹಸಿದವರ ಬಾಯ್ಗಳಿಗೆ
    ಬಿಸಿಯನ್ನವಾದವನು

– ಹಳ್ಳಿ ಹೆಂಗೆಳೆಯರು ಹಾಡುತ್ತಾ ರಂಗ ಪ್ರವೇಶಿಸುವರು –

**ಹಳ್ಳಿ** : ಕರುಣೆ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ!
    ಕರುಣಿ ಕಲ್ಯಾಣ ಬಸವಣ್ಣ ಎಲ್ಲಾರ
    ಕಡೆತನಕ ಕಾಯೊ ಅಭಿಮಾನ॥

**ನರ್ತ ೧** : ಭೇಷ್ ! ಅಣ್ಣ ಜನತೆಯಲ್ಲಿ ಈ ಸ್ವಾಭಿಮಾನ ಬೆಳೆಸಿದ.

**ನರ್ತ ೨** : ಸಾಮಾನ್ಯರಿಗೆ ಬಿನ್ನಹಕೆ ಬಾಯಿಕೊಟ್ಟ !

**ಹಳ್ಳಿ** : ಅಕ್ಕಂದಿರಾ, ಏನು ಈವೊತ್ತು ವಿಶೇಷ ?
ಹೂವಿನ ಬುಟ್ಟಿ, ಈ ಹಣ್ಣಿನ ತಟ್ಟೆ ?

**ನರ್ತ ೩** : ಗೊತ್ತಿಲ್ವೇನೆಯವ್ವಾ, ಈವೊತ್ತು ಅನುಭವ ಮಂಟಪದಾಗೆ ಮದ್ವೆ !

**ಹಳ್ಳಿ** : ಯಾರ್‍ಯಾರಿಗೆ ?

**ನರ್ತ ೪** : ಹರಳಯ್ಯ ಮಧುವರಸ ಮಕ್ಕಳು

**ಹಳ್ಳಿ** : ಅಂದರೆ ..... ?

**ನರ್ತ ೪** : ಅಹುದು ಸಮಗಾರ ಹರಳಯ್ಯ, ವೈದಿಕ ರತ್ನ ಮಧುವರಸರು ಇವರ ಮಕ್ಕಳು.

**ಹಳ್ಳಿ** : ಇದೇನು ಸೋಜಿಗಾನೆ ನಮ್ಮವ್ವ. ಹರಳಯ್ಯ ಹೊಲೆಯ, ಮಧುವರಸರು ಹಾರವಯ್ಯಗಳು !
ಇವರಲ್ಲಿ ಲಗ್ನ ಸಂಬಂಧವಾ ?

**ನರ್ತ ೧** : ಅಲ್ಲೇ ಇರೋದು ಸ್ವಾರಸ್ಯ.

ನರ್ತ ೨ : ಅದೇ ಸಾಮರಸ್ಯದ ಮೂಲಮಂತ್ರ. ಏಕತೆಯ ಸಾಧನೆ ! ಅಣ್ಣನವರ ಅದ್ಭುತ ಕ್ರಾಂತಿ !..... ಇರಲಿ ನೀವೂ ಬನ್ನಿ ಮದುವೇಗೆ

ಹಳ್ಳಿ : ಒಳ್ಳೇದಾಯ್ತು ; ನಡೀರಿ ಹೋಗೋಣ.

**ದೃಶ್ಯ : ೪** **ಅನುಭವ ಮಂಟಪದ ಒಳಗೆ**

(ಅನುಭವ ಮಂಟಪ ಅಂದು ವಿವಾಹ ಮಂಟಪವಾಗಿದೆ. ಮಂಗಲವಾದ್ಯಗಳು ಮೊಳಗುತ್ತಿರುತ್ತವೆ. ಬಸವಾದಿಗಳು ಮಂಚಣ್ಣ ಮೊದಲಾದ ನೂರಾರು ಜನ ನೂರಾರು ಜನ ನೆರೆದಿದ್ದಾರೆ. ನರ್ತಕಿಯರು ಹಾಡುತ್ತಾ ನರ್ತಿಸುತ್ತಾ ವಧುವನ್ನು ಕರೆತರುತ್ತಾರೆ)

ನರ್ತ : ಬಾರಮ್ಮ ಬಾ ತಾಯಿ ಬಾರೆ ಸಿರಿದೇವಿ
ಸೌಭಾಗ್ಯ ಸೌಶೀಲ್ಯ ನಿಜ ಗೌರಿ ಬಾರೆ॥
ಕಿಣಿ ಕಿಣಿರು ಕಿರುಗೆಜ್ಜೆ ಗೆಜ್ಜೆಗಳ ಝಣರೆನಿಸಿ
ಹೆಜ್ಜೆ ಹಾಕುತ ಬಾರೆ ಲಜ್ಜೆ ಬೆರೆಸೀ
ಸಜ್ಜಾದ ಹಸೆಮಣೆಗೆ ಮದುಮಗಳೆ ನೀ ಬಾರೆ
ಪ್ರಾಂಜಲದ ಮನದವಳೆ ಮೇಲೇರಿ ಬಾರೆ॥
– ಅವರ ವಿರುದ್ಧದ ದಿಕ್ಕಿನಿಂದ ಹಳ್ಳಿಯ ಹೆಂಗೆಳೆಯರು ವರನನ್ನು
ಕರೆದುಕೊಂಡು ನರ್ತಿಸುತ್ತಾ ಬರುವರು –

ಹಳ್ಳಿ : ಸೋ ಎನ್ನೀರೆ
ಸೋಬಾನೆ ತನ್ನಿರೇ॥
ಹೆಣ್ಣೋರು ಬರುವಾಗ। ಸಣಮಾವು ಫಲವಾದೋ
ಸಣ್ಣ ಬಣ್ಣದಕ್ಕಿ ಸಮನಾದೊ।
ಸಣ್ಣ ಬಣ್ಣದಕ್ಕಿ ಸಮನಾದೊ ನಮ್ಮನೆಯ
ತುಂಬು ಬಾರೇ ತಾಯಿ ಲಾವಣ್ಣೆ!
– ವಧು ವರರನ್ನು ಮಧ್ಯೆ ನಿಲ್ಲಿಸಿ ಹಾರ ಹಾಕಿಸಿ ಹೂಮಳೆಗರೆಯುತ್ತಾರೆ –
ವಧುವರರು ಅಣ್ಣನಿಗೆ ನಮಸ್ಕಾರ ಮಾಡುತ್ತಾರೆ. ಹೂಚೆಲ್ಲಿ–

ಬಸವ : ಮಕ್ಕಳೆ,
ಒಲ್ಲೆಂಬುದು ವೈರಾಗ್ಯ, ಒಲಿವೆನೆಂಬುದು ಕಾಯಗುಣ
ಆವ ಪದಾರ್ಥವಾದರೇನು ? ತಾನಿದ್ದೆಡೆಗೆ ಬಂದುದ
ಲಿಂಗಾರ್ಪಿತವ ಮಾಡಿ ಭೋಗಿಸುವುದೆ ಆಚಾರ.
ಕೂಡಲ ಸಂಗಮದೇವನನೊಲಿಸ ಬಂದ
ಪ್ರಸಾದ ಕಾಯವ ಕೆಡಿಸಬಾರದು.

ಇಂತಹ ಪ್ರಸಾದ ಕಾಯವನ್ನು ಹಸಗೆಡದಂತೆ ನೋಡಿಕೊಳ್ಳಿ. ನಿಮ್ಮಿಬ್ಬರ ಪ್ರೇಮವೇ ಪೂಜೆಯಾಗಲಿ ಪ್ರೀತಿ ತುಂಬಿದ ಮಾತುಗಳು ಮಂತ್ರವಾಗಲಿ – ಏಕೆಂದರೆ

ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ,
ಸತಿಪತಿಗಳೊಂದಾಗದ ಭಕ್ತಿ ಅಮೃತದಲ್ಲಿ ವಿಷವ ಬೆರೆಸಿದಂತೆ.

ಇಬ್ಬರೂ : ಅನುಗೃಹೀತರಾದೆವು.

ಬಸವ : ಅಂತೆಯೇ, ಮಗು ಶೀಲವಂತ, ಮಗಳೆ ಲಾವಣ್ಯ, ಇಂತಹ ದಿನವನ್ನು ನೋಡುವ ಹಂಬಲ ಇತ್ತು. ಅದು ಇಂದು ಹಣ್ಣಾಯಿತು. ಭರತ ಖಂಡದ ಜಾತೀಯತೆಯ ನಿರ್ಮೂಲನಕ್ಕೆ ನಿಮ್ಮ ವಿವಾಹ ನಾಂದಿಯಾಗಲಿ.

**ದೃಶ್ಯ : ೫** **ಬಿಜ್ಜಳನ ಅಂತಃಪುರ**

(ಮಹಾರಾಣಿ ಶಾಂತಮತಿ ವೀಣೆ ನುಡಿಸುತ್ತಿರುತ್ತಾರೆ.
ಸಖಿಯರು ನರ್ತಿಸುತ್ತಿರುತ್ತಾರೆ ಕುಣಿತಕ್ಕನುಗುಣವಾಗಿ)

**ಶಾಂತ** : ನೀರಿಂಗೆ ನೈದಿಲೆ ಶೃಂಗಾರ; ಸಮುದ್ರಕೆ ತೆರೆಯೇ ಶೃಂಗಾರ
ನಾರಿಗೆ ಗುಣವೇ ಶೃಂಗಾರ, ಗಗನಕೆ ಚಂದ್ರಮನೆ ಶೃಂಗಾರ
ನಮ್ಮ ಕೂಡಲಸಂಗನ ಶರಣರಿಗೆ
ನೊಸಲ ವಿಭೂತಿಯೆ ಶೃಂಗಾರ॥

(ಹಾಡು, ನರ್ತನಗಳು ಮುಕ್ತಾಯಕ್ಕೆ ಬರುವಷ್ಟರಲ್ಲಿ ಬಿಜ್ಜಳನ ಆಗಮನ)

**ನೇಪಥ್ಯದಲ್ಲಿ** : ಮಹಾರಾಜಾಧಿರಾಜ, ರಾಜಮಾರ್ತಾಂಡಾ ಭುಜಬಲ ಪರಾಕ್ರಮಿ, ಕಳಚೂರ್ಯ ವಂಶಾಬ್ಧಿ ಚಂದ್ರ ಶ್ರೀಶ್ರೀಶ್ರೀ ಬಿಜ್ಜಳ ಮಹಾಪ್ರಭುಗಳು ದಯಮಾಡಿಸುತ್ತಿದ್ದಾರೆ.

–ವಾದ್ಯಗಳು ಬೋರ್ಗರೆಯುತ್ತವೆ. ನರ್ತಕಿಯರು ಹಾದಿಯುದ್ದಕ್ಕೂ ಹೂ ಚೆಲ್ಲುತ್ತಾ ನರ್ತಿಸುತ್ತಾ ನಡೆಯುತ್ತಾರೆ. ರಾಣಿ ಶಾಂತಮತಿ ವೀಣೆಯನ್ನು ಬದಿಗಿರಿಸಿ, ದ್ವಾರದವರೆಗೂ ನಡೆದು ಹೋಗಿ ಮಹಾರಾಜನ ಎರಡೂ ಕೈಗಳನ್ನು ಹಿಡಿದು ಹಾರ್ದಿಕವಾಗಿ ಸ್ವಾಗತಿಸುತ್ತಾಳೆ. ಹಾಡು ಹರಿದಂತೆ, ರಾಣಿ ರಾಜನನ್ನು ಕರೆತಂದು ರಂಗದ ಮಧ್ಯದಲ್ಲಿ ಪೀಠದ ಮೇಲೆ ಕೂರಿಸುತ್ತಾಳೆ. ಅವನ ಮೈಗೆ ಗಂಧ ಕಸ್ತೂರಿ ಸವರಿ, ಕೊರಳಿಗೆ ಹೂಮಾಲೆ ಹಾಕಿ, ಪನ್ನೀರು ಚಿಮುಕಿಸಿ, ಅವನ ಪಾದಗಳ ಮೇಲೆ ಬೊಗಸೆ ತುಂಬ ಹೂವಿಟ್ಟು, ಒಂದು ಹೂ ತೆಗೆದು ತನ್ನ ಮುಡಿಯಲ್ಲಿ ಧರಿಸುತ್ತಾಳೆ. ಅವನ ಪಾದವಿಡಿದು ನಮಸ್ಕರಿಸಿ ಸನಿಹದಲ್ಲಿ ನಿಲ್ಲುತ್ತಾಳೆ.

– ಸ್ವಾಗತ ಗೀತೆ ಹಿನ್ನೆಲೆಯಲ್ಲಿ ; ಅದಕ್ಕನುಗುಣವಾಗಿ ಹೂ
ಸೂಸುವ ನರ್ತಕಿಯರ ಆನಂದ ನರ್ತನ –

**ಹಾಡು** : ಸ್ವಾಗತ...... ಸುಸ್ವಾಗತ.....
ಬಿಜ್ಜಳ ಪ್ರಭುವರೆಗೆ
ಹಾರ್ದಿಕ ಸ್ವಾಗತ॥
ಕಳಚೂರ್ಯ ಕೇಸರಿಗೆ
ವರ ಸೂರ್ಯ ತೇಜನಿಗೆ
ಕಲ್ಯಾಣ ಸಾಮ್ರಾಜ್ಯ
ದೈಸಿರಿಗೆ ಬಿಜ್ಜಳಗೆ ॥ ೧ ॥
ಕರುನಾಡ ಭೂಪನಿಗೆ
ಕಲೆ ಕಾಮಧೇನುವಿಗೆ
ಸಾಹಿತ್ಯ ಸಾಮ್ರಾಟ
ನಾಟ್ಯಕಲೆ ಕೋವಿದಗೆ ॥ ೨ ॥
ಗಂಡ ಗಂಡರನೆಲ್ಲ
ಹೆಂಡಿರಾಗಾಳ್ದನಿಗೆ
ಚಂಡಪ್ರಚಂಡನಿಗೆ
ವರ ಗಂಡುಗಲಿಗೆ ॥ ೩ ॥

**ಶಾಂತ** : ಸ್ವಾಮಿ.......

**ಬಿಜ್ಜಳ** : ಹೂಂ.......

**ಶಾಂತ** : ಏನಿದಾಶ್ಚರ್ಯ ಪ್ರಭು ! ಮುಖವೆಂಬ ಚಂದ್ರನಿಗೆ ಚಿಂತೆಮೋಡದ ಮುಸುಕು ! ಕಾರಣವ ಕೇಳಲಿಕೆ ದಾಸಿಗಪ್ಪಣೆಯೆ ?

**ಬಿಜ್ಜಳ** : ದಾಸಿಗಪ್ಪಣೆ ಇಲ್ಲ, ದೇವಿ ಕೇಳಲು ಬಹುದು !

**ಶಾಂತ** : ಅಂತಾದಡಿಂದೇಕೆ ಬಿರುಗಾಳಿ ಬೀಸಿಹುದು !
ಮನದ ಮಾನಸದಲ್ಲಿ ಕಲ್ಲೋಲದಲೆಯೇಕೆ ?

**ಬಿಜ್ಜಳ** : ರಾಜಕೀಯದ ಜೇಡ ಜಾಲವನು ನೆಯ್ದಿಹುದು !
ಸಿಕ್ಕಿರುವುದದರಲ್ಲಿ ಎದೆಯ ಮಾನಸ ಕೀಟ !

**ಶಾಂತ** : ನಾಡಾಳುವ ಪ್ರಭುಗೆ ಸಾವಿರ ಸಮಸ್ಯೆಗಳು ! ಹೇಳಿ ದೊರೆ, ನನ್ನೊಡನೆ ಹಂಚಿಕೊಳಿ ಹೃದಯ ಹಗುರಾಗುವುದು !

**ಬಿಜ್ಜಳ** : ಶಾಂತಿ, ನಾನು ನಾಡೊಡೆಯ, ನೀನು ? ಆ ಒಡೆಯನಿಗೆ ಮನದೊಡತಿ ! ಹೇಳೆನ್ನ ಹೃದಯ ಸಾಮ್ರಾಜ್ಞಿ, ಕಿತ್ತು ತಿನ್ನುತ್ತಿರುವ ಒಂದೇ ಒಂದು ಸಮಸ್ಯೆಯನಿಂದು ಪರಿಹರಿಸಬಲ್ಲೆಯಾ ?

**ಶಾಂತ** : ಸಲಹೆ ಸೂಚಿಸಬಲ್ಲೆ ತಿಳಿದನಿತ ನಾನು

**ಬಿಜ್ಜಳ** : ಇಂದು ಕಲ್ಯಾಣಕ್ಕೆ ಮಹಾಮಂತ್ರಿ ಬೇಕಿದೆ ಶಾಂತಿ. ಬಲದೇವ ಮಂತ್ರಿಗಳು ಶಿವೈಕ್ಯರಾಗಿಹರು ತೆರವಾದ ಸ್ಥಾನವನು ತುಂಬಬೇಕಿದೆ ಇಂದು. ಯಾರದಕೆ ಅರ್ಹರು ತಿಳಿಯದಾಗಿದೆ ಚೆನ್ನೆ !

**ಶಾಂತ** : ಸಚಿವ ಸಂಪುಟದಲ್ಲಿ ಹೆಸರ ಸೂಚಿಸಲಾಯ್ತೆ ?

**ಬಿಜ್ಜಳ** : ಆಯ್ತು ; ಹಲವಾರು !

**ಶಾಂತ** : ಯಾರ್‍ಯಾರ ಹೆಸರುಗಳು ?

**ಬಿಜ್ಜಳ** : ಮಂಚಣ್ಣ ಪಂಡಿತರು, ಸಿದ್ಧರಸ, ಬಾಚರಸ, ಜಗದೇವ, ರಣತುಂಗ ಮತ್ತೆ......

**ಶಾಂತ** : ಮತ್ತೆ...... ? ಯಾರದು ಹೇಳಿ ದೊರೆ

**ಬಿಜ್ಜಳ** : ಅವನೆ, ಕೂಡಲದ ಸಂಗಮನ ಕರುಣೆಯಾ ಕಂದ !

**ಶಾಂತ** : ಜಗದಣ್ಣ ಬಸವಣ್ಣ ?

**ಬಿಜ್ಜಳ** : ಅಹುದು..... ಅವನೆ

**ಶಾಂತ** : ಆ ವಿಶ್ವಮಾನವಗಿಂತ ಬೇರೊಬ್ಬನನು ನೆನೆಯಲೂ ಬಾರದು ! ಮಹಾಪ್ರಭು, ಬಸವಣ್ಣನವರನ್ನು ಒಪ್ಪಿಸುವುದೊಳಿತು.

**ಬಿಜ್ಜಳ** : ನನ್ನ ಮನಸ್ಸನ್ನೇ ನೀನೂ ನುಡಿದೆ ಶಾಂತಮತಿ ! ನಿನ್ನಂಥ ಸತ್‌ಸಲಹೆಯಾ ಸತಿಯ ಪಡೆದ ಭಾಗ್ಯಶಾಲಿಯು ನಾನು. ನಾಳೆಯೇ ಮಂತ್ರಿಮಂಡಲದ ಮುಂದಿರಿಸಿ, ಸಭಾಸ್ಥಾನದಲಿ ಘೋಷಿಸುವೆ ! ತದನಂತರದಲ್ಲಿ ಅಣ್ಣನನು ಪ್ರಾರ್ಥಿಸುವೆ

**ಶಾಂತ** : ಮಹಾಪ್ರಭು ಬಿಜ್ಜಳರಿಗೆ ಜಯವಾಗಲಿ
ಜಯವಾಗಲಿ–ಜಯವಾಗಲಿ

–ಬೀಜಿಮ್ಸ್‌ನಲ್ಲಿ ನರ್ತನ ಎಲ್ಲರದು–

## ದೃಶ್ಯ : ೬ ಆಸ್ಥಾನ

(ಬಿಜ್ಜಳ ಮಹಾರಾಜನು ಸಿಂಹವಿಷ್ಠರದ ಮೇಲೆ ಮಂಡಿಸಿದ್ದಾನೆ. ಅವನ ಇಕ್ಕೆಲದಲ್ಲೂ ಚಾಮರವಿಕ್ಕುವ ಸ್ತ್ರೀರತ್ನಗಳು. ಮುಂಬದಿಯ ಎರಡೋಳಿಗಳಲ್ಲಿ ಪಂಡಿತರು, ವಿವಿಧ ಕಲಾಮಂಡಿತರು, ವಾದಿ, ವಾಗ್ಮಿಗಳು ಕುಳಿತಿದ್ದಾರೆ. ಸ್ತಂಭರಾಜಿಯ ಬದಿಯಲ್ಲಿ ಅಲ್ಲಲ್ಲಿ ಭರ್ಜಿ ಹಿಡಿದ ಪಸಾಯರು ನಿಂತಿದ್ದಾರೆ. ಸಿಂಹಾಸನದ ಬಲಭಾಗದ ಮಹಾಮಂತ್ರಿ ಪೀಠ ಖಾಲಿ ಇದೆ. ಅದರ ಮೇಲೆ ಒಂದು ಕಿರೀಟ ಮತ್ತು ಅದರ ತೋಳುಗಳ ಮೇಲೆ ಅಡ್ಡಲಾಗಿ ಒಂದು ಖಡ್ಗ ಇಡಲಾಗಿದೆ. ಎಡಭಾಗದಲ್ಲಿ ಮಂಚಣ್ಣ, ಕ್ರಮಿತ, ಪೆದ್ದಿ ಮೊದಲಾದ ಮಂತ್ರಿಮಂಡಲದ ಉಪಸ್ಥಿತಿ, ರಂಗ ಮಧ್ಯದಲ್ಲಿ ಅರಸನಿಗೆ ಇದಿರಾಗಿ ಓರ್ವ ರಾಜನರ್ತಕಿ ನರ್ತನ ಮಾಡುತ್ತಾಳೆ. ಆರಂಭದಿಂದಲೂ ಇದ್ದ ನಾಲ್ವರು ನರ್ತಕಿಯರೂ ರಾಜನರ್ತಕಿಯ ಇಕ್ಕೆಲಗಳಲ್ಲಿ ಜೊತೆಗೂಡುವರು.)

**ಹಾಡು** : ಕರುನಾಡ ಕುಲತಿಲಕ ಕಂಠೀರವ
ಚಿರಕಾಲ ನಿನಗಿರಲಿ ಈ ವೈಭವ॥
ವೀರ ಬಿಜ್ಜಳದೇವ ಕಳಚೂರ್ಯ ಕುಳಭಾವ
ಕಲ್ಯಾಣ ರಾಷ್ಟ್ರದ ಸೌಭಾಗ್ಯ ನಿಧಿಯೇ
ಚಕ್ರೇಶ್ವರನೇ, ಸುಕೃದ ಸುಧೆಯೇ
ಪುರುಷಪುಂಗವದೇವ ಅಪ್ರಾಕೃತನೇ ॥ ೧ ॥
ಶಾಂತಮತಿಯಂತಸ್ಥ ಸುಸ್ಥಿರದ ತೇಜಸನೆ
ಅವಳ ಮಂಗಳ ಸೂತ್ರದಧಿ ನಾಯಕ
ಸತ್ಯ ಶಾಶ್ವತನೇ, ನಿತ್ಯ ನಿರ್ಮಲನೇ
ಸಕಲ ಕಲಾಧರ ಸಾಕಾರ ಶಿವನೇ ॥ ೨ ॥
ವಿಜಯೀಭವ ! ವಿಜಯೀಭವ ! ವಿಜಯೀಭವ !

–ನರ್ತನಾನಂತರ ನರ್ತಕಿಯರ ನಿರ್ಗಮನ–

**ಬಿಜ್ಜಳ** : ವಿದ್ವನ್ಮಣಿಗಳೆ, ಮಂತ್ರಿಮಹೋದಯರೆ, ಶಿವಸ್ವರೂಪಿಗಳಾದ ಕಲ್ಯಾಣದ ಗಣ್ಯ ಪುಣ್ಯ ಸಭಾಸದರೆ, ತಮ್ಮೆಲ್ಲರ ಸಮ್ಮತಿ ಸಹಕಾರಗಳಿಂದ ನಾನಿಂದು ಸಾಮ್ರಾಟನಾಗಿದ್ದೇನೆ. ಕಲ್ಯಾಣದ ಚಾಲುಕ್ಯ ಚಕ್ರೇಶ್ವರ ತೈಲಪ ಮಹಾಪ್ರಭುಗಳಿಂದ ತೆರವಾದ ಸ್ಥಾನವನ್ನು ತುಂಬಿದ್ದೇನೆ. ಆದರೆ ಪ್ರಭುಗಳು ದಿವಂಗತರಾದ ತರುಣದಲ್ಲೇ ಕಲ್ಯಾಣ ರಾಷ್ಟ್ರಕ್ಕೆ ಬಹುದೊಡ್ಡ ಕ್ಷಾಮ ಕಾಲಿರಿಸಿ, ಜನತೆ ಬರಮಾರಿಗೆ ಸಿಕ್ಕು ತತ್ತರಿಸುತ್ತಿದ್ದಾರೆ. ದೇಶಕ್ಕೆ ಬಂದಿರುವ ಈ ಕುತ್ತು ನಿವಾರಣೆಗೆ ತಮ್ಮಲ್ಲಿ ಸಲಹೆ ಸೂಚನೆಗಳನ್ನು ಬೇಡುತ್ತಿದ್ದೇನೆ. ಪೀಠಾಭಿಮಾನಿಗಳಾದ ತಾವು ಸೂಚಿಸಿ ಸಹಕರಿಸಬೇಕಾಗಿ ವಿನಂತಿ.

**ಕ್ರಮಿತ** : ಮಹಾಪ್ರಭು, ಪರ್ಜನ್ಯಯಾಗ ಮಾಡುವುದರಿಂದ ವರುಣ ದೇವ ಸಂತುಷ್ಟನಾಗಿ ಮಳೆಸುರಿಸುತ್ತಾನಾದ್ದರಿಂದ ಯಾಗ ಕಾರ್ಯದ ಆಚರಣೆ ಸದ್ಯ ಪರಿಸ್ಥಿತಿಗೆ ಸೂಕ್ತ ಎಂಬುದು ನನ್ನ ಅಭಿಪ್ರಾಯ.

**ಪೆದ್ದಿ** : ಕ್ರಮಿತರ ಅಭಿಮತವನ್ನೇ ನಾನೂ ಅನುಮೋದಿಸುತ್ತೇನೆ.

**ಬಿಜ್ಜಳ** : ಮಂಚಣ್ಣ ಮಂತ್ರಿಗಳು ಏನು ಅಭಿಪ್ರಾಯಪಡುತ್ತಾರೊ ?

**ಮಂಚಣ್ಣ** : ಮಹಾಪ್ರಭು, ಈ ಕ್ರಮಿತ, ಈ ಪೆದ್ದಿಯರ ಸಲಹೆ ಮೆಚ್ಚುವಂಥದೇ ಆದರೂ, ಪ್ರಸ್ತುತದಲ್ಲಿ ಅದನ್ನು ಕಾರ್ಯರೂಪಕ್ಕೆ ತರುವುದು ಕಷ್ಟವೆಂದೇ ಅನ್ನಿಸುತ್ತದೆ. ತಟ್ಟೆ ಹೋದದ್ದಕ್ಕೆ ತಂಬಿಗೆ ಕೊಟ್ಟು ಕಣಿ ಕೇಳಿದಂತಾಗುತ್ತೆ. ಅನ್ನಕ್ಕೇ ಅಭಾವವಿರುವಾಗ ಯಜ್ಞಕ್ಕಾಗಿ ಕೋಟಿಗಟ್ಟಲೆ ಹಣ ಒದಗಿಸುವುದು ಎಲ್ಲಿ. ಆದ್ದರಿಂದ, ನನ್ನ ಸಲಹೆ; ಪ್ರಜೆಗಳ ಮೇಲೆ ಹೊಸ ಕರಗಳನ್ನು ವಿಧಿಸಿ, ಬೊಕ್ಕಸ ತುಂಬಿಸುವುದು.

**ಬಿಜ್ಜಳ** : ಕೋಶಾಧಿಪತಿಗಳಾದ ಬಸವಣ್ಣನವರ ಅಭಿಮತ ತಿಳಿಯಬಹುದೆ ?

**ಬಸವ** : ಮಹಾಪ್ರಭು, ಹಿರಿಯ ಮುತ್ಸದ್ದಿಗಳ ಅಭಿಮತಗಳೆರಡೂ ನನಗೆ ಸಮ್ಮತವಲ್ಲ. ಮುಖ್ಯವಾಗಿ, ಜನತೆಯ ಮೇಲೆ ಹೊಸ ಕರಗಳನ್ನು ಹೇರುವುದು ಸರ್ವಥಾ ಸೂಕ್ತ ಅಲ್ಲ. ಅನ್ನ ನೀರಿಲ್ಲದೆ ಅವರೇ ತತ್ತರಿಸುತ್ತಿರುವ ಈ ಸಂಕಷ್ಟ ಸಂದರ್ಭದಲ್ಲಿ ಪ್ರಜಾಪೀಡನೆ ಒಳಿತಲ್ಲ. ಇರುವ ತೆರಿಗೆಗಳನ್ನೇ ಕೊಡಲು ಅಶಕ್ತರಾಗಿರುವಾಗ ಹೊಸ ತೆರಿಗೆಗಳನ್ನು ಹೇರಿ, ಶೋಷಣೆ ಮಾಡುವುದು ಅಮಾನುಷ ವರ್ತನೆ ಎಂಬುದು ನನ್ನ ನಮ್ರ ಅಭಿಮತ.

**ಮಂಚಣ್ಣ** : ಹಾಗಾದರೆ ಭಂಡಾರಿಗಳು ಸೂಕ್ತವೆನಿಸಿದ್ದನ್ನು ಸೂಚಿಸಬಹುದಲ್ಲ.

**ಬಸವ** : ಅರಮನೆ, ಅಂತಃಪುರಗಳಲ್ಲಿ ತರುವ ಹೊನ್ನು ಒಡವೆಗಳು ದಾನರೂಪದಲ್ಲಿ ಅರ್ಪಿತವಾಗಲಿ. ಹಲವರು ಮಂತ್ರಿ ಮಹೋದಯರು ಬಚ್ಚಿಟ್ಟಿರುವ ಗುಪ್ತಧನ ಬಹಿರಂಗಕ್ಕೆ ಬರಲಿ. ವ್ಯಾಪಾರಿಗಳ ಕೋಠಿಖಾನೆಗಳಲ್ಲಿ ದಾಸ್ತಾನು ಬಿದ್ದಿರುವ ದವಸ ಧಾನ್ಯಗಳು ಪಡಿತರದ ಮೂಲಕ ಮನೆಮನೆಗೂ ವಿತರಣೆಯಾಗಲಿ. ಕಾಲ ಹೀಗೇ ಇರುವುದಿಲ್ಲ. ಮಳೆ ಬಂದು ಬೆಳೆ ಬೆಳೆದು ಸುಭೀಕ್ಷವೇರ್ಪಟ್ಟ ಮೇಲೆ ಪ್ರಭುಪೀಠ ಇಂದು ದಾನವಿತ್ತವರಿಗೆ ನ್ಯಾಯದೊರಕಿಸಿಕೊಟ್ಟರಾಯಿತು. ಇದು ನನ್ನ ಅನನ್ಯ ಭಾವದ ಪ್ರಾಂಜಲ ಮನದ ಬಿನ್ನಹ,

**ಬಿಜ್ಜಳ** : ಯೋಗ್ಯ ಸಲಹೆ, ಸಭಾಸದರೇ....

– ಅಷ್ಟರಲ್ಲಿ ಓರ್ವ ದೂತನು ಒಂದು ಓಲೆಗರಿ ಹಿಡಿದು

ತಂದು ರಾಜನಿಗೆ ಶಿರಬಾಗಿ –

**ದೂತ** : ಮಹಾಪ್ರಭುಗಳಿಗೆ ಜಯವಾಗಲಿ

**ಬಿಜ್ಜಳ** : ವಿಚಾರವೇನು ?

**ದೂತ** : ಈ ಓಲೆ ಭಂಡಾರದ ಒಳ ಓವರಿಯಲ್ಲಿ ದೊರೆಯಿತು. ಪರಾಂಬರಿಸಬೇಕಾಗಿ ಪ್ರಾರ್ಥನೆ.

– ಆಸ್ಥಾನಿಕನೊಬ್ಬನ ಕೈಗಿರಿಸಿ ನಿರ್ಗಮನ –

**ಬಿಜ್ಜಳ** : ಸಂತೋಷ. ಕ್ರಮಿತ ಮಹಾಶಯರೆ, ತಾವು ಲಿಪಿ ಶಾಸ್ತ್ರಜ್ಞರು. ಓದಿ ಅರ್ಥೈಸುವಿರಾ ?

– ಆಸ್ಥಾನಿಕ ಕ್ರಮಿತನ ಕೈಗಿರಿಸುವನು –

**ಕ್ರಮಿತ** : (ಕಣ್ಣು ಕಿರಿದು ಮಾಡಿಕೊಂಡು ತಿರುಗಿ ಮುರಿಗಿ ನೋಡಿ, ಏನೂ ಅರಿಯದಿರಲು)
ಮಹಾಪ್ರಭು, ಇದು ಓಲೆ ಶಾಸನವೇ ಅಲ್ಲ. ಯಾವುದೋ ಮೋಡಿ ಅಕ್ಷರದ ಮಡ್ಡಿ. ಇದರಲ್ಲಾವ ಸ್ವಾರಸ್ಯಕರ ವಿಷಯವೂ ಇಲ್ಲ !

**ಬಿಜ್ಜಳ** : ಪೆದ್ದಿ ಪಂಡಿತರು ?

ಪೆದ್ದಿ : (ಬೆರಗಾಗಿ ಈಸಿಕೊಂಡು) ಹೆ ಹ್ಹೆ ಹ್ಹೆ ಹ್ಹೆ ! ಮಹಾಪ್ರಭು ಕ್ರಮಿತ ಮಹೋದಯರು ಹೇಳಿದಂತೆ ಇದೊಂದು ಮಕ್ಕಳಾಟಿಕೆಯ ಗೀಚು–ಗೆರೆಗಳ ಸಾಲು ! ವಿಶೇಷ... ಏನೂ.... ಇ...... ಲ್ಲ !

ಬಿಜ್ಜಳ : ಮಂಚಣ್ಣ ಪಂಡಿತರು ?

ಮಂಚಣ್ಣ : ಮಹಾಪ್ರಭು ಬಸವಣ್ಣನವರು ಇದನ್ನು ಖಂಡಿತಾ ಓದಿ ತಿಳಿಸಬಲ್ಲರು.

– ಬಸವಣ್ಣನ ಕೈಗಿಡುವನು –

ಬಸವ : (ಓದಿ ಮುಖದಲ್ಲಿ ಆಶ್ಚರ್ಯ ವ್ಯಕ್ತಪಡಿಸುತ್ತಾ) ಮಹಾಪ್ರಭು, ಇದು ಮಹತ್ವಪೂರ್ಣ ಓಲೆ ಶಾಸನ, ಇದರಲ್ಲಿನ ಸಂದೇಶ ತಮಗೆ ಮಾತ್ರ ತಿಳಿಸುವಂಥದು.

ಬಿಜ್ಜಳ : ಆಗಲಿ, ಹತ್ತಿರ ಬನ್ನಿ.

– ಬಸವಣ್ಣ ಬಿಜ್ಜಳನ ಕಿವಿಯಲ್ಲಿ ನುಡಿಯುವನು.

ಬಿಜ್ಜಳ ಆಶ್ಚರ್ಯ ಚಕಿತನಾಗಿ –

ಅಹುದೆ ? ಸತ್ಯವೆ ?

ಬಸವ : ಓಲೆ ಶಾಸನದಲ್ಲಿರುವ ವಿಷಯವನ್ನು ನಿವೇದಿಸಿಕೊಂಡಿದ್ದೇನೆ.
ಉಳಿದದ್ದನ್ನು ನಾನರಿಯೆ.

ಬಿಜ್ಜಳ : ಆಗಲಿ. ಸತ್ಯ ಪರೀಕ್ಷೆ ಆಗಿ ಮುಗಿಯಲಿ. ಯಾರಲ್ಲಿ ? ಹಾರೆ ಗುದ್ದಲಿಗಳನ್ನು ತನ್ನಿ.
– ನಾಲ್ಕಾರು ಆಳುಗಳು ಹಾರೆ ಗುದ್ದಲಿಗಳೊಡನೆ ಬರುವರು, ಬಿಜ್ಜಳ ಸಿಂಹಾಸನದಿಂದ ಕೆಳಗಿಳಿದು
ಬಸವಣ್ಣನ ಜೊತೆಗೂಡಿ – ಹ್ಞಾ ! ಇದು... ಈ ಎಡೆ ಅಲ್ಲವೆ ! ಬಸವರಾಜ ?

ಬಸವ : ಅಹುದು ಮಹಾಪ್ರಭು !

ಬಿಜ್ಜಳ : ಅಗೆಯಿರಿ.

– ಸಿಂಹಾಸನದ ಹಿಂಬದಿಯಲ್ಲಿ ಅಗೆಯುವ ಶಬ್ದ –

ಮಂಚಣ್ಣ : ಏನು ಭಂಡಾರಿಗಳೇ ಸಿಂಹಾಸನದ ಹಿಂಬದಿಯಲ್ಲಿ ಬಾವಿ ತೋಡಿಸುವಿರೇನು ?

ಬಸವ : ಆ ಬಾವಿಯಲ್ಲಿ ನೀರಿಗೆ ಬದಲು ಹೊನ್ನು ಸಿಗಬಹುದು !
– ಅಗೆಯುತ್ತಿದ್ದವರು 'ಆಹಾ ! ಹೊನ್ನು, ವಜ್ರ ವೈಢೂರ್ಯ ಬಹುಮೌಲ್ಯದ ಆಭರಣಗಳು ಮಹಾಪ್ರಭು
– ಎಂದು ಕೂಗುವರು. ಆಭರಣಗಳನ್ನು ರಂಗಮಧ್ಯಕ್ಕೆ ಎತ್ತಿಕೊಂಡು ತರುವರು–

ಬಿಜ್ಜಳ : ಆಶ್ಚರ್ಯ ! ಪರಮಾಶ್ಚರ್ಯ !! ಬಸವಣ್ಣನವರೆ ಈ ಹೊನ್ನು ?

ಬಸವ : ಮಹಾಪ್ರಭು, ಕಲ್ಯಾಣದ ಚಾಲುಕ್ಯ ಚಕ್ರೇಶ್ವರರಾಗಿದ್ದ ಹಿರಿಯ ಪೆರ್ಮಾಡಿಗಳು ಬಚ್ಚಿರಿಸಿದ್ದ ನಿಕ್ಷೇಪ; ಆಪದ್ಧನವೂ ಅಹುದು.

ಬಿಜ್ಜಳ : ಇದು ತಮ್ಮಿಂದ ತಿಳಿದು ಬಂತು. ಈ ಹೊನ್ನು ತಮ್ಮ ಸೊಮ್ಮು!

ಬಸವ : ಕ್ಷಮಿಸಬೇಕು ಪ್ರಭುಗಳು, ಇದು ಪ್ರಜರ ಹೊನ್ನು ಪೆರ್ಮಾಡಿಗಳು ಕಷ್ಟಬಂದಾಗ ನೆರವಾಗಲಿ ಎಂದಿರಿಸಿದ್ದರು. ಈಗ ಅದರ ಅಗತ್ಯತೆ ಇದೆ. ಕ್ಷಾಮ ನಿವಾರಣಾರ್ಥವಾಗಿ ಈ ಹೊನ್ನು ಬಳಕೆಯಾಗಲಿ ! ಪ್ರಜೆಗಳ ದುಡಿಮೆ ಪ್ರಜೆಗಳಿಗೇ ಸಂದಾಯವಾಗಲಿ !

ಬಿಜ್ಜಳ : ಯೋಗ್ಯ ಸಲಹೆ ! ಬಸವಣ್ಣನವರೆ, ತಮ್ಮ ಸಲಹೆಯ ಮೇರೆಗೆ ಈ ಹೊನ್ನು ಕ್ಷಾಮ ನಿವಾರಣೆಗಾಗಿ ವಿನಿಯೋಗವಾಗುತ್ತದೆ.
– ಮಂಚಣ್ಣನ ಪಕ್ಷ ಬಿಟ್ಟು, ಉಳಿದವರು ಚಪ್ಪಾಳೆ ತಟ್ಟುತ್ತಾರೆ–
ಅಂತೆಯೇ,
ಕಳೆದಿರುಳು ಗುಪ್ತ ಮಂತ್ರಾಲಯದಲ್ಲಿ ಸೇರಿದ್ದ ಕಳಚೂರ್ಯ ರತ್ನ ಸಿಂಹಾಸನಾಭಿಮಾನಿಗಳ ಅಪೇಕ್ಷೆಯ ಮೇರೆಗೆ ಲಿಂಗೈಕ್ಯ ಶ್ರೀ ಬಲದೇವ ಒಡೆಯರಿಂದ ತೆರವಾದ ಮಹಾಮಂತ್ರಿ ಪದವಿಯನ್ನು ನಮ್ಮೆಲ್ಲರ ಅಭಿಮಾನದ ಮೂರ್ತಿ ಬಸವಣ್ಣನವರು ತುಂಬುವಂತೆ ಪ್ರಾರ್ಥಿಸಿಕೊಳ್ಳುತ್ತೇನೆ. ಇದಕ್ಕೆ ಬಸವರಸರಾದಿಯಾಗಿ ತಮ್ಮೆಲ್ಲರ ಸಮ್ಮತಿ ಇದೆ ಎಂದು ಭಾವಿಸಿದ್ದೇನೆ.

ಸಭೆ : ಆಗಬಹುದು..... ಆಗಬಹುದು !

– ಮಂಚಣ್ಣನ ಪಕ್ಷದ ಕಣ್ಣು ಕೆಂಪಾಗುವುದು –

ಬಿಜ್ಜಳ : ಬಸವರಸರೆ, ಹೀಗೆ ದಯಮಾಡಿಸಬೇಕು.

ಬಸವ : ಮಹಾಪ್ರಭು, ತಮ್ಮ ಅಭಿಮಾನದ ಹೊರೆ ತುಂಬಾ ಭಾರವಾಗುತ್ತಿದೆ.

**ಬಿಜ್ಜಳ** : ಹಾಗೇನಿಲ್ಲ. ಅನ್ಯರ ಮುಖಸೌಂದರ್ಯವನ್ನು ತೋರಿಸುವ ಕನ್ನಡಿ ತನ್ನ ಸೌಂದರ್ಯವನ್ನು ನೋಡಿಕೊಳ್ಳಲಾರದು ! ತಾವು ಅಂಥದೊಂದು ಕನ್ನಡಿ ತಮ್ಮ ವ್ಯಕ್ತಿತ್ವದ ಘನತೆ ತಮಗಿಂತ ನಮ್ಮ ಪ್ರಜಾಕೋಟಿಗೆ ಸ್ಪಷ್ಟ ತಿಳಿದಿದೆ ! ದಯಮಾಡಿ ಈ ಎಡೆಗೆ ಬರೋಣವಾಗಲಿ.

– ಬಸವಣ್ಣ ಮಹಾಮಂತ್ರಿ ಪೀಠದ ಮೇಲೆ ಕೂರುವನು. ಬಿಜ್ಜಳ
ಕಿರೀಟವಿರಿಸಿ, ಖಡ್ಗವನ್ನು ಕೊಡುತ್ತಾನೆ. ಬಸವಣ್ಣ ಖಡ್ಗವನ್ನು
ಕಣ್ಣಿಗೊತ್ತಿಕೊಂಡು ನಿಲ್ಲುವನು. ಆಗ ಹೂಮಳೆಗರೆಯುವುದು.
ಜಯಕಾರ ಘೋಷಣೆ–

**ಸಭೆ** : ಮಹಾಮಂತ್ರಿ ಬಸವಣ್ಣನವರಿಗೆ
ಜಯವಾಗಲಿ ಜಯವಾಗಲಿ ಜಯವಾಗಲಿ !

– ತೆರೆ –

## ದೃಶ್ಯ : ೭ ಮಂಚಣ್ಣ ಮನೆಯ ಓವರಿ

(ಬಿರುಗಾಳಿಯಂತೆ ಮಂಚಣ್ಣನ ಪ್ರವೇಶ. ಅವನ ಹಿಂದೆ ಕ್ರಮಿತ, ಪೆದ್ದಿ ಬುಡಬುಡನೆ ಅಡ್ಡಾಡುವರು)

**ಮಂಚಣ್ಣ** : ಅಪಮಾನ... ! ಅಪಮಾನ ! !... ಅಪಮಾನ ! ! ! ಈ ಅಪಮಾನವನ್ನು ಸಹಿಸಿ ನಾನು ಬದುಕಿರಬೇಕೇ ! ಅಥವಾ ಕಲಚೂರ್ಯ ರತ್ನಸಿಂಹಾಸನವು ಚಿರಸ್ಥಾಯಿಯಾಗಿ ಉಳಿಯಬೇಕೇ ?

**ಪೆದ್ದಿ** : ಇಷ್ಟಕ್ಕೇ ಮಂಚಣ್ಣ ಮಂತ್ರಿಗಳು ಬೇಸರಗೊಂಡರೆ ಹೇಗೆ ? ಯಾವುದಕ್ಕೂ ಕಾಲ ಕೂಡಿಬರಬೇಕಲ್ಲವೆ ?

**ಮಂಚಣ್ಣ** : ಕಾಲ ಕೂಡಿ ಬರುವುದರೊಳಗೇ ಕಾಲನಿಂದ ಕರೆ ಬಂದರೆ !

**ಕ್ರಮಿತ** : ನಮ್ಮ ಕಾರ್ಯ ಸನ್ನಾಹವನ್ನು ಅಲ್ಲಿನವರೆಗೂ ಎಳೆಯುವುದು ಬೇಡ ಮಂಚಣ್ಣ ಮಂತ್ರಿಗಳೆ ! ಕಾಲಚಕ್ರದ ಅರೆಕಾಲು ಒಂದೇ ಒಂದು ಉರುಳು ಉರುಳುವುದರೊಳಗೆ ಬಸವ ಬಿಜ್ಜಳರ ಬಾಳಕತೆಗೆ ಇತಿಶ್ರೀ ಹಾಡಿ ಮುಗಿಸಿದರಾಯಿತು ?

**ಮಂಚಣ್ಣ** : ಒಳ್ಳೆ ಸಲಹೆ ಆದರೆ ಕ್ರಮಿತ, ಬಸವನಿಗಿಂತಲೂ ಬಿಜ್ಜಳ ತುಂಬಾ ಅಪಾಯಕಾರಿ. ಕಲ್ಯಾಣದ ಕಡೆಯ ದೊರೆ ತೈಲನನ್ನು ಕೊಲೆಗೈದು, ಮಂಗಳವೇಡೆಯಲ್ಲಿ ಮಾಂಡಲಿಕನಾಗಿದ್ದ ಹದಿನೆಂಟರ ಹರೆಯದ ಈ ತುಡುಗು ಬುದ್ಧಿಯ ಹುಡುಗನನ್ನು ಕಲ್ಯಾಣದ ರತ್ನಸಿಂಹಾಸನದ ಮೇಲೆ ತಂದಿರಿಸಿ, ಚಕ್ರಾಧಿಪತಿಯನ್ನಾಗಿಸಿದವನು ನಾನು ! ಇವನ ಯಶಸ್ಸಿನ ಹಿನ್ನೆಲೆಯಲ್ಲಿ ನನ್ನ ಬೆವರಿನ ಹಳ್ಳ ಹರಿದಿದೆ. ಆದರೆ ಈ ಕೃತಘ್ನ ನನ್ನ ಉಪಕಾರವನ್ನು ಬಹುಬೇಗ ಮರೆತುಬಿಟ್ಟ ! ವಯೋವೃದ್ಧನೂ ಜ್ಞಾನವೃದ್ಧನೂ ಆದ ಹಿರಿಯ ಮುತ್ಸದ್ದಿ ನಾನಿರುವಾಗ, ಕೂಡಲ ಸಂಗಮದ ಬಡ ಬಾಲಕನನ್ನು ತಂದು ನನ್ನ ತಲೆಯ ಮೇಲೆ ಕೂರಿಸಿದ ಮಹಾಮಂತ್ರಿಯನ್ನಾಗಿ ಮಾಡಿ. ಏನಾಯಿತು ನನ್ನ ಮೂರೂವರೆ ದಶಕಗಳ ನಿರಂತರ ನಿಷ್ಠಾಪೂರ್ಣ ಸೇವೆ ? ಏನಾಯಿತು ನನ್ನ ದೀರ್ಘಾನುಭವ ? ಇಂಥವನನ್ನು ಮುಗಿಸದೆ ನಾನು ನಿದ್ದೆ ಮಾಡಬೇಕೇ ?

**ಕ್ರಮಿತ** : ಮಂಚಣ್ಣ ಮಂತ್ರಿಗಳೆ, ಈ ದಿಸೆಯಲ್ಲಿ ನಮ್ಮ ಭಾಗದ ಕೆಲಸ ?

**ಮಂಚಣ್ಣ** : ಅತ್ಯಂತ ಮಹತ್ವದ್ದು ಪೆದ್ದಿ, ಕ್ರಮಿತ ಈ ಪದ್ಮವ್ಯೂಹ ನಿರ್ಮಾಣ ಸಂದರ್ಭದಲ್ಲಿ ನಿಮ್ಮಿಬ್ಬರ ನೆರವು ನನಗೆ ಬೇಕೇ ಬೇಕು ಮತ್ತೆ ನೀವು ನನ್ನಲ್ಲಿ ನಿಷ್ಠರಾಗಿಯೂ ಇರಬೇಕು !

**ಪೆದ್ದಿ** : ಇಷ್ಟೂ ದಿನ ನೋಡಿದ್ದೀರಿ... ನಮ್ಮ ಪ್ರಾಮಾಣಿಕತೆಯ ಬಗ್ಗೆ ಇನ್ನೂ ಸಂದೇಹವೆ ?

**ಮಂಚಣ್ಣ** : ಇಲ್ಲ ; ಆದರೆ ಇದುವರೆಗೆ ನೀವೆಸಗಿದ ಕಾರ್ಯಗಳು ಅಷ್ಟು ಮಹತ್ವದವಿರಲಿಲ್ಲ ಇಂದಿನದು ಮಹಾದ್ಭುತವಾದದ್ದು.

**ಕ್ರಮಿತ** : ಚಿಂತೆಬೇಡ ಮಂತ್ರಿಗಳೆ, ನಮ್ಮಿಂದೇನಾಗಬೇಕು ಅಪ್ಪಣೆ ಕೊಡಿ.

**ಮಂಚಣ್ಣ** : ಈಗ ಬಸವನ ವಿರುದ್ಧ ಜನರನ್ನು ಎತ್ತಿಕಟ್ಟಬೇಕು ರಾಜ್ಯದ ಎಲ್ಲೆಡೆಯೂ ಕೊಲೆ, ಸುಲಿಗೆ, ದರೋಡೆಗಳು ನಡೆಯುತ್ತಿರುವಂತೆ ಮಾಡಬೇಕು. ಹೆಣ್ಣು ಮಕ್ಕಳ ಅಪಹರಣ, ಅವರ ಮಾನಭಂಗ, ಶಿಶುಹತ್ಯೆ ಇತ್ಯಾದಿ ನೂರಾರು ದೂರುಗಳು ದಿನನಿತ್ಯ ಬಿಜ್ಜಳನ ಬಳಿಗೆ ಬರುವಂತೆ ಮಾಡಬೇಕು. ಎಲ್ಲ ಅನಾಹುತಗಳಿಗೂ ಬಸವನ ಭಕ್ತರೇ ಕಾರಣ ಎಂದು ಪುಕಾರು ಹುಟ್ಟಿಸಬೇಕು. ಹೊಲೆ ಮಾದಿಗರನ್ನು ಕಟ್ಟಿಕೊಂಡು ಬಸವ ವರ್ಗಭೇದವನ್ನಳಿಸಿ ಸಮಾಜದ ಸುಖ ಶಾಂತಿಗಳಿಗೆ ಭಂಗ ತರುತ್ತಿದ್ದಾನೆ. ಶರಣ ಸಂದೋಹದ ನೆಪದಲ್ಲಿ ಬಿಜ್ಜಳನ ವಿರುದ್ಧ ಒಂದು ಸೇನೆಯನ್ನೇ ಕಟ್ಟುತ್ತಿದ್ದಾನೆ. ನಾಳೆ ಬಿಜ್ಜಳನನ್ನು ಮುಗಿಸಿ ತಾನೇ

ರಾಜನಾಗಬೇಕೆಂಬ ಮಹತ್ವಾಕಾಂಕ್ಷೆ ಬಸವನಲ್ಲಿ ಮನೆಮಾಡಿಕೊಂಡಿದೆ – ಎಂಬೆಲ್ಲ ದೂರುಗಳು ದೊರೆಗೆ ಮುಟ್ಟುವಂತೆ ಮಾಡಬೇಕು ಒಟ್ಟಿನಲ್ಲಿ ಬಸವನಿಗೂ ಬಿಜ್ಜಳನಿಗೂ ಇರುವ ಸ್ನೇಹದ ಕೊಂಡಿ ಕಳಚಿ ಬೀಳುವಂತೆ ಮಾಡಬೇಕು.

**ಕ್ರಮಿತ** : ಅದಕ್ಕೊಂದು ಒಳ್ಳೆಯ ಉಪಾಯ ಇದೆ ಮಂತ್ರಿಗಳೆ !

**ಮಂಚಣ್ಣ** : ಯಾವುದು ?

**ಕ್ರಮಿತ** : ಮೊನ್ನೆ ಬಸವ ಏನು ಮಾಡಿದ ಎಂದು ಹೇಳಿ ತನ್ನ ಅನುಭವ ಮಂಟಪದಲ್ಲಿ

**ಮಂಚಣ್ಣ** : ನನಗೆ ನೆನಪಿಲ್ಲ ಕ್ರಮಿತ.

**ಕ್ರಮಿತ** : ಅಯ್ಯೋ ಮರವೆ ! ಕೇಳಿ, ಹರಳನ ಮಗ ಶೀಲವಂತನಿಗೂ ಮಧುವರಸನ ಮಗಳು ಲಾವಣ್ಯಳಿಗೂ ಅನುಭವ ಮಂಟಪದಲ್ಲಿ ಸಹಸ್ರಾರುಜನ ಶರಣರ ಸಮ್ಮುಖದಲ್ಲಿ ಮದುವೆ ಮಾಡಿಸಲಿಲ್ಲವೆ ?

**ಮಂಚಣ್ಣ** : ಹ್ಹಾ ! ಹೌದು.... ಒಳ್ಳೆಯ ಸನ್ನಿವೇಶ ! ನಮಗೆ ಪರವಾಗಿಯೇ ಬಂದ ಅಪರೂಪದ ಅಮೃತರೂಪೀ ಸಂದರ್ಭ. ಬಸವ ಹೊಲೆಯ ಹಾರುವರ ಲಗ್ನವೇರ್ಪಡಿಸಿ ಈ ಕಲ್ಯಾಣ ರಾಜ್ಯದಲ್ಲಿ ಜಾತಿ ಸಾಂಕರ್ಯವುಂಟುಮಾಡುತ್ತಿದ್ದಾನೆ. ಇದರಿಂದ ಸಾಮಾಜಿಕ, ಧಾರ್ಮಿಕ ರೀತಿ ನೀತಿಗಳು ಬುಡಮೇಲಾಗಿ ರಾಜ್ಯದಲ್ಲಿ ಶಾಂತಿ ಸತ್ತು ಪ್ರಜಾಕ್ಷೋಭೆಗೆ ಕಾರಣವಾಗುತ್ತಿದೆ ಎಂದು ಗುಲ್ಲೆಬ್ಬಿಸಬೇಕು. ಅದಕ್ಕೆ ಪೋಷಕವಾಗಿ ಸಹಸ್ರಾರು ಪ್ರಜರ ಸಹಿಸಂಗ್ರಹ ಮಾಡಬೇಕು. ಅದನ್ನು ಮುಂದಿನ ರಾಜಸಭೆಯಲ್ಲಿ ಪ್ರಧಾನ ವಿಷಯವಾಗಿ ಮಂಡನೆ ಮಾಡಿ, ಚರ್ಚೆಗೊಳಪಡಿಸಿ, ಬಸವನನ್ನು ಸಮಾಜಘಾತುಕ ಎಂದೆನ್ನಿಸಬೇಕು.

**ಕ್ರಮಿತ** : ಮಂಚಣ್ಣ ಮಂತ್ರಿಗಳೆ, ಬಸವನ ತಲೆ ಮೇಲೆ ಗೂಬೆಕೂರಿಸುವುದು ಅಷ್ಟು ಸುಲಭ ಅಲ್ಲ. ಅವನೀಗ ಸಾಕಷ್ಟು ಬೆಳೆದಿದ್ದಾನೆ. ಜನಾನುರಾಗಿ ಸುಧಾರಕನೆನಿಸಿದ್ದಾನೆ. ಆದ್ದರಿಂದ ಜಾತಿ ಸಾಂಕರ್ಯಕ್ಕೆ ಕಾರಣರಾದ ಹೊಲೆಯ ಹರಳಯ್ಯ, ಹಾರುವ ಮಧುವರಸರನ್ನು ಸಾಮಾಜಿಕ ಕ್ಷೋಭೆಗೆ ಕಾರಣರೆಂದು ತೀರ್ಮಾನಿಸಿ, ಅವರಿಬ್ಬರನ್ನೂ ಅರಸ ಗಲ್ಲಿಗೇರಿಸುವಂತೆ ಮಾಡಬೇಕು !

**ಪೆದ್ದಿ** : ಇದನ್ನೆಲ್ಲಾ ನೋಡಿಕೊಂಡು ಬಸವ ತೆಪ್ಪಗಿರುತ್ತಾನೆಯೇ ? ಶರಣ ವಧೆಯಾಯಿತು ಎಂದು ಅರಚುತ್ತಾ ಹುಚ್ಚನಾಗಿ ಬೀದಿಗಿಳಿಯುತ್ತಾನೆ. ಇಲ್ಲವೇ ರಚ್ಚೆಗೆದ್ದು ಬಿಜ್ಜಳನ ಮೇಲೆ ಬೀಳುತ್ತಾನೆ !

**ಮಂಚಣ್ಣ** : ಒಳ್ಳೆಯ ಆಲೋಚನೆ ! ಈಗ ತುಂಬಾ ಪ್ರಬಲ ಕಾರಣ ಸಿಕ್ಕಂತಾಯಿತು ಬಸವಾ ನೀನು ಸೂತ್ರ ಹಿಡಿದು ಬಿಜ್ಜಳನನ್ನು ಗಾಳಿಪಟವಾಡಿಸುತ್ತಿದ್ದೀಯಲ್ಲವೆ ? ನೋಡುತ್ತಿರು ನಿನ್ನನ್ನು ಧೂಳಿಪಟ ಮಾಡದಿದ್ದರೆ ನಾನು ಕೊಂಡೆಯದ ಮಂಚಣ್ಣನೇ ಅಲ್ಲ !

**ಕ್ರಮಿತ** : ಅವನ ಕತೆ ಮುಗಿದ ಮೇಲೆ ?

**ಮಂಚಣ್ಣ** : ಮುಗಿದ ಮೇಲೆ, ಹೇಗಾದರೂ ಮಾಡಿ ಬಿಜ್ಜಳನ ಕೊಲೆಗೆ ಸಿದ್ಧತೆ ನಡೆಸಬೇಕು.

**ಪೆದ್ದಿ** : ಆಮೇಲೆ ?

**ಮಂಚಣ್ಣ** : ಆಮೇಲೆ ಬೇರೇನು ? ನಾನೇ ಕಲ್ಯಾಣ ರಾಜ್ಯದ ಏಕೈಕ ಚಕ್ರವರ್ತಿ ! ! ಹ ಹ್ಹ ಹ್ಹ ಹ್ಹ ಹ್ಹಾ !

**ಕ್ರಮಿತ** : ನೀವು ಚಕ್ರವರ್ತಿಗಳು..... ನಾವು ?

**ಮಂಚಣ್ಣ** : ಏನು ನೀವು ? ಮೊದಲು ನಾನಾಗಲು ನೆರವಾಗಿ ; ಮುಂದೆ ನೋಡೋಣ. ಕಲ್ಯಾಣದ ಚಾಲುಕ್ಯರನ್ನು ತಳ್ಳಿ, ಬಿಜ್ಜಳ ತನ್ನ ಕಲಚೂರ್ಯ ವಂಶ ಸ್ಥಾಪಿಸಿದ. ನಾನು ಬಿಜ್ಜಳನನ್ನು ಮುಗಿಸಿ, ಆ ಪ್ರಭುಪೀಠದ ಮೇಲೆ ನನ್ನ ಕೊಂಡೆಯ ವಂಶಸ್ಥಾಪಿಸಿ, ದರ್ಪಿಷ್ಠಪ್ರಭುವಾಗಿ ಮೆರೆಯುತ್ತೇನೆ !

**ಕ್ರಮಿತ** : ಆಗ... ಇವನು ಅರ್ಥಮಂತ್ರಿ ! ನಾನು ಮಹಾಮಂತ್ರಿ ! !

**ಮಂಚಣ್ಣ** : (ಚಣಕಾಲ ಮೌನ) ...ಆಗಲಿ, ನಿಶ್ಚಿಂತೆಯಿಂದ ಹೋಗಿ ; ಕಾರ್ಯೋನ್ಮುಖರಾಗಿ. ಕೆಲಸ ಮುಗಿಸದೆ ಕೂಲಿ ಕೇಳಬಾರದು ಮೊದಲು ಕಾರ್ಯ ನಿರ್ವಹಣೆ ಅನಂತರ ಸಂಭಾವನೆ ! ಆದರೆ ಎಚ್ಚರ ! ಗುಟ್ಟುರಟ್ಟಾಗಬಾರದು ! ಜೋಕೆ !!

**ಕ್ರಮಿತ** } : ಅಗತ್ಯವಾಗಿ ಮಂಚಣ್ಣ ಸಾರ್ವಭೌಮರೆ ! ಈ ಮಂತ್ರಿದ್ವಯರು
**ಪೆದ್ದಿ** } : ಸ್ವಾಮಿ ನಿಷ್ಠಾ ಸೇವಕರು ಎಂಬುದನ್ನು ಮರೆಯಬಾರದು.

(ನಿರ್ಗಮನ)

**ಮಂಚಣ್ಣ** : ಹೋಗಿ ಮೂರ್ಖರೆ, ನಿಮಗೆ ಮಂತ್ರಿ ಪದವಿ ! ಹೂಂ, ಕೆಲಸ ಮುಗಿದ ಮೇಲೆ ನಿಮ್ಮ ಸ್ಥಿತಿ ಬಾಳೆಲೆಯ ಹಾಸುಂಡು ಬೀಸಿ ಒಗೆದ್ಹಾಂಗಾ !! ಮಂಚಣ್ಣ ಸಾರ್ವಭೌಮ ... ಸಾರ್ವಭೌಮ ! ಹ ಹ್ಹ ಹ್ಹ ಹ್ಹ ಹ್ಹಾ !

– ತೆರೆ –

## ದೃಶ್ಯ : ೮ ಬಸವಣ್ಣನ ಮಾಮನೆ

(ಬಸವಣ್ಣನ ಮಾಮನೆಯದು ತೆರೆದಬಾಗಿಲು. ಅದೊಂದು ಇರುಳು ಲೆಂಕರಸನೆಂಬ ಕಳ್ಳ ಜಂಗಮವೇಷಧರಿಸಿ ಆ ಮನೆಯನ್ನು ಕಳ್ಳ ಹೆಜ್ಜೆಗಳನ್ನಿಟ್ಟು ಪ್ರವೇಶಿಸುತ್ತಾನೆ. ಪೆಟ್ಟಿಗೆಯ ಆಭರಣಗಳನ್ನು ಕಟ್ಟಿಕೊಂಡು ಗಂಗಮ್ಮನ ಕೊರಳ ಮಾಂಗಲ್ಯ ಅಪಹರಿಸುತ್ತಾನೆ. ಆಗ ಗಂಗಾ) :

**ಗಂಗಾ** : ಕಳ್ಳ.... ಕಳ್ಳ....ಕಳ್ಳಾ.... ಸ್ವಾಮಿ, ಕಳ್ಳ ಬಂದಿದ್ದಾನೆ.

**ಬಸವ** : (ಹಾಸಿಗೆಯಿಂದೆದ್ದು ಕೊರಳಲಿಂಗವನ್ನು ಕಣ್ಣಿಗೊತ್ತಿಕೊಂಡು) ಬರಲಿ ಬಿಡು.

**ಗಂಗಾ** : ನನ್ನೆಲ್ಲ ಆಭರಣಗಳನ್ನೂ ಅಪಹರಿಸಿಕೊಂಡು ಹೋಗಿದ್ದಾನೆ.

**ಬಸವ** : ಹೋಗಲಿ ಬಿಡು.

**ಗಂಗಾ** : ನನ್ನ ಮಾಂಗಲ್ಯವೂ ಕಳವಾಗಿದೆ !

**ಬಸವ** : ಆಗಲಿ ಬಿಡಬಾರದೆ. ಗಂಗಾ ಇಲ್ಲಿ ನೋಡು, ನಿನ್ನ ಜೀವಂತ ಮಾಂಗಲ್ಯ ನಾನೇ ಇಲ್ಲಿರುವಾಗ ಚಿನ್ನದ ತಾಳಿಗೇಕಿಷ್ಟು ಒದ್ದಾಟ.

**ಗಂಗಾ** : ಸ್ವಾಮಿ, ಸತಿಗೆ ಪತಿಯ ಪ್ರತಿಸ್ವರೂಪವೇ ಆದ ಮಾಂಗಲ್ಯ ಭೂಷಣ ಅಲ್ಲವೆ ?

**ಬಸವ** : ಅಲ್ಲ, ಸತಿಗೆ ಪತಿಯೇ ಭೂಷಣ ; ಪತಿಗೆ ಸತಿಭೂಷಣ... ಬಂಗಾರದ ಒಡವೆಗಳು ಕೇವಲ ಸಂಕೇತ ಸಾಮಗ್ರಿಗಳು ಗಂಗಾ !

– ಅಷ್ಟರಲ್ಲಿ ಶರಣರು ಕಳ್ಳನನ್ನು ಹಿಡಿದು ಎಳೆ ತರುವರು –

**ಶರಣರು** : ಅಣ್ಣಾ ಇವನೆ ಕಳ್ಳ.

**ಬಸವ** : (ಹಾಡತೊಡಗುವನು, ನರ್ತಕಿಯರು ಹಾಡಿನ ಲಯಕ್ಕೆ ನರ್ತಿಸುವರು)

ಕಳ್ಳ ಬಂದನೇ ಮನೆಗೆ
ಕಳ್ಳ ಬಂದನೇ ॥ ಪ ॥
ಸುಳ್ಳಿನೊಂದು ಜೊಳ್ಳು ಮನೆಗೆ ॥ ಅನು. ಪ ॥

ಹೊಸ್ತಿಲಲ್ಲಿ ಹುಲ್ಲು ಹುಟ್ಟಿ
ಮನೆಯೊಳಗೆ ರಜವು ತುಂಬಿ
ಒಡೆಯನಿಲ್ಲದೀ ಮನೆಗೆ ಕಳ್ಳ ಬಂದನೆ ॥ ೧ ॥

ಉಚ್ಚನೀಚ ಭೇದ ಭಾವ
ಕೊಚ್ಚೆ ತುಂಬಿ ಹರಿಯುತಲಿರುವ
ಹುಚ್ಚರಾಳುವ ಈ ಮನೆಗೆ ಕಳ್ಳ ಬಂದನೆ ॥ ೨ ॥

ರಾಜಕೀಯ ಜೇಡಜಾಲ
ಲಾಲಿಯಾಡಿ ಕಟ್ಟಿದಂಥ
ಜಂತೆ ಹರಿದ ಬೊಂತೆ ಮನೆಗೆ ಕಳ್ಳ ಬಂದನೆ ॥ ೩ ॥

– ಕಳ್ಳನನ್ನು ಆಪಾದ ಮಸ್ತಕ ದೃಷ್ಟಿಸಿ ನೋಡಿ –

ಗಂಗಾ ಇಲ್ಲಿ ನೋಡು, ಸಂಗಮನಾಥನೇ ಜಂಗಮ ರೂಪದಲ್ಲಿ
ನಮ್ಮ ಮನೆಗೆ ಕಳ್ಳತನಕ್ಕೆ ಬಂದಿದ್ದಾನೆ ! ಸಂಗಮನಾಥಾ,
ನಿನಗೆ ಶರಣು ಶರಣಾರ್ಥಿ.

– ನಮಸ್ಕರಿಸ ಹೋಗುವನು –

**ಲೆಂಕ** : ತಪ್ಪಾಯ್ತು ಅಣ್ಣನವರೆ, ನಾನು ಕಳ್ಳ, ನನ್ನ ಹೆಸರು ಲೆಂಕ ! ನನಗೆ ನೀವು ನಮಸ್ಕರಿಸುವುದು ! ! ಶಿವಶಿವಾ ! ಬೇಡಿ... ಬೇಡಿ.

**ಬಸವ** : ಲೆಂಕರಸ ನೀನಲ್ಲ ಕಳ್ಳ ನಾನು ? ಈ ನಮ್ಮ ಮನೆಯಲ್ಲಿರುವ ಒಡವೆ ವಸ್ತ್ರಗಳು ನಿನ್ನಂಥವರ ದುಡಿಮೆಯ ಫಲ ! ನಿನ್ನದಾದುದನ್ನು ಅಪಹರಿಸಿಕೊಂಡು ಜೀವನ ಸಾಗಿಸುತ್ತಿರುವ ನಾವು ನಿಜವಾದ ಕಳ್ಳರು.

– ಹಾಡು–ಹಾಡಿಗೆ ತಕ್ಕಂತೆ ನರ್ತಕಿಯರ ನರ್ತನ–

**ಹಾಡು** : ನಾವು ಕಳ್ಳರು
ನಾವು ಭಾರಿ ಕಳ್ಳರು ॥ ಪ ॥
ಜಗದ ಕಣ್ಣಿಗೆರಚಿ ಮಣ್ಣ
ಬಾಳ ಸಾಗಿಸುತ್ತಲಿರುವ ॥ ಅನು. ಪ ॥
ಮೈಯ ಬೆಮರು ಹರಿಸಲಿಲ್ಲ
ಕೈಯ ಕೆಸರು ಮಾಡಲಿಲ್ಲ
ಅನ್ನರನ್ನ ದುಡಿಮೆ ತಿನುವ ॥ ೧ ॥
ಕಷ್ಟಪಟ್ಟು ದುಡಿಯುವವರ
ನಿಷ್ಠೆಯಿಂದ ನಡೆಯುವವರ
ಕುಟ್ಟಿ ಮೆರೆವ ಭ್ರಷ್ಟಾರಾವು ॥ ೨ ॥

ಲೆಂಕರಸ ಅನ್ಯರ ದುಡಿಮೆಯನ್ನು ತಿನ್ನುವ ಹಕ್ಕು ಯಾರಿಗೂ ಇಲ್ಲ. ನಿನ್ನದಾದ ಒಡವೆಯನ್ನು ನೀನು ತೆಗೆದುಕೊಂಡು ಹೋಗು. ಗಂಗಾ...

**ಗಂಗಾ** : ಆಗಲಿ ಸ್ವಾಮಿ, ಲೆಂಕಣ್ಣ, ನಿನ್ನದನ್ನು ನಿನಗೇ ಮುಟ್ಟಿಸುತ್ತಿದ್ದೇನೆ. ಸ್ವೀಕರಿಸು. ಅಗತ್ಯತೆಗೆ ಮೀರಿದ್ದು ಅಪಹರಣವೆನಿಸಿಕೊಳ್ಳುತ್ತದೆ ಅಲ್ಲವೆ ?

**ಲೆಂಕ** : ಅಯ್ಯೋ, ತಾಯಿ, ನಾನು ಪಾಪಿ.... ನಾನು ಪಾಪಿ ! ನಾನು ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತ.... ಪ್ರಾಣತ್ಯಾಗ !

**ಗಂಗಾ** : ಛೇ ! ಛೇ ! ! ಅಂತಹ ದುಸ್ಸಾಹಸ ಬೇಡ ಲೆಂಕಣ್ಣ ಬಡತನ ಎಂಬುದು ಒಂದು ಮಹಾರೋಗವಿದ್ದಂತೆ ! ಯಾವ ಕಷ್ಟ ನಿನ್ನನ್ನು ಕಾಡುತ್ತಿತ್ತೋ ಏನೋ ! ಅದರ ನಿವಾರಣೆ ಆಗಲಿ.

**ಬಸವ** : ಅಹುದು ಲೆಂಕರಸ ಈ ಬಸವನ ಮನೆಗೆ ಬಂದ ನೀನು ಬರಿಗೈಯಲ್ಲಿ ಹಿಂತಿರುಗಲಾರೆ, ಹಿಂತಿರುಗಬಾರದು ಕೂಡ. ತೆಗೆದುಕೊ ಈ ಒಡವೆಗಳನ್ನು ಇವುಗಳನ್ನು ಮಾರಿ, ಬಂದ ಹಣದಿಂದ ಯಾವುದಾದರೂ ಒಂದು ಸತ್ಯಶುದ್ಧ ಕಾಯಕವನ್ನು ಸ್ವೀಕರಿಸು. ದುಡಿಮೆಯೇ ದೇವರು. ಕಾಯಕವೇ ಕೈಲಾಸ, ದಾಸೋಹವೇ ಶಿವಪೂಜೆ ಎಂದು ಭಾವಿಸಿ ಬದುಕು ಮಾಡು. ನೀನು ಬದುಕಿ ಅನ್ಯರಿಗೆ ಬದುಕುಕೊಡು. ಒಳ್ಳಿತಾಗಲಿ.

**ವಚನ** : ಕಳಬೇಡ, ಕೊಲಬೇಡ ಹುಡಿಯ ನುಡಿಯಲುಬೇಡ
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ॥

## ದೃಶ್ಯ : ೯ ಆಸ್ಥಾನ

(ರಂಗಸಜ್ಜಿಕೆ ೬ನೆಯ ದೃಶ್ಯದಂತೆಯೇ ಇರುತ್ತದೆ. ಆದರೆ ಮಹಾಮಂತ್ರಿ ಪೀಠದಲ್ಲಿ ಬಸವಣ್ಣ ಉಪಸ್ಥಿತನಿರುತ್ತಾನೆ. ತೆರೆಸರಿದಾಗ ಮಂಚಣ್ಣ ಪ್ರಜಾಮನವಿಯನ್ನು ಓದುತ್ತಾ ನಿಂತಿರುತ್ತಾನೆ)

**ಮಂಚಣ್ಣ** : ಶ್ರೀಮನ್ ಮಹಾರಾಜಾಧಿರಾಜ, ರಾಜಪರಮೇಶ್ವರ,
ಕಳಚೂರ್ಯ ಕುಳತಿಳಕ ಶ್ರೀಶ್ರೀಶ್ರೀ ಬಿಜ್ಜಳ
ಮಹಾಪ್ರಭುಗಳವರ ದಿವ್ಯ ಸನ್ನಿಧಾನಂಗಳಲ್ಲಿ ಕಲ್ಯಾಣದ
ಅಭಿಮಾನೀ ಪ್ರಜರು ಸಲ್ಲಿಸಿದ ಮನವಿ.
ಅದೆಂತೆಂದಡೆ

ಮಹಾಪ್ರಭು,

ಚಾಲುಕ್ಯ ಚಕ್ರಾಧಿಪತ್ಯವು ಅಸ್ತಂಗತವಾದ ಮೇಲೆ ಕಳಚೂರ್ಯ ಕೌಮುದಿ ನಮಗೆಲ್ಲಾ ಆನಂದ ಆಹ್ಲಾದಗಳನ್ನು ತಂದಿತೆಂದು ಹೇಳಿಕೊಳ್ಳಲು ಹೆಮ್ಮೆಪಡುತ್ತೇವೆ. ತಮ್ಮ ಆಡಳಿತಾವಧಿಯಲ್ಲಿ ಕಲ್ಯಾಣ ಕೈಲಾಸ ಸದೃಶವಾಯಿತು ಎಂದು ಜಗತ್ತೇ ಪ್ರಶಂಸಿಸುತ್ತಿದೆ. ಆದರೆ, ಇತ್ತೀಚಿನ ಕೆಲವರ ವಿದ್ಯಮಾನಗಳಿಂದ ರಾಷ್ಟ್ರವು ಗಳಿಸಿದ್ದ ಗೌರವಕ್ಕೆ ಧಕ್ಕೆ ತಗುಲಿದೆ ಎಂದು ಹೇಳಲು ನಮಗೆ ನಾಚಿಕೆಯಾಗುತ್ತಿದೆ. ಪ್ರಮುಖವಾಗಿ ಹೊಲೆಯ ಹರಳಯ್ಯನ ಮಗನಿಗೆ ಸದ್ಬ್ರಾಹ್ಮಣ ಮಧುವರಸರ ಮಗಳನ್ನು ಕೊಟ್ಟು ಮದುವೆ ನಡೆದಿದೆ. ಇದನ್ನು ಮಹಾಮಂತ್ರಿಗಳಾದ ಬಸವಣ್ಣನವರೇ ಮುಂದೆ ನಿಂತು ನಡೆಸಿಕೊಟ್ಟು ವರ್ಣಸಾಂಕರ್ಯಕ್ಕೆ ಎಡೆಯುಂಟು ಮಾಡಿದ್ದಾರೆ. ಇದು ಶುದ್ಧ ಸಾತ್ವಿಕ ಮತಸ್ಥರು ಮತ್ತು ಧರ್ಮಾನುಯಾಯಿಗಳ ಮನಃಕ್ಷೋಭೆಗೆ ಕಾರಣವಾಗಿದೆ. ಅಲ್ಲದೆ, ರಾಷ್ಟ್ರದ ಜವಾಬ್ದಾರಿ ಸ್ಥಾನದಲ್ಲಿರುವವರೇ ಇಂತಹ ಅಕೃತ್ಯವನ್ನೆಸಗಿರುವುದು ತುಂಬಾ ವಿಷಾದನೀಯ. ಧರ್ಮಪ್ರಭುಗಳು ಸಾರಾಸಾರ ವಿಚಾರಣೆ ಮಾಡಿ ಇಂತಹ ಅಕ್ರಮಗಳು ನಡೆಯದಂತೆ ರಾಜಾಜ್ಞೆ ಹೊರಡಿಸುವುದರ ಜೊತೆಗೆ ಸಾಮಾಜಿಕ ವಿಪ್ಲವಗಳಿಗೆ ನೇರ ಕಾರಣರಾದ ಹರಳಯ್ಯ ಮಧುವರಸರನ್ನು ಆಪಾದಿತರನ್ನಾಗಿ ಘೋಷಿಸಿ, ಅವರಿಗೆ ಉಗ್ರದಂಡನೆಯನ್ನೀಯುವುದರ ಮೂಲಕ ಸನಾತನ ಧರ್ಮರಕ್ಷಣೆ ಹಾಗೂ ಸಾಮಾಜಿಕ ನ್ಯಾಯ ದೊರಕಿಸಿಕೊಡಬೇಕೆಂದು ಅನನ್ಯ ಭಕ್ತಿಭಾವದಿಂದ ಪ್ರಾರ್ಥಿಸಿಕೊಳ್ಳುತ್ತೇವೆ.

ಇಂತು ತಮ್ಮ ಆಜ್ಞಾಧಾರಕರು

**ಕಲ್ಯಾಣ ರಾಜ್ಯದ ಸಹಸ್ರಾರು ಪ್ರಜರು.**

**ಬಿಜ್ಜಳ** : ಮಹಾಮಂತ್ರಿಗಳು ಇದಕ್ಕೇನು ಸಮಾಧಾನ ಹೇಳಬಲ್ಲರು ?

**ಬಸವ** : ಮಹಾಪ್ರಭು, ಇಲ್ಲಿ ತತ್ತ್ವದ ಅರ್ಥವೇ ವಿಪರ್ಯಯವಾಗಿದೆ ಎಂಬುದು ನನ್ನ ಅನಿಸಿಕೆ.

**ಬಿಜ್ಜಳ** : ಹೇಗೆ ?

**ಬಸವ** : ಹರಭಕ್ತ ಹರಳಯ್ಯನವರ ಮತ್ತು ಶಿವನ ಶಿಶು ಮಧುವರಸರ ಮಕ್ಕಳ ವಿವಾಹ ಕಾಮಪ್ರೇರಿತ ಅಲ್ಲ ; ಅದು ಪ್ರೇಮ ಭೂಯಿಷ್ಠವಾದದ್ದು. ಆ ಪ್ರೇಮ ಅತ್ಯಂತ ಪವಿತ್ರವಾದದ್ದು ಕೂಡ. ಅಂತಹ ಪ್ರಾಂಜಲ ಪ್ರೇಮಕ್ಕೆ ಜಾತಿ ಮತಗಳ ಸೂತಕ ಅಂಟಿಲ್ಲ ಯಾರೂ ಅಂಟಿಸಲು ಯಾವ ಕಾರಣಕ್ಕೂ ಪ್ರಯತ್ನಿಸಬಾರದು. ಅಂತೆಯೇ ಪ್ರೇಮ ಎಂಬುದು ವ್ಯಕ್ತಿ ಸ್ವಾತಂತ್ರ್ಯದ ಹಕ್ಕು ಕೂಡ. ಅದನ್ನು ಕಸಿಯುವ ಹಕ್ಕು ಯಾರಿಗೂ ಇಲ್ಲ. ಎರಡನೆಯದಾಗಿ, ಅವರಿಬ್ಬರೂ ಭಿನ್ನ ಧರ್ಮೀಯರಾಗಿರದೆ ಇಂದು ಶಿವಾದ್ವೈತ ಸಿದ್ಧಾಂತದ ಪ್ರಕಾರ ಶಿವದೀಕ್ಷೆ ಪಡೆದು ವೀರಶೈವರಾಗಿದ್ದಾರೆ. ಆದ ಕಾರಣ ಹರಳಯ್ಯ ಮಧುವರಸರು ತಮ್ಮ ಮಕ್ಕಳ ವಿವಾಹ ಸಂದರ್ಭದಲ್ಲಿ ನಡೆಸಿದ ಈ ಬಾಂಧವ್ಯ ಸವರ್ಣೀಯವಾಗುತ್ತದೆಯೇ ಹೊರತು ವಿವರ್ಣೀಯವೆನಿಸುವುದಿಲ್ಲ. ಮತ್ತು ಅದು ಧರ್ಮಬಾಹಿರವೂ ಅಲ್ಲ. ಇದು ನನ್ನ ಸ್ಪಷ್ಟ ಅಭಿಮತ.

**ಮಂಚಣ್ಣ** : ಮಹಾಪ್ರಭು, ಮಹಾಮಂತ್ರಿಗಳು ಹೇಳಿದಂತೆ ಇದು ವ್ಯಕ್ತಿಸ್ವಾತಂತ್ರ್ಯವಲ್ಲ, ಕಾಮಕೀಟಗಳ ಸ್ವಚ್ಛಂದವರ್ತನೆ ! ವ್ಯಕ್ತಿಯ ಹಕ್ಕಿನ ಹಿನ್ನೆಲೆಯಲ್ಲಿ ನಡೆಯುತ್ತಿರುವ ಸ್ವೇಚ್ಛಾಚಾರ. ! ಅದಕ್ಕೆ ಎಡೆಮಾಡಿಕೊಟ್ಟಿರುವ ಮಹಾಮಂತ್ರಿಗಳೂ ದಂಡನಾರ್ಹರು ಧಾರ್ಮಿಕ ನೇಮ ನಿಯಮಗಳನ್ನು ಅನುಕೂಲಸಿಂಧುವಾಗಿಸಿಕೊಳ್ಳುವುದು ಅಕ್ಷಮ್ಯ ಅಪರಾಧ. ಸಮಾಜದ ಕಟ್ಟುಪಾಡುಗಳಿಗೆ ಕೊಡಲಿಪೆಟ್ಟುಕೊಡುವ ಸಮಾಜ ಘಾತುಕರಿಗೆ ತಕ್ಕ ಶಿಕ್ಷೆ ಆಗಲೇಬೇಕು.

– ಹೊರಗಡೆ ಗದ್ದಲ ; ಶಿಕ್ಷೆ ಆಗಲೇಬೇಕು ಎಂಬ ಕೂಗು –

**ಬಸವ** : ಮಹಾಪ್ರಭು, ನ್ಯಾಯದೇವತೆಯ ಕಣ್ಣು ಯಾವಾಗಲೂ ಕುರುಡು. ಅದರ ಮುಂದೆ ಎಲ್ಲರೂ ಸಮಾನರು. ಮಹಾಮಂತ್ರಿಗೊಂದು ನ್ಯಾಯ, ಬೀದಿಬೆಡಂಗನಿಗೊಂದು ನ್ಯಾಯ ಇಲ್ಲ. ಪ್ರಭುಚಿತ್ತಕ್ಕೆ ಅಪರಾಧವೆಂದು ಕಂಡುಬಂದರೆ ಈಗಲೇ ವಿವಾಹಗೈದ ಈ ನನ್ನ ಕೈಗಳನ್ನೂ, ನುಡಿದ ನಾಲಗೆಯನ್ನೂ ತುಂಡರಿಸುವ ದಂಡನೆ ವಿಧಿಸಬಹುದು ! ಅಕ್ಷಮ್ಯ ಅಪರಾಧವೇ ಘಟಿಸಿದ್ದರೆ ನಾನು ಶಿಕ್ಷೆಗೆ ಸಿದ್ಧ !

**ಬಿಜ್ಜಳ** : ಛೇ ಛೇ ! ಅವಿವೇಕ ಆ ಮಟ್ಟಕ್ಕಿಳಿಯಲಾರದು ! ಬಸವರಸರೆ, ಪ್ರೇಮ ವಿವಾಹದಂತಹ ಸಾಮಾನ್ಯ ವಿಷಯ ಪ್ರಜಾಂದೋಲನಕ್ಕೆ ಕಾರಣವಾಗದಿರಲಿ ಎಂದು ತಮ್ಮಲ್ಲಿ ಅರಿಕೆಮಾಡಿಕೊಳ್ಳುತ್ತಿದ್ದೇನೆ.

**ಬಸವ** : ಕ್ಷಮಿಸೋಣವಾಗಲಿ ! ತಾವು ನಾಡಾಳುವ ಪ್ರಭುಗಳು, ತಾವು ಆಜ್ಞೆ ಮಾಡಬೇಕೇ ಹೊರತು ಅರಿಕೆ ಮಾಡಿಕೊಳ್ಳಬಾರದು.

**ಬಿಜ್ಜಳ** : ಇದು ಧರ್ಮಾಧಿಕರಣ, ರಾಜಕಾರಣ ಅಲ್ಲ. ಇಲ್ಲಿ ನಾನು ಪ್ರಭು ಅಲ್ಲ, ಎಲ್ಲರಂತೆ ಸದಸ್ಯ ಮಾತ್ರ. ಕರ್ನಾಟಕದ ಧವಳಕೀರ್ತಿಗೆ ಕಾರಣರಾದ ತಮ್ಮಲ್ಲಿ ನನಗೆ ಪ್ರೇಮಾದರಗಳಷ್ಟೇ ಅಲ್ಲ, ಭಕ್ತಿ ಗೌರವಗಳೂ ಇವೆ.

**ಬಸವ** : ಪ್ರಭು ಪ್ರೀತಿಗೆ ಪಾತ್ರನಾದ ಈ ಬಸವ ಧನ್ಯ !

ಮಂಚಣ್ಣ : ಆ ಧನ್ಯತೆಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಹೋಗುವ ಹೊಣೆಗಾರಿಕೆ ಮಹಾಪ್ರಧಾನಿ ಸ್ಥಾನ ತುಂಬಿದವರಿಗಿರಬೇಕು. ಮಹಾಪ್ರಭು, ಬಸವಣ್ಣನವರೊಬ್ಬರೇ ಮಂತ್ರಿಮಂಡಲ ಅಲ್ಲ ; ಧರ್ಮಾಧಿಕರಣವೂ ಅಲ್ಲ. ಅವರಂತೆಯೇ ಕಳಚೂರ್ಯ ಸಿಂಹಾಸನದ ನಿಷ್ಠಾವಂತ ಸಚಿವ ಸಂಪುಟ ಇದೆ ; ಪ್ರಜೆಗಳೂ ಇದ್ದಾರೆ. ಪ್ರಜಾಭಿಪ್ರಾಯಕ್ಕೆ ವಿರುದ್ಧವಾಗಿ ವರ್ತಿಸುವುದು ಪ್ರಚಂಡ ಪ್ರವಾಹಕ್ಕೆ ವಿರುದ್ಧವಾಗಿ ಈಜಿದಂತೆ ! ಅಂತಹ ದುಸ್ಸಾಹಸಕ್ಕೆ ಮಹಾಮಂತ್ರಿಗಳು ಕೈಹಾಕಲಾರರೆಂಬುದು ನನ್ನ ದೃಢವಾದ ವಿಶ್ವಾಸ.

– ಹೊರಗಡೆ "ಅಪರಾಧಿಗಳಿಗೆ ದಂಡನೆ ಆಗಬೇಕು... ಅಪರಾಧಿಗಳಿಗೆ ದಂಡನೆ ಆಗಲೇಬೇಕು" ಎಂಬ ಗದ್ದಲ –

ಬಿಜ್ಜಳ : ಬಸವರಾಜರೆ, ಪ್ರಜಾಭಿಪ್ರಾಯಕ್ಕೆ ಪ್ರಭುತ್ವ ಮಣಿಯಲೇಬೇಕು ಅಲ್ಲವೇ ?

ಬಸವ : ಅವಶ್ಯವಾಗಿ ಮಹಾಪ್ರಭು.

ಬಿಜ್ಜಳ : ಬಹುಮತಕ್ಕೆ ಬೆಲೆಕೊಡಬೇಕಲ್ಲವೆ ?

ಬಸವ : ಇಲ್ಲ, ಸತ್ಯ ಬಹುಮತದ ಮೇಲೆ ನಿಂತಿಲ್ಲ. ನಿಂತಿದೆ ಎನ್ನುವುದಾದರೆ ಪ್ರಭುತ್ವಕ್ಕೆ ಸತ್ಯರಕ್ಷಣೆಯ ಹೊಣೆಗಾರಿಕೆ ಇಲ್ಲ ಎಂದಾಗುತ್ತದೆ. ಆದ್ದರಿಂದ ಧರ್ಮಾವತಾರರಾದ ಮಹಾಪ್ರಭುಗಳು ಯಾವುದೇ ಪ್ರಭಾವಕ್ಕೆ ಒಳಗಾಗದೆ, ನಿಷ್ಪಕ್ಷಪಾತ ಮನೋಭಾವದಿಂದ ಪ್ರಸಕ್ತ ವಿಷಯವನ್ನು ಚಿಕಿತ್ಸೆಗೆ ಒಳಗು ಮಾಡಿ, ಸತ್ಯವನ್ನು ಎತ್ತಿ ಹಿಡಿಯಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

ಮಂಚಣ್ಣ : ಕೈಯಲ್ಲಿರುವ ಹುಣ್ಣಿಗೆ ಕನ್ನಡಿ ಬೇಕಿಲ್ಲ. ಮಹಾಮಂತ್ರಿಗಳ ಮಾತಿನ ಮಥಿತಾರ್ಥ ಸಹಸ್ರೋಪ ಸಹಸ್ರ ಜನ ಪ್ರಜರ ಅಭಿಪ್ರಾಯಕ್ಕೆ ಭಿನ್ನವಾದ ಅಪರಾಧಿಗಳ ನಿರಪರಾಧಿತ್ವವನ್ನು ಸ್ಥಾಪಿಸಿಸುವುದು. ಆ ಮೂಲಕ ತಾವಾಗಿಯೇ ಅನಾಹುತಕ್ಕೆ ಅಡಿಗಲ್ಲು ಹಾಕುತ್ತಿದ್ದಾರೆ. ಧರ್ಮಪ್ರಭೋ, ತಾವು ಕೃಪೆಮಾಡಿ ಪ್ರಜಾಕ್ಷೋಭೆಗೆ, ಕಲ್ಯಾಣದ ಮಹಾಕ್ರಾಂತಿಗೆ ನಾಂದಿ ಹಾಡಬಾರದಾಗಿ ಪ್ರಾರ್ಥಿಸಿಕೊಳ್ಳುತ್ತೇನೆ.

ಬಿಜ್ಜಳ : ಈ ಹಿನ್ನೆಲೆಯಲ್ಲಿ ಭಾರತೀಯ ಸುಧಾಸೂಕ್ತಿ ಹೇಳುವಂತೆ ಕುಲದ ಅಭ್ಯುದಯಕ್ಕಾಗಿ ಒಬ್ಬನನ್ನು, ಗ್ರಾಮದೇಳಿಗೆಗಾಗಿ ಕುಲವನ್ನು ತ್ಯಜಿಸುವುದು ಅನಿವಾರ್ಯ ಅಲ್ಲವೆ ಬಸವಣ್ಣನವರೆ ?

ಬಸವ : ಅಹುದು ಮಹಾಪ್ರಭು. ಅದೇ ಸೂಕ್ತಿ ಹೇಳುತ್ತೆ ; "ಆತ್ಮಾರ್ಥೇ ಪೃಥ್ವೀಂ ತ್ಯಜೇತ್" ಎಂದು. ಶಬ್ದ ಬದಲಿಸಿ ಹೇಳುವುದಾದರೆ ಸತ್ಯಕ್ಕಾಗಿ, ಧರ್ಮಕ್ಕಾಗಿ, ನ್ಯಾಯಕ್ಕಾಗಿ ಆತ್ಮವನ್ನು ತ್ಯಜಿಸಬೇಕು ಅಲ್ಲವೆ ?

ಬಿಜ್ಜಳ : ಬಸವಣ್ಣನವರೆ, ತಮ್ಮನ್ನು ನಾನು ಓರ್ವ ಕಲ್ಯಾಣ ರಾಷ್ಟ್ರದ ಮಹಾಮಂತ್ರಿಯಾಗಿ ನೋಡುತ್ತಿಲ್ಲ. ಜಗತ್ತು ಈವರೆಗೂ ಕಂಡರಿಯದ ಓರ್ವ ಶ್ರೇಷ್ಠ ಸಮಾಜಸುಧಾರಕನನ್ನಾಗಿ, ವಿಶ್ವಮಾನವರನ್ನಾಗಿ ನೋಡುತ್ತಿದ್ದೇನೆ. ತಾವು ಕಲ್ಯಾಣದ ಕಣ್ಣಾಗಿದ್ದೀರಿ ; ಮಾನವತೆಯ ಮಹಾಮೂರ್ತಿಯಾಗಿದ್ದೀರಿ ಆದ್ದರಿಂದ ತಾವು ತಮ್ಮ ಹಟವನ್ನು ಬಿಟ್ಟು ಪ್ರಸನ್ನ ಮನಸ್ಕರಾಗಿ ರಾಜಾಜ್ಞೆಗೆ ನೆರವಾಗಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಬಸವ : ಮಹಾಪ್ರಭು, ನಾನು ಖಂಡಿತ ಹಟ ಮಾಡುತ್ತಿಲ್ಲ ಸತ್ಯ ಸ್ಥಾಪನೆಗಾಗಿ ಆಗ್ರಹಿಸುತ್ತಿದ್ದೇನೆ.

ಮಂಚಣ್ಣ : ಅಳಿಯ ಅಲ್ಲ, ಮಗಳ ಗಂಡ ! ಮಹಾಮಂತ್ರಿಗಳ ಸತ್ಯಾಗ್ರಹದ ಅರ್ಥವೂ ಕೆಟ್ಟ ಹಟದ ಮಟ್ಟಕ್ಕೇರುತ್ತದೆ ಅಲ್ಲವೆ ? ಮಹಾಪ್ರಭು, ಮಹಾಮಂತ್ರಿಗಳ ಈ ಪಕ್ಷಪಾತ ನ್ಯಾಯ ಬಾಹಿರ, ಧರ್ಮದ್ರೋಹ ! ಅಪರಾಧಿಗಳಿಗೆ ಶಿಕ್ಷೆ ಆಗಲೇಬೇಕು, ನ್ಯಾಯ ದೊರಕಲೇಬೇಕು.

ಬಸವ : ನಿರಪರಾಧಿಗಳನ್ನು ಅಪರಾಧಿಗಳೆಂದು ಘೋಷಿಸುವುದು ನ್ಯಾಯ ದೇವತೆಗೆ ಗೈದ ಅಪಚಾರ ! ನೂರು ಜನ ಅಪರಾಧಿಗಳಿಗೆ ಬಿಡುಗಡೆ ದೊರೆಯಲಿ ಚಿಂತೆಯಿಲ್ಲ, ಆದರೆ ಒಬ್ಬ ನಿರಪರಾಧಿಗೆ ಶಿಕ್ಷೆ ಆದರೆ ಅದು ಮಹಾಪಾಪ ! ವಿಶ್ವನ್ಯಾಯಕ್ಕೆ ಗೈದ ದ್ರೋಹಕೂಡ !

ಮಂಚಣ್ಣ : ಮಹಾಪ್ರಭು, ಮಕ್ಕಳ ಸ್ವೈರ್ಯವರ್ತನೆಗೆ ಕಟ್ಟುಬಿದ್ದು, ಅವರ ಇಚ್ಛಾಪೂರ್ತಿಗಾಗಿಯೇ ಹರಳಯ್ಯ ಮಧುವರಸರು ಮತಾಂತರ ಮಾಡಿದ್ದಾರೆಂಬ ಸತ್ಯಸಂಗತಿಯು ಈಗಾಗಲೇ ಜನತೆಯಿಂದ ಸಾಬೀತಾಗಿದೆ. ಅಂತಹ ಸ್ವೇಚ್ಛಾಚಾರದ ಕಾಮುಕರಿಗೆ, ಪ್ರೋತ್ಸಾಹವಿತ್ತ ತಂದೆ ತಾಯಿಗಳಿಗೆ ದಂಡನೆ ಆಗಲೇಬೇಕು. ಆಗದೇ ಹೋದರೆ ಪ್ರಭುತ್ವವು ಪುಂಡುಪೋಕರಿಗಳಿಗೆ ಅಪ್ರತ್ಯಕ್ಷ ಪ್ರೋತ್ಸಾಹ ನೀಡುತ್ತದೆಂಬ ತಪ್ಪು ಕಲ್ಪನೆ ಪ್ರಜಾಕೋಟಿಯಲ್ಲಿ ಸಹಜವಾಗಿ ಮೂಡುತ್ತದೆ. ಅದರ ಪರಿಣಾಮ ತುಂಬಾ ಘೋರ ! ಪ್ರಭುತ್ವ ತನ್ನ ಅಸ್ತಿತ್ವವನ್ನೇ ಕಳೆದುಕೊಂಡರೂ ಆಶ್ಚರ್ಯವಿಲ್ಲ !

ಬಸವ : ಈ ಹೆದರಿಕೆ ಪ್ರಭುಗಳಿಗೂ ಇಲ್ಲ, ಪ್ರಭುತ್ವಕ್ಕೂ ಇಲ್ಲ !

ಬಿಜ್ಜಳ : ಏನೇ ಇರಲಿ, ಬಸವರಾಜರೆ, ಅಭಿಪ್ರಾಯ ಭೇದ ವಿದ್ವೇಷ ಕಾರಣ ಅಲ್ಲ. ಈ ಸಂದಿಗ್ಧ ಸಂದರ್ಭದಲ್ಲಿ ತಾವು ನನಗೆ ನೆರವಾಗಲೇ ಬೇಕು ಕೃಪೆಮಾಡಿ.

**ಬಸವ** : ಮಹಾಪ್ರಭು, ಧರ್ಮಕ್ಕೆ ದಾಕ್ಷಿಣ್ಯ ತಿಳಿದಿಲ್ಲ. ಕಲ್ಯಾಣ ರಾಜ್ಯದ ಮಹಾಮಂತ್ರಿ ಪೀಠಕ್ಕೆ ಅಪಚಾರವಾಗದಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ.

**ಬಿಜ್ಜಳ** : ಬಸವರಸರೆ ಸೆರೆ ರಕ್ತವನ್ನು ಹಂಚಿಕೊಂಡು ಹುಟ್ಟಿದ ಸೋದರರಿಗೂ ಮಿಗಿಲಾದದ್ದು ನಮ್ಮ ನಿಮ್ಮ ಸಂಬಂಧ. ಅದು ಈ ದಿನ ಈ ಕ್ಷುಲ್ಲಕ ವಿಷಯಕ್ಕಾಗಿ ಬೇರಾಗುತ್ತಿದೆ. ಈ ಬಿರುಕಿಗೆ ಯಾರೇ ಕಾರಣರಿರಲಿ ಆ ಗೊಡವೆ ಈಗ ಬೇಡ. ತಾವೇ ಹೇಳುತ್ತಿದ್ದಿರಿ ಎಂಥದೇ ದುರ್ಭರ ಪ್ರಸಂಗದಲ್ಲೂ ಜೀವನದಲ್ಲಿ ಹೊಂದಾಣಿಕೆ ತುಂಬಾ ಮಹತ್ವದ್ದು ಎಂದು ಏಕೋ ಏನೋ ಅಂತಹ ಹೊಂದಾಣಿಕೆ ಕಾಣದೆ ನನ್ನ ನಿಮ್ಮ ಹಾದಿ ಇಂದು ಕವಲೊಡೆಯುತ್ತಿದೆ ಅದನ್ನು ತಡೆಗಟ್ಟಿ ಪ್ರಭುತ್ವದೊಡನೆ ಸಹಕರಿಸಬೇಕಾಗಿ ಪ್ರಾರ್ಥನೆ.

**ಬಸವ** : ನಾನು ಈ ಮಹಾಮಂತ್ರಿ ಪೀಠದಲ್ಲಿರುವವರೆಗೂ ಶರಣ ದ್ರೋಹಕ್ಕೆ ಸರ್ವಥಾ ಅವಕಾಶ ಕೊಡುವುದಿಲ್ಲ ಪ್ರಭು !

**ಬಿಜ್ಜಳ** : ಹಾಗಾದರೆ ಅನಿವಾರ್ಯವಾಗಿ.....

**ಬಸವ** : ಅಗತ್ಯವಿಲ್ಲ ; ನಾನೇ ಅದಕ್ಕೆ ಸಿದ್ಧನಿದ್ದೇನೆ. ಈ ಮಂತ್ರಿಪದವಿಗೆ ನಾನು ಆಸೆಪಟ್ಟು ಬಂದವನಲ್ಲ. ತಾವು ಅಪೇಕ್ಷಿಸಿದಿರಿ, ನಾ ಬಂದೆ. ನನ್ನ ಕರ್ತವ್ಯವನ್ನು ನಿಷ್ಠೆಯಿಂದ, ಪ್ರಾಮಾಣಿಕವಾಗಿ ನಿರ್ವಹಿಸಿದ್ದೇನೆ. ತಾವು ಅಂದು ಕೊಟ್ಟ ಈ ಪದವಿಯನ್ನು ತಾವು ಹಿಂತಿರುಗಿ ಪಡೆಯಬಹುದು. ಆತ್ಮಸಂತೋಷದಿಂದ ಅರ್ಪಿಸಿ ಮುಕ್ತನಾಗುತ್ತೇನೆ.

– ಬಸವಣ್ಣ ಕಿರೀಟ, ಖಡ್ಗಗಳನ್ನು ತೆಗೆದು ಮಹಾಮಂತ್ರಿ ಪೀಠದ ಮೇಲಿರಿಸುತ್ತಾನೆ –

**ಬಿಜ್ಜಳ** : ಬಸವರಾಜರೆ, ಕೈಮುಗಿದು ಕೇಳಿಕೊಳ್ಳುತ್ತೇನೆ. ದಯವಿಟ್ಟು ದುಡುಕಬೇಡಿ, ಕಲ್ಯಾಣವನ್ನು ಅನಾಥವನ್ನಾಗಿ ಮಾಡಬೇಡಿ !

**ಬಸವ** : ಇಲ್ಲ ಪ್ರಭು, ನಾನು ಎಲ್ಲಿದ್ದರೂ ನಿಮ್ಮವನು ! ಈ ಮುಳ್ಳಿನ ಹಾಸಿಗೆ ನನ್ನಂಥವನಿಗಲ್ಲ..... !

**ಬಿಜ್ಜಳ** : ಬಸವರಸ, ಈ ನಿಮ್ಮ ನಿರ್ಧಾರದಿಂದ ಕೇವಲ ಕಲ್ಯಾಣಕ್ಕಲ್ಲ, ಮನುಕುಲದ ಅಸ್ತಿತ್ವಕ್ಕೇ ಅಪಾಯವಿದೆ !

**ಬಸವ** : ಈ ಬಸವ ಅಷ್ಟು ಪ್ರಭಾವಶಾಲಿ ಅಲ್ಲಪ್ರಭು ! ಚಿಗುರಿಗಾಸ್ಪದ ಕೊಟ್ಟು ಹಣ್ಣೆಲೆ ಉದುರುವಂತೆ ಪದ್ಧತಿ ಎಷ್ಟೇ ಶ್ರೇಷ್ಠವಿದ್ದರೂ ಕಾಲ ಬಂದಾಗ ಅದು ಅಳಿಯಲೇಬೇಕು. ತಮ್ಮ ಪ್ರಭುತ್ವ ಅಮರವಾಗಲಿ, ಮನುಕುಲದ ಕಲ್ಯಾಣವಾಗಲಿ. ಕಲ್ಯಾಣ ಅದಕ್ಕೆ ಆದರ್ಶವೆನಿಸಲಿ. ಅದೋ ನನ್ನ ಸಂಗಮನಾಥ ಕರೆಯುತ್ತಿದ್ದಾನೆ !... ಬರುವೆ... ಬರುವೆ... ಸರ್ವರಿಗೂ ಶರಣು... ಶರಣು... ಶರಣಾರ್ಥಿ !

– ನಿಧಾನವಾಗಿ ನಡೆಯುತ್ತಾ ನಿರ್ಗಮಿಸುವನು –

– ಬಿಜ್ಜಳನು ಸಿಂಹಾಸನದಿಂದಿಳಿದು ನಿಂತು ಕೈ ಚಾಚಿ ಬೇಡುವ ಭಂಗಿಯಲ್ಲಿ –

**ಬಿಜ್ಜಳ** : ಬಸವರಾಜಾ... ಬಸವರಾಜಾ... ಬಸವಪ್ರಭೋ...

–"ಅಣ್ಣಾ" ಎಂಬ ಆಕ್ರಂದನ ಆಸ್ಥಾನದಲ್ಲಿ ಮತ್ತು ಹೊರಗಡೆ ಕೇಳಿ ಬರುವುದು–

**ಮಂಚಣ್ಣ** : ಮಹಾಪ್ರಭುಗಳು, ತೀರ್ಪನ್ನು ನಿರಾತಂಕವಾಗಿ ಘೋಷಿಸೋಣವಾಗಲಿ !

**ಬಿಜ್ಜಳ** : ಮಹಾಜನಂಗಳೇ,

ಕಲ್ಯಾಣರಾಜ್ಯದಲ್ಲಿ ಶಾಂತಿಸ್ಥಾಪಿಸುವ ಸಲುವಾಗಿ, ವರ್ಣಸಾಂಕರ್ಯ ನಡೆಸಿ,
ಪ್ರಜಾಕ್ಷೋಭೆಗೆ ಕಾರಣರಾಗುವವರಿಗೆ ಎಚ್ಚರಿಕೆ ನೀಡುವ ಸಲುವಾಗಿ ಪ್ರಭು
ಪೀಠವು ಹರಳಯ್ಯ ಮತ್ತು ಮಧುವರಸರಿಗೆ ಮರಣ ದಂಡನೆ ವಿಧಿಸಿದೆ.

–ಭಯಂಕರ ಸ್ಫೋಟ ! 'ಅಣ್ಣಾ' ಎಂಬ ಆಕ್ರಂದನ–

## ದೃಶ್ಯ : ೧೦ ಅಂತಃಪುರ

(ರಂಗದ ಪೂರಾ ಹಿಂಭಾಗದಲ್ಲಿ ಅಡ್ಡಡ್ಡಲಾಗಿ ಎರಡು ಮಂಚಗಳು ಅವುಗಳ ಮೇಲೆ ಬಿಜ್ಜಳ ಮತ್ತು ಶಾಂತಮತಿ ಮಲಗಿ ನಿದ್ದೆಗೈಯುತ್ತಿರುತ್ತಾರೆ. ಅವರ ಎರಡೂ ಮಂಚಗಳ ತುದಿಗಳು ಕೂಡುವೆಡೆಯಲ್ಲಿ ಒಂದು ತೊಟ್ಟಿಲು ಆ ತೊಟ್ಟಿಲಲ್ಲಿ

ಪಟ್ಟಿರಿಸಿದ ಪುಟ್ಟ ಶಿಶು. ಅಂತಃಪುರವನ್ನು ನಸು ಬೆಳಕು ಬೆಳಗುತ್ತಿರುತ್ತದೆ. ಆ ಅವೇಳೆಯಲ್ಲಿ ಇರಿದ ಖಡ್ಗದೊಡನೆ ಮಂಚಣ್ಣನ ಪ್ರವೇಶ)

**ಮಂಚಣ್ಣ** : ನಿದ್ರಿಸು ಬಿಜ್ಜಳಾ, ನಿದ್ರಿಸೆಲೆ ದ್ರೋಹಿ ! ನೀನಿಂದು ಮಂಚಣ್ಣನೀ ಖಡ್ಗಕ್ಕೆ ಅಚ್ಚು ಮೆಚ್ಚಿನ ಆಹುತಿ ! ಪಾಪಿ, ಚಾಲುಕ್ಯ ಚಕ್ರೇಶ್ವರನ ಕೊಲೆಗೈದು ನಿನ್ನನ್ನು ಸಿಂಹಾಸನಕ್ಕೆ ತರುವವರೆಗೆ ಮಾತ್ರ ನಾನು ಬೇಕಿತ್ತು. ಅನಂತರ ಕೂಡಲದ ಆಶ್ರಮದ ಆ ಬಡ ಪೋರ ಬಸವ ಬೇಕಾಯ್ತೆ ? ಏನಾಯಿತು ನನ್ನ ನಾಲ್ಕು ದಶಕಗಳ ನಿರಂತರ ಸೇವೆ ? ನನ್ನಂತಹ ಹಿರಿಯ ಅನುಭವಿಯ ತಲೆಯ ಮೇಲೆ ಆ ಬಡ ಬಾಲಕನನ್ನು ತಂದು ಕೂರಿಸಿದ್ದಕ್ಕೆ ಇದೇ ತಕ್ಕ ಪ್ರಾಯಶ್ಚಿತ್ತ. ಅನುಭವಿಸಲು ಸಿದ್ಧನಾಗು !

– ಖಡ್ಗವನ್ನೆತ್ತಿಕೊಂಡು ಬಿಜ್ಜಳನತ್ತ ಸಾಗುವನು. ಹಾದಿಯಲ್ಲಿ
ಹೂಕುಂಡ ಎಡವಿ ಶಬ್ದವಾಗುವುದು. ಆ ಶಬ್ದಕ್ಕೆ ಬಿಜ್ಜಳ ಮತ್ತು
ಶಾಂತಮತಿಯರು ಎಚ್ಚೆತ್ತು ತತ್‌ಕ್ಷಣವೇ ಗೋಡೆಗೆ
ಅಡ್ಡಡ್ಡಲಾಗಿರಿಸಿದ್ದ ಖಡ್ಗಗಳನ್ನು ಸೆಳೆದು ನಿಲ್ಲುವರು –

**ಬಿಜ್ಜಳ** : ಯಾರು ? ಯಾರು ?

**ಮಂಚಣ್ಣ** : ನಿನ್ನ ಭಾಗದ ಮೃತ್ಯು !

**ಬಿಜ್ಜಳ** : ಓಹ್ ! ಮಂಚಣ್ಣ ಮಂತ್ರಿಗಳು ! !

**ಶಾಂತ** : ಮಂತ್ರಿಗಳೆ, ನೀವು... ರಾಜದ್ರೋಹಕ್ಕೆ ಮನಮಾಡಿದಿರಾ ?

**ಮಂಚಣ್ಣ** : ಮಾಡಬಾರದೇಕೆ ? ರಾಜ್ಯಲಕ್ಷ್ಮಿ ಯಾರನ್ನೂ ಬಿಟ್ಟವಳಲ್ಲ ಮಹಾರಾಣಿ ? ಹೀಗಿರುವಲ್ಲಿ ನಾನೇಕೆ ಮೋಹಿಸಬಾರದು ? ಬಸವ ಬಿಜ್ಜಳರನ್ನು ಬಲಿ ತೆಗೆದುಕೊಳ್ಳದೆ ನನಗೆ ಸಮಾಧಾನವಿಲ್ಲ. ನನ್ನ ಸ್ಥಾನ ಭದ್ರವೂ ಅಲ್ಲ. ನಿನ್ನ ಗಂಡ ಹೇಗೆ ಕಲಚೂರ್ಯ ವಂಶವನ್ನು ಸಿಂಹಾಸನಕ್ಕೆ ತಂದನೋ ಹಾಗೆ ನಾನು ನನ್ನ ಕೊಂಡೆಯ ವಂಶವನ್ನು ಅರಸು ಗದ್ದುಗೆಗೇರಿಸಲೇಬೇಕು. ಅದಕ್ಕಾಗಿ ಈ ನನ್ನ ಖಡ್ಗಕ್ಕೆ ನಿನ್ನ ಬಿಜ್ಜಳ ಮೊದಲ ತುತ್ತು !

**ಬಿಜ್ಜಳ** : ಪಾಪಿ, ಅದು ಸಾಧ್ಯವಿಲ್ಲ. ಈ ಬಿಜ್ಜಳನ ಪೌರುಷ ನಿನ್ನದಕ್ಕಿಂತ ನೂರುಪಟ್ಟು ಮಿಗಿಲು ಎಂಬುದನ್ನು ಮರೆಯಬೇಡ ! ಇದೋ....

– ರಾಜ ರಾಣಿಯರಿಬ್ಬರೂ ಮಂಚಣ್ಣನ ಖಡ್ಗಕ್ಕೆ ತಮ್ಮ ಖಡ್ಗಗಳಿಂದ
ಬೀಸಿ ಹೊಡೆಯುವರು ಮಂಚಣ್ಣನ ಕತ್ತಿ ಕೈತಪ್ಪಿ ಕೆಳಗೆ ಬೀಳುವುದು.
ನಿಸ್ಸಹಾಯಕನಂತೆ ನಟಿಸಿದ ಮಂಚಣ್ಣ ಒಂದೆ ನೆಗೆತಕ್ಕೆ ತೊಟ್ಟಿಲ ಬಳಿ
ಹಾರಿ, ಮಲಗಿದ್ದ ಮಗುವಿನ ತಲೆ ಮತ್ತು ಕಾಲುಗಳನ್ನು ಅಡ್ಡಲಾಗಿ
ಹಿಡಿದೆತ್ತಿ, ವಿಕಾರ ನಗೆ ನಗುತ್ತಾ –

**ಮಂಚಣ್ಣ** : ಝಳುಪಿಸಿ ನಿಮ್ಮ ಖಡ್ಗಗಳನ್ನು ; ಬೀಸಿ ಪ್ರಯೋಗಿಸಿ ನಿಮ್ಮ ಕಠಾರಿಗಳನ್ನು ! ಬಿಜ್ಜಳಾ, ಶಾಂತಮತಿ, ಇದೋ ನಿಮ್ಮ ಕರುಳ ಕುಡಿಯೇ ನನ್ನ ರಕ್ಷಣೆಯ ಕೈ ಗುರಾಣಿ ! ನಿಮ್ಮ ಖಡ್ಗಾಘಾತಕ್ಕೆ ಈ ಶಿಶುವೆ ಬಲಿ ! ಹಹ್ಹಹ್ಹಹ್ಹಾ ! !

– ರಾಜ ರಾಣಿಯರು ಸ್ತಬ್ಧರಾಗಿ ನಿಲ್ಲುತ್ತಾರೆ. ಮಗು ಹೆದರಿ
ಚೀರುತ್ತಿರುತ್ತದೆ. ಕರುಳು ಹಿಂಡಿದಂತಾಗಿ ಶಾಂತಮತಿ –

**ಶಾಂತ** : ಅಣ್ಣಾ, ನಾನು ನಿನ್ನ ತಂಗಿಯ ಸಮಾನ. ನನ್ನನ್ನು ಬೇಕಾದರೆ ಕೊಲ್ಲು ; ಸಾಯಲು ಸಿದ್ಧಳಿದ್ದೇನೆ. ಆದರೆ ನನ್ನ ಕಂದಮ್ಮನನ್ನು ಉಳಿಸು ಸೆರಗೊಡ್ಡಿ ಬೇಡುತ್ತೇನೆ ಅದನ್ನು ನೋಯಿಸಬೇಡ... ನೋಯಿಸಬೇಡ !

**ಬಿಜ್ಜಳ** : ಪಾಪೀ,....

– ಮುಂದೆ ಒಂದು ಹೆಜ್ಜೆ ಇಟ್ಟ ಕೂಡಲೇ ಮರೆಯಲ್ಲಿ ಅಡಗಿದ್ದ
ಜಗದೇಕಮಲ್ಲ ಮತ್ತು ಬೊಮ್ಮರಸರು ರಾಜನ ತೋಳುಗಳನ್ನು
ಹಿಡಿದು, ಕಠಾರಿಯಿಂದ ಇರಿಯುವರು. –

**ಬಿಜ್ಜಳ** : ಶಾಂತೀ... ಜಾಗ್ರತಳಾಗು ! ಮೋಸ ! ಅಯ್ಯೋ ಕಡೆಗೂ ಅನ್ಯಾಯಕ್ಕೆ ಜಯವಾಯಿತೇ ! ನಮ್ಮ ಭಾಗ್ಯದ ಜ್ಯೋತಿ ಬಸವಣ್ಣನವರು ನಮ್ಮನ್ನು ಬಿಟ್ಟು ಹೋದಮೇಲೆ ನಮಗಿನ್ನೆಲ್ಲಿದೆ ಬೆಳಕು.. ! ಶಾಂತೀ...ಶಾಂತೀ....ಶಾಂ...

– ಮಡಿಯುವನು –

– ಮಂಚಣ್ಣ ತನ್ನ ಕೈಯಲ್ಲಿದ್ದ ಮಗುವನ್ನು ಶಾಂತಿಮತಿಯ ಕಡೆಗೆ
ಎಸೆಯುವನು ಶಾಂತ ಖಡ್ಗವನ್ನೆಸೆದು ಮಗುವನ್ನು

ಆಂತು ಎದೆಗಪ್ಪಿಕೊಳ್ಳುವಳು –

**ಮಂಚಣ್ಣ** : ಶಾಂತಮತಿ, ನೀನು ನಿನ್ನ ಮಗುವಿನ ಜೊತೆಯಲ್ಲಿ ಗೃಹಬಂಧಿ ! ಜಗದೇಕಮಲ್ಲ, ಬೊಮ್ಮರಸ, ಇದ್ದರೆ ನಿಮ್ಮಂತಹ ನಿಷ್ಠಾವಂತ ಸೇವಕರಿರಬೇಕು ! ಭೇಷ್, ಸಕಾಲದಲ್ಲಿ ಸೂಕ್ತ ಕೆಲಸ ಮಾಡಿದಿರಿ. ಇದು ನಮ್ಮ ಸಂಕಲ್ಪದಲ್ಲಿ ಅರ್ಧ ಮಾತ್ರ. ಉಳಿದರ್ಧ ಬಸವನ ಪರಂಧಾಮ ! ನಡೆಯಿರಿ, ಕಾರ್ಯ ತ್ವರೆಯಿಂದ ಸಾಗಲಿ !

– ನಿರ್ಗಮಿಸುವನು –

– ಮಗುವನ್ನು ಎದೆಗಪ್ಪಿಕೊಂಡ ಶಾಂತಮತಿ ದಿಗ್ಮೂಢಳಾಗಿ ನಿಲ್ಲುವಳು.

ಚಣಕಾಲ ರಂಗದಲ್ಲಿ ಮೌನ ! ಅನಂತರ –

**ಶಾಂತ** : ಜಗದೇಕಮಲ್ಲ, ಬೊಮ್ಮರಸ ನೀವೇ ಬೇಕಿತ್ತೆ ಈ ಪುಣ್ಯ ಕಾರ್ಯಕ್ಕೆ ! ನಿಮಗೊಂದು ಬದುಕುಕೊಟ್ಟವರು ಬಿಜ್ಜಳ ಮಹಾಪ್ರಭುಗಳು. ನಾನು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂ ಮಿಗಿಲಾಗಿ ನಿಮ್ಮನ್ನು ಬೆಳಸಿದೆ. ನಾನಿಟ್ಟ ಬಟ್ಟಲ ಹಾಲು ಇಷ್ಟು ಬೇಗ ವಿಷವಾಗಿ ಪರಿಣಮಿಸುತ್ತದೆಂದು ನಾನು ಭಾವಿಸಿರಲಿಲ್ಲ... ಸಂತೋಷಪಡಿ ನನ್ನ ಮುತ್ತೈದೆತನಕ್ಕೆ ಇತಿಶ್ರೀ ಹಾಡಿದ ನೀವು ಆನಂದದಿಂದ ನಲಿಯಿರಿ !

– ತನ್ನೆರಡೂ ಕೈಗಳನ್ನು ಡಿಕ್ಕಿ ಹೊಡೆಯುವಳು ಕೈ ಬಳೆಗಳು

ಒಡೆದು ಪಳಪಳನೆ ಬೀಳುವುವು –

ಇದೋ ತಾಯಿ ರಂಡೆಯಾದಳೆಂದು ಹಿರಿಹಿರಿಹಿಗ್ಗಿ ಮೆರೆಯಿರಿ !

– ಮುಡಿಯನ್ನು ಬಿಚ್ಚಿ ತಲೆಯ ಹೂಗಳನ್ನು ಹರಿಹರಿದು ಚೆಲ್ಲಾಡುವಳು –

ನನ್ನ ಕುಂಕುಮ ಸೌಭಾಗ್ಯವನ್ನು ನೆಕ್ಕಿ ನೊಣೆದ ನೀವು, ತಂದೆಗೆ ಸಮಾನರಾದ ಮಹಾರಾಜರ ರಕ್ತದಲ್ಲಿ ಓಕುಳಿಯಾಡಿ ಆನಂದ ನರ್ತನಮಾಡಿ !

– ಹಣೆಯ ಕುಂಕುಮವನ್ನು ಕೈಯಿಂದ ತೊಡೆಯುವಳು –

ಇಷ್ಟಕ್ಕೂ ತೃಪ್ತರಾಗದಿದ್ದರೆ ಇದೋ ನಾನು ಮತ್ತು ಕರುಳಕುಡಿ ಸಿದ್ಧರಿದ್ದೇವೆ. ಮುಗಿಸಿಬಿಡಿ, ನನ್ನ ಸ್ವಾಮಿಯಿದ್ದೆಡೆಗೆ ನಮ್ಮನ್ನು ಕಳಿಸಿಬಿಡಿ.. ! ಕೃಪೆಮಾಡಿ, ನಿಮಗೆ ಕೈ ಜೋಡಿಸಿ ಬೇಡುತ್ತೇನೆ... ಕೃಪೆಮಾಡಿ !

**ಜಗ**
**ಬೊಮ್ಮ** } : (ವಿಷಾದ ದುಃಖ ಅಭಿವ್ಯಕ್ತಿಸುತ್ತಾ) ತಾಯೀ......

**ಶಾಂತ** : ತಾಯೀ ಎಂದು ಸಂಬೋಧಿಸಬೇಡಿ. ಅದಕ್ಕೆ ನೀವು ಅರ್ಹರಲ್ಲ. ನಾನು ಪಾತ್ರಳೂ ಅಲ್ಲ ! ನಿಮಗೆ ರಕ್ತದಾಹ ! ಕುಡಿದು ತಣಿಯಿರಿ. ತಂದೆಯನ್ನೇ ಕೊಂದು ತಿಂದ ನಿಮಗೆ ಈ ಜಗತ್ತಿನಲ್ಲಿ ಯಾವ ಕಾರ್ಯವೂ ಅಸಾಧ್ಯವೆನಿಸದು. ಹೂಂ... ನಮ್ಮನ್ನು ಮುಗಿಸಿಬಿಡಿ... ಮುಗಿಸಿ....

**ಜಗ**
**ಬೊಮ್ಮ** } : ತಾಯೀ, ನಾವು ಮೋಸಹೋದೆವು ಮಂಚಣ್ಣ ಮಂತ್ರಿಗಳು ಏನೇನೋ ಹೇಳಿ ನಮ್ಮ ತಲೆ ಕೆಡಿಸಿದರು. ಸಲ್ಲದ ಆಸೆ ತೋರಿಸಿ, ಈ ಹೇಯ ಕೃತ್ಯಕ್ಕೆ ಕೈ ಹಾಕಿಸಿದರು. ಇನ್ನು ಆ ಪಾಪಿಯನ್ನು ಉಳಿಸಲಾರೆವು. ಸೂರ್ಯೋದಯಕ್ಕೆ ಮುನ್ನವೇ ನಿಮಗೆ ಹೊಸ ಸುದ್ದಿ ಮುಟ್ಟುತ್ತದೆ ತಾಯಿ !

– ಓಡುವರು –

**ಶಾಂತ** : ಅಲ್ಲಿನವರೆಗೆ ನಾನು ಬದುಕಿದ್ದರೆ ತಾನೆ ! ಹೋಗಿ ನೀವು ಬದುಕಿನೆಡೆಗೆ ನಾವು ಸತ್ತವರ ಕೂಟಕ್ಕೆ !

– ರಾಜನ ಹೆಣದ ಮೇಲೆ ತನ್ನ ಮಗುವಿನೊಡನೆ ಬೀಳುವಳು –

**– ತೆರೆ –**

**ದೃಶ್ಯ : ೧೧** **ಅರಮನೆಯ ಪ್ರಾಂಗಣ**

(ರಂಗದ ಮಧ್ಯಭಾಗದಲ್ಲಿ ಎತ್ತರವಾದ ಸ್ಥಳದಲ್ಲಿ ರತ್ನಸಿಂಹಾಸನವಿದೆ. ಮಬ್ಬು ಬೆಳಕು ರಂಗ ನೀರವ, ನಿಶ್ಶಬ್ದ, ನಿರ್ಜನಕೂಡ ಅಲ್ಲಿಗೆ ಮಂಚಣ್ಣನೊಬ್ಬನೇ ಬಿರುಸಿನಿಂದ ಆಗಮಿಸಿ)

**ಮಂಚಣ್ಣ** : ಭಲೇ ! ಭಲೇ ! ನನ್ನ ಭಾಗ್ಯದ ಶಿಲ್ಪಿ ! ಎಂತಹ ಕಲಾವೈಶಿಷ್ಟ್ಯದಿಂದ ಸೃಷ್ಟಿಸಿರುವೆ ನನ್ನ ಬಾಳಿನ ಭವ್ಯ ಭವಿಷ್ಯವನ್ನು ! ಅಂದು ಸಾಮಾನ್ಯ ಸಚಿವ, ಇಂದು ಕಲ್ಯಾಣ ರಾಷ್ಟ್ರದ ಸಾರ್ವಭೌಮ ! ಹಹ್ಹಹ್ಹಹ್ಹಾ ! ಮಂಚಣ್ಣ ಇಂದು ಮಹಾರಾಜ ! ರಾಜಾಧಿರಾಜ ರಾಜ ಮಾರ್ತಾಂಡ !

ನನ್ನ ಹಾದಿಯ ಮುಳ್ಳಾಗಿದ್ದ ಬಸವನನ್ನು ಕೂಡಲಕ್ಕಟ್ಟಿದ್ದಾಯ್ತು, ಬಿಜ್ಜಳನನ್ನು ಕೈಲಾಸಕ್ಕೆ ಕಳುಹಿಸಿದ್ದೂ ಆಯ್ತು ! ನನ್ನ ಹಾದಿ ಈಗ ನಿಷ್ಕಂಟಕ ! ನೇರವಾಗಿ ಸಿಂಹಾಸನವನ್ನೇರಿ, ನಾನೇ ನನ್ನ ಕೈಯಾರ ಕಿರೀಟಧಾರಣ ಮಾಡಿಕೊಳ್ಳುತ್ತೇನೆ.

– ಸಿಂಹಾಸನದ ಬಳಿ ಸಾರುವನು ! ಅಷ್ಟರಲ್ಲಿ ಹಿಂಬದಿಯಲ್ಲಿ ಭಯಂಕರವಾದ ಶಬ್ದಸ್ಫೋಟ, ವಿಕಾರ ನಗೆ–

**ಧ್ವನಿ** : ಹಹ್ಹಹ್ಹಹ್ಹಾ ! ಮಂಚಣ್ಣ, ನೀನೇರಲಾರೆ ರತ್ನಸಿಂಹಾಸನವನ್ನು...

**ಮಂಚಣ್ಣ** : ಹ್ಞಾಂ... ಯಾರು ನೀನು ?

**ಧ್ವನಿ** : ನಾನು ಈ ರತ್ನಸಿಂಹಾಸನದ ಸಂರಕ್ಷಕ ಸಾಲಭಂಜಿಕೆ !

**ಮಂಚಣ್ಣ** : ಸಾಲಭಂಜಿಕೆಯೋ ಸಾವಿನಂಜಿಕೆಯೊ ಯಾರಾದರೇನು ? ಮಹಾಮೇಧಾವಿ ಮಂಚಣ್ಣನನ್ನು ತಡೆಯುವ ಸಾಮರ್ಥ್ಯ ಯಾರಿಗೂ ಇಲ್ಲ ! ನಾನಾರು ಗೊತ್ತಾ !

**ಧ್ವನಿ** : ಬೊಗಳು ವಂಚಕ !

**ಮಂಚಣ್ಣ** : ಚಾಲುಕ್ಯಾಧೀಶ ತೈಲನನ್ನು ಕೊಲೆಗೈದು ಮಂಗಳವೇಢೆಯಲ್ಲಿ ಮಾಂಡಲಿಕನಾಗಿದ್ದ ಹದಿನೆಂಟರ ಹರೆಯದ ಬಿಜ್ಜಳನನ್ನು ಕರೆ ತಂದು ಕಲ್ಯಾಣದ ಈ ರತ್ನಸಿಂಹಾಸನದ ಮೇಲೆ ಕೂರಿಸಿದವನು ಯಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು... ಮಹಾಮಂತ್ರಿ ಪದವಿಯ ಮೇಲಣ ಆಸೆಯಿಂದ ಬಲದೇವ ಮಹಾಮಂತ್ರಿಗೆ ವಿಷವಿಕ್ಕಿಕೊಂದವನಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು ! ...ಪ್ರಧಾನಿಪಟ್ಟ ಬಸವನ ವಶವಾದಾಗ, ಬಸವ ಧರ್ಮದ ಹೆಸರಿನಲ್ಲಿ ಶರಣರ ಸೇನೆ ಕಟ್ಟುತ್ತಿದ್ದಾನೆ. ಮುಂದೆ ಈ ರತ್ನಸಿಂಹಾಸನಾಧಿಪತಿಯಾಗುವ ಹುನ್ನಾರ ಉಳ್ಳವನಾಗಿದ್ದಾನೆ ಎಂದು ಸುದ್ದಿ ಮಾಡಿದವನು ಯಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು ! ... ಹೊಲೆಯ ಹಾರುವರಾದ ಹರಳಯ್ಯ ಮಧುವರಸರ ಮಕ್ಕಳ ವಿವಾಹ ಪ್ರಜಾಕ್ಷೋಭೆಗೆ ಕಾರಣವಾಯಿತೆಂದು ಪಿತೂರಿ ನಡೆಸಿ ಜನತೆಯನ್ನು ಬಸವನ ವಿರುದ್ಧ ಎತ್ತಿ ಕಟ್ಟಿದವನು ಯಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು !.... ಹರಳಯ್ಯ ಮತ್ತು ಮಧುವರಸರ ಮರಣದಂಡನೆಗೆ ಎಲ್ಲೆಡೆಗಳಿಂದಲೂ ರಾಜನ ಮೇಲೆ ಒತ್ತಡ ತಂದು ಅವರಿಬ್ಬರನ್ನು ಗಲ್ಲಿಗೇರಿಸುವಂತೆ ಆಜ್ಞೆ ಮಾಡಿದ, ಅದನ್ನು ಕಾರ್ಯರೂಪಕ್ಕೆ ತಂದವರು ಯಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು !.... ಅರಮನೆಯ ಸೇವಕರಾದ ಜಗದೇಕಮಲ್ಲ ಮತ್ತು ಬೊಮ್ಮರಸರಿಗೆ ಸಚಿವ ಸ್ಥಾನದ ಆಮಿಷವನ್ನೊಡ್ಡಿ ಅವರಿಂದ ರಾಜಾ ಬಿಜ್ಜಳನನ್ನು ಕೊಲೆ ಮಾಡಿಸಿದವರು ಯಾರು ?

**ಧ್ವನಿ** : ಯಾರು ?

**ಮಂಚಣ್ಣ** : ನಾನು !.... ಇಷ್ಟೆಲ್ಲ ಚತುರತೆಯಿಂದ, ಕುಟಿಲ ಕುತಂತ್ರಗಳಿಂದ ಹಂತಹಂತವಾಗಿ ಮೇಲೇರಿ, ಇಂದು ಕಲ್ಯಾಣ ರಾಷ್ಟ್ರದ ಅನಭಿಷಿಕ್ತ ಚಕ್ರವರ್ತಿಯಾಗಿರುವ ನನಗೆ, ಥ್ಥೇ ! ಅನಾಮಧೇಯನಾದ ನಿನ್ನಿಂದ ಅಡಚಣೆಯೇ ! ಓ ಸಾಲಭಂಜಿಕೆ ನಿನ್ನ ತಲೆ ಮೆಟ್ಟಿ ನಿಲ್ಲುತ್ತೇನೆ ! ನೋಡುತ್ತಿರು ! ಜೈ.... !

– ಹತ್ತ ಹೋಗುವನು ಸಿಂಹಾಸನದ ಹಿಂದೆ ಅಡಗಿದ್ದ ಜಗದೇಕಮಲ್ಲ
ಮತ್ತು ಬೊಮ್ಮರಸರರು ಹೊರಗೆ ಬಂದು ಮಂಚಣ್ಣನ ಎರಡೂ
ತೋಳುಗಳನ್ನು ಬಿಗಿ ಹಿಡಿದು, ಕಠಾರಿಗಳಿಂದ ಇರಿಯುವರು –

**ಜಗ**
**ಬೊಮ್ಮ** } : ಸಾಯಿ ಪಾಪಿ !

**ಮಂಚಣ್ಣ** : ಜಗದೇಕಮಲ್ಲ ! ಬೊಮ್ಮರಸ... ಅಯ್ಯೋ ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ! ಕಲ್ಯಾಣದ ವಿನಾಶಕ್ಕೆ ನಾನು ಕಾರಣನಾದೆನೇ.. ಅಯ್ಯೋ !.. ಅಯ್ಯೋ ! !

– ಸಾಯುವನು –

**ದೃಶ್ಯ : ೧೨** **ಕೂಡಲ ಸಂಗಮಕ್ಷೇತ್ರ**

(ಬಸವಣ್ಣ ಒಬ್ಬನೇ ಪ್ರೇಕ್ಷಕರ ಕಡೆಗೆ ಬೆನ್ನುಮಾಡಿ, ರಂಗದ ಹಿಂಬದಿಯೆಡೆಗೆ ನಿಧಾನವಾಗಿ ನಿಂತು ನಿಂತು ನಡೆಯುತ್ತಾನೆ. ಆಗಾಗ ಹಿಂತಿರುಗಿ ಕಲ್ಯಾಣದತ್ತ ನೋಡುತ್ತಾನೆ. ಮರುಗುತ್ತಾನೆ. ಅವನ ಬೆನ್ನಿನ ಮೇಲಷ್ಟೇ Spot light ಬೆಳಗುತ್ತಿರುತ್ತದೆ. ಕತ್ತಲ ರಂಗದ ನೆತ್ತಿಯಲ್ಲಿ ದೂರದಲ್ಲಿ ಜ್ಯೋತಿಯೊಂದು ಮಿನುಗುತ್ತಿರುತ್ತದೆ. ಆ ದಿಸೆಗೆ ಕೈಯೆತ್ತಿ, ಅದನ್ನೇ ದಿಟ್ಟಿಸುತ್ತಾ ಬಸವಣ್ಣ ಸಾಗುತ್ತಾನೆ.)

– ಹಿನ್ನೆಲೆಯಲ್ಲಿ ತಾರಕದಲ್ಲಿ ಹಾಡು– ನರ್ತಕಿಯರು
ಹಾಡಿಗಭಿನಯ ನೀಡುತ್ತಾರೆ –

**ಹಾಡು** : ಸಂಗಾ...................
ಶಿವಸಂಗಾ..... ಕೂಡಲಸಂಗಾ !
ಸಾಕು ಮಾಡೋ ತಂದೆ
ಲೋಕದಾಟವ ನಿಂದೆ !
ನಾನು ಬೆದೆ ಬೆದೆ ಬೆಂದೆ
ಸಾಕೋ ತಂದೆ ॥
ಸತ್ಯವಂತರಿಗೆಂದು
ಕಾಲಬಾರದೊ ಸಂಗಾ
ಅನ್ಯಾಯವಾಳುತಿದೆ
ಭೂಮಿಯನ್ನು ॥
ಸತ್ಯಕ್ಕೆ ಬೆಲೆಯಿಲ್ಲ
ನ್ಯಾಯಕ್ಕೆ ನೆಲೆಯಿಲ್ಲ
ಧರ್ಮ ವನವಾಸಕ್ಕೆ
ಹೋಯ್ತೊ ತಂದೇ ॥

– ನರ್ತಕಿಯರು ಒಬ್ಬೊಬ್ಬರಾಗಿ ಒಂದೊಂದು ನುಡಿ ನುಡಿವರು –

೧. ಮನಮನವ ಬೆಳಗಿದಾ ಬೆಳಕು ಬಸವಣ್ಣ !
೨. ಜಗದ ಜಲಗಾರನವ ಕೊಳೆ ತೊಳೆದ ತೀರ್ಥ !
೩. ಮಾನವನ ಹೃದಯದಲಿ ಮಹದೇವನನು ಕಂಡು ಇತ್ತವನು ಈ ನೆಲದ ಬದುಕಿಗರ್ಥ !
೪. ವಾತ್ಸಲ್ಯ ವಕ್ಷದಲಿ ದೀನದಲಿತರ ತಬ್ಬಿ
ಅವರೆದೆಯ ಬದುವಿನಲಿ ಧೈರ್ಯ ತುಂಬಿದ ಬಂಧು !
೫. ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ
ದಯವೆ ಧರ್ಮದ ಮೂಲವೆಂದಮೃತ ಸಿಂಧು !
೬. ಅವನೆ ಆ ಬಸವನೆ ಆ ವಿಶ್ವಮಾನವನೆ
ಪರರ ಏಳಿಗೆಗಾಗಿ ಕರ್ಪೂರವಾದವನು !
೭. ಕಾಯಕವ ಕೈಗಿತ್ತು ಶ್ರೀಗಂಧವಾದವನು !
೮. ಹೆಣ್ಣು ಬಾಳಿನ ಕಣ್ಣು ಎಂಬ ಮಾತೃಪ್ರೇಮಿ !
೧. ಅವನೆ ಅಂತ್ಯೋದಯದ ಮೊದಲ ಹರಿಕಾರ !

ತುಚ್ಛ ಅಸ್ಪೃಶ್ಯತೆಯ ತುಳಿದ ರಣಧೀರ !

೨. ಅವನೆ ಮೌಢ್ಯಕೆ ಕೊಡಲಿಪೆಟ್ಟು ಕೊಟ್ಟಾತ !

ಅವನೆ ಸತ್ಯ ಅಹಿಂಸೆ ಬಿತ್ತಿ ಬೆಳೆದಾತ !

೩. ಅವನೆ ಮಾನವ ಪ್ರೇಮಿ ವಿಶ್ವಾತ್ಮ ಬಸವಣ್ಣ

**ಎಲ್ಲರೂ** : ಬಸವಣ್ಣ ಬಾಳಲಿ ! ಅವನೊಲವು ಬೆಳಗಲಿ

**ಹಾಡು, ನರ್ತನ :**

ಜಯವಾಗಲಿ ಜಯವಾಗಲಿ ಬಸವಣ್ಣನ ವಾಣಿಗೆ
ಜಯವಾಗಲಿ ಜಯವಾಗಲಿ ಬಸವನ ನುಡಿಜೇನಿಗೆ॥

ಕಾಯಕಕ್ಕೆ ಕಳಶವಿತ್ತು
ದಾಸೋಹದ ಅರ್ಥ ತಿಳುಹಿ
ದುಡಿಮೆಯೇ ದೇವರೆಂದ ಬಸವಣ್ಣನ ವಾಣಿಗೆ ॥ ೧ ॥

ಹೆಣ್ಣು ಕುಲಕೆ ಹೆಮ್ಮೆ ತಂದು
ಹೊನ್ನಿನಂಥ ಬಾಳುಕೊಟ್ಟು
ಬಾಳಿಗೊಂದು ಬೆಳಕನಿತ್ತ ಬಸವಣ್ಣನ ವಾಣಿಗೆ ॥ ೨ ॥

ಮಾತು ಜ್ಯೋತಿರ್ಲಿಂಗವೆನಿಸಿ
ಜಾತಿ ಸೂತಕವನು ನೀಗಿ
ಮನುಜ ಮತ ವಿಶ್ವಪಥ ಎಂದಣ್ಣನ ವಾಣಿಗೆ ॥ ೩ ॥

॥ ಓಂ ತತ್ ಸತ್ ॥

# ತಥಾಗತ : ಬುದ್ಧದೇವ

**ಪಾತ್ರಗಳು**

| | |
|---|---|
| ಸಿದ್ಧಾರ್ಥ ಬುದ್ಧ | ಮುನಿಗಳು |
| ಯಶೋಧರೆ | ಚೆನ್ನಜ್ಜ |
| ಆನಂದ | ತೇಜಸ್ |
| ಶುಭಮತಿ | ಓಜಸ್ |
| ದೇವದತ್ತ | ಸವರ್ಣೀಯರು |
| ಸುಜಾತ | ಚುಂದ |
| ಕಿಸಾಗೋತಮಿ | ಚಂದ |
| ಅಜಾತಶತ್ರು | ಕುಜಾತಪಾಲಿ |
| ಅಮರಪಾಲಿ | ಉಪಗುಪ್ತ |
| ವಾಸಂತಿ | ಸಾಗರಮಿತ್ರ |
| ಬಿಂಬಸಾರ | ಪ್ರತೀಹಾರಿ |
| ಅಂಗುಲೀಮಾಲ | ಪ್ರಹರಿ |
| ಅನಾಮಿಕೆ | ನರ್ತಕಿಯರು |

**ದೃಶ್ಯ : ೧** **ಕಪಿಲವಸ್ತುವಿನ ಅರಮನೆ**

(ಕಪಿಲವಸ್ತುವಿನ ಅರಮನೆಯಲ್ಲಿ ಸಿದ್ಧಾರ್ಥನ ಯುವರಾಜ ಮಹೋತ್ಸವದ
ವಿಶೇಷ ಸಂಭ್ರಮ. ವೈಭವೋಪೇತ ಅಲಂಕಾರ, ನರ್ತನ ಇತ್ಯಾದಿಗಳ
ವೈಖರಿ : ಯುವರಾಜ ಪೀಠದ ಮೇಲೆ ಸಿದ್ಧಾರ್ಥ ಮತ್ತು ಯಶೋಧರೆ.
ತೆರೆ ಸರಿದಾಗ)

**ನಾಲ್ವರು ನರ್ತಕಿಯರು:**

ಶಾಕ್ಯಕುಲ ಸಂಭವನೆ ಸಿದ್ಧಾರ್ಥನೆ
ಕಪಿಲವಸ್ತುವಿನ ಯುವರಾಜನೆ ॥
ಶುದ್ಧೋಧನ ಸುತನೆ ಸರ್ವಾರ್ಥ ಸಿದ್ಧಿಯೆ
ಮಾಯಾದೇವಿಯ ಮುದ್ದಿನ ಮಗನೇ
ಗೋತಮಿಯ ದತ್ತಕನೆ ಓ ಗೌತಮಾ
ಸಾಕು ತಾಯಿಯ ಮಡಿಲ ಶ್ರೀರತ್ನವೇ ॥ ೧ ॥
ಸುಪ್ರಬುದ್ಧನ ಪುತ್ರಿ ಸುಪ್ರಸಿದ್ಧಳೆ ಆದ
ಆ ಯಶೋಧರೆಗೊಲಿದ ಮನ್ಮಥನೇ
ಈ ಧರೆಯ ಪೊರೆವಂಥ ಧೀಮಂತನೇ
ಜನಮನವ ಗೆಲಿವಂಥ ಮನುಶ್ರೇಷ್ಠನೇ ॥ ೨ ॥
ಸಿತಮುನಿ ಶಿಷ್ಯನೆ ಶತ ಸಾಹಿತ್ಯನೆ
ಮಂತ್ರಾಕ್ಷತೆಯಿಂ ಪ್ರೋಕ್ಷಿತನಾದನೆ ॥

–ನಡುವೆ ಮಂತ್ರಘೋಷ ಮೊಳಗುತ್ತದೆ
'ರಾಜಾಧಿ ರಾಜಾಯ ......' ಇತ್ಯಾದಿ–

ಶುಭವಿರಲಿ ಗೆಲವಿರಲಿ ಮಂಗಳವು ಕೂಡಿರಲಿ
ಸೌಭಾಗ್ಯ ಸೌಶೀಲ್ಯ ಸೌಜನ್ಯ ಮೂರುತಿಯೆ ॥ ೩ ॥

(ಜಯಕಾರ)

ಶಾಕ್ಯಸಿಂಹ ಶುದ್ಧೋಧನನ ಶ್ರೇಷ್ಠಪುತ್ರ ಸಿದ್ಧಾರ್ಥನಿಗೆ
ಜಯವಾಗಲಿ ! ಜಯವಾಗಲಿ ! !
ಯುವರಾಜ್ಯಾಭಿಷಿಕ್ತನಾಗಿರುವ ಯುವರಾಜ ಗೌತಮನಿಗೆ !
ಜಯವಾಗಲಿ ! ಜಯವಾಗಲಿ ! !
ಯುವರಾಣಿ ಯಶೋಧರಾ ದೇವಿಗೆ !
ಜಯವಾಗಲಿ ! ಜಯವಾಗಲಿ ! !

**ಮುನಿಗಳು** : ವಿಜಯೀ ಭವ
ವಿಜಯೀಭವ
ಯುವರಾಜ ತೇಜನಿಗೆ
ವಿಜಯೀಭವ !

(ಸೇಸೆಗೈವರು) ಪುಷ್ಪವೃಷ್ಟಿ
(ಯೌವರಾಜ್ಯಾಭಿಷಿಕ್ತನಾದ ಸಿದ್ಧಾರ್ಥ ಮತ್ತು ಯುವರಾಣಿ ಯಶೋಧರೆ
ಇವರನ್ನು ಮಧ್ಯೆ ಕರೆತಂದು ನಿಲ್ಲಿಸುತ್ತಾರೆ. ನರ್ತಕಿಯರು
ಭಿನ್ನ ಭಿನ್ನ ಲಯಗಳಲ್ಲಿ ತಾಳ ಮೇಳಗಳೊಂದಿಗೆ
ನರ್ತಿಸುತ್ತಾರೆ. ಮೇಲಿಂದ ಪುಷ್ಪವೃಷ್ಟಿಯಾಗುತ್ತದೆ.)

**ನರ್ತಕಿಯರು :**

ಆನಂದ ಆನಂದ ಆನಂದವೆ

ಯುವರಾಜದಭಿಷೇಕದಾನಂದವೇ ॥
ಶುದ್ಧೋಧನ ಸುತಗೆ ಆನಂದವೆ
ಸಿದ್ಧಾರ್ಥ ಗೌತಮಗೆ ಆನಂದವೆ
ಈ ಯಶೋಧರೆಗಿಂದು ಆನಂದವೆ
ಕಪಿಲವಸ್ತುವಿಗೆಲ್ಲ ಆನಂದವೆ ॥

(ರಂಗದ ನಡುವೆ ನರ್ತನ ನಡೆಯುತ್ತಿರುವಾಗ
ಎಡಗಡೆಯಿಂದ ಶುಭಮತಿ ಬಲಗಡೆಯಿಂದ ಆನಂದ
ಲಾಸ್ಯಗತಿಯಲ್ಲಿ ಆಗಮಿಸುತ್ತಾರೆ)

**ಶುಭಮತಿ** : ಚಿಮು ಚಿಮು ಚಿಮು ಚಿಮು ಚಿಮು ಚಿಮು
ಚಿಮು ಚಿಮು ಚಿಮ್ಮುವ ಚೆಂಬೆಳಕೇ ॥

**ಆನಂದ** : ರುಮು ಝುಮು ರುಮು ಝುಮು ರುಮು ಝುಮು
ರುಮು ಝುಮು ತೊಳಗುವ ಹೊಂಬೆಳಕೇ ॥
ಬಾ ಬಾ ಬಾಂದಳ ಬೆಳಗುವ ಬೆಳಕೆ
ಭವ್ಯ ಮನೋಹರ ಮಂದಿರಕೆ
ಎದೆ ಕದ ತೆರೆದಿಹೆ ಬಾ ಬಾ ಮನಕೆ
ಮುದ ಮಂದಾರದ ಚೆದುರು ಚಂದ್ರಿಕೇ ॥

**ಇಬ್ಬರೂ** : ಚಿಮು ಚಿಮು ಚಿಮು ಚಿಮು ಅಹಹಾ !
ರುಮು ಝುಮು ರುಮು ಝುಮು ಓಹೊಹೋ ! !

**ಆನಂದ** : ಶುಭಮತಿ

**ಶುಭ** : ಆನಂದ್

**ಆನಂದ** : ಶುಭಮತೀ ಶೃಂಗಾರವತೀ
ಶುಭಮತೀ ಘನ ತೇಜೋವತೀ
ಶುಭಮತೀ ಮಧುರಾಸ್ಯವತೀ
ಆನಂದನ ಮನದಾರತೀ ॥

**ಶುಭಮತಿ** : ಆನಂದ ಬಾ ಮನದಾನಂದ ಬಾ
ಆನಂದ ಬಾ ಸುಖ ಸೌಗಂಧ ಬಾ
ಆನಂದ ಬಾ ಜಗದಾನಂದ ಬಾ
ಆನಂದ ಬಾ ಎದೆಗಾನಂದ ತಾ ॥

**ಆನಂದ** : ಬಾ ಚೆಲುವೆ ಸೌಭಾಗ್ಯದ ಸುಮವೆ
ಲಾಸ್ಯವನಾಡುವ ಬಾರೇ ॥
ತೋಳಲಿ ತೋಳನು ಬೆರೆಸಿ
ಬಾಳಲಿ ಸುಧೆಯನು ಹರಿಸಿ
ನಲಿಯುವ ಕುಣಿಯುವ ಬಾರೇ ॥
ಶುಭಮತಿ

**ಶುಭ** : ಆನಂದ್

**ಆನಂದ** : ಶುಭಮತಿ

**ಶುಭ** : ಆನಂದ್

**ನರ್ತಕಿಯರು** : ಶುಭಮತೀ ಆನಂದರೊಲವಿನಲಿ
ಆನಂದ ನರ್ತನಗೈಯುತಿರಲಿ
ಒಂದಾಗಿಹರು ಚೆಂದಾಗಿಹರು
ಚಂದ್ರಚಕೋರಿಯ ತೆರದಿ ॥

ಆಹಾ !
ಸೋದರ ಮಾವನ ಮಗಳು
ಅಕ್ಕರೆ ಸಕ್ಕರೆ ಬೊಂಬೆ
ಈ ಶುಭಮತಿಯಲ್ಲೀ
ಆಗಿಹನಾನಂದನಾನಂದದೀ ॥

ಆನಂದಂ ಮಹದಾನಂದಂ
ಆನಂದಂ ಪರಮಾನಂದಂ
ಆನಂದಂ ಪಯಮಾನಂದಂ
ಆನಂದಂ ಫಲಮಾನಂದಂ

ಆನಂದಂ ಆನಂದಂ
ಆನಂದಂ ಆನಂದಂ
ಆನಂದಂ ಆನಂದಂ

(ನಾದಕ್ಷೀಣಿಸಿ ಸ್ಥಾಯಿಗೆ ಬಂದ ಕೂಡಲೇ ಭಯಂಕರ ಸ್ಫೋಟ ! ದೇವದತ್ತನ ಆಕ್ರೋಶದ ಆರ್ಭಟಕ್ಕೆ ಸಭೆಯೆಲ್ಲ ಸ್ತಬ್ಧ ! ! ಅವನು ಸಿಡಿಲಿನಂತೆ ಧಿಃಕ್ಕಾರದ ನುಡಿ ಸ್ಫೋಟಿಸಿ ತಾಂಡವಗೈಯುತ್ತಾನೆ. ರಾಜಸಭೆ ಮೈಮುದುಡಿ ಬೆರಗಿನಲ್ಲಿ ಕೂರುತ್ತದೆ. ರಂಗದ ತುಂಬ ತಾನೊಬ್ಬನೇ ದೇವದತ್ತ ತಾಂಡವ ಮೂರ್ತಿಯಾಗಿ)

**ದೇವದತ್ತ** : ಧಿಃಕ್ಕಾರ ಧಿಃಕ್ಕಾರ ಧಿಃಕ್ಕಾರ ನಿಮಗೇ
ಧಿಃಕ್ಕಾರ ಧಿಃಕ್ಕಾರ ಆನಂದಕೇ ॥

ವಂಚಕರೆ ನೀವಿಲ್ಲಿ ಸಂಚು ನಡೆಸಿಹಿರೇ
ಮಿಂಚು ವೇಗದಿ ಸೇರಿ ಪಟ್ಟಕಟ್ಟುವಿರೇ !
ಸಿದ್ಧಾರ್ಥ ಸೋಮಾರಿ, ಶುದ್ಧ ಪೆದ್ದನ ತಂದು
ಯುವರಾಜನಾಗಿಪುದು ಎಂಥ ನಾಚಿಕೆಗೇಡು !
ಕಪಿಲವಸ್ತುವಿಗಿಂದು ಬೇಕು ಬಹುಶೂರ
ವೀರ ಸಾಹಸಿ ಬೇಕು ರಕ್ತರಣಧೀರ ।

ಕೆಡಹುವೆನು ಕೆಡಹುವೆನು ಮಂಗಲದ್ರವ್ಯಗಳ
ಎಲ್ಲ ಪುಡಿಪುಡಿಮಾಡಿ ಹಿಡಿವೆ ಕೈದುಗಳ !

(ಮುಂದೆ ಬರುವಷ್ಟರಲ್ಲಿ ನಾಲ್ಕೂ ದಿಕ್ಕುಗಳಿಂದ ಖಡ್ಗಗಳು ಧಾವಿಸುವುವು. ಸಂದರ್ಭವನ್ನು ಅರ್ಥಮಾಡಿಕೊಂಡ ದೇವದತ್ತ ಹೂಂಕರಿಸಿ ನೇಪಥ್ಯದೆಡೆ ಸರಿಯುವನು)

**ಸಿದ್ಧಾರ್ಥ** : ದೇವದತ್ತ, ಓ ತಮ್ಮ ದೇವದತ್ತ
ನಿಲ್ಲು ನಿಲ್ಲು ನಿಲ್ಲು ದೇವದತ್ತ !

(ಖಿನ್ನವಾಗಿ ಕೂಗುತ್ತಾ ಮುಂಬರುವನು)

**ಶುಭಮತಿ** : (ಆನಂದನ ತೋಳ್ಸೆರೆಯಿಂದ ಹೊರಬಂದು)
ಅಣ್ಣಯ್ಯಾ ಅಣ್ಣಯ್ಯಾ !
ಓ ದೇವದತ್ತಣ್ಣಯ್ಯಾ ! !

(ದೇವದತ್ತನನ್ನು ಹಿಂಬಾಲಿಸಿ ಓಡುವಳು)

**– ತೆರೆ –**

**ದೃಶ್ಯ : ೨** **ಅಡವಿಯ ಹಾದಿ**

(ಬಿರುಗಾಳಿಯಂತೆ ದೇವದತ್ತನ ಪ್ರವೇಶ; ಶುಭಮತಿ ಆರ್ತಳಾಗಿ)

**ಶುಭ** : ಅಣ್ಣಯ್ಯಾ ಅಣ್ಣಯ್ಯಾ ಓ ದೇವದತ್ತ
ಆಗದಿರು ಆಗದಿರು ನೀ ಪ್ರಮತ್ತ
ಮಂಗಲ ಮುಹೂರ್ತದಲಿ ನೀನು ಪಾಲ್ಗೊಳ್ಳೊ
ಅಣ್ಣ ಗೌತಮನಿಂಗೆ ಅನುವಾಗು ಬಾರೊ ॥

**ದೇವದತ್ತ** : ಧಿಃಕ್ಕಾರ ಧಿಃಕ್ಕಾರ ನಿನ್ನ ನುಡಿಗೇ
ಧಿಃಕ್ಕಾರವೆಂದಿಗೂ ಈ ಶಾಕ್ಯಕುಲಕೇ ॥
ಫಡ ಫಡಾ ಹುಡಿಗೈವೆನೀ ಕಪಿಲವಸ್ತುವನು
ನುಚ್ಚು ನುರಿನುರಿಮಾಡಿ ಬರಿಗೈವೆ ಮೊದಲು ॥

**ಶುಭ** : ಖಡ್ಗವೊಂದೇ ಅಲ್ಲ ಜನವ ಗೆಲ್ಲುವ ಕರಣ !
ಮಾನವತೆ ಎಂಬುದಿದೆ ಅರಿವೆ ಅಂತಃರಣ !
ನೀನು ತಿಳಿದವನಿರುವೆ ಹೆಚ್ಚು ಹೇಳೆನು ನಾನು

**ದೇವ** : ಹೇಳುವುದು ಬೇಡಿಲ್ಲಿ ಕೇಳುವುದು ಬೇಡ
ಶುಭಮತೀ, ನೀನೆನ್ನ ಒಡಹುಟ್ಟಿದಾ ತಂಗಿ
ಎಷ್ಟೆ ಆಗಲಿ ಅವನು ಆ ಕಪಟಿ ಗೌತಮನು
ನಮಗೆ ದಾಯಾದಿ !

**ಶುಭ** : ತಪ್ಪು ಕಲ್ಪನೆ ನಿನದು ದೇವದತ್ತಣ್ಣಯ್ಯ,
ಹೆತ್ತ ತಂದೆಗು ಮಿಗಿಲು ನಮ್ಮ ದೊಡ್ಡಪ್ಪ
ದೇವತಾತ್ಮನು ಅವನು ಹಿರಿತಂದೆ ಶುದ್ಧೋಧನ !
ಅವನ ಸತ್ಪುತ್ರನಾ ಸಿದ್ಧಾರ್ಥ ಗೌತಮನು
ಅವನೆ ನಮಗೆಲ್ಲರಿಗು ಹಿರಿಯನಲ್ಲವೆ ಹೇಳು ?

**ದೇವ** : ನಮ್ಮ ತಂದೆಯು ಬದುಕಿದ್ದರಿಂತಾಗುತಿರಲಿಲ್ಲ
ಓ ತಂದೆ, ಓ ಶುಭದತ್ತ, ನಮ್ಮನಾಥರ ಮಾಡಿ
ಅಂಬರಕೆ ಹಾರಿದೆಯಾ !

**ಶುಭ** : ಏನಿದೀ ಪರಿತಾಪ ವ್ಯರ್ಥಪ್ರಲಾಪ !
ಸಾಕುಮಾಡಣ್ಣಯ್ಯ ನಾಡೆಲ್ಲ ನಲಿಯುತಿದೆ
ಗೌತಮನಿಗಭಿಷೇಕ ಯುವರಾಜ ಪದವಿಯದು
ಕಪಿಲವಸ್ತುವಿಗಮಿತ ಆನಂದ ತಂದಿಹುದು
ಪಾಲ್ಗೊಳ್ಳು ಬಾರಣ್ಣ, ಹರ್ಷನದಿ ಹರಿಸಣ್ಣ
ಎಲ್ಲ ಕ್ಲೇಶವ ಬಿಟ್ಟು ಒಲಿಸು ಬಾ
ನಲಿಸು ಬಾ, ಓಲೈಸು ಬಾ ಅಣ್ಣ ಸಿದ್ಧಾರ್ಥನನ್ನು !

**ದೇವ** : ಶುಭಮತೀ ನಾವಿಬ್ಬರೂ ಒಂದೇ
ಒಂದೇ ಗರ್ಭದಿಂದುದಿಸಿ ಬಂದವರು.
ನನ್ನ ತಂಗಿಯು ನೀನು, ನನ್ನ ಪರಳಾಗು !

**ಶುಭ** : ಪ್ರೀತಿಗೆ ಗರ್ಭಭೇದ ತಿಳಿದಿಲ್ಲ ದೇವದತ್ತಣ್ಣಯ್ಯ !
ಯಾರಾದರೇನಂತೆ ಎಲ್ಲರು ಒಂದೆ !
ಸದ್ಗುಣಕೆ ಶರಣಾಗಿ ಸದ್ಭಾವದೊಡಲಾಗಿ
ಸರ್ವರನು ನಡೆಸುವುದು ಶ್ರೀಶಕ್ತಿಪ್ರೀತಿ !

**ದೇವ** : ಸಿದ್ಧಾರ್ಥ ದಾಯಾದಿ, ಮೇಲಾಗಿ ಕನಸುಣಿಯು.
ನಾಡನಾಳಲು ನಾನೆ ಸರ್ವ ಶಕ್ತ !
ಯುವರಾಜ ಪಟ್ಟಕ್ಕೆ ನಾನೆ ಸಮರ್ಥ ! !

**ಶುಭ** : ಜ್ಯೇಷ್ಠ ಪುತ್ರನೆ ಶ್ರೇಷ್ಠ ಸರ್ವವಿಧದಲ್ಲು
ಯುವರಾಜ ಸಿದ್ಧಾರ್ಥ ನಮಗೆಲ್ಲ ಹಿರಿಯಣ್ಣ
ಬಾರಣ್ಣ ಪ್ರೀತಿಸು, ಅವನನೋಲಗಿಸು !

**ದೇವ** : ನನ್ನಾಸೆ ಹುಸಿಯಾಗೆ, ಮೋಸಮಾಡಿದರೆಲ್ಲ
ಇದನುಳಿದು ತೊಲಗುವೆನು
ಅರಮನೆಯನುಳಿದು ನಾನೆತ್ತಲೊ ತೆರಳುವೆನು !
ಎಂದೆಂದಿಗೂ ನಿಮಗೆ ಧಿಃಕ್ಕಾರವಿರಲಿ ! ಧಿಃ................ ! !

– ನಿರ್ಗಮನ –

**ದೃಶ್ಯ : ೩** **ಉದ್ಯಾನ**

(ಸಿದ್ಧಾರ್ಥ ಮತ್ತು ಯಶೋಧರೆಯರ ನೃತ್ಯ ಪ್ರವೇಶ)

**ಸಿದ್ಧಾರ್ಥ** : ಹಾರುತಿದೇ ಹಂಸೆಯು ಗಗನದಿ ಹಾರುತಿದೆ
ಒಕ್ಕೊರಲಲಿ ಉಲಿದಾಡುವ ಹಾಡುತ
ದಿಕ್ಕಿನ ತೆಕ್ಕೆಯ ಸೇರುತಿದೆ ॥
ಹಾರುತಿದೇ ಹಂಸೆಯು ಗಗನದಿ ಹಾರುತಿದೆ ॥ ೧ ॥
ನೀಲಾಕಾಶದ ಕಡಲಿನ ಒಡಲಲಿ
ನಿಭಿಡೆ ನಿರಾಳದಿ ಈಸುತಿದೆ
ತೆರೆ ತೆರೆ ಮೇಗಡೆ ತೇಲುತ ತೇಲುತ
ತಾವರೆ ತೇರನು ಏರುತಿದೆ ॥
ಹಾರುತಿದೇ ಹಂಸೆಯು ಗಗನದಿ ಹಾರುತಿದೆ ॥ ೨ ॥
ಹಕ್ಕಿಯು ತನ್ನಯ ರೆಕ್ಕೆಯ ಕೆದರಿ
ಚುಕ್ಕಿಗಳೆಡೆ ಚಕ್ಕಂದವನಾಡಲು
ಅಕ್ಕನ ಮಗಳೇ ಬೆಕ್ಕಿನ ಮರಿಯೇ
ಕೊಕ್ಕನು ತೆರೆ ಮುತ್ತಿಕ್ಕುವೆನೆನುತೇ ॥
ಹಾರುತಿದೇ ಹಂಸೆಯು ಗಗನದಿ ಹಾರುತಿದೆ ॥ ೩ ॥
ಬೆಣ್ಣೆಯ ಮುಗಿಲಿನ ತಣ್ಣೆಳಲಲ್ಲಿ
ತಿಣ್ಣನೆ ತಾ ತಣಿದಾಡುತಿದೆ
ಹೆಣ್ಣಿನ ಕಣ್ಣಿನ ಕಾಮನೆಯಲ್ಲಿ
ನುಣ್ಣನೆ ತೋಳನು ಚಾಚುತಿದೆ ॥
ಹಾರುತಿದೇ ಹಂಸೆಯು ಗಗನದಿ ಹಾರುತಿದೆ !
ಹಾರುತಿದೇ ಪ್ರಣಯದ ಪಕ್ಷಿಯು ಹಾರುತಿದೆ !
ಹಾರುತಿದೇ ಆತ್ಮಾನಂದದಿ ಹಾರುತಿದೆ !
ಹಾರುತಿದೇ ಈ ಪ್ರೇಮದ ಪಕ್ಷಿಯು ಹಾರುತಿದೆ !
ಹಾರುತಿದೇ ಗಾಳಿಯ ಪಟದೊಲು ಹಾರುತಿದೆ !
ಹಾರುತಿದೇ ಮುಗಿಲಿನ ಮರಿಯೊಲು ಹಾರುತಿದೆ

(ಹಾಡುತ್ತಾ ನರ್ತಿಸುತ್ತಾ ಯಶೋಧರೆಯ ಹೆಗಲ ಮೇಲಿನ
ಧಾವಣಿಯನ್ನು ಸೆಳೆಯುತ್ತಾನೆ. ಇಬ್ಬರೂ ಅದನ್ನು ಬಿಚ್ಚಿ
ಬಲೆಯೋಪಾದಿಯಲ್ಲಿ ಎಳೆದು ಹಿಡಿಯುತ್ತಾ ನರ್ತಿಸುತ್ತಾರೆ
ಇದ್ದಕ್ಕಿದ್ದಂತೆ ಬಾಣ ತಾಕಿದ ಹಂಸೆಯೊಂದು ಅದರಲ್ಲಿ
ಬೀಳುತ್ತದೆ. ಇಬ್ಬರೂ ಅಚ್ಚರಿಗೊಳ್ಳುತ್ತಾರೆ. ಸಿದ್ಧಾರ್ಥ ಬಾಣವನ್ನು

ಕಿತ್ತೆಸೆದು, ಬದಿಯ ಗಿಡದ ಸೊಪ್ಪು ಹೊಸಕಿ ಹಾಕಿ,
ಆರೈಕೆ ಮಾಡುತ್ತಾ)

ಯಶೀ ಯಶೂ ಯಶೋಧರೆ
ಬಳಿಗೆ ಬೇಗ ಬಾರೆ !
ಹಂಸೆ ಅಸುವ ನೀಗುತಿದೆ
ಕಾರಂಜಿ ನೀರ ತಾರೆ !
ಬಿಯದ ಬಿಟ್ಟ ಬಾಣಕೆ
ಮುಗ್ಧ ಜೀವ ಬಳಲುತಿದೆ
ಪಾಪ ಮುಗ್ಧ ಜೀವಿಗೆ
ದುಷ್ಟನಿಟ್ಟ ಧಗೆಧಗೆ ॥
ಯಶೀ ಯಶೂ ಯಶೋಧರೆ
ಬಳಿಗೆ ಬೇಗ ಬಾರೆ ॥

(ಸಿದ್ಧಾರ್ಥ ಹಾಡುವಾಗ ಯಶೋಧರೆ ನರ್ತಿಸುತ್ತಾ ನೀರು ತಂದಂತೆ ಪಕ್ಷಿಗೆ ಕುಡಿಸಿದಂತೆ ಅಭಿನಯಿಸುತ್ತಾಳೆ. ಕಾರಂಜಿಯ ನೀರು ಕುಡಿದು ಹಂಸೆ ಚೇತರಿಸಿಕೊಳ್ಳುತ್ತದೆ. ಆಗ ಇಬ್ಬರೂ ಖುಷಿಯಿಂದ ನರ್ತಿಸುವರು)

**ಇಬ್ಬರೂ** : ರಜತ ವರ್ಣ ರಾಜಹಂಸ ರಾಜತೇಜ ಹಂಸೆ
ಚೈತನ್ಯದಂತೆ ಚೇತರಿಸಿದೆ ಚೇತೋಹಾರಿ ಮಾನಸೆ ॥
ತಾವರೆಕೊಳದಲ್ಲಿ ಸುತ್ತಿ ಮುತ್ತನಿಡುವ ಕೋಮಲೆ
ಮತ್ತೆ ಕತ್ತನೆತ್ತಿ ಸುತ್ತ ಸುಳಿದು ನೋಡೊ ಚಂದಲೆ ॥

(ನೇಪಥ್ಯದಲ್ಲಿ 'ಸಿದ್ಧಾರ್ಥ' ಎಂಬ ಶಬ್ದ ಸ್ಫೋಟಿಸುವುದು ! ಯಶೋಧರೆ ಬೆದರಿ ಧಾವಣಿಯಿಂದ ತನ್ನೆದೆಯ ಬಾಸಣಿಸಿ, ಸಿದ್ಧಾರ್ಥನ ಬೆನ್ನ ಬಳಿ ಹುದುಗುವಳು. ಸಿದ್ಧಾರ್ಥ ವಿಚಲಿತನಾಗದೆ ಹಂಸೆಯ ಬೆನ್ನು ಸವರಿ ಮುದ್ದಿಸುತ್ತಿರುತ್ತಾನೆ. ಬಿಲ್ಲು ಬಾಣ ಬತ್ತಳಿಕೆಗಳನ್ನು ಧರಿಸಿದ ದೇವದತ್ತ ಪ್ರವೇಶಿಸಿ ಹಂಸೆಯತ್ತ ಕೈಚಾಚಿ)

**ದೇವ** : ಎತ್ತಿಕುಡು ಎತ್ತಿಕುಡು ಎತ್ತಿಕುಡು ಹಂಸೆ
ಚದುರ ಬಿಲ್ಗಾರನದು ಈ ಪ್ರಶಂಸೆ !
ಹಾರು ಹಕ್ಕಿಗೆ ಹೊಡೆದ ಬೇಟೆ ನಿಶ್ತ್ರಿಂಶೆ
ಆಗದಿರಲೆಂದಿಗೂ ಅದಕಾಗಿ ಹಿಂಸೆ ॥

**ಸಿದ್ಧಾರ್ಥ** : ನಿನಗೆ ಸೇರುವುದಲ್ಲ ಈ ಬೇಟೆ ದತ್ತಾ.
ಈ ಒಡವೆ ನಿನಗಲ್ಲ ನನಗಿದು ಪ್ರದತ್ತ !
ಹಕ್ಕಿಹುದು ನಿನಗಲ್ಲ ಕೇಳೊ ನನಗೆ !
ಪ್ರಾಣ ತೆಗೆದವಗಿಂತ ಪ್ರಾಣಕೊಟ್ಟವಗೆ !
ಕಾಲಕ್ಕೆ ಬೆಲೆಯುಂಟು ಹರಣ ಮಾಡಲಿಬೇಡ.
ಉಗುರಲ್ಲಿ ಹೋಹುದಕೆ ಕೊಡಲಿ ತರಲೇಡ !

**ದೇವ** : ಗೌತಮಾ, ಮತಿಹೀನ ಗೌತಮಾ,
ನನ್ನ ಏಳಿಗೆಗೆಂದೂ ನೀ ಅಡ್ಡಗಾಲು !
ಕಪಿಲವಸ್ತುವಿನರ್ಧರಾಜ್ಯ ಬರಬೇಕಿತ್ತು ;
ಅದ ನೀನು ಕಬಳಿಸಿದೆ ! ಯುವರಾಜನಾದೆ !
ಇಂದು ಈ ಕಿರುಹಂಸೆ ? ಓಹ್ ! ಇದು ಸಮಸ್ಯೆಯೆ ಅಲ್ಲ !
ನನ್ನ ಪ್ರಣಯದ ಪಕ್ಷಿ ಈ ನನ್ನ ಚೈತ್ರಾಕ್ಷಿ

ಸುಪ್ರಬುದ್ಧನ ಪುತ್ರಿ ಈ ಯಶೋಧರೆಯನ್ನು
ನಿನ್ನ ಬಲೆಗಾಗಿಸಿದೆ, ನನ್ನೆದೆಯನಿರಿದೆ !
ನೀನಿಂದು ಯುವರಾಜ ನಾಳೆ ನೀ ಅಧಿರಾಜ !
ನಾನೊ ? ಓ ಇನ್ನು ನಾನೋ ! ಹೇಳಲೇನದನಿನ್ನು
ಕಪಿಲವಸ್ತುವಿನಲ್ಲಿ ಎಂಜಲುಂಬುವ ನಾಯಿ !
ಇಲ್ಲ ! ಸಾಕು ಸಿದ್ಧಾರ್ಥ ನಿನ್ನನಳಿಸಲೆ ಬೇಕು
ಖಡ್ಗಧಾರೆಯ ಸವಿಯ ನಿನಗುಣಿಸಲೇ ಬೇಕು

**ಸಿದ್ಧಾರ್ಥ** : ಸಂತೋಷ ಸೋದರಾ, ಬಹಳ ಸಂತೋಷ !
ಶಾಕ್ಯಕುಲದೀಪಕನ ಶುದ್ಧೋಧನನ ಪತ್ನಿ,
ಮಾಯೆ, ಹಡೆದದ್ದು ಕುನ್ನಿಯನ್ನಲ್ಲ
ನನ್ನ ಧಮನಿಯಲೆಂದೂ ಹರಿಯುತಿರುವುದು ರಕ್ತ
ಅದು ಕ್ಷಾತ್ರರಕ್ತ, ನೀರಲ್ಲ ತಿಳಿಯಿತೆ ?
ಖಡ್ಗಕ್ಕೆ ಖಡ್ಗವೇ ಉತ್ತರವ ಹೇಳೀತು !
ಎಚ್ಚರಾ !

**ದೇವ** : ನನ್ನ ಸೇಡಿನ ಕತ್ತಿ ಹರಿತವಾಗುತ್ತಲಿದೆ
ಈ ದೇವದತ್ತನ ಮನದ ಮಸೆಗಲ್ಲ ಮೇಲೆ !
ಸಿದ್ಧಾರ್ಥ, ಪೌರುಷವು ಇದ್ದವಗೆ ಈ ಪೃಥ್ವಿ,
ಪ್ರತಾಪವಿದ್ದವಗೆ ಪಟ್ಟ ಪದವಿ ! ಹೂಂ... ತಡವೇಕೆ ?

–(ಯುದ್ಧ ಪ್ರದರ್ಶನ ಚಣಕಾಲ)–

(ಸಿದ್ಧಾರ್ಥನ ಹೊಡೆತಕ್ಕೆ ದೇವದತ್ತನ ಖಡ್ಗ ಹಾರಿ ಬೀಳುವುದು.
ದೇವದತ್ತ ಬೆರಗಾಗಿ ಅರುಗಾಗಿ ದೂರ ನಿಲ್ಲುವನು.
ಚಣಕಾಲ ರಂಗ ಮೌನ ತಳೆಯುವುದು. ಅನಂತರ)

**ಸಿದ್ಧಾರ್ಥ** : (ಗಂಭೀರ ಧ್ವನಿಯಲ್ಲಿ) ನನ್ನ ವಂಶದ ರಕ್ತ ನಾ ಚೆಲ್ಲಲಾರೆ !
ನಮ್ಮ ವಂಶದ ಕುಡಿಯ ನಾ ಚಿವುಟಲಾರೆ !
ಬಾ ದೇವದತ್ತಾ, ನನ್ನ ಬಲದೋಳಾಗಿ ಬದುಕು ಬಾ !
ಕೂಡು ಬಾಳುವೆಯಲ್ಲಿ ಕೈಲಾಸವಿಹುದಂತೆ !
ಒಂದಾಗಿ ಚೆಂದಾಗಿ ಬಾಳೋಣ ಬಾ ತಮ್ಮಾ !

(ಖಡ್ಗವನ್ನು ಬಿಸುಟು ತೋಳೆರಡ ತೆರೆಯುವನು. ಅವನೆದುರಲ್ಲಿ
ದೂರದಲಿ ನಿಂತಿದ್ದ ದೇವದತ್ತ ತನ್ನ ಸೊಂಟದ ಕಿಗ್ಗಠಾರಿಯ ತೆಗೆದು
ಬೀಸುವನು. ಅದು ಸಿದ್ಧಾರ್ಥನಿಗೆ ತಾಕದೆ ಅಡ್ಡ ಬಂದ ಶುಭಮತಿಯ
ಎದೆಗೆ ನಾಟುವುದು. ಅವಳು "ಅಣ್ಣಾ" ಎಂದು ಚೀರುತ್ತಾ ನೇಪಥ್ಯದಿಂದ
ರಂಗದ ಮೇಲೆ ಬರುವಳು. ದೇವದತ್ತ ಬೆದರಿ ಓಡಿ ಹೋಗುವನು.
ಸಿದ್ಧಾರ್ಥ ಮತ್ತು ಯಶೋಧರೆಯರು 'ಶುಭಮತೀ' ಎಂದು ಚೀರುವರು.
ಆ ಚೀರುವಿಕೆಯೇ ಪ್ರತಿಧ್ವನಿಗೊಟ್ಟಂತೆ 'ಶುಭಾ ಶುಭಮತೀ'
ಎಂದು ಕೂಗಿಕೊಂಡು ಆನಂದನೂ ಓಡೋಡಿ ಬರುವನು. ಸಾವಿನ
ದವಡೆಯಲ್ಲಿದ್ದ ತನ್ನ ಭಾವೀಪತ್ನಿಯನ್ನು ಕಂಡು 'ಶು.....'
ಎಂದು ಉದ್ಗರಿಸಿ ಸ್ತಬ್ಧನಾಗಿ ನಿಲ್ಲುವನು. ಸಿದ್ಧಾರ್ಥ
ಯಶೋಧರೆಯರು ಶುಭಮತಿಯನ್ನು ಅಪ್ಪಿ ಹಿಡಿದಿರುವರು)

**ಸಿದ್ಧಾರ್ಥ** : ಶುಭಮತಿ, ನನಗೆ ಬದಲಾಗಿ ನೀನು ಬಲಿಯಾದೆಯಾ ! ತಂಗೀ,
ನನ್ನನುಳಿಸಲು ಹೋಗಿ ನೀ ಪ್ರಾಣತೆತ್ತೆಯಾ !

**ಶುಭಮತಿ** : ಇದಕಿಂತ ಮಿಗಿಲಾದ ಭಾಗ್ಯವೇನಿದೆಯಣ್ಣಾ !

ನಾ ಧನ್ಯೆ ಅಣ್ಣಯ್ಯಾ ! ನಾ ಮಾನ್ಯೆ ಅತ್ತಿಗೆ !

**ಆನಂದ** : ಶುಭಮತೀ, ಅಯ್ಯೋ ಶುಭಾ...

**ಶುಭಮತಿ** : ಓ ನನ್ನ ಸ್ವಾಮಿಯೇ, ಓ ನನ್ನ ಆನಂದ,
ನನ್ನನ್ನೊಲಿದಿರಿ ನೀವು ನಿಮ್ಮ ಮೆಚ್ಚಿದೆ ನಾನು
ನಿಮ್ಮೊಡನೆ ಪಸೆನಿಂದು ಮಡದಿಯಾಗುವೆನೆಂಬ
ಕನಸು ಕಂಡಿದ್ದೆ ! ಜೇನ್‌ಗನಸು ಕಂಡಿದ್ದೆ !
ಅದು ಕೈಗೂಡಲಿಲ್ಲ ಬಟ್ಟ ಬಯಲಾಯಿತೆಲ್ಲ !
ಮರುಜನ್ಮದಲ್ಲಾವು ಮತ್ತೆ ಕೂಡೋಣ,
ಕೂಡಿ ನಲಿಯೋಣ, ಇಂದು ಅಪ್ಪಣೆ ಕೊಡಿರಿ.
ಚಿಂತಿಸದಿರೆನಗಾಗಿ ! ನನ್ನೊಮ್ಮೆ ನೆನೆಯುತಿರಿ
ನೆನೆಯುತಿರಿ ನೆನೆಯುತಿರಿ ನೆನಪಿನಲೆ ಸವಿ ಇಹುದು !
ಅತ್ತಿಗೇ, ನನ್ನಾಣ್ಣನನು ನೀವು ಸಂತೈಸಿರತ್ತಿಗೇ !
ಅವರ ಮನ ಮಾನಸದಿ ಮುದ ತುಂಬಿರತ್ತಿಗೇ !
ಅಣ್ಣಯ್ಯ, ದೇವದತ್ತಣ್ಣಯ್ಯ ನನ್ನ ಕೊಲಲಿಲ್ಲ !
ಈರ್ಷೆಯಾ ಪ್ರೇತಕ್ಕೆ ನಾನು ಬಲಿಯಾದೆ !
ಆಶೆ ಆಮಿಷ ಜಗವ ನುಂಗಿ ನೊಣೆಯುತಲಿಹುದು !
ಕುರುಡು ಕಾಂಚಾಣಕ್ಕೆ ಕಣ್ಣಿಲ್ಲ, ಕರುಳೂ ಇಲ್ಲ !
ಆಶೆ ನಾಶಕೆ ಹೇತು, ಆಶೆ ನಾಶದ ಮೂಲ !
ಅಣ್ಣಯ್ಯ ಕ್ಷಮೆ ಇರಲಿ ದಯೆ ಇರಲಿ
ದೇವದತ್ತನ ಮೇಲೆ ಪೂರ್ಣ ಕೃಪೆ ಇರಲಿ !

**ಸಿದ್ಧಾರ್ಥ** : ಶುಭಮತಿ, ಓ ತಂಗಿ ಶುಭಮತೀ
ನಿನ್ನಿಚ್ಛೆ, ನಿನ್ನಾಜ್ಞೆ, ದೇವದತ್ತನ ಅರಸಿ
ಕರೆ ತಂದು ನಿಲಿಸುವೆನು
ಕಪಿಲವಸ್ತುವಿನಮಲ ರತ್ನಪೀಠದ ಮೇಲೆ !
ಹಿರಿಯನಾದರು ನಾನು ಅವನ ಕಿಂಕರನಾಗಿ
ಕೈಂಕರ್ಯವೆಸಗುವೆನು, ನಿಶ್ಚಿಂತಳಾಗಮ್ಮ
ನೀ ಶಾಂತಳಾಗಮ್ಮ, ನೀ ಬದುಕಬೇಕಮ್ಮ !

**ಶುಭ** : ಬದುಕುವೆನು ಬಾಳುವೆನು ಹಸಿರಾಗಿ ನಿಲ್ಲುವೆನು
ನಿಮ್ಮೆಲ್ಲರೆದೆ ಬದಿಯ ನಗೆಯ ನಂದನದಲ್ಲಿ !
ಆದರಿಂದಾನು ಹೋಗಿ ಬರುವೆನು ಅಣ್ಣಾ,
ಹೋಗಿ ಬರುವೆನು ಸ್ವಾಮಿ; ಬರಲೆನ್ನ ಅತ್ತಿಗೆಯೆ !
ಹೋಗಿ ಬರಲೇ ನನ್ನ ಜನನಿ ಭೂದೇವಿ,
ಕಪಿಲವಸ್ತುವೇ ಬರುವೆ.... ನಿಮಗೆಲ್ಲ ಶರಣು
ನಿಮಗೆಲ್ಲ ಶರಣು ! ಶಾಂತಿ..... ಶಾಂತಿ.....ಶಾ.....

(ಯಶೋಧರೆ ಬಿಕ್ಕಿ ಬಿಕ್ಕಿ ಅಳುವಳು ಬಂಡೆಯಂತೆ ನಿಂತಿದ್ದ
ಆನಂದ ಸಿದ್ಧಾರ್ಥನ ತೊಡೆಯ ಮೇಲಿದ್ದ ಶುಭಮತಿಯ
ಕಳೇಬರವನ್ನು ಎತ್ತಿಕೊಳ್ಳುವನು.
ರಂಗ ಕತ್ತಲಾಗಿ ಒಬ್ಬೊಬ್ಬರ ಮೇಲೂ Spot light ಹರಿದಾಡುವುದು)

**ಆನಂದ** : (ಗಂಭೀರಭಾವದಿಂದ)
ಎಲ್ಲಿಂದ ನೀ ಬಂದೆ ಅಲ್ಲಿಂದ ಏನ್ ತಂದೆ
ಇಲ್ಲಿಂದ ಏನೊಯ್ವೆ ಮುಂದೇ ॥ ಪ ॥

ನೀನಾರು ನಾನಾರು ನಿನ್ನವರು ಇಲ್ಲಾರು
ಇದಕೇಕೆ ಈ ಮೋಹವಣ್ಣಾ ॥ ಅನು. ಪ ॥
ಮಮತೆಯಲಿ ಮನೆಮಾಡಿ ಮಡದಿಯನು ಒಡಗೂಡಿ
ನೀ ನಕ್ಕು ನಗುವೆಲ್ಲೊ ಅಣ್ಣಾ ! ಮನೆಯೆಲ್ಲ ಮರೆಯಾಗಿ
ಮಡದಿ ತಾ ಹೋದಾಗ ನಿನಗೆಲ್ಲಿ ಆ ನಗುವೊ ಅಣ್ಣಾ ॥ ೧ ॥

**–ತೆರೆ–**

## ದೃಶ್ಯ : ೪ — ಅರಮನೆಯ ಕೈಸಾಲೆ

(ಸುಜಾತ ಮತ್ತು ನರ್ತಕಿಯರು ನರ್ತಿಸುತ್ತಾ ಪ್ರವೇಶ)

**ಸುಜಾತ** : ಕಥೆಯ ಹೇಳುವೆ ಕೇಳ ಬನ್ನಿ । ಸೋದರಿಯರೆ ।
ಕಥೆಯ ಹೇಳುವೆ ಕೇಳ ಬನ್ನಿ ॥ ಪ ॥
ಕಪಿಲವಸ್ತುವು ರಾಜಧಾನಿ । ಅಲ್ಲಿ
ಶುದ್ಧೋಧನನೆಂಬ ರಾಜನು ಇಹನು ॥ ॥ ಅನು. ಪ ॥
ಮಾಯಾದೇವಿಯು ರಾಣಿ । ಅವಳಿಗೆ
ಸಿದ್ಧಾರ್ಥನೆಂಬುವ ಮಗನು ॥
ಹೆತ್ತ ದಿನವೇ ತಾಯಿ ಸತ್ತು ಹೋದಳು ಅಯ್ಯೋ
ಕತ್ತಲಾಯಿತು ಬಾಳು ಶುದ್ಧೋಧನಗೆ ॥ ೧ ॥

**ನರ್ತಕಿಯರು** : ಅಯ್ಯೋ ಪಾಪ ! ಹಾಳು ಯಮನಿಗೆ ಬೆಂಕಿಹಾಕ !

**ಸುಜಾತ** : ಇರಲಿ ಮುಂದೆ ಕೇಳಿ,
ತಬ್ಬಲಿ ಸಿದ್ಧಾರ್ಥನನ್ನು । ತಾ
ತಬ್ಬಿ ಮುದ್ದಿಟ್ಟಳು ತಾಯಿ ॥
ಮಲತಾಯಿ ಗೋತಮಿ ನಿಜಮಾತೆಯಾದಳು
ಗೌತಮ ಎನಿಸಲು ಕಾರಣಳಾದಳು ॥ ೨ ॥
ಸಿದ್ಧಾರ್ಥ ಗೌತಮ ಬೆಳಕು । ರಾಜನಿಗೆ
ಕಣ್ಣಿಗೆ ಕಣ್ಣಾಗಿ ಬೆಳೆದ ॥
ಶುದ್ಧಚರಿತೆಯನ್ನು ಆ ಯಶೋಧರೆಯನ್ನು
ಮದುವೆನಿಂದನು ಯುವರಾಜ ತಾನಾದ ॥ ೩ ॥
ಅವನಿಗೊಬ್ಬನು ಮಲತಮ್ಮ । ಅವ
ದೇವದತ್ತ ಎಂಬ ಪ್ರಬಲ ದಾಯಾದಿ ॥
ಹೊಟ್ಟೆ ಕಿಚ್ಚಿನ ಮೊಟ್ಟೆ ದುಷ್ಟತನದಲಿ ತಾನು
ಹೊಲಸು ಮಾಡಿದ ತನ್ನ ಪರಿಸರ ಕೆಡಿಸಿ ॥ ೪ ॥
ಶುಭಮತಿ ತಂಗಿಯ ಕೊಂದ । ಅವ
ಭಯಬಿದ್ದು ದೇಶಾಂತ್ರ ಹೋದ ॥
ಲೇಸಾಗಿ ಬಾಳದೆ ದೇಶ ಕಂಟಕನಾದ
ಆಶಾಪಿಶಾಚಕೆ ತಾ ಬಲಿಯಾದ ॥ ೫ ॥

**ನರ್ತಕಿಯರು** : ಆಮೇಲಾಮೇಲೆ ಸಿದ್ಧಾರ್ಥ ಆ ದೇವದತ್ತನನ್ನು
ಕೊಂದು ಬಿಟ್ಟನೊ,

**ಸುಜಾತ** : ಇಲ್ಲ, ಸಿದ್ಧಾರ್ಥನಾಲೋಚನೆಯೇ ಬೇರೆ
ಅನ್ಯರನು ಕೊಲುವುದಕಿಂತ
ತನ್ನ ತಾ ಗೆಲುವುದೇ ಲೇಸೆಂದು ಬಗೆದ

'ಜಗವ ತಿದ್ದುವ ಮೊದಲು ನಿನ್ನ ನೀ ತಿದ್ದಿಕೊಳೊ'
ಎಂದುಸಿರಿತವನಾತ್ಮ !
ಹಗಲಿರುಳಿನಿಗ್ಗಾಲಿ
ನೂರುರುಳನುರುಳಿತು !
ಸಿದ್ಧಾರ್ಥನೊಳಗೇನೊ ಕಳವಳದ ಕ್ರಾಂತಿ !
ಹುಟ್ಟೇನು ? ಸಾವೇಕೆ ? ಬದುಕಿನುಯ್ಯಾಲೆಯಲಿ
ಏರಿಳಿತಗಳು ಏಕೆ ? ಪರಿಹಾರವಿಲ್ಲವೇ ಈ ಮೂಕ ನೋವಿಗೆ ?
ಎಂದೆಲ್ಲ ಚಿಂತಿಸಿದ; ಮನವ ಮಥಿಸಿದ ಕೂಡ.
ಕಡೆಗೆ ಪರಿಹಾರವನು ಹುಡುಕ ಹೊರಟ.
ಲುಂಬಿನೀ ವನದೆಡೆಗೆ ತಾನೊರ್ವನೇ ನಡೆದ....
ಅದೋ ಅಲ್ಲಿ ಆ ಲುಂಬಿನೀವನದ ಹಾದಿಯಲ್ಲಿ
ನೋಡಿ..... ನೋಡಿ.....

**ದೃಶ್ಯ : ೫** **ಕಾಡುದಾರಿ**

(ರಾಜ್ಯದ ಹೆದ್ದಾರಿ, ಅಡವಿ, ಬೆಟ್ಟ, ನದಿ, ಹಸಿರು ಬಯಲು ಇತ್ಯಾದಿ
ಪ್ರದೇಶಗಳು. ಸಿದ್ಧಾರ್ಥ ಇಷ್ಟು ದಾರಿ ಕ್ರಮಿಸಿದನೆಂಬುದನ್ನು ಪ್ರೇಕ್ಷಕರಿಗೆ
ಮನದಟ್ಟಾಗುವಂತೆ ಪ್ರದರ್ಶಿಸಬೇಕು.
ಚಿಂತಾಮಗ್ನನಾಗಿ ಸಿದ್ಧಾರ್ಥ ಏನನ್ನೋ ಧೇನಿಸುತ್ತಾ
ಮೇಲೆ ತಿಳಿಸಿದ ಭಾಗಗಳಲ್ಲೆಲ್ಲ ನಿಧಾನಗತಿಯಲ್ಲಿ ನಡೆಯುತ್ತಾನೆ.
ಹಿನ್ನೆಲೆಯಲ್ಲಿ ಗಂಭೀರ ಕಂಠದಿಂದ ಈ ಕೆಳ ಮಾತು ಮತ್ತು ಅವನ ನಡಿಗೆಗೆ
ತಕ್ಕ ಹಾಗೆ ಲಯಕ್ಕೆ ಅನುಗುಣವಾಗಿ ಕಾಡು, ಮೇಡು, ನದಿ, ಬಯಲು
ಭಾಗಗಳು ಬದಲಾಗುತ್ತಿರಬೇಕು. ಕಿರುಶಬ್ದ ಕಿರುಬೆಳಕುಗಳ ವಿವಿಧ
ವಿನ್ಯಾಸವಿರಬೇಕು ಸಿದ್ಧಾರ್ಥ ದಾರಿ ಸಮೆಸಿದಂತೆ)

**ಹಿನ್ನೆಲೆಯಲ್ಲಿ ವಾಣಿ**

ಎಷ್ಟೊಂದು ಜಟಿಲತೆಯ ಗೂಡು ಈ ಬಾಳು !
ಸಂಕೀರ್ಣತೆಯ ಸೋಗಿನಲ್ಲಿ ಗೋಜಲು ಗೋಜಲಾಗಿಹುದು.
ಬಿಡಿಸಿದಷ್ಟೂ ಗಂಟು ! ಸರಗಂಟು ! ! ಇದಕ್ಕೆ ಕೊನೆಯೇ
ಇಲ್ಲವೇನೋ !
ಹುಟ್ಟುವುದು ಸಾಯುವುದು ಇಷ್ಟೇನೇ
ಈ ಜೀವನದ ಮೌಲ್ಯ ? ಸಾಯುವ ಮುನ್ನ ತಾನು ತನ್ನದು
ಎಂಬ ಹೋರಾಟ ? ಅದೂ ಎಂತಹ ಹೋರಾಟ ? ಏತಕ್ಕಾಗಿ
ಹೋರಾಟ ? ಹೆಣ್ಣಿಗಾಗಿ, ಉದರ ಪೋಷಣೆಗಾಗಿ, ರಾಜ್ಯ
ಕೋಶಾದಿಗಳಿಗಾಗಿ, ಪದವಿಗೌರವಗಳಿಗಾಗಿ, ಸತಿಸುತರ
ರಕ್ಷಣೆಗಾಗಿ, ಕಡೆಗೆ ಸಾಯದೆ ಸ್ಥಾಯಿಯಾಗಿ ನಿಲ್ಲಲೆಂದು !
ಈ ಸತತ ಹೋರಾಟದ ಅಂತ್ಯದಲ್ಲಿ ಸಿಕ್ಕುವುದಾದರೂ ಏನು ?
ಒಂದು ಹಿಡಿ ಮಣ್ಣು !

**(ದೃಶ್ಯ ಬದಲಾವಣೆ)**

ಹಿಡಿಮಣ್ಣಿಗಾಗಿ ಮಾನವನು ಇಷ್ಟೊಂದು ಶ್ರಮಿಸಬೇಕೆ ?
ಅಥವಾ ಇದಕ್ಕೆ ಪರಿಹಾರವೇ ಇಲ್ಲವೆ ? ಇದ್ದರೆ
ಎಲ್ಲಿರಬಹುದು ? ಹೇಗಿರಬಹುದು ? ಅದನ್ನು ಹಿಡಿ ತರಲು

ಸಾಧ್ಯವೇ ! ಬೇಡ ! ಬೇಡ ! ಸಾಧ್ಯಾಸಾಧ್ಯತೆಗಳ ಪ್ರಶ್ನೆ ಈಗ
ಬೇಡ !

**ಚೆನ್ನಜ್ಜ** : (ಧಾವಿಸಿ ಬಂದು ನಿಟ್ಟುಸಿರು ಬಿಟ್ಟು)
ಹುಷ್ ! ಸಿದ್ಧಾರ್ಥ ಸಾಕಾಯ್ತು ನನ್ನಪ್ಪ ।
ಎಲ್ಲಿ ಹುಡುಕಲಿ ನಿನ್ನ; ನೆಲನೆಲ್ಲ ತಡಕಾಯ್ತು ।
ನನ್ನ ಕಾಲನರ ಭೇರಿ ಬಾರಿಸುತಿಹವು ।
ಏಕಪ್ಪ ಗೌತಮಾ ಆನಂದದೀ ದಿನದಿ
ಮನೆ ತೊರೆದೆ ಏಕೆ ?

**ಸಿದ್ಧಾರ್ಥ** : ಏನೊಸಗೆ ಚೆನ್ನಜ್ಜ ? ಏನಂಥ ಸುದ್ದಿ ?

**ಚೆನ್ನಜ್ಜ** : ಚೆನ್ನಾಯ್ತು..... ನೀನೀಗ ಗಂಡುಮಗುವಿನ ತಂದೆ !
ಅರಮನೆಗೆ ಅರಮನೆಯೆ ಹರ್ಷ ತೊಟ್ಟಿಲಿನಲ್ಲಿ
ಓಲಾಡುತಿಹುದು ! ಏನೆಂಥ ಚೆಲುವು ಆ ಕಂದನದು ಸಿದ್ಧಾರ್ಥ !
ಚೊಕ್ಕ ಚಿನ್ನದ ಬೊಂಬೆ ! ಹೆಸರು ರಾಹುಲ !
ಗೌತಮಾ ಹೆಸರು ರಾಹುಲನಂತೆ !

**ಸಿದ್ಧಾರ್ಥ** : (ಸ್ವಗತ) ರಾಹುಲ ! ರಾಹುಲ ! ಹಹ್ಹಹ್ಹಹ್ಹ ರಾಹುಲಾ
ನನ್ನ ಸಂಕಲ್ಪಕ್ಕೆ ನೀನೊಂದು ರಾಹು !

**(ಪ್ರಕಾಶ)** ಆಯ್ತಾಯ್ತು ಚೆನ್ನಜ್ಜ, ಸಂಜೆ ಸಮಯಕೆ ನಾನು
ಬಂದೆ ಬರುವೆನು ಮನೆಗೆ. ನಡೆ
ಅರಮನೆಯೊಳೆಲ್ಲರಿಗೆ ಅರುಹು ಆಗಮನವನು

**ಚೆನ್ನಜ್ಜ** : ಈಗ ನೆಮ್ಮದಿ ಆಯ್ತು ! ನನಗೆ ಕುಣಿವಂತಾಯ್ತು !
(ಹಾಡುತ್ತಾ ಕುಣಿಯುವನು)

ಎಲ್ಲೆಲ್ಲೂ ಸಂತೋಷ ।
ಮನಕೀಗ ಉಲ್ಲಾಸ ।
ಕಲ್ಲು ಕಲ್ಲು ಕಿಂಕಿಣಿ
ಹುಲ್ಲು ಹಸಿರು ಚಿಣಿಮಣಿ ॥ ಎಲ್ಲೆಲ್ಲೂ ಸಂತೋಷ ॥

ಜಲದಲ್ಲು ಮಲೆಯಲ್ಲು
ಮನದಲ್ಲು ಮನೆಯಲ್ಲು
ಮುಗಿಲಲ್ಲು ಬನದಲ್ಲು
ಹೂವಲ್ಲು ಹೊದರಲ್ಲು
ಮಣ್ಣಲ್ಲು ಹಣ್ಣಲ್ಲು
ಕಿರುಗಾಳಿ ಕರೆವಲ್ಲು
ಸುಳಿಗಾಳಿ ಸುಳಿವಲ್ಲು
ಹೊಂಬೆಳಕು ಹರಿವಲ್ಲು
ದುಂಬಿಯು ನುಡಿವಲ್ಲು
ಹಕ್ಕಿ ಹಕ್ಕಿಗಳ ಕೊಕ್ಕಿನಲಿ
ಮುಕ್ಕುಳಿಸಿ ನಗುವಾ ಮೊಗ್ಗೆಯಲಿ
ಅಲ್ಲಲ್ಲು ಇಲ್ಲೆಲ್ಲು ಎಲ್ಲೆಲ್ಲು ಎಲ್ಲೆಲ್ಲು
ಎಲ್ಲೆಲ್ಲೂ ಸಂತೋಷ ॥

(ಕುಣಿಕುಣಿಯುತ್ತಾ ನಿರ್ಗಮನ)

**(ದೃಶ್ಯ ಬದಲಾವಣೆ)**

**ಸಿದ್ಧಾರ್ಥ** : ವಿಶ್ವವೊಂದು ಹುಚ್ಚರ ಸಂತೆ ! ನಶ್ವರವೆಂದು

ತಿಳಿದರೂ ತುಚ್ಛ ಕಾಮನೆಯನ್ನು ಇಚ್ಛಿಸುವ
ಅರೆ ಹುಚ್ಚರ ಸಂತೆ ! ಸಾವು ಸನ್ನಿಹಿತವಾಗಿ ಮುಪ್ಪು
ಚಪ್ಪರಿಸಿದಾಗ ಮಾತ್ರ ಈ ಹುಚ್ಚಿನ ಅರಿವಾದೀತು !
ಅಂದಿನವರೆಗೂ ಈ ಭ್ರಮೆ ಹರಿಯದು.
ಎರಡು ದಶಕಗಳ ಹಿಂದೆ ಇದೇ
ಲುಂಬಿನೀ ವನದಲ್ಲಿ ನನ್ನನ್ನು ಹೆತ್ತ ಮರುಘಳಿಗೆಯಲ್ಲೇ
ನನ್ನ ತಾಯಿ ಮಾಯಾದೇವಿ ಈ ಮಣ್ಣಿನ ಮಡಿಲಲ್ಲಿ ಅಡಗಿ
ಹೋಗಲಿಲ್ಲವೆ ! ಇಂದು ಹುಟ್ಟಿದ ರಾಹುಲನಿಗೂ ಅದೇ
ಗತಿಯಾದರೆ ? ಆದರೆ ಎನ್ನುವುದೇನು ? ಆಗಿಯೇ ಆಗುತ್ತದೆ.
ಮೃತ್ಯುವನ್ನು ವಂಚಿಸುವುದು ಯಾರಿಂದಲೂ ಸಾಧ್ಯವಿಲ್ಲ !
ಚಿಕ್ಕಪ್ಪನ ಮಗಳು ಆ ನನ್ನ ಮುದ್ದಿನ ತಂಗಿ,
ನಿನ್ನೆ ತೀರಿದ ಶುಭಮತಿಯನ್ನು ಮರಳಿ ತಂದು
ಕೊಡುವವರೂ ಇಲ್ಲ, ನಾಳೆ ಹೋಗುವ ನನ್ನನ್ನು
ತಡೆಯುವವರೂ ಇಲ್ಲ. ಕೈ ಹಿಡಿದ ಸತಿಯಾಗಲಿ, ಜನ್ಮ
ಪಡೆದ ಸುತನಾಗಲಿ ಯಾರೂ ನನ್ನನ್ನು ಹಿಂಬಾಲಿಸರು
ಇಂದು ಹುಟ್ಟಿದ್ದಕ್ಕೆ ಹಬ್ಬ ನಾಳೆ ಸತ್ತದ್ದಕ್ಕೆ ತಿಥಿ ! ಸಾಕು !
ಸಾಕು ಈ ಸಾವು ನೋವಿನ ಚೆಲ್ಲಾಟ ! ಜರಾಮರಣ
ನಾಶಾರ್ಥವಾಗಿ, ಜನತೆಯ ದುಃಖ ಕೋಟಲೆಯನ್ನು
ದೂರಮಾಡುವುದಕ್ಕಾಗಿ ನಾನೊಂದು
ಪರಿಹಾರ ಹುಡುಕಲೇಬೇಕು. ಉಗ್ರತಮ ತಪಸ್ಸಿನ ಮೂಲಕ
ಸತ್ಯವನ್ನು ಸಾಧಿಸಿ ಜಗತ್ತಿಗೆ ಅದನ್ನು ಬಿತ್ತರಿಸಿ ಹೇಳಲೇಬೇಕು.
ಅದಕ್ಕೆ 'ನಾಳೆ ನಾಳೇ' ಎಂದು ದಿನಗಳನ್ನು ಎನಿಸಿದರೆ
ಆಗದು.
ಹುಟ್ಟದಿರುವ ನಾಳೆ ಸತ್ತಿರುವ ನಿನ್ನೆಯಷ್ಟೇ ನಿಷ್ಫಲ ! ಆದ್ದರಿಂದ
ಇಂದೇ ಈಗಲೇ ಹೊರಡಬೇಕು. ದೂರ ದೂರ
ಬಹುದೂರ....... !
ದೂರ ಸಾರುವ ಮುನ್ನ ಸತಿಸುತರ ಕಟ್ಟಕಡೆ ದರ್ಶನವ
ಪಡೆಯುವೆನು ನಿಷ್ಕಾಮ ಪ್ರೇಮವನು ವ್ಯಕ್ತಪಡಿಸೆ !

**ದೃಶ್ಯ : ೬** **ಅಂತಃಪುರ**

(ಕತ್ತಲಿನ ಮೊತ್ತವನ್ನು ಚುಚ್ಚುವ ಮೊನಚಾದ ಸೂಜಿಯಂತೆ
ಒಂದೇ ಒಂದು ಕಿರು ಹಣತೆ ಮಿನುಗುತ್ತಿರುತ್ತದೆ. ಒಂದು ಕಡೆ
ಪತ್ನಿ ಯಶೋಧರೆಯ ಮಂಚ, ಮತ್ತೊಂದೆಡೆ ರಾಹುಲನ ತೊಟ್ಟಿಲು.
ನೆಲದ ಮೇಲೆ ಹಲವರು ಸಖಿಯರು ಮಲಗಿದ್ದಾರೆ. ಸಿದ್ಧಾರ್ಥ
ರಂಗದ ನಡುವೆ ನಿಂತಿದ್ದಾನೆ. ತೆರೆ ಸರಿದಾಗ ರಂಗ ನಿಶ್ಶಬ್ದವಾಗಿರುತ್ತದೆ.
ಅನಂತರ ಒಂದು ದಿವ್ಯ ತೇಜೋಮೂರ್ತಿ
ಸ್ತ್ರೀ ಆಕೃತಿ ಯಶೋಧರೆಯ ಮಂಚದೆಡೆ; ಅದು ಓಜಸ್ಸು ! ರಾಹುಲನ
ತೊಟ್ಟಿಲ ಬಳಿ ಕಾವಿ ವಸ್ತ್ರ ಧರಿಸಿದ ವೈರಾಗ್ಯ ಮೂರ್ತಿ ನಿಂತಿದೆ; ಅದು
ತೇಜಸ್ಸು ! ತೆರೆ ಮೇಲೆದ್ದಾಗ ಇವು ಕಾಣಿಸುವುದಿಲ್ಲ, ಕಾಣಿಸಬಾರದು ಅವು
ಮಾತನಾಡುವಾಗ ಮಾತ್ರ Spot-light ಅವರವರ ಮುಖಗಳ

ಮೇಲೆ ಬೀಳಬೇಕು.)
(ಇಷ್ಟಪಟ್ಟರೆ ಓಜಸ್ಸು ಲಾಸ್ಯ, ತೇಜಸ್ಸು ತಾಂಡವ
ಮಾಡಬಹುದು. ಪಾತ್ರಗಳು ನರ್ತಿಸುತ್ತಾ ರಂಗದ ಮೇಲೆ
ಹರಿದಾಡಿದಂತೆ Spot-light ಅವರನ್ನು ಹಿಂಬಾಲಿಸುವುದು
ಸಂಭಾಷಿಸುವ ಪಾತ್ರ ಹೊರತು ಬೇರಾರೂ ಕಾಣದಂತಿರಬೇಕು.
ಬೆಳಕಿನ ವಿನ್ಯಾಸ)

**ಓಜಸ್** : ಬಾ ಸಿದ್ಧಾರ್ಥ ಇತ್ತ ಬಾ.....

**ಸಿದ್ಧಾರ್ಥ** : ಯಾರು ನೀನು !

**ಓಜಸ್** : ನಾ ನಿನ್ನ ಓಜಸ್ಸು....

**ತೇಜಸ್** : (ಜೋರಾಗಿ) ಗೌತಮಾ......

**ಸಿದ್ಧಾರ್ಥ** : ನೀನಾರು ಮತ್ತೊರ್ವ ತೇಜಸ್ವಿನಿ ?

**ತೇಜಸ್** : ನಾನು ತೇಜಸ್ಸು ; ಒಳಗಿನೊಳಗಣ ಬೆಳಗು !

**ಸಿದ್ಧಾರ್ಥ** : ನೀವಿರ್ವರೂ ಬಂದಿರೇತಕೆ ಇಲ್ಲಿ ಈ ವಿಷಮ ಘಳಿಗೆಯಲಿ ?

**ಓಜಸ್** : ನಿನ್ನನೆಚ್ಚರಿಸಲಿಕೆ.... ಸಿದ್ಧಾರ್ಥ ಇತ್ತ ಬಾ.... ಇದೋ ನೋಡು
ಏನು ಚೆಲುವಿನ ಚಿಲುಮೆ ಈ ನಿನ್ನ ಮಡದಿ !
ಸೂರೆಯಾಗಿದೆ ಇಲ್ಲಿ ಸೌಂದರ್ಯರಾಶಿ ।
ಮಿಂಚುಗೊಂಚಲಿನಂತೆ ಮಿರುಗುತಿಹಳೀ ತರುಣಿ
ಅವಳ ನಳಿದೋಳುಗಳು ಆಹ್ವಾನವಿತ್ತಿಹವು
ತಂಪಾದ ಅಪ್ಪುಗೆಯ ಹೆಪ್ಪ ಬಯಸಿ ।
ನುಣ್ ಕದಪ ಕಂಪು । ಹಾಲ್ಗಲ್ಲದಿಂಪು । ಏರಿಳಿವ ಎದೆ ಬಿಣ್ಪು !
ಗೌತಮಾ, ಅವಳ ಚೆಲುವಿನ ತುಟಿಯು ಚುಂಬನಕೆ
ಕಾದಿಹುದು.
ಒಮ್ಮೆ ಚುಂಬಿಸಿ ನೋಡು ! ಸಗ್ಗ ಸುಖವೂ ಸಪ್ಪೆ ಇದರ
ಮುಂದೆ !
ಒಂದಡಿಯ ಮುಂದೆ ಇಡು, ಮುಂದಿಟ್ಟು ಮುಟ್ಟವಳ
ನಿನಗಲ್ಲಿ ಸಿಕ್ಕುವುದು ಜೀವನದ ಸಾರ !
ಅವಳೆ ನಿನ್ನಯ ಬಾಳ ಜೀವ ಸಂಜೀವಿನಿಯು;
ಅವಳೆ ಸೌಖ್ಯದ ಸ್ವರ್ಗ, ನಿನ್ನೆದೆಯ ಸೊದೆ ಸೋನೆ !
ಹೂಂ, ಬಾ... ಮುಂದೆ ಬಾ, ಅಂಜದಿರು ಹೆಜ್ಜೆಯಿಡು !
(ಸಿದ್ಧಾರ್ಥ ಆ ಕಡೆ ಹೆಜ್ಜೆಯನ್ನೆತ್ತಿದ ಕೂಡಲೆ)

**ತೇಜಸ್** : ನಿಲ್ಲು ಸಿದ್ಧಾರ್ಥ !
ಹೂವೆಂಬ ಭ್ರಮೆಯಿಂದ ಜ್ವಾಲೆಯನು ಮುತ್ತಿಡಲು
ಹೋಗುವ ಪತಂಗದಂತಾಗದಿರು !
ನೀನವಳ ಸ್ಪರ್ಶಿಸಲು ನುಚ್ಚು ನೂರಾಗುವುದು
ನಿನ್ನೆದೆಯ ನಿಶ್ಚಯದ ಸೌಭದ್ರ ಕೋಟೆ ।
ನಿನ್ನ ಬಯಕೆಯ ಕಡಲು ಬತ್ತಿ ಬಯಲಾಗುವುದು ।
ಕರಗಿ ಹರಿದೀತಿಲ್ಲೆ ನಿನ್ನಚಲ ನಿರ್ಧಾರ ಹೈಮಾಚಲ ।
ಎಚ್ಚರಿಕೆ ಮತಿಹೀನ ಎಚ್ಚರಾ ! ಎಚ್ಚರಾ ! ಎಚ್ಚರಾ ! !

**ಓಜಸ್** : ಗೌತಮಾ, ಆತ್ಮವಂಚನೆಯೆಂದೂ ಮಹಾಪಾಪ !
ಆಸೆ ಹಸಿಯಾಗಿಹುದು ನಿನ್ನೆದೆಯ ಬದಿಯಲ್ಲಿ
ಕಣ್ಣಲ್ಲಿ ಕಾಮುಕತೆ ತನ್ತಾನೆ ಸುವ್ಯಕ್ತ ।

ಚುಂಬಿಸಿದ ತುಟಿಗಳಲಿ ತೇವವಿದೆ; ಆರಿಲ್ಲ !
ತೋಳ್ಗಳಲಿ ಅಪ್ಪುಗೆಯ ನೆನಹು ಮಾಸಿಲ್ಲ !
ಆತ್ಮವಂಚನೆ ಬೇಡ, ಪೂರ್ಣಗೊಳಿಸಿಕೊ; ಹೋಗು
ಅಪ್ಪವಳ ಮುದ್ದಾಡು, ಮೋಹ ಮದಿರೆಯು ಅವಳು !
ಅಪರೂಪವೀ ಜನ್ಮ ! ವ್ಯರ್ಥಗೊಳಿಸಲು ಬೇಡ
ಬರಡು ವೈರಾಗ್ಯಕ್ಕೆ ಮನ ತೆತ್ತು ಪರಿತಪಿಸಬೇಡ

**ತೇಜಸ್** : ಸತಿ ಸುತರ ಹಿತಕಾಗಿ ಶತಕೋಟಿ ಮಾನವರ
ಬಲಿದಾನ ವಿಹಿತವೇ ಹೇಳು ಸಿದ್ಧಾರ್ಥ ?
ಬಾಳು ನಶ್ವರ ಕಂದ, ಹಾಳು ಕೆಡೆವುದು ಕಾಮ !
ವೈಯಾರದೈಸಿರಿಗೆ ಮನಸೋತು ಮುಳುಗದಿರು.
ಅಮೃತವೃಕ್ಷದ ಬುಡಕೆ ಕೊಡಲಿಯಿಡೆ ಒಳಿತಲ್ಲ ।
ಸಿದ್ಧಾರ್ಥ, ಇದು ನಿನ್ನ ಜೀವನದ ಪರ್ವಕಾಲ,
ನಿನ್ನ ಯೋಗ್ಯತೆಯೊರೆವ ಚರಮಘಟ್ಟ ।
ಅಲ್ಲಿಹಳು ಮೋಹಿನಿ, ಇಲ್ಲಿಹೆನು ವಿರಾಗಿಣಿ ।
ನಿನ್ನಾಯ್ಕೆ ಯಾರೊ ? ಕಾವಿಯೆ ? ಕಾಂಚನವೆ ?

–(ಲಾಸ್ಯ–ತಾಂಡವ ಮಿಶ್ರ ನೃತ್ಯ ಚಣಕಾಲ ಕಿವಿ
ಗಡಚಿಕ್ಕುವ ವಾದ್ಯಘೋಷ, ಕತ್ತಲು ಬೆಳಕು ವಿನ್ಯಾಸ
'ಕಾವಿ ಕಾವಿ' 'ಕಾಮಿನಿ ಕಾಮಿನಿ' ಎಂಬ ಎರಡು ವರ್ಗಗಳ ಆರ್ಭಟ.)–

**ಸಿದ್ಧಾರ್ಥ** : (ಜೋರಾಗಿ) ಸಾಕು... ! ಸಾಕು..... ! (ಚಣಕಾಲ ಮೌನ)
ವ್ಯಷ್ಟಿ ಹಿತಕಿಂತಲೂ ಆ ಸಮಷ್ಟಿಯು ಶ್ರೇಷ್ಠ ।
ಲೋಕಸಂಗ್ರಹಕಾರ್ಯಕೀಗ ಮನಗೊಡುವೆ ।
ಮನೆ ಮಠವನೆಲ್ಲವನು ಬಿಟ್ಟು ನಡೆವೆ । ಬಿಟ್ಟು ನಡೆವೆ ।
ಓ ಕರೆವ ಅಶ್ರುತ ಅವ್ಯಕ್ತ ಗಾನಲಹರಿಯೆ ಕೇಳು ।
ಇದೊ ಬಂದೆ । ಇದೊ ಬಂದೆ । ಓಡೋಡಿ ಬಂದೆ ।

(ಸಿದ್ಧಾರ್ಥ ನಿಧಾನವಾಗಿ ರಂಗದ ಮಧ್ಯ ಭಾಗದಲ್ಲಿ ಪ್ರೇಕ್ಷಕರ ಕಡೆ
ಬೆನ್ನುಮಾಡಿ ನಿರ್ಗಮಿಸುತ್ತಾನೆ. ಅಲ್ಲಿ ದೂರದಲ್ಲಿ ರಂಗದ
ಹಿಂಬದಿಯಲ್ಲಿ ಮೇಲ್ಭಾಗದಲ್ಲಿ ಜ್ಯೋತಿಯೊಂದು ಮಿನು
ಮಿನುಗಿ ಅವನನ್ನು ಕರೆಯುತ್ತಿರುತ್ತದೆ. ಅದರತ್ತ ಸಾಗುವಾಗ
ರಂಗದ ಇಕ್ಕೆಲಗಳಿಂದಲೂ ಸುಜಾತ ಮತ್ತು ಅವಳ ಗೆಳತಿಯರು
ಹಾಡಿ ಕುಣಿಯುತ್ತಾ ಪ್ರವೇಶಿಸುತ್ತಾರೆ)

**ನರ್ತಕಿಯರು** :

ಜ್ಯೋತಿ ಕರೆಯುತಿದೆ । ನಿರ್ಮಲ ಪರಂ–
ಜ್ಯೋತಿ ಕರೆಯುತಿದೆ ॥ ಪ ॥
ಮಾತು ಮನಂಗಳಿಂದತ್ತತ್ತ ಮೂಡಿದ
ಸತ್ಯ ಸೂರ್ಯನ ನಿತ್ಯ ಸಚ್ಚಿದಾನಂದದ ॥ ಅನು. ಪ ॥
ಕತ್ತಲು ಮೆತ್ತಿಹುದು । ಈ ಜಗವೆಲ್ಲ
ಬತ್ತಲೆ ಮಲಗಿಹುದು
ಎತ್ತೆತ್ತ ನೋಡಿದಡತ್ತತ್ತ ಗುಡುಗುವ
ಮಿತ್ತು ಬಿತ್ತುಗಳನ್ನು ಕಿತ್ತು ಹುಡಿಗೈಯೆಂದು ॥ ೧ ॥
ದಾರಿಗೆ ನೆರಳೇ ಇಲ್ಲ । ನೆಲದೊಳಗಿನ
ಬೇರಿಗೆ ಕರುಳೇ ಇಲ್ಲ !

ನೀರಿನ ನೆರೆ ಕಂಡು ಬಾಯಾರಿ ಬಿರಿವಂತೆ
ಹಾರಾಡಿ ಮುರಿಯದಿರೆಂದೆಲ್ಲ ಸಾರಿ ॥ ೨ ॥

–ಎಲ್ಲರು ನರ್ತಿಸುತ್ತಲೇ ನಾಟ್ಯ ಶಾಲೆಗೆ ಬರುತ್ತಾರೆ–

**ದೃಶ್ಯ : ೭** **ಅರಮನೆಯ ಕೈಸಾಲೆ**

**ಸುಜಾತ** : ಇಂತಾಯ್ತು ಗೌತಮನ ಪಥ ಬೇರೆಯಾಯ್ತು.
ವೈರಾಗ್ಯ ವಶನಾಗಿ ಉರುವೇಲೆ ಅಡವಿಯಲಿ
ಅರಳಿಮರದಡಿಯಲ್ಲಿ ಘೋರ ತಪಗೈದ
ಅನ್ನಾಹಾರಾದಿಗಳನೆಲ್ಲ ಬಿಟ್ಟು

(ಚಣಕಾಲ ಮೌನ)

(ಬೇರೆ ಧಾಟಿಯಲ್ಲಿ)

ವೈಶಾಖ ಪೌರ್ಣಿಮೆಯ ಶುಕ್ಲ ದಿನದಂದು
ವನದೇವತೆಯ ನಾನೋಲೈಸಲೆಂದು
ಹೋಗಿ ನೋಡಿದೆನವನ ಸಾಯಲಿದ್ದವನ ॥

**ದೃಶ್ಯ ಬದಲಾವಣೆ**

–ಅಲ್ಲೊಬ್ಬ ಬಡಕಲು ಜೋಗಿ ಬೋಧಿವೃಕ್ಷದಡಿಯಲ್ಲಿ ತಪಗೈವನಂತೆ ಕುಳಿತಿರುವ ದೃಶ್ಯ. ಅಲ್ಲಿಗೆ ಸುಜಾತಳು ಪೂಜಾಪರಿಕರಗಳನ್ನು ಹಿಡಿದು ನಡೆದಂತೆ, ಸೇವೆಗೈದಂತೆ, ಸಂಭಾಷಿಸಿದಂತೆ ಅಭಿನಯ ತೋರಬೇಕು–

ಪಾಪ, ಕರುಣೆಯು ಬಂತು ಹಿಡಿದೆ ಕ್ಷೀರವನು !
ಹೀರಿದನು ಹೀರಿದನು ಸೊರ ಸೊರನೆ ಹೀರಿದನು
ಬರುನೆಲವು ಹಿರಿ ಹಿಗ್ಗಿ ಮಳೆಯನೀಂಟುವೊಲು,
ನಿಟ್ಟುಸಿರು ಬಿಟ್ಟಾತ ತೃಪ್ತಿ ನಗೆ ಹರಿಸಿದನು ॥
'ಹೇಗಿತ್ತು ತವಸಿ ನಾನಿತ್ತ ಹಾಲು' ಎಂದೆ
'ನನ್ನ ತಾಯಿಯ ಎದೆಯ ಸೊದೆಯ ಕುಡಿದಂತಿತ್ತು' ಎಂದ !
ಹಿಗ್ಗಿದೆ. ಸಾವಿನ ದವಡೆಯಲ್ಲಿದ್ದವನ
ಬಿಡಿಸಿತಂದವಳೆಂಬ ಹಿಗ್ಗು ಎನಗಾಯ್ತು
ಕೇಳಿದೆನು ನಾನಾಗ ನೀನಾರು ಎಂದು
ಹೇಳಿದನು ತನ್ನಾತ್ಮ ವ್ಯಥೆಯ ಕಥೆಯನ್ನು !
ಆತ್ಮದಾವಾಸಸ್ಥಾನವಾಗಿಹುದು ದೇಹ ॥
ದೇಹವೇ ಇಲ್ಲವೆನೆ ಆತ್ಮ ಕೈಯಿಗೆ ಸಿಗದು.
ಅದರಿಂಗೆ ಆತ್ಮಶೋಷಣೆ ಬೇಡ ॥ ಅದ ಸಲಹು ಎಂದೆ.
ಅಂತೆಗೈವೆನು ಎಂದ. ಧ್ಯೇಯವನು ಸಾಧಿಪೆನು ನನ್ನ ಗುರಿ
ಮುಟ್ಟುವೆನು ಎಂದು ಉದ್ಘೋಷಿಸುತ
ನಡೆದೆ ಬಿಟ್ಟನು ತಾನು ಗಯೆಯ ಬಳಿಗೆ !

(ಬೇರೆ ಧಾಟಿಯಲ್ಲಿ)

ಆ ರಾತ್ರಿ ಹರಿಹರಿದು ಅರೆದಾರಿ ಸಮೆಸಿತ್ತು
ಹಸಿರ ಹಾಸಿನ ಮೇಲೆ ಬೆಳುದಿಂಗಳೊರಗಿತ್ತು !
ವೈಶಾಖ ಪೌರ್ಣಮಿಯ ಸರಿರಾತ್ರಿಯಂದು
ದಿವ್ಯ ತೇಜಸ್ಸೊಂದು ಗಗನದಿಂದವತರಿಸಿ
ಯೋಗಮುದ್ರೆಯಲಿದ್ದ ಗೌತಮನ ಮುಖ ತುಂಬಿ

ದಿವ್ಯ ಸಂದೇಶವನು ಬೋಧಿಸಿತ್ತವಗೆ ।

**'ನಾ ಕಂಡೆ ನಾ ಕಂಡೆ ಪರಿಹಾರ ಕಂಡೆ ।**
**ಜೀವಿಯುದ್ಧಾರದಾ ಪಥವ ಕಂಡೆ ।'**
ಎಂದೆದ್ದು ಹೊರಟನವ ಸಿದ್ಧಾರ್ಥ ಗೌತಮನು !
ಬೋಧಿಸತ್ವನು ತಾನು ಬುದ್ಧನಾದ
ಜಗದ ಜ್ಯೋತಿಯೆ ಆಗಿ ಸಿದ್ಧನಾದ !

**ನರ್ತಕಿಯರು :** ಆಮೇಲಾಮೇಲೆ ಬುದ್ಧನೇನಾದ ?

**ಸುಜಾತ :** ಹಗಲಿಗೊಂದು ನಗರ । ಇರುಳಿಗೊಂದು ಹಳ್ಳಿ ।
ಬುದ್ಧದೇವ ನಡೆದನು । ಧರ್ಮೋಪದೇಶಗೈಯುತ ।
ಭಿಕ್ಷುಗಳನು ಕೂಡಿಸಿ । ಸಂಘ ಸಂಸ್ಥಾಪಿಸಿ ।
ಮೇಲು ಕೀಳು ತೊಲಗಿಸಿ ಜನ ಜಾಗ್ರತರಾಗಿಸಿ,
ಬುದ್ಧದೇವ ಶುದ್ಧಜೀವ ಬಂದ ವೈಶಾಲಿಗೆ !
ಅಲ್ಲಿ ಸುದ್ದಿ ಮೆರೆಯುತಿತ್ತು ಬುದ್ಧ 'ದೇವದೂತ'ನೆಂದು,
ಅವತಾರಪುರುಷನೆಂದು ! ಪರುಷಮಣಿಯು ಆತನೆಂದು
ರೋಗ ರುಜಿನ ಮಂಗಮಾಯ ಅವನು ದೇಹಮುಟ್ಟೆ,
ಸತ್ತವನೂ ಬದುಕಿ ಬಹನು ಅವನು ದಿಟ್ಟಿಯಟ್ಟೆ !

**ಅಭಿನಯಿಸುತ್ತಾ :** ಹಬ್ಬಿದಂಥ ಸುದ್ದಿ ಕೇಳಿ, ಪವಾಡವಿಂದ್ರಜಾಲಕೆಳಸಿ
ಆದಳೊರ್ವ ಮುಗುದೆಯಲ್ಲಿ ವೈಶಾಲಿಯಲ್ಲಿ
ಹೆಸರು ಕಿಸಾಗೋತಮಿ; ಅನಾಥೆ ವಿಧವೆ ಭಾಮಿನಿ
ಸರ್ಪದಂಷ್ಟ್ರದಿಂದ ಸತ್ತ ತನ್ನ ಹಸುಳೆಯೆತ್ತಿತಂದು
ಬುದ್ಧದೇವನಲ್ಲಿಗೈದು ಬದುಕಿಸೆಂದು ಕುಸಿದಳು !
ತಿಳಿಯ ಹೇಳ್ದ ಬೋಧಿಸತ್ವ–
'ತಾಯಿ, ಸಾವು ಸತ್ಯವು
ಅದನು ಗೆಲಲಸಾಧ್ಯವು
ಕೊಂಡು ಹೋಗಿ ಮರೆಯಮಾಡು
ಬೇರೆ ಮಾರ್ಗವಿಲ್ಲವು !
ತೃಪ್ತಳಾಗಲಿಲ್ಲವಾಕೆ. ಸತ್ತ ಮಗುವ
ಎತ್ತಿ ಹಿಡಿದು ಮತ್ತೆಮತ್ತೆ ಬೇಡಿದಳು
ಬದುಕಿಸೋ ಬದುಕಿಸೋ
ಕರುಳ ಕುಡಿಯ ಕೊನರಿಸೋ
ಆಡದಿದೆ ನುಡಿಯದಿದೆ
ನೋಡಿ ನಕ್ಕು ನಗಿಸದಿದೆ
ಬೇಡುವೆನೋ ಸೆರಗ ಒಡ್ಡಿ
ನೀಡು ನನ್ನ ಶಿಶುವನು
ಇಂತು ಬೇಡೆ,
ಬುದ್ಧದೇವ ಮರಣದರಿವು ಮಾಡಲೆಂದು
ಸಾವ ಸೆರಗು ಬಡಿಯದಿರುವ ಮನೆಗೆ
ಹೋಗಿ
ಸಾಸಿವೆಯನು ಕೊಂಡು ಬಾ
ಮರಣದೊಗಟ ಬಿಡಿಸುವೆ – ಎಂದು ಹೇಳಿ ಕಳುಹಲು....

**ನೇಪಥ್ಯದಲ್ಲಿ ಹಾಡು:**

ಸಾಸಿವೆಯು ಬೇಕೆನಗೆ ಸಾಸಿವೆಯು ಬೇಕು
ಸಾಸಿವೆಯು ಬೇಕೆನಗೆ ಸಾಸಿವೆಯು ಬೇಕು
ಕಂದನನು ಬದುಕಿಸಲು ಸಾಸಿವೆಯು ಬೇಕು
ತಾಯಿಯರೆ ತಂಗಿಯರೆ ಓ ನನ್ನ ಅಕ್ಕಗಳೆ
ಸಾಸಿವೆಯು ಬೇಕೆನಗೆ ಸಾಸಿವೆಯು ಬೇಕು
ಸಾವು ಕಾಣದ ಮನೆಯ ಸಾಸಿವೆಯು ಬೇಕು
ಸಾವು ಕಾಣದ ಮನೆಯ ಸಾಸಿವೆಯು ಬೇಕು ॥

**ಬುದ್ಧ** : ಬಾ ತಂಗಿ ಬಾ ಮಳೆ ಬಾ ಕಿಸಾಗೋತಮೀ
ದೊರಕಿತೇ ಸಾಸಿವೆಯು ಮಗನನುಳಿಸಲಿಕೆ
ಸಾವು ಮುಟ್ಟದ ಮನೆಯ ಸಾಸಿವೆಯು ದೊರಕಿತೇ ?
(ಮಾತು ಮುಗಿವಷ್ಟರಲ್ಲಿ ತೋಳುಗಳಲ್ಲಿ ಎತ್ತಿ ಎದೆಗಪ್ಪಿಕೊಂಡ ಸತ್ತ ಶಿಶುವಿನೊಡನೆ ರಂಗ ಪ್ರವೇಶಿಸುತ್ತಾಳೆ)

**ಕಿಸಾ** : ಗುರುದೇವ
ಸಾಸಿವೆಯ ಕಾಳಿಹುದು, ಸಾವಿರದ ಮನೆಯಿಲ್ಲ !
ಎಲ್ಲ ಮನೆಗಳ ಮೇಲೂ ಸಾವಿನಾ ನೆರಳು !
ಎಲ್ಲ ಮನೆಗಳ ಮೇಲೂ ಸಾವಿನಾ ನೆರಳು !

**ಬುದ್ಧ** : ಸಾವಿಲ್ಲದೆಡೆಯಿಲ್ಲ ನೋವಿಲ್ಲದೆಡೆಯಿಲ್ಲ
ಸಾವು ಜೀವಕೆ ನಂಟು ಹಗಲಿರುಳಿನಂತೆ !
ತಾಯಿ, ಮರಣವನು ಗೆಲ್ಲುವುದು ಮಾರನಿಗು ದುಸ್ಸಾಧ್ಯ !
ಹೋಗಿ ಬಾ ತಾಯಿ, ಮಗನ ಮೃತದೇಹವನು
ಭೂಮಾತೆ ಮಡಲಿಗಿಡು, ಮನದಿ ನೆಮ್ಮದಿ ತಾಳು !
ಶುಭಮಕ್ಕೆ ಮನಕೆ ಶಾಂತಮಕ್ಕೆ !

**ಕಿಸಾ** : (ಕಳೇಬರವನ್ನು ಎತ್ತಿಕೊಂಡು ಬುದ್ಧನಿಗೆ ನಮಿಸಿ)
ಜಯಬುದ್ಧ ಗುರುದೇವ ಜಯಬುದ್ಧ ಗುರುದೇವ
ಜಯಶುದ್ಧ ಚಾರಿತ್ರ್ಯ ಜಯ ಶುಭ್ರ ತೇಜ ।
–(ನಿರ್ಗಮನ)–
(ದೃಶ್ಯ ಬದಲಾವಣೆ)

**ಸುಜಾತ** : ಅಜ್ಞಾನದೆದೆಯಲ್ಲಿ ಸುಜ್ಞಾನ ಬೆಳಗಿ
ಜ್ಞಾನಿ ಬುದ್ಧನ ಪಯಣ ಸಾಗಿತಲ್ಲಿ
ಅಲ್ಲಿ ಆ ಎಡೆಯಲ್ಲಿ ಜೇತವನದಲ್ಲಿ
ಶ್ರಾವಸ್ತಿ ನಗರದಾ ಹೊರವಳಯದಲ್ಲಿ

**ಗೆಳತಿಯರು** : ಏನಾಯ್ತು ಅಲ್ಲಿ ಆ ಜೇತವನದಲ್ಲಿ ?

**ಸುಜಾತ** : ಅಂಗುಲೀಮಾಲಾ..... ಅಂಗುಲೀಮಾಲಾ
(ಭಯಂಕರ ಸ್ಫೋಟವಾಗುವುದು)
ಮಂತ್ರಾಣಿ ಎಂಬವಳ ರಕ್ಕಸಿಯ ಮಗನು.
ಮನುಕುಲದ ನಾಶಕ್ಕೆ ಪಣವ ತೊಟ್ಟವನು !
ಕೊಂದವನ ಕುರುಹಿಂಗೆ ಬೆರಳೊಂದ ಕಡಿದು,
ಕೊರಳಲ್ಲಿ ಮಾಲೆಯನು ಕಟ್ಟಿಕೊಂಡವನು !
ಅವನ ಕಾಲ್ತುಳಿತಕ್ಕೆ ಅರೆಬಂಡೆ ಚೂರು !
ವೃಕ್ಷಗಳ ಬೇರಳಿದು ಬುಡಮೇಲು ನೂರು !
–(ವಿವರದೊಡನೆಯೇ ದೃಶ್ಯ ಬದಲಾಗುವುದು)–

(ಕಾಡ ಮಧ್ಯದಲ್ಲಿ ಕಾಷಾಯವಸ್ತ್ರಧಾರಿ ಬುದ್ಧದೇವ ಬರುತ್ತಿದ್ದಾನೆ.
ಎತ್ತರದ ಕೋಡುಬಂಡೆಯ ಮೇಲೆ ಭಯಂಕರಾಕಾರಿ ಅಂಗುಲೀಮಾಲ !)

**ಅಂಗುಲೀ** : ಹಹ ಹಹ ಹಹ ಹಹ ಹಹ ಹಹ
(ಗಸಗಸೆ ತೇಗುತ್ತಾ ಕುಣಿಯುತ್ತಿರುವವನು)
ಹಸಿವು ಹಸಿವು ಹಸಿವು
ಬಸಿರ ಬಗೆವ ಹಸಿವು
ಕರುಳ ಜಗಿವ ಹಸಿವು
ಕಣ್ಣ ಕಿತ್ತು ಕೈಯ ಕಡಿದು
ಕೊಂದ ಮನುಜನೊಂದೆ ಬೆರಳು
ಕೊರಳ ಮಾಲೆಗಿಡುವ ಹಸಿವು

(ಬುದ್ಧನತ್ತ ನೋಡಿ)
ಏನಿದಚ್ಚರಿ ಏನು ?
ಕಾಡ ಹಾದಿಯಲಿಂದು ಕಾಷಾಯಧಾರಿ !
ಓಹ್ ! ಬದುಕು ಬೇಡಾಗಿಹುದು ಇವಗೆ ! !
ಕೂಗುವೆನು, ಕೂಗಿ ತಡೆಯುವೆನವನ.
ನಿಲ್ಲು ಸವಣಾ ನಿಲ್ಲು !
.................................
ಹೂಂ ! ಮೌನದಲಿ ಬರುತಿಹನು !
ಕೂಗಿ ಕರೆಯುವೆ ಮತ್ತೆ
ನಿಲ್ಲು ಸವಣಾ ನಿಲ್ಲು !

**ಬುದ್ಧ** : ನಿಂತೆ ಇರುವೆನು ನಾನು ಮಂತ್ರಾಣಿತನಯ
ನೀನು ನಿಲ್ಲು !

**ಅಂಗುಲೀ** : ಏನಿದಾಶ್ಚರ್ಯ ! ಯಾರಿವನು ಬಡಜೋಗಿ ?
ಒಗಟಿನುತ್ತರವೀವ ಬೈರಾಗಿ ಯಾರು ?
ಓ ಸನ್ಯಾಸಿ,
ನಿಂತಿರುವ ನನ್ನನ್ನು 'ನೀನಿಲ್ಲು' ಎಂದೆನುವೆ
ನಡೆದು ಬರುತಿಹ ನೀನು 'ನಿಂತಿರುವೆ' ಎಂದೊರೆವೆ !
ಏನಿದರ ಗೂಡಾರ್ಥ ? ಪೇಳು ತವಸಿ !
ಕೈಬೆರಳು ತುಂಡಾಗಿ ಮಾಲೆಯಾಗುವ ಮುನ್ನ
ಕರುಳ ಕಡಗವು ನನ್ನ ಕಾಲನಡರುವ ಮುನ್ನ
ರಕ್ತದೋಕುಳಿಯಲ್ಲಿ ಮೈಯ ತೋಯಿಪ ಮುನ್ನ
ಪೇಳು ತವಸಿ, ಇಡಲಾರೆಯೋ ನೀನು ಹೆಜ್ಜೆ ಮುಂದೆ !

**ಬುದ್ಧ** : ಬಾ ಎನ್ನ ಸನಿಹಕ್ಕೆ ಬಿತ್ತರಿಸಿ ಪೇಳುವೆನು.
ಸರ್ವಭೂತಂಗಳಲಿ ದಂಡವಿಳಿಸಿದೆ ನಾನು,
ಸರ್ವ ಜೀವಿಗಳಲ್ಲಿ ದಯೆಯ ತುಂಬಿದೆ ನಾನು,
ಎಲ್ಲರನು ಪ್ರೀತಿಸುವೆ, ಎಲ್ಲರೂ ಪ್ರೀತಿಪರು ನನ್ನ !
ಎಲ್ಲರೆದೆ ಮಂದಿರದಿ ನಾನು ನಿಂದಿಹೆನು;
ಇದು ನಾನು ನಿಂತಿರುವೆನೆಂಬುದರ ಅರ್ಥ !

ಕೊಲೆಯಗೈವ ನೀನೆಲ್ಲೂ ನೆಲೆಯ ಕಾಣೆಯೊ ತಮ್ಮ,
ನೆಲೆಯಿಲ್ಲದಲೆಯುತಿಹ ನೀನಿನ್ನೂ ನಿಂತಿಲ್ಲ
ಇದುವೆ ಮಾತಿನ ಅರ್ಥ ! ಕವಡು ನುಡಿ ಇಲ್ಲಿಲ್ಲ !

**ಅಂಗುಲೀ** : ಎಂಥ ಮಾಯೆಯ ಬಲೆಯ ಬೀಸಿದೆಯೊ ಸನ್ಯಾಸಿ
ನನ್ನೆದೆಯು ಡವಡವನೆ ದುಡಿಯಂತೆ ಬಡಿಯುತಿದೆ !
ಕೈಕಾಲು ನಡುಗುತಿವೆ ಮೂರ್ಛೆ ಬರುತಿದೆ ನನಗೆ !

**ಬುದ್ಧ** : ಬಾ ತಮ್ಮ, ನನ್ನ ಮುಖದಲಿ ನಿನ್ನ ಮುಖವಿಟ್ಟು ನೋಡು,
ನನ್ನ ಕಣ್ಣುಗಳಲ್ಲಿ ನಿನ್ನ ಕಣ್ ಬೆರೆಯಲಿ
ನನ್ನ ತೋಳಾಲಿಂಗನಕೆ ನಿನ್ನ ತೋಳ್ಗಳು ಬರಲಿ
ಎಲ್ಲ ಸರಿ ಹೋಗುವುದು, ಎಲ್ಲ ಶುಭವಹುದು !

**ಅಂಗುಲೀ** : (ಬುದ್ಧನ ಮುಖದಲ್ಲಿ ಮುಖವಿಟ್ಟು) ಆರು ನೀನೆನಲೆ ತವಸಿ ?
ನಿನ್ನ ಕಣ್ಣಿನ ತಡಿಯ ಬೆಳಕಿನರುಣೋದಯದ ಹೊಂಬೊಗರು
ಎನ್ನೆದೆಯ ತಾವರೆಯ ತೆರೆಸುತಿಹುದು ! ಎಂದಿನಿಂದಲೊ
ತುಂಬಿದೀ ಮನೆಯ ಕತ್ತಲನು ಹರಿಹರಿಸಿ ಹೊಂಬೆಳಕ
ಸೂಸುತಿಹುದು !

–(ಕಾಲಿಗೆ ಬೀಳುವನು)–

**ಬುದ್ಧ** : ಮೇಲೇಳು ಸೋದರನೆ, ನಾನೊಬ್ಬ ಬೈರಾಗಿ.
ಮಡದಿ ಮಗು ಮನೆ ಮಾರು ರಾಜ್ಯಕೋಶಾದಿಗಳ
ಒತ್ತರಿಸಿ ನಾ ಬಂದೆ ಸತ್ಯದನ್ವೇಷಣೆಗೆ !
ಹುಟ್ಟು ಸಾವುಗಳೆಂಬ ಅವ್ಯಕ್ತ ದಡಗಳಲಿ
ಬಾಳ ನದಿ ಹರಿಯುತಿದೆ ಅದ ತಿಳಿಯಲೈದಿದೆನು !
ಆಶೆ ನಾಶದ ಹೇತು, ಆಶೆ ಎಂಬುದು ಪಾಶ
ಅದ ಬಿಡಿಸೆ ಹೊರಟಿಹೆನು, ಬಾ ಬಂಧು, ಬಾ ಭಿಕ್ಷು !

(ಆಲಿಂಗಿಸಿಕೊಳ್ಳುವರು)

**ಅಂಗುಲೀ** : ಆನಂದಂ ಮಹದಾನಂದಂ
ಆನಂದಂ ಪರಮಾನಂದಂ ॥
ಬುದ್ಧದೇವಗೆ ಭಿಕ್ಷುವಾದೆ ನಾ
ಶುದ್ಧಾತ್ಮನಿಗೆ ಬಂಧುವಾದೆನು
ಧನ್ಯನಾದೆನು ಮಾನ್ಯನಾದೆನು
ಮನುಕುಲ ವಂದಿತ ಪೂಜ್ಯನೆ ಆದೆನು
ಆನಂದಂ ಮಹದಾನಂದಂ ॥ ೧ ॥
ದೈತ್ಯತೆ ನೀಗಿದೆ ದೇವತ್ವವಡೆದೆ
ಮಾನವತೆಯ ಮಹ ಮೌಲ್ಯವ ತಿಳಿದೆ
ಆಶೆಯು ನಾಶಕೆ ಕಾರಣ ಅರಿತೆ
ದ್ವೇಷವದೂಡಿ ಪ್ರೀತಿಯ ಕಲಿತೆ !
ಮಾನವನಾದೆ ನಾ ಮಾನವನಾದೆ
ಮಾನವನಾದೆ ನಾ ಮಾನವನಾದೆ ॥
ಆನಂದಂ ಮಹದಾನಂದಂ
ಆನಂದಂ ಪರಮಾನಂದಂ ॥ ೨ ॥

–ಕುಣಿಯುತ್ತಿರುವಂತೆಯೇ ತೆರೆ–

**ದೃಶ್ಯ : ೯** **ಅರಮನೆಯ ಕೈಸಾಲೆ**

(ಸುಜಾತ ಮತ್ತು ನರ್ತಕಿಯರ ಪ್ರವೇಶ)

ಅತ್ತ ಇತ್ತ ಸುತ್ತ ಮುತ್ತ
ಮತ್ತೆ ಕತ್ತನೆತ್ತಿದತ್ತ
ಮಗಧ ಭೋಗ ನಗರದಲ್ಲಿ
ಆಬೂ ನಗ ವಿಹಾರದಲ್ಲಿ
ರಾಜಗೃಹದ ವೇಣುವನದಿ
ಕುಶೀನಾರ ಸಾಲವನದಿ
ಆಮ್ರಗ್ರಾಮ ಜಂಬುಗ್ರಾಮ
ಹಸ್ತಿಗ್ರಾಮ ಬೇಲುವಾ
ವೈಶಾಲೀ ಶ್ರಾವಸ್ತಿಯಾ
ಎಲ್ಲೆಡೆಯನು ಕಾಲುಗಟ್ಟಿ
ಭಿಕ್ಷುಗಳಾ ಸಂಘ ಕಟ್ಟಿ
ಆದ ಪರಿವ್ರಾಜಕ
ಬುದ್ಧ ತತ್ತ್ವಬೋಧಕ ॥

–ಸುಜಾತ ಒಂದು ಬದಿಯಲ್ಲಿ ನಿಂತು ಹರಿಕಥೆ ದಾಸರ ಕಥಾ ಪ್ರಸಂಗದ ಧಾಟಿಯಲ್ಲಿ ಪ್ರಾರಂಭಿಸಿದಳು–

**ಸುಜಾತ** : ಹೀಗೆ..... ಭಗವಾನ್ ಬುದ್ಧದೇವನು ದೇಶವಿದೇಶಗಳ ಕಾಲ್ಗಟ್ಟಿ ಬೇಲುವದಿಂದ ಭೋಗನಗರಕ್ಕೆ ಬರುತ್ತಿದ್ದಾಗ ಹಾದಿಯಲ್ಲಿ ಏನಾಯ್ತಪ್ಪಾ ಅಂದರೆ......

–ರಂಗಕತ್ತಲಾಗಿ ದೃಶ್ಯ ಬದಲಾಗುವುದು. ಹಿಂಬದಿಯಲ್ಲಿ ಅಡವಿಯ ಹಾದಿ ಬುದ್ಧ, ಆನಂದ ಉಪಗುಪ್ತರೊಡಗೂಡಿ ಬರುತ್ತಿರುತ್ತಾನೆ. ಓರ್ವ ಅನಾಮಿಕೆ (ಪುಟ್ಟ ಅಸ್ಪೃಶ್ಯ ಹುಡುಗಿ) ಓಡೋಡಿ ಬಂದು–

**ಅನಾಮಿಕೆ** : ಕಾಪಾಡಿ... ಕಾಪಾಡಿ... ಕಾ....

**ಬುದ್ಧ** : ಏಳು ಮಗಳೆ ? ಏಕಿಷ್ಟು ಧಾವಂತ ?

**ಅನಾಮಿಕೆ** : ಅಪ್ಪಾಜಿ... ಅಪ್ಪಾಜಿ... ಅವರು... ಅವರು.... !

**ಬುದ್ಧ** : ಹೇಳು ಮಗು ಅವರೇನು ?

**ಅನಾಮಿಕೆ** : ನನ್ನ ಕೊಂದು ಹಾಕ್ತಾರೆ..... !

**ಬುದ್ದ** : ಏಕೆ ?

**ಅನಾಮಿಕೆ** : ಅಪ್ಪಾಜಿ... ನಾವು ಅನಾಮಿಕರಂತೆ, ಅಸ್ಪೃಶ್ಯರಂತೆ ! ನನಗಿದು ಗೊತ್ತಿರಲಿಲ್ಲ. ನಮ್ಮ ಗುಡಿಸಲು ನಮ್ಮೂರ ಬೀದಿಯ ಕೊನೆಯಲ್ಲಿದ್ದು ನಾವು ನೀರಿಗೆ ಹೋಗಬೇಕಾದರೆ ಆ ಕೇರಿ ಮೂಲಕಾನೇ ಹೋಗಬೇಕಾಗಿತ್ತು. ನಾವು ತರುತ್ತಿದ್ದ ತುಂಬಿದ ಗಡಿಗೆ ನೀರು ತೊಟ್ಟಕ್ಕಿ ಬೀದಿಯನ್ನೆಲ್ಲಾ ಅಪವಿತ್ರ ಮಾಡ್ತಿತ್ತಂತೆ ! ಮಡಿಜನ ಮೈಲಿಗೆ ಆಗ್ತಿದ್ದರಂತೆ ! ಹಾಗಂತಾ ಹೇಳಿ ಜಗಳ ಮಾಡಿ ಗುಡಿಸಲನ್ನು ತೆಗೆದು ಬೇರೆ ಕಡೆ ದೂರ ಹೋಗಿ ಅಂತಾ ಸವರ್ಣೀಯರು ಹೇಳಿದರಂತೆ ! ನಮ್ಮಪ್ಪನಿಗೆ ಆಕಾಶವೇ ಕಳಚಿ ಬಿದ್ದ ಹಾಗಾಯ್ತು ! ಎಲ್ಲಿಗೆ ಹೋಗೋದು ? ಜಾಗ ಎಲ್ಲಿದೆ ? ಕೆಲವು ದಿನ ಇದ್ದೆವು. ನಿನ್ನೆ ರಾತ್ರಿ ಊರ ದೊಡ್ಡಮನುಸ್ರೆಲ್ಲಾ ಸೇರಿ ನಮ್ಮ ಗುಡಿಸಲಿಗೆ ಬೆಂಕಿ ಇಕ್ಕಿದರು. ಅದನ್ನು ಹಾರಿಸಲಿಕ್ಕೆ ಹೋದ ಅಪ್ಪ ಅಮ್ಮ ಬೆಂದು ಬೂದಿಯಾದರು. ನನ್ನನ್ನು ಹಿಡಿದು ಬೆಂಕಿಗೆ ಹಾಕೋದಕ್ಕೆ ಬಂದರು. ನಾನು ತಪ್ಪಿಸಿಕೊಂಡು ಓಡಿ ಬಿಟ್ಟೆ. ರಾತ್ರಿಯೆಲ್ಲಾ ಅಡವಿ ಗವಿನಲ್ಲಿ ಅಡಗಿಕೊಂಡಿದ್ದು, ಬೆಳಗಿನ ಜಾವಕ್ಕೆ ಎದ್ದು ಇತ್ತ ಬಂದೆ.

ಅಪ್ಪಾಜಿ... ಪಾಪಿ ಸಮುದ್ರ ಹೊಕ್ಕರೂ ಮೊಣಕಾಲುದ್ದ ನೀರಂತೆ ! ಇಲ್ಲಿ ಈ ಬೇಲುವ ಗ್ರಾಮದ ಹೊರಭಾಗದ ಕೊಳದ ಹತ್ರ ಬಂದೆ. ಹೊಟ್ಟೆ ಅನ್ನ ಕಂಡು ಎರಡು ದಿವಸ ಆಗಿತ್ತು ; ತುಸ ನೀರನ್ನಾದರೂ ಕುಡಿಯೋಣ ಅಂತಾ ಬಂದು ಕೊಳದೊಳಗೆ ಇಳಿದು ಮುಖ ತೊಳೆದು ಇನ್ನೇನು ನೀರು ಕುಡೀಬೇಕು ಅನ್ನೋ ಅಷ್ಟರಲ್ಲಿ ಯಾರೋ ಪುಣ್ಯಾತ್ಮರು ಅರಚಿಕೊಂಡರು – 'ಅಯ್ಯೋ

ಹಾಳಾಯ್ತು, ಹೊಲೆ ಮಾದಿಗರು ಮುಟ್ಟಿದ ನಮ್ಮ ಪುಷ್ಕರಿಣಿ ಅಪವಿತ್ರವಾಯ್ತು. ಹಿಡಿಯಿರಿ ಕಲ್ಲು ದೊಣ್ಣೆಗಳಿಂದ ಈ ಹೊಲತಿಯನ್ನು ಸಾಯಿಸಿಬಿಡಿ' ಅಂತ.

ನಾನು ಅಲ್ಲಿಂದ ಓಡತೊಡಗಿದೆ ಅವರು ನಾಲ್ಕಾರು ಜನ ಹಿಂದೇನೇ ಓಡಿಸಿಕೊಂಡು ಬಂದರು... ಅಪ್ಪಾಜೀ..... ನನ್ನನ್ನ.... ಅವರು......

**ಬುದ್ಧ** : ಚಿಂತೆ ಬೇಡ ಮಗಳೆ, ನೀನೀಗ ಬುದ್ಧನ ವಾತ್ಸಲ್ಯ ವೃಕ್ಷದ ರಕ್ಷೆಯಲ್ಲಿದ್ದೀಯೆ ? ಆನಂದ ಗುರುಗಳೆ, ಈ ಕಂದನಿಗೆ ಒಂದೆರಡು ಹಣ್ಣು.....

–ಅಷ್ಟರಲ್ಲಿ ನಾಲ್ಕಾರು ಜನ ಸವರ್ಣೀಯರು ದೊಣ್ಣೆ, ಕೋಲು
ಇತ್ಯಾದಿಗಳನ್ನು ಹಿಡಿದು ಓಡಿಬಂದು, ಬುದ್ಧನನ್ನೂ
ಅವನ ತೋಳರಕ್ಷೆಯಲ್ಲಿದ್ದ ಅನಾಮಿಕೆಯನ್ನೂ ಕಂಡು,
ಗಕ್ಕನೆ ನಿಲ್ಲುವರು–

**ಸವರ್ಣೀ** : ಓಹ್ ! ಬುದ್ಧಭಗವಾನರು.... ಬುದ್ಧದೇವ, ಅವಳು ಅನಾಮಿಕೆ, ಹೊಲತಿ ಅವಳನ್ನು ಮುಟ್ಟಬೇಡಿ ನೀವು ಅಪವಿತ್ರರಾಗ್ತೀರಿ... ಬಿಡಿ... ಅವಳನ್ನು ನಮಗೆ ಕೊಡಿ...

**ಬುದ್ಧ** : (ನಗುತ್ತಾ) ಮಹಾತ್ಮರೆ, ಈ ಅಮಾಯಕ ಶಿಶುವನ್ನಪ್ಪಿ ನಾನು ನಿಜಕ್ಕೂ ಪವಿತ್ರ ದೇಹಿಯಾಗಿದ್ದೇನೆ; ನೀವು ಹೇಳಿದಂತೆ ಅಪವಿತ್ರನಾಗಿಲ್ಲ. ನಡೆದ ಘಟನೆಯನ್ನೆಲ್ಲ ಇವಳ ಬಾಯಿಂದಲೇ ಕೇಳಿ ತಿಳಿದಿರುವೆ. ನೀವಿವಳ ಗೊಡವೆ ಬಿಟ್ಟು ನಡೆಯಿರಿ. ದಯವಿಟ್ಟು ಹಿಂತಿರುಗಿ ಪ್ರಾಣಿಗಳಲ್ಲಿ ಅತಿಶ್ರೇಷ್ಠ ಪ್ರಾಣಿ ಎಂದರೆ ಮನುಷ್ಯ. ಆದರೆ ಅವನಿನ್ನೂ ತನ್ನ ಪಶುತ್ವದಿಂದ ಹೊರಬಂದಿಲ್ಲ, ಮನುಷ್ಯನಾಗಿಲ್ಲ. ಅರ್ಥವಿಲ್ಲದ ವರ್ಗ, ಅರ್ಥವಿಲ್ಲದ ಜಾತಿ, ಅರ್ಥವಿಲ್ಲದ ಉಚ್ಚನೀಚ ಭಾವನೆಯಿಂದ ತನ್ನ ಗೋರಿಯ ತಾನೆ ತೋಡಿಕೊಳ್ಳುತ್ತಿದ್ದಾನೆ ! ನೀವು ಹಿರಿಯರು, ಪೂಜ್ಯರು ಕೂಡ ! ನಿಮ್ಮಂತೆಯೇ ಇವಳದೂ ಒಂದು ಜೀವ. ಜೀವಕ್ಕೆ ನೋವೇಕೆ ! ಮಾನವತೆ ಎಂಬುದೇ ಮಾನವನ ಹೃದಯ ರತ್ನ ! ಅದು ಕಳೆದು ಹೋದರೆ ಮನುಕುಲದ ಪತನ ಕಟ್ಟಿಟ್ಟ ಬುತ್ತಿ ! ಎಂದಿನವರೆಗೆ ತುಳಿತಕ್ಕೆ ಸಿಕ್ಕವರ, ಶೋಷಣೆಗೆ ಒಳಗಾದವರ ಇಂತಹ ದಲಿತ ಬಂಧು ಭಗಿನಿಯರ ಬದುಕು ಬೆಳಗದೊ, ಅಂದಿನವರೆಗೆ ಮನುಕುಲದ ಉದ್ಧಾರ ಇಲ್ಲ. ಮನುಷ್ಯನನ್ನು ಮನುಷ್ಯನನ್ನಾಗಿ ನೋಡುವ ಭಾವ ನಿಮ್ಮಲ್ಲಿ ಮೊಳೆಯಲಿ, ಬೆಳೆಯಲಿ, ಬೆಳಕಾಗಲಿ, ಹಿರಿಯರೇ, ಕೈಜೋಡಿಸಿ ಕೇಳಿಕೊಳ್ಳುತ್ತೇನೆ – ಮಾನವೀಯತೆ– ಯೆಂಬ ಮೌಲ್ಯ ನಿಮ್ಮಿಂದ ಅಪಮೌಲ್ಯಗೊಳ್ಳದಿರಲಿ !

**ಸವರ್ಣೀ** : ಕ್ಷಮಿಸು ಮಹಾತ್ಮ... ನಮ್ಮಿಂದ ಘೋರಪಾತಕವೆ ಸಂಭವಿಸುತಿತ್ತು. ನೀವು ತಪ್ಪಿಸಿ ಕಾಪಾಡಿದಿರಿ..ನಿಮಗೆ ನಮ್ಮ ಸಹಸ್ರ ಪ್ರಣಾಮಗಳು.

**ಬುದ್ಧ** : ಆನಂದ ಗುರುಗಳೆ, ಇವಳು ಅನಾಮಿಕೆಯಲ್ಲ 'ಅಂಬಿಕೆ !' ಇಂದಿನಿಂದ ನಮ್ಮ ಪ್ರೀತಿಯ ಮಗಳು. ವಿಶಾಖೆ ಎಂಬ ತಾಯಿ ನಮಗಾಗಿ ಕಟ್ಟಿಸಿಕೊಟ್ಟಿರುವ 'ಪೂರ್ಣಾರಾಮ' ಎಂಬ ವಿಹಾರದಲ್ಲಿರಲಿ. ಅಲ್ಲಿ ಇವಳಿಗೆ ಶಿಕ್ಷಣಾದಿಗಳು ನಡೆವ ಏರ್ಪಾಟು ಕೂಡ ಆಗಲಿ.

**ಆನಂದ** : ಆಯಿತು ಗುರುದೇವ.....

**ಅನಾಮಿಕೆ** : ಧನ್ಯೆ ! ...ನಾನು ಧನ್ಯೆ ....ನಾನು ಮಾನ್ಯೆ ಇಂದಿನಿಂದ ಶ್ರೀಗುರುವಿನ ಹಸ್ತ ಸ್ಪರ್ಶದಿಂದ...

–ಕುಣಿದಾಡುವಳು ಬೀಜಮ್ಸ್‌ನಲ್ಲಿ ನೃತ್ಯ ಪ್ರದರ್ಶನ–
–ರಂಗ ಕತ್ತಲಾಗಿ ಬೆಳಗಿದಾಗ ಮೊದಲ ದೃಶ್ಯಗೋಚರ–

**ಸುಜಾತ** : (ಹರಿಕಥೆ ಮಾಡುವ ಧಾಟಿಯಲ್ಲಿ) ಈ ಪ್ರಕಾರವಾಗಿ ಗೌತಮ ಬುದ್ಧನು ಅನಾಮಿಕೆಯನ್ನು 'ಅಂಬಿಕೆ'ಯನ್ನಾಗಿಸಿ, ಪೌರರಿಗೆ ಮನುಷ್ಯತ್ವದ ಪಾಠ ಕಲಿಸಿ ಮುಂದೆ ಮುಂದೆ ನಡೆಯುತಿರಲು.

**ನರ್ತ : ೧** : ಅದಿರಲಿ ಸುಜಾತ... ಸಿದ್ಧಾರ್ಥ ಬುದ್ಧನಾದ, ಮಹಾತ್ಮನಾದ... ಆದರೆ ಆ ದೇವದತ್ತನೇನಾದ !

**ಸುಜಾತ** : (ಗಂಭೀರೆಯಾಗಿ, ತುಂಬು ಕಂಠದಿಂದ) ದೇವದತ್ತ... ದೇ ವ ದ ತ್ತ... ಏನಾದ ? ಆಗಬಾರದ್ದಾದ... ! ಅದೋ ಅಲ್ಲಿ ಆ ಕಪಿಲವಸ್ತುವಿನ ನೆರೆ ರಾಜ್ಯವಾದ ಮಗಧದಲ್ಲಿ !

ಅಲ್ಲಿನರಮನೆಯ ನಾಟ್ಯಗೃಹದಲ್ಲಿ, ಅರಸು ಅಜಾತ ಶತ್ರುವಿನ ಅಕ್ಷುಲ್ಲ ವೇಶ್ಯೆ ಅಮರಪಾಲಿಗೆ ನಾಟ್ಯಾಭ್ಯಾಸ ಮಾಡಿಸುವ ನಾಟ್ಯಾಚಾರ್ಯನಾಗಿ... !

–ತೋರ್ ಬೆರಳು ಮಾಡಿ ರಂಗದ ಒಂದೆಡೆಗೆ ಕೈ ಚಾಚುತ್ತಾಳೆ ರಂಗ
ಕಪ್ಪಾಗಿ ದೃಶ್ಯ ಬದಲಾವಣೆಗೊಳ್ಳುತ್ತದೆ. ಸುಜಾತ ಮತ್ತು ಅವಳ
ಪರಿವಾರ ನೇಪಥ್ಯಕ್ಕೆ ಸರಿಯುತ್ತದೆ. ಬೆಳಗಾದಾಗ ಮಗಧರಾಜ್ಯದ
ಅರಮನೆಯ ನಾಟ್ಯಗೃಹದ ದೃಶ್ಯ ತೆರೆದುಕೊಳ್ಳುತ್ತದೆ. ಅಲ್ಲಿ

ದೇವದತ್ತ ತಾಳ ಹಿಡಿದು ಅಮರಪಾಲಿಗೆ ನಾಟ್ಯ
ಹೇಳಿಕೊಡುತ್ತಿರುವುದು ಕಾಣಿಸುತ್ತದೆ–

**ದೃಶ್ಯ : ೧೦** **ಮಗಧರಾಜ್ಯದ ನಾಟ್ಯಶಾಲೆ**

(ತೆರೆ ಸರಿಯುವ ಮೊದಲೇ ಅಮರಪಾಲಿಯ ನಾಟ್ಯ ಆರಂಭವಾಗಿರುತ್ತದೆ.
ನಾಟ್ಯಾಚಾರ್ಯ ದೇವದತ್ತ ಕೇವಲ ಕೈ ತಾಳದಲ್ಲೇ ಅವಳ ಚರಣ ಗತಿಯನ್ನು
ನಿರ್ದೇಶಿಸುತ್ತಿರುತ್ತಾನೆ. ತೆರೆ ಸರಿದಾಗ ಇವೆಲ್ಲ ದೃಗ್ಗೋಚರ. ಹಾಡು,
ನರ್ತನ ಮುಂದುವರಿಯುತ್ತದೆ)

ನಾಟ್ಯ ವೇದದಲಿ ನಾದೋಪಾಸನ
ಸ ರಿ ಗ ಮ ಪ ದ ನಿ ಸ್ವರ ಸಂಯೋಜನ ॥ ಪ ॥
ಜೇನಿನ ಝೇಂಕಾರ ಶ್ರುತಿ ಸಮ್ಮಿಲನ
ಪದಲಯ ವಿನ್ಯಾಸ ಮೃದು ಸಂಕ್ರಮಣ
ಹೆಜ್ಜೆಯ ಗೆಜ್ಜೆಯ ನುಡಿ ಸಮ್ಮೇಳನ
ಝುಣರು ಝುಣರು ಝುಂ ಝುಂ ಝುಂ ವಾದನ ॥ ೧ ॥

(ಮಧ್ಯೆ ಮಧ್ಯೆ ದೇವದತ್ತನು ತಾಳ ಹಾಕುತ್ತಾ ಸ್ವರ
ಪ್ರಸ್ತಾರವನ್ನು ಉಚ್ಚರಿಸುತ್ತಿರಬೇಕು)

ಚಾರಿ ಚರಣ ಗತಿ ಷಡ್ಜ ಪಂಚಮ
ಆಂಗಿಕಾಭಿನಯ ವಾಚಿಕ ಸುಗಮ
ಸಾತ್ವಿಕ ಆಹಾರ್ಯ ನಾಟ್ಯಪಾಠ್ಯಗುಣ
ಧಿಕಿಟ ಧಿಕಿಟ ತೋಂ ತೋಂ ತೋಂ ತನನ ॥ ೨ ॥
ನವಿಲಿನ ನರ್ತನ ಧೈವತ ಮಿಲನ
ಸರ್ಪಗತಿಯಲಿ ಕಾಕು ಸಂಚಲನ
ರುದ್ರ ತಾಂಡವದಿ ಕಂಪಿತ ವರ್ಣಾ
ಢಂ ಢಂ ಢಮ ಢಮ ಡಿಂಡಿಮ ಬಾಜನ ॥ ೩ ॥

**ಅಜಾತ** : (ಚಪ್ಪಾಳೆ ತಟ್ಟುತ್ತಾ ನರ್ತಿಸುತ್ತಾ ಪ್ರವೇಶಿಸುತ್ತಾನೆ)
ಭಲೇ ನರ್ತಕಿ
ಭಲೇ ಭಾವುಕಿ
ಅಮರಪಾಲಿ, ಓ ನನ್ನ ನಾಟ್ಯಮಯೂರಿ ॥
ಸಕಲ ಕಲಾಧರೆ
ಅಭಿನಯ ಚತುರೆ
ನಟನಾವರ್ತನ
ಸಗ್ಗವೆ ಸೂರೆ
ನೆಲ ಮುತ್ತಿಡುವುದು
ಬಾನ್ ಬಾಯ್ ಬಿಡುವುದು
ದಿಕ್ಕು ಬಿಮ್ಮನೆ
ಬೆಕ್ಕಸ ನಿಲುವುದು ॥
ಬಳ್ಳಿಯ ತೋಳಿನ
ಭಾವುಕ ಬಳುಕು
ಹುಬ್ಬಿನ ಕಬ್ಬಿಗೆ
ಚೆಂದುಟಿ ಬೆಳಕು

ಚಂಚಲ ನೇತ್ರದ
ಅಂಚಿನ ಮಿರುಗಿಗೆ
ಕಂಚಿನ ಕೆನ್ನೆಯ
ಮಿಂಚಿನ ಸಂಚು ॥

**ಅಮರ** : ಸ್ವಾಗತ
ಸುಸ್ವಾಗತ ॥
ಮಗಧರಾಜ್ಯದಧಿಪತಿಗೆ ಸ್ವಾಗತ
ಅಜಾತಶತ್ರು ರಾಜನಿಗೆ ಸ್ವಾಗತ ॥
ನಾಟ್ಯಾಗಮ ನಿಸ್ಸೀಮ ನಟರಾಜನಿಗೆ
ಕೋಟ್ಯಾನು ಕೋಟಿಗೆ ಬದುಕೀವಗೆ
ಪುಟಿವ ಕಾರಂಜಿಯೊಲು ಪುಟಿದೇಳ್ವಗೆ
ದಿಟದ ನಾಗರನಂತೆ ಸೆಟೆದು ನಿಲ್ಲುವಗೆ ॥ ಸ್ವಾಗತ ॥

**ಅಜಾತ** : (ಅವಳನ್ನಪ್ಪಿ)
ದೇವದತ್ತ ಗುರುಗಳೆ
ಹೇಗಿದ್ದಾಳೆ ನನ್ನ ನಾಟ್ಯ ಮಯೂರಿ ?

**ದೇವದತ್ತ** : ಅಜಾತ,
ಪರಿಣತಳಿದ್ದಾಳೆ ಪಂಡಿತೆಯಿದ್ದಾಳೆ !
ಅಮರಪಾಲಿಯು ನಿಜಕು ನಾಟ್ಯಸರಸ್ವತಿಯು ॥
ಕಟಿತಟ ವಿನ್ಯಸ್ತ ನಟಿ ತಾ ನಿಂತರೆ
ನರ್ತನ ಕಲೆಯಾ ಆಕಾರೆ !
ನೇತ್ರ ಪಾತ್ರದಲಿ ಭಾವವು ಚಿಮ್ಮಲು
ಶಾಂತಿ ಸಮಾಧಿಯ ಸಾಕಾರೆ ! ॥ ೧ ॥
ಮದಗಜ ಗಂಭೀರೆ ನಡೆದರೆ ನರ್ತನ
ಕುಳಿತರೆ ಮಾಮರ ತಳಿತಂತೆ
ಮಗಧ ರಾಜ್ಯದ ಅಧಿದೇವತೆಯೊ
ಚಂದ್ರಚಕೋರಿ ಈ ಅಮರಪಾಲಿ ॥ ೨ ॥
(ಬೀಜಿಮ್ಸ್‌ನಲ್ಲಿ ತುಸುಕಾಲ ನರ್ತನ)

**ದೇವದತ್ತ** : ಅಜಾತಶತ್ರು ಇಡೀ ನಿನ್ನ ಮಗಧ ಸಾಮ್ರಾಜ್ಯದಲ್ಲಿ ಅಮರಪಾಲಿಯಂತಹ ನಾಟ್ಯ ಕಲಾವಿದೆ ಬೇರೊಬ್ಬಳಿಲ್ಲ ಎನ್ನುವಂತಿದ್ದಾಳೆ. ಆದರೆ ಕಲೆ ಎಂಬುದೊಂದು ತಪಸ್ಸು ! ಅದನ್ನು ಸತತ ಸಾಧನೆಯ ಮೂಲಕ ಸಿದ್ಧಿಸಿಕೊಳ್ಳಬೇಕು ಸಾಧಕ. ನಿತ್ಯಾನುಷ್ಠಾನದ ಜೊತೆಗೆ ನಿರ್ಮಲವಾದ ಅಂತಃಕರಣದಲ್ಲಿ ತಲ್ಲೀನತೆ ತುಂಬಿರಬೇಕು. ಆಗಲೇ ಕಲೆ ವಶವರ್ತಿಯಾಗುವುದು.

**ಅಮರಪಾಲಿ** : ಗುರುಪಿತನೆ, ನಾನು ನರ್ತಿಸುವಾಗ ಇನ್ನೂ ತಿದ್ದಿಕೊಳ್ಳುವ ಅಗತ್ಯತೆ ಇದೆ ಅಲ್ಲವೆ ?

**ದೇವದತ್ತ** : ಇದೆ ಮಗಳೆ, ಕಲೆಯಲ್ಲಿ ಪರಿಪೂರ್ಣತೆ ಎಂಬುದು ಸುಳ್ಳು ! ಅದೊಂದು ಶ್ರೇಣಿಯೇ ಹೊರತು ವೇದಿಕೆ ಅಲ್ಲ. ನೀನು ಹತ್ತಿದಷ್ಟು ಮೇಲೆ ಮೇಲೆ ಅದು ಹೊಸ ಕ್ಷಿತಿಜವನ್ನು ನಿರ್ಮಿಸುತ್ತಲೇ ಹೋಗುತ್ತದೆ.

**ಅಜಾತ** : ದೇವದತ್ತ ಆಚಾರ್ಯ, ನೀವೇ ಹಿಂದೊಮ್ಮೆ ನಿಮ್ಮ ಶಿಷ್ಯೆಯ ಹೆಸರಿನ ಅರ್ಥವನ್ನು ಹೇಳಿದ್ದಿರಿ. ಅಮರ್ ಅಂದರೆ ಚಂದ್ರ, ಅಪಾಲಿ ಅಂದರೆ ಅದರ ಕಾಂತಿ ಎಂದು; ಅರ್ಥಾತ್ ನನ್ನ ಅಮರಪಾಲಿ ಚಂದ್ರಮನ ಹಾಲ್ದಿಂಗಳು, ಚಂದ್ರಿಕೆ, ನನ್ನ ಮನೋವಿಲಾಸದ ಚಕೋರಿ !

**ದೇವದತ್ತ** : ಅಜಾತ, ನಿನ್ನ ಭಾವುಕತೆಗೆ ತುಸು ಕಡಿವಾಣ ಹಾಕು. ಕೇಳು, ಷೋಡಷ ಕಳಾಪೂರ್ಣನಾದ ಚಂದ್ರನಲ್ಲೂ ಒಂದು ಕಪ್ಪು ಕಲೆ ಇದೆ ! ಹಾಗೆ ಈ ನಿನ್ನ ಚಂದ್ರ ಚಕೋರಿ ಅಮರಪಾಲಿಯಲ್ಲೂ ತುಸು ಭಾವದೋಷ ಇದೆ. ನರ್ತನದ ತುರೀಯಾವಸ್ಥೆಯಲ್ಲಿ ಇವಳಾಂತರ್ಯದಲ್ಲಿ ತನ್ಮಯತೆ ಇಲ್ಲ. ವಸಂತನರ್ತನದಲ್ಲಿ ಪಳಗಿದ ಕೈ. ಅಂಗವಿನ್ಯಾಸ, ಹಸ್ತಮುದ್ರೆಗಳಲ್ಲಿ, ನೂತನ ಸ್ವರ್ಗವನ್ನೇ ಮಿಂಚಿಸುತ್ತಾಳೆ. ಆದರೆ ಭಕ್ತಿ ಭಾವವಿನ್ನೂ ಇವಳ ಮುಖದಲ್ಲಿ ಒಡೆದು ಮೂಡುತ್ತಿಲ್ಲ. ಸನ್ನಿವೇಶದ

ಔಚಿತ್ಯವರಿತು ಮನಸ್ಸನ್ನು ಮಾರುಗೊಡುತ್ತಿಲ್ಲ. ಅಮರಪಾಲಿ, ನಿನ್ನ ಚಿತ್ತ ಮೊನಚಾಗಲಿ; ಮುಗಿದ ಕೈ, ಬಾಗಿದ ಮೈಯವಳಾಗು. ಅರ್ಧ ನೀಮೀಲಿತ ನೇತ್ರದಲ್ಲಿ ಭಾವ ಚಿಮ್ಮಿ ಪುಟಿವ ಓಂಕಾರ ನಾದ ಬಿಂದುವಿನಲ್ಲಿ ನಿನ್ನಾತ್ಮ ಬೆರೆಯಲಿ ! ಶಾಂತಿಯ ಸಮಾಧಿಯಲ್ಲಿ ಭಕ್ತಿರಸ ಹೊನಲ್ವರಿಯುವಂತಾಗಲಿ ! ಎಲ್ಲಿ ಆರಂಭವಾಗಲಿ ನಿನ್ನ ಅಭಿನಯ.....

–(ಅಮರಪಾಲಿ ಮೊಣಕಾಲೂರಿ ಭಾವ ಪರವಶಳಾಗುವಳು)–

**ಶ್ಲೋಕ** : ಓಂಕಾರೇ ಪ್ರಮುದಪ್ರದೇ ಸುಶ್ಮಿತೇ ಶುಭಕರೇ ಶ್ರೀದೇವಿ
ಮಹಾಭಾಗೇ ಅನ್ನಪೂರ್ಣೇ ನಮೋಸ್ತುತೇ ॥

–ದೇವದತ್ತ ತಾಳಗಳನ್ನು ಹಿಡಿದು ನುಡಿಸುತ್ತಾ ಹಾಡುವನು–

**ಹಾಡು** : ಶ್ರೀ ವಾಸವಿ ದೇವಿ ನಮೋ ಶಾಲ್ಮಲಿ ಶಿವೆ ಶಂಕರೀ
ಸಸ್ಯ ಶ್ಯಾಮಲವರ್ಣೆ ಓ ಅಪರ್ಣೆ ಶಾಂಭವೀ ॥ ಪ ॥
ಅಣುಅಣುವಿನಲಿ ಜಲಕಣದಲಿ ಘನತರ ಸ್ವರೂಪಿಣೀ
ಋತುಋತುವಿಗು ಹೊಸ ದೇಹಿಯೆ ನವೋನ್ಮೇಷ
ಶಾಲಿನೀ
ಚಿರನೂತನೆ ಚಿನ್ಮಯೆ ಶಿವೆ ರಸೋಲ್ಲಾಸ ರಾಗಿಣೀ
ಅಚ್ಯುತ ಅರುಣೋದಯದಾ ಕಿರಣ ರಾಗ ರೂಪಿಣಿ
॥ ೧ ॥
ಸತ್ಯ ಧರ್ಮ ಸಮನ್ವಯವ ಬಿತ್ತಿ ಬೆಳೆವ ಭೂಮಿಯೇ

**ಅಜಾತ** : (ಗೀತ ತಡೆದು) ಇಂತಾಗಲು ಎಷ್ಟು ಕಾಲ ಬೇಕಾಗಬಹುದು ಆಚಾರ್ಯ ?

**ದೇವದತ್ತ** : (ಬೇಸರ ವ್ಯಕ್ತಪಡಿಸಿ) ಎಷ್ಟೂ ಕಾಲ ಬೇಕಿಲ್ಲ ಅಜಾತ ನಿಮಿಷ ಸಾಕು. ಇವಳ ಹೃದಯದಲ್ಲಿ ನೀನೇ ತುಂಬಿದ್ದೀಯೆ. ನೀನು ಹೊರಗೆ ಬಂದರೆ, ತಾನೇ ಸರಿಹೋಗುತ್ತದೆ ! ಕಲೆಯ ನೆಲೆ ಕಲಾವಿದೆಯ ಕೈಗತವಾಗುತ್ತದೆ !

**ಅಜಾತ** : ಆಗಲಿ ಗುರುದೇವ, ಅಂತೆಯೇ...

**ದೇವದತ್ತ** : ಹೂಂ... ಹೇಳು.....

**ಅಜಾತ** : (ಅಮರಪಾಲಿಯನ್ನು ಮುದ್ದಿಸುತ್ತಲೇ) ನೀವಿತ್ತ ಶಿಕ್ಷಣಕೆ ಸಂಭಾವನೆ ಏನು ಗುರುವೆ ?

**ದೇವದತ್ತ** : ಸಂಭಾವನೆ... ! ಸಂ....ಭಾ.....ವ....ನೆ ! ಹಹ್ಹಹ್ಹಹ್ಹಾ ! ಅಜಾತ, ಅಮರಪಾಲಿಯಂಥಾ ನಾಟ್ಯ ಸರಸ್ವತಿಗೆ ನೃತ್ಯಾಚಾರನಾಗಿದ್ದಕ್ಕಿಂತ ಮಿಗಿಲಾದ ಸಂಭಾವನೆ ಯಾವುದಿದೆ ? ಇರಲಿ ಮಗಳೇ, ನೀನು ದಾಸಿಯರೊಡನೆ ಅರಮನೆಗೆ ನಡೆ, ವಿಶ್ರಾಂತಿ ಪಡೆ, ಕೆಲವೆ ನಿಮಿಷಗಳಲ್ಲಿ ನಿನ್ನ ಜತೆಗೂಡುವನು ನಿನ್ನ ಪ್ರಿಯತಮನು !

**ಅಮರ** : ಆಗಲಿ ಗುರುಪಿತನೆ.... (ಅಜಾತನ ಕಡೆ ತಿರುಗಿ) ಸ್ವಾಮಿ, ನಿಮಗಾಗಿ.....

**ಅಜಾತ** : ಕಾಯುವುದೆ ? ಬೇಡ ಬೇಡ. ನಾನೆ ದುಂಬಿಯಾಗಿ ಹಿಂಬಾಲಿಸುವೆ.....

–ಅವಳನ್ನು ಅಪ್ಪುಗೆಯಲ್ಲಿ ನೇಪಥ್ಯದೆಡೆಗೆ ಕಳುಹಿ ಹಿಂತಿರುಗುತ್ತಾನೆ–

**ದೇವದತ್ತ** : ಅಜಾತ, ಸಂಭಾವನೆಯ ಪ್ರಸ್ತಾವ ಬಂತಲ್ಲವೆ ? ಅದನ್ನು ನೀನೀಗಾಗಲೇ ಸಂದಾಯ ಮಾಡಿರುವೆ !

**ಅಜಾತ** : ಅದೆಲ್ಲಿ ಗುರುಗಳೆ ?

**ದೇವದತ್ತ** : ಉರುವೇಲೆಯ ಅಡವಿಯಲ್ಲಿ ! ಅಜಾತ ಆ ದಿನ... ನಾನು ಕಪಿಲವಸ್ತುವಿನಿಂದ ಹೊರಬಿದ್ದು ತವಸಿಯಾಗಲು ಬಯಸಿ, ಬೋಧಿವೃಕ್ಷದ ಬದಿಯಲ್ಲಿ ಕುಳಿತಿದ್ದ ದಿನ; ನೆನಪಿದೆಯೆ ನಿನಗೆ ?

**ಅಜಾತ** : ಇದೆ ಗುರುಗಳೆ, ಎನ್ನೆದೆಯ ಬದಿಯಲ್ಲಿ ಹಸುರಾಗಿಯೇ ಇದೆ ಅಂದು ನೀವು ಯೋಗಮುದ್ರಿತರಾಗಿದ್ದಿರಿ !

**ದೇವದತ್ತ** : ಅಹುದು ಸಿದ್ಧಾರ್ಥನಿಂದ ಅಪಮಾನಿತನಾಗಿ, ತಂಗಿ ಶುಭಮತಿಯ ಕೊಲೆಗೆ ಕಾರಣನಾಗಿ, ಪ್ರಕ್ಷುಬ್ಧ ಮನಸ್ಕನಾದ ನಾನು ಚಿತ್ತ ಶಾಂತಿಗೆ ನಡೆದೆ ಅಡವಿಯೆಡೆಗೆ; ಸಿದ್ಧಾರ್ಥನಿಗು ಮೊದಲು ಬುದ್ಧನಾಗಲು ಬಯಸಿ ತಪಕೆ ಕುಳಿತೆ.

**ಅಜಾತ** : ಅಂದು ನನಗೆ ತಮ್ಮ ದರ್ಶನ ಆಯಿತು ತಮ್ಮನ್ನು ಈ ನನ್ನ ಮಗಧರಾಜ್ಯಕ್ಕೆ ನನ್ನರಮನೆಗೆ ಭಕ್ತಿಯಿಂದಾಹ್ವಾನಿಸಿದೆ.

**ದೇವದತ್ತ** : ನಾನು ಒಪ್ಪಿದೆ ಒಂದು ನಿಬಂಧನೆಯ ಮುಂದಿರಿಸಿ; ನೆನಪಿದೆಯೆ ?

**ಅಜಾತ** : ಅಹುದು, ಮಗಧ ಸೇನೆಯನ್ನೆಲ್ಲ ಸಜ್ಜುಗೊಳಿಸಿ, ಆ ಕಪಿಲವಸ್ತುವಿನರಸು ಸಿದ್ಧಾರ್ಥನ ಮೇಲೆ ದಂಡೆತ್ತಿ ಹೋಗುವುದೆಂದು !

**ದೇವದತ್ತ** : ಅಹುದು; ಆದರೆ ಅದು ಕೈಗೂಡುವ ಮುನ್ನವೇ ಸಿದ್ಧಾರ್ಥ ಸರ್ವಸಂಗ ಪರಿತ್ಯಾಗಿಯಾಗಿ ರಾಜ್ಯಕೋಶಾದಿಗಳ ಬಿಟ್ಟು ಬುದ್ಧನಾದ ! ನನ್ನ ಆಲೋಚನೆ ಹಣ್ಣಾಗಲಿಲ್ಲ !

**ಅಜಾತ** : ಅನಂತರದ ತಮ್ಮಾಜ್ಞೆಯನ್ನು ನೆರವೇರಿಸಿದೆನಲ್ಲ ಗುರುವೆ

**ದೇವದತ್ತ** : ಅಹುದು ನೆರವೇರಿಸಿದೆ, ಬುದ್ಧನಿಗೆ ಸಕಲ ಸಂಪದವಿತ್ತು, ರಾಜಗೃಹದ ವೇಣುವನವೆಂಬ ಕ್ರೋಶಕ್ರೋಶ ವಿಸ್ತೀರ್ಣದ ಭೂಭಾಗವನ್ನು ಬೌದ್ಧವಿಹಾರಕ್ಕಾಗಿ ಧಾರೆಯೆರೆದುಕೊಟ್ಟ, ಆ ಮತಿಹೀನ ಬುದ್ಧನಿಗೆ ದಾಸನಾದ, ಭಿಕ್ಷುವಾದ ನಿನ್ನ ತಂದೆ ಬಿಂಬಸಾರನನ್ನು ಸೆರೆಮನೆಗೆ ಕಳುಹಿಸಿದೆ ನನ್ನ ಆದೇಶದಂತೆ ! ಇದೆಲ್ಲದೂ ನನಗಿತ್ತ ಸಂಭಾವನೆಯೇ ಅಲ್ಲವೆ ?

**ಅಜಾತ** : ಅದು ಸಾಲದೆಂದೇ ನನ್ನ ಅನಿಸಿಕೆ

**ದೇವದತ್ತ** : ಇರಲಿ, ನಿನ್ನಿಂದ ಪೂರ್ಣ ಸಂಭಾವನೆಯನ್ನು ಸ್ವೀಕರಿಸುವ ಮುನ್ನ ನಿನಗೊಂದು ದೃಶ್ಯವನ್ನು ತೋರುವೆನು ನೋಡು ಬಾ. ನಿಮ್ಮ ತಂದೆ ಬಿಂಬಸಾರನ ಅರಮನೆ ಈಗ ಆ ಬಡ ಜೋಗಿಗಳ ಆ ಬೌದ್ಧ ಭಿಕ್ಷುಗಳ ಭೋಗಭವನ ! ಅಲ್ಲಿ ಅವರದೇ ಕಾಮಚೇಷ್ಟೆ. ಈ ಗವಾಕ್ಷದ ಮೂಲಕ ಅತ್ತ ನಿಮ್ಮಪ್ಪನರಮನೆಯ ಕಡೆ ನೋಡು.

–ಅಜಾತ ಹತ್ತಿನಿಂತು ನೋಡುವನು–

–ದೃಶ್ಯ ಬದಲಾವಣೆ–

(ಅಲ್ಲಿ ಬೌದ್ಧ ಬಿಕ್ಕು ವೇಷಧಾರಿಗಳಾದ ಚುಂದ, ಚೆಂದ ಎಂಬವರು ಕುಜಾತಪಾಲಿ ಎಂಬ ದಾಸಿಯನ್ನು ಹಿಡಿದೆಳದಾಡಿ ಚುಂಬಿಸುತ್ತಿರುತ್ತಾರೆ. ಅವಳು ಒಬ್ಬನ ತೋಳ್ಸೆರೆಯಿಂದ ಮತ್ತೊಬ್ಬನ ತೋಳ್ಸೆರೆಗೆ ಜಿಗಿದು ಕಾಮಪ್ರೇರಣೆ ಮಾಡುತ್ತಿರುತ್ತಾಳೆ) ನೋಟ ಸಾಕಲ್ತೆ ?

**ಅಜಾತ** : ಅಬ್ಬಾ ! ಏನಿದನ್ಯಾಯ ಬೌದ್ಧ ಭಿಕ್ಕುಗಳು ಕಾಮಕೀಟಗಳು ಇವರಿಗೆ ತಕ್ಕ.....

**ದೇವದತ್ತ** : ಶಾಸ್ತಿ ಆಗಲೇಬೇಕು ಅಜಾತ. ನಿನ್ನ ತಂದೆ ಬಿಂಬಸಾರನೇ ಬುದ್ಧನಿಗೆ ಬಲ. ಅವನ ಬೆಂಬಲದಿಂದ ಈ ಬಡಜೋಗಿಗಳ ಹಾರಾಟ, ಕಾಮಚೇಷ್ಟೆ ! ಈ ಭಿಕ್ಕುಗಳನ್ನು ಮಗಧದ ರಾಜಬೀದಿಗಳಲ್ಲಿ ಆನೆಕಾಲುಗಳಿಗೆ ಕಟ್ಟಿ ಎಲೆಯೂಟೆ ನಡೆಸಬೇಕು. ಆ ಬೌದ್ಧ ವಿಹಾರವನ್ನು ನುಚ್ಚುನುರಿಮಾಡಿ ಎಲ್ಲರನ್ನು ಅಡವಿಗಟ್ಟಬೇಕು. ಈಗ ಅಮರಪಾಲಿ ನಿನಗಾಗಿ ಕಾಯುತ್ತಿರುತ್ತಾಳೆ. ನೀನು ಹೊರಡು. ಮುಂದಿನದನ್ನು ಅನಂತರ ಆಲೋಚಿಸೋಣ.

**ಅಜಾತ** : ಅಪ್ಪಣೆ.

–ನಿರ್ಗಮನ–

## ದೃಶ್ಯ : ೧೧ — ಒಂದು ತೋಪು

(ದೇವದತ್ತನ ಪ್ರವೇಶ ಅವನ ವಿರುದ್ಧ ದಿಕ್ಕಿನಿಂದ ಚುಂದ ಚಂದ ಮತ್ತು ಕುಜಾತ ಪಾಲಿಯರು ಹಿಂದಿನ ಬೌದ್ಧ ಭಿಕ್ಕು ಮತ್ತು ವೇಶ್ಯೆಯರ ವೇಷದಲ್ಲಿ ಪ್ರವೇಶಿಸುವರು)

**ದೇವದತ್ತ** : ಭಲೇ ಚುಂದ, ಭಲೇ ಚಂದ, ಭಲೇ ಚತುರೆ ಕುಜಾತಪಾಲಿ (ಎಲ್ಲರ ಬೆನ್ನುತಟ್ಟುತ್ತಾ ಅವರ ಕೈಗಳಿಗೆ ಹಣದ ಥೈಲಿ ನೀಡಿ) ಇದ್ದರೆ ನಿಮ್ಮಂಥಾ ಸ್ವಾಮಿನಿಷ್ಠಾ ಸೇವಕರಿರಬೇಕು.

**ಚುಂದ** : ಗುರುಗಳೇ ನಮ್ಮ ಅಭಿನಯ ತಮಗೆ ಮೆಚ್ಚಾಯಿತೆ ?

**ದೇವದತ್ತ** : ಯಾವ ನಾಟಕದ ನಟನೂ ನಿಮ್ಮಂತೆ ಅಭಿನಯಿಸಲಾರ.

**ಚಂದ** : ನಮ್ಮ ವೇಷ ?

**ದೇವದತ್ತ** : (ನೋಡಿ ನಗುತ್ತಾ) ಭಿಕ್ಕುವಿಗೆ ಹೇಳಿ ಮಾಡಿಸಿದ್ದು.

**ಕುಜಾತ** : ಗುರುಗಳೆ, ನಾನು ನಟನಕಾರ್ತಿಯಾದರೂ ದಿಟದ ವೇಶ್ಯೆಯೇ ಆಗಿ ಅಭಿನಯಿಸಿದೆ

**ದೇವದತ್ತ** : ನಿನ್ನ ಚಾತುರ್ಯ, ನಿಮ್ಮೆಲ್ಲರ ಸಮಯೋಚಿತ ಅಭಿನಯ, ಇವು ನನ್ನ ಕಾರ್ಯಯೋಜನೆಗೆ ಪೂರ್ಣ ಸಹಕಾರಿ ! ಇದರಂತೆ ಇನ್ನೊಂದು ಮಹತ್ವದ ಕಾರ್ಯ ನಿಮ್ಮಿಂದಾಗಬೇಕಿದೆ ಮಕ್ಕಳೆ !

ಚುಂದ }
ಚಂದ : ಹೇಳಿ ಗುರುಗಳೆ, ಬೇಗ ಅಪ್ಪಣೆ ಕೊಡಿಸಿ

**ದೇವದತ್ತ** : ದುಡುಕಬೇಡಿ. ಕೇಳಿ. ಕುಜಾತಪಾಲಿ, ನೀನು 'ಸೂಕರಮದ್ದವ'ವನ್ನು ಬಲ್ಲೆಯಷ್ಟೆ ?

**ಕುಜಾತ** : ತುಂಬಾ ಚೆನ್ನಾಗಿ ಗೊತ್ತು ಗುರುಗಳೆ, ಅದರೊಳಗಿಡುವ ಮದ್ದೂ ಗೊತ್ತು.

**ದೇವದತ್ತ** : ಅದನ್ನೀಗ ಪ್ರಯೋಗಿಸಬೇಕು !

**ಕುಜಾತ** : ಯಾರ ಮೇಲೆ ?

**ದೇವದತ್ತ** : ಮತ್ತಾರ ಮೇಲೆ ಆ ಪೆದ್ದ ಬುದ್ಧನ ಮೇಲೆ

**ಕುಜಾತ** : ಆಗಲಿ ಗುರುಗಳೆ, ಅದಾವ ಗಹನ ಕಾರ್ಯ ! ಹಿಂದೆ ಇಂಥವೆಷ್ಟೋ ಮಾಡಿಸಿದ್ದೀರಿ. ನನಗೆ ಅದರ ಅನುಭವ ಚೆನ್ನಾಗಿ ಆಗಿದೆ.

**ದೇವದತ್ತ** : ಆದರೆ, ವಿಷಪ್ರಾಶನಕ್ಕೆ ಪಾತ್ರನಾಗಲಿರುವ ಈ ವ್ಯಕ್ತಿ ಬೇರೆಯವರಂತಲ್ಲ, ಈ ರಾಜಗೃಹದ ವೇಣುವನದ ಬೌದ್ಧ ವಿಹಾರಕ್ಕೆ ನಿನಗೆ ಪ್ರವೇಶಾವಕಾಶವಿಲ್ಲ ಕುಜಾತ. ಆದ್ದರಿಂದ 'ಸೂಕರಮದ್ದವ'ದಲ್ಲಿ ಪಾಷಾಣವನು ಬೆರಸು ಚುಂದನ ಕೈಗೆ ಕೊಡು. ಚುಂದ....

**ಚುಂದ** : ಬುದ್ಧಿ.....

**ದೇವದತ್ತ** : ಇದೇ ಭಿಕ್ಕು ವೇಷದಲ್ಲಿ ಚಂದನನ್ನೂ ಕರೆದುಕೊಂಡು ವೇಣುವನ ವಿಹಾರಕ್ಕೆ ಹೋಗು. ಬುದ್ಧ ಆಹಾರ ಸೇವಿಸುವ ಸಮಯ ನೋಡಿ ಈ ವಿಷಪೂರಿತ ಸೂಕರ ಮದ್ದವ ಪ್ರಯೋಗಗೊಳ್ಳಲಿ.

**ಚುಂದ** : ಅಪ್ಪಣೆ ಗುರುಗಳೆ.

**ದೇವದತ್ತ** : ಚಂದ ಚುಂದನೊಡನೆ ಸಹಕರಿಸು ಕುಜಾತಪಾಲಿ, ಇಂದೇ ಮದ್ದು ಸಿದ್ಧವಾಗಲಿ.

**ಕುಜಾತ** : ಅಪ್ಪಣೆ ಗುರುಗಳೆ.

**ದೇವದತ್ತ** : ನಿಮಗೆಲ್ಲ ಬಹುದೊಡ್ಡ ಸಂಭಾವನೆ..... ಮೊದಲು ಕಾರ್ಯ ಆಮೇಲೆ ಸಂಭಾವನೆ ! ಆದರೆ... ಎಚ್ಚರ, ಗುಟ್ಟು ರಟ್ಟಾದೀತು.

**ಮೂವರೂ** : ಗುರುಗಳು ನಮ್ಮ ಸ್ವಾಮಿನಿಷ್ಠೆಯನ್ನು ಪ್ರಶ್ನಿಸುತ್ತಿಲ್ಲ ತಾನೆ ?

**ಎಲ್ಲರೂ** : ಹ ಹ್ಹ ಹ್ಹ ಹ್ಹ ಹ್ಹಾ –

## ದೃಶ್ಯ : ೧೨ ಮಗಧದ ರಾಜಬೀದಿ

**ಬುದ್ಧ** : ಆನಂದ, ಜಟಿಲತೆಯ ಗೂಡಲ್ತೆ ಈ ನೆಲದ ಬಾಳು ! ಬಿಡಿಸಿಗದಷ್ಟೂ ತೊಡಕು, ತೊಡಕಿದಷ್ಟೂ ಗಂಟು ! ! ನಿಮ್ಮ ಬಾಳನು ಬೆಳಗಬೇಕಿದ್ದ ಶುಭಮತಿ ಬದುಕಿನಲ್ಲಿ ದುರ್ಮರಣಕೀಡಾಗಿ ತಿರುವು ಕೊಟ್ಟಳು ತಾಯಿ !

**ಆನಂದ** : ಅದು ಒಳ್ಳಿತಾಯ್ತಲ್ತೆ ! ಬಂಧನದ ಸಂಸಾರಕಿಂತ ಸನ್ಯಾಸದೀ ಸ್ವಾಚ್ಛಂದ್ಯವೇ ಲೇಸು ! ಇದರಲ್ಲಿ ತೃಪ್ತಿ ಇದೆ, ಸೌಖ್ಯವಿದೆ. ನೀವಿತ್ತ ಪ್ರವಜ್ಯೆ ಯೋಗ ಸಾಧನೆಯ ದಾರಿತೋರಿತು ಗುರುವೆ.

**ಬುದ್ಧ** : ಅಹುದದುವೆ ಲೇಸು... ಅದೆ ಲೇಸು.... ! ಉಪಗುಪ್ತರೆ,

**ಉಪಗುಪ್ತ** : ಗುರುದೇವ,

**ಬುದ್ಧ** : ಆನಂದರಾ ಬಾಳು ಅರಳಿದಂತೆ, ನಿಮ್ಮದೂ ಇಂದೊಂದು ಬದಲಾವಣೆಯ ಬೆಳಕ ಕಂಡಿಹುದು !

**ಉಪಗುಪ್ತ** : ಅಹುದು ಗುರುದೇವ. ಹೆಣ್ಣು ದೇವತೆ ತಂದೆ ! ನನ್ನಾಕೆಯಿಂದ ಬದುಕಿನರ್ಥವ ತಿಳಿದು ತಮ್ಮೆಡೆಗೆ ಬಂದೆ ನಾ ಭಿಕ್ಕುವಾದೆ !

**ಬುದ್ಧ** : ಮನುಕುಲದ ಉದ್ಧಾರ ಅದುವೆ ಸಾಕ್ಷಾತ್ಕಾರ !
ಭಂತೇ, ಬಾಳೆಂಬ ಪುಸ್ತಕದ ಮೊದಲ ಹಾಳೆಯು ಇಲ್ಲ
ಕಡೆಯ ಹಾಳೆಯು ಇಲ್ಲ, ಇದರ ಆರಂಭ ಗೊತ್ತಿಲ್ಲ.
ಮುಕ್ತಾಯ ತಿಳಿದಿಲ್ಲ ! ನಡುವೆ ಇರುವ ಬಾಳೆಂಬ ಪಠ್ಯಭಾಗವ
ಹಿಡಿದು ಇದೇ ಸರ್ವಸ್ವವೆಂದು, ಶಾಶ್ವತವೆಂದು ಭ್ರಮಿಸಿ
ಬಯಲಾಗುತಿದೆ ! ಹುಟ್ಟು ಸಾವುಗಳೆಂಬ ಎರಡು ಅವ್ಯಕ್ತಗಳ
ನಡುವೆ ನಡೆದಿದೆ ಜಗದ ವ್ಯಕ್ತ ಬದುಕು !

–ಅಷ್ಟರಲ್ಲಿ ನೇಪಥ್ಯದಲ್ಲಿ 'ಜಯಬುದ್ಧ ಗುರುದೇವ' 'ಜಯಬುದ್ಧ ಗುರುದೇವ', ಎಂಬ ಜಯಘೋಷ ಕೇಳಿ ಬರುತ್ತದೆ–

ಭಂತೇ, ಜಯಘೋಷ ಯಾರದಿದು ?

**ಆನಂದ** : ರಾಜನರ್ತಕಿ ಅಮರಪಾಲಿಯದು ಗುರುದೇವ

**ಅಮರಪಾಲಿ** : (ಪ್ರವೇಶಿಸಿ)
ಜಯ ಬುದ್ಧ ಗುರುದೇವ, ಜಯಬುದ್ಧ ಗುರುದೇವ
ಜಯ ಸಿದ್ಧರಾದಿತ್ಯ, ಜಯ ದಿವ್ಯತೇಜ
ಗುರುದೇವ, ಪಾದದರುಶನದಿಂದ ಪಾವನಳು ನಾನಾದೆ ! ತಮ್ಮ ಪದ ಧೂಳಿಯಿಂ ಪವಿತ್ರ ಗಾತ್ರಳೆ ಆದೆ !

**ಬುದ್ಧ** : ಮೇಲೇಳು ತಾಯಿ ! ಬಂದಿರೇತಕೆ ಇಲ್ಲಿ ದಯಮಾಡಿ ತಿಳಿಸಿ...

**ಅಮರ** : ತಮ್ಮ ಆಗಮನದಾ ಸುದ್ದಿ ತಿಳಿದಿತ್ತು ಬುದ್ಧನಿಗೆ ಭಿಕ್ಷೆ ನೀಡುವ ಬಯಕೆ !

**ಬುದ್ಧ** : ಸಂತೋಷ ನೆರವೇರಲಿ !

**ಅಮರ** : ನನ್ನ ಮನೆಗೆ ಆಹ್ವಾನಿಸುವ ಆಸೆ.

**ಬುದ್ಧ** : ಅದೂ ಕೂಡ ಈಡೇರಲಿ !

**ಅಮರ** : ಹ್ಞಾ! ನನ್ನ ಮನೆಗೆ ನೀವು ನಿಜಕ್ಕೂ ದಯಮಾಡಿಸುವಿರಾ ದೇವ ?

**ಬುದ್ಧ** : ಈ ನಾಲಗೆಗೆ ಸುಳ್ಳಾಡಿ ತಿಳಿದಿಲ್ಲ ತಾಯಿ

**ಅಮರ** : ನಾನು ವೇಶ್ಯೆ !

**ಬುದ್ಧ** : ಆದರೇನಂತೆ, ನೀನೂ ಮನುಷ್ಯಳು ತಾಯಿ ! ನಾನು ಮಾನವನಲ್ಲಿ ವಿಶ್ವಾಸ ಉಳ್ಳವನು; ಭರವಸೆಯನಿಟ್ಟವನು ! ಹೇಳು ತಾಯಿ, ಯಾರು ಎಲ್ಲೇ ಇರಲಿ ಹೆಣ್ಣಿನ ಬಗೆಗೆ 'ತಾಯಿ' ಎಂಬುವ ಭಾವ ತಪ್ಪದಿರಲಿ !

**ಅಮರ** : ಲೋಕಾಪವಾದಕ್ಕೆ ಮನ ಅಳುಕಿ ನುಡಿವೆ !

**ಬುದ್ಧ** : ಅಂದರೆ... ?

**ಆನಂದ** : ಗುರುದೇವ, ಬುದ್ಧ ಭಗವಾನರು ಅಮರಪಾಲಿ ಎಂಬ ವೇಶ್ಯಾಗೃಹಕೆ ಹೋಗಿದ್ದರಂತೆ, ಅಲ್ಲಿದ್ದರಂತೆ, ಭಿಕ್ಷೆಪಡೆದರಂತೆ

**ಉಪಗುಪ್ತ** : ಹಾಗಂತೆ ಹೀಗಂತೆ ಎಂಬ 'ಅಂತೆಕಂತೆ'ಗಳದೇ ಈ ತಾಯಿ ಚಿಂತೆ !

**ಬುದ್ಧ** : ತಾಯಿ, ಗಗನ ವಿಹಾರಿ ಗರುಡ ಪಕ್ಷಿಯ ನೆರಳಿಗೆ ನೆಲದ ಹಳ್ಳ ದಿಣ್ಣೆಗಳಿಲ್ಲ ಕಲ್ಲು ಮುಳ್ಳುಗಳಿಲ್ಲ. ಕೆಸರೂ ಒಂದೇ ಹಸಿರೂ ಒಂದೇ ಅದಕೆ, ಅದರ ಓಟಕ್ಕೆ ! ವೇಶ್ಯೆ–ಗರತಿ, ಹೆಣ್ಣು–ಗಂಡು, ಬಡವ–ಬಲ್ಲಿದ, ಉಚ್ಚ–ನೀಚಗಳ ಭಾವನೆಗಳೇ ಇಲ್ಲ. ಸರ್ವಸಮತಾಭಾವ ಪೂಜ್ಯ ಗೌರವ ಭಾವ. ಭಾವದಲಿ ಶುದ್ಧವಿರೆ ಬಯಲೇನ ಮಾಡೀತು ! ನಡೆ ಮಗಳೆ, ಬೌದ್ಧ ಭಿಕ್ಕುಗಳ ಕರ್ಪಾರದಲಿ ಆಹಾರ ತುಂಬು, ಹರ್ಷ ಪ್ರಕರ್ಷತೆಗೆ ಹೇತುವಾಗು !

**ಅಮರ** : ನಾ ಧನ್ಯೆ... ಇದೆ ನನ್ನ ಮಂದಿರವು ಪಾದ ಬೆಳೆಸಲು ಬೇಕು.

–ಮೂವರೂ ಅವಳನ್ನು ಹಿಂಬಾಲಿಸುವರು–

–ಅಮರಪಾಲಿ ಗುರುಗಳ ಪಾದ ತೊಳೆದು, ಹೂ ಧರಿಸಿ, ಮಣಿದು ಹರಿವಾಣದಲ್ಲಿ ತುಂಬಿತಂದ ಭಿಕ್ಷೆ ನೀಡುವಳು–

**ಬುದ್ಧ** : ಒಳ್ಳೆಯದು ಮಗಳೆ, ಸಕಲ ಶುಭಗಳು ನಿನ್ನ ಜೊತೆಗೂಡಲಿ !

**ಅಮರ** : ಅಂತಿದ್ದರೆನಗೊಂದು ಶುಭದ ಆಶೀರ್ವಾದ ಬೇಕಿಹುದು ತಂದೆ

**ಬುದ್ಧ** : ಹೇಳು ಮಗು ಏನಾಗಬೇಕು ?

**ಅಮರ** : ನಾನಿಂದು ತಮ್ಮಿಂದ ತುಂಬ ಪ್ರಭಾವಿತಳಾದೆ; ನಿಜದ ಮಾನವಳಾದೆ ! ಅದರಿಂದೆ... ಅದರಿಂದೆ ತಾವಿಂದು ನನಗೆ ಬೌದ್ಧ ದೀಕ್ಷೆಯ ನೀಡಬೇಕೆಂದು ಬೇಡುವೆ. ಬೌದ್ಧ ಭಿಕ್ಷುಣಿಯಾಗಿ ಭವವ ಗೆಲುವೆ !

**ಬುದ್ಧ** : ಅಮರಪಾಲಿ, ನಮ್ಮ ಪೂರ್ವಾಶ್ರಮದ ಮಡದಿಯೆನಿಸಿದ ತಾಯಿ ಯಶೋಧರೆಯೂ ಇದನೆ ಬೇಡಿದಳು ! ಕಪಿಲವಸ್ತುವಿನಲ್ಲಿ ರಾಹುಲನ ಜೊತೆಯಲ್ಲಿ ತನಗೂ ಪ್ರವಜ್ಯೆಯನು ನೀಡಬೇಕೆಂದು.

**ಅಮರ** : ನೀಡಿದಿರ ಗುರುದೇವ ?

**ಬುದ್ಧ** : ಇಲ್ಲ ತಾಯಿ.

| | | |
|---|---|---|
| **ಅಮರ** | : | ಏಕೆಂದು ಕೇಳಬಹುದೆ ? |
| **ಬುದ್ಧ** | : | ಧೈರ್ಯದಿಂದ ಕೇಳಬಹುದು... ಕೇಳು, ಯಶೋಧರೆಗೆ ಹೇಳಿದ ಮಾತೇ ನಿನಗು ಕೂಡ. |
| **ಅಮರ** | : | ಏನು ತಂದೆ ? |
| **ಬುದ್ಧ** | : | ಒಂದು ಸಾವಿರ ವರ್ಷ ಬದುಕಬಹುದಾದ ಈ ಧರ್ಮ ಈ ಬೌದ್ಧಧರ್ಮ ಹೆಣ್ಣಿಗೆ ಪ್ರವಜ್ಯೆಯಿತ್ತುದಾದರೆ, ಕೇವಲ ಐದುನೂರು ವರ್ಷಗಳವರೆಗೂ ಬಾಳಲಾರದು ಎಂದು ! |
| **ಅಮರ** | : | ಅಂದರೆ, ಹೆಣ್ಣಿಗೆ ಪ್ರವಜ್ಯೆಯಿತ್ತರೆ ವಿಶ್ವಧರ್ಮವೆನಿಸಲಿಹ ಬೌದ್ಧಧರ್ಮ ನಾಶವಾಗುವುದೆ ?... ಎಂಥ ಮಾತಿದು ತಂದೆ; ಹೆಣ್ಣಿಗೊಂದು ಧರ್ಮ ಗಂಡಿಗೊಂದು ಧರ್ಮವೇ ? ಧರ್ಮದಲಿ ಹೆಣ್ಣು ಸಮಭಾಗಿಯಲ್ಲವೆ ? ಧರ್ಮದ ದೀಕ್ಷೆಗೆ ಅವಳು ಬಾಹಿರಳೆ ? ಹೆಣ್ಣು ಕುಲವನೆ ತೆಗೆದು ಹೊರಗಿಟ್ಟ ಧರ್ಮ ಪರಿಪೂರ್ಣವೆನಿಸದು ಗುರುದೇವ, ಕೃಪೆಮಾಡಿ ಅದಕೆ ಪೂರ್ಣತೆಯ ದಯಪಾಲಿಸಿ. |
| **ಬುದ್ಧ** | : | (ಅಪ್ರತಿಭನಾಗಿ ನಿಂತು) ತಾಯಿ, ಹೆಣ್ಣು ಸಾಮಾನ್ಯಗಳಲ್ಲ ! ಅವಳೆನಗೆ ಮಾರ್ಗದರ್ಶಿ, ತಾಯಿ, ಶಿಕ್ಷಕಿ, ಬೋಧಕಿ ಅಂದು ಬೋಧಿವೃಕ್ಷದಡಿಯಲ್ಲಿ ತಪಗೆಯ್ಯುತ್ತಿದ್ದಾಗ ಬೋಧಿಸಿ ಬುದ್ಧನಾಗಿಸಿದಳೂ ಆ ತಾಯಿ ಸುಜಾತ ! ಈ ಸಿದ್ದಾರ್ಥನನು ಬುದ್ಧನಾಗಿಸಿದ ತ್ಯಾಗಜೀವಿ ಯಶೋಧರೆ; ಮೂರನೆಯವಳು ನೀನು ! ಎನ್ನ ಭ್ರಮೆ ನಿರಸನಗೊಂಡು ಸ್ತ್ರೀ ಪ್ರವಜ್ಯೆಗೆ ಪ್ರೇರಣೆಯ ನೀಡಿಹುದು. ಆನಂದ ಗುರುಗಳೆ, ಬೇಡಿ ಬಂದೆಲ್ಲರಿಗು, ಎಲ್ಲ ತಾಯಂದಿರಿಗು ನಾಳೆಯಿಂದಲೇ ಪುಣ್ಯಪ್ರದ ಪ್ರವಜ್ಯೆಯ ಪ್ರದಾನವಾಗಲಿ ! |
| **ಆನಂದ** | : | ಕೇಳಿ ಕರ್ಣಾನಂದವಾಯಿತು ಗುರುದೇವ ! |
| **ಉಪಗುಪ್ತ** | : | ಶ್ರೇಷ್ಠ ಧರ್ಮಕ್ಕೊಂದು ಸ್ಥಾಯಿ ದೊರೆತಂತಾಯ್ತು ! |
| **ಬುದ್ಧ** | : | ತಾಯಿ ಅಮರಪಾಲಿ, ವೈಶಾಖ ಶುಕ್ಲದಲಿ ಮತ್ತೆ ಸೇರೋಣ. ನೀವೆಲ್ಲ ಬನ್ನಿ ; ಲುಂಬಿನೀ ವನದಲ್ಲಿ ಸಾಲ ವೃಕ್ಷದ ಕೆಳಗೆ ದೀಕ್ಷೆಯನು ಕೊಳ್ಳಿ, ಬೌದ್ಧ ಪ್ರವಜ್ಯೆಯನು ಕೊಳ್ಳಿ. |

–ನಿಧಾನವಾಗಿ ಮೂವರೂ ಹೊರ ನಡೆವರು, ಅಮರಪಾಲಿ
ನಮಸ್ಕರಿಸಿ ತೋಳ್ತೆರೆದು ದಾರಿ ತೋರುವಳು–

## ದೃಶ್ಯ : ೧೩ ಅಜಾತನ ಅರಮನೆ

(ಅರಮನೆಯ ಅಂಗಳದಲ್ಲಿ ಮಗು ಸಾಗರಮಿತ್ರ ಕುಳಿತಿದ್ದಾನೆ. ಮಹಡಿಯ
ಮೆಟ್ಟಿಲಲ್ಲಿ ಅವನ ಅಜ್ಜಿ, ಅಜಾತನ ತಾಯಿ ನಿಂತಿದ್ದಾರೆ. ಹೊರಗಿನಿಂದ
ಪ್ರವೇಶಿಸಿದ ಅಜಾತ)

| | | |
|---|---|---|
| **ಅಜಾತ** | : | ಓಹ್ ! ನನ್ನ ಮುದ್ದಿನ ಕಂದ ! ಸಾಗರಮಿತ್ರ, ಬಾ ಮಗು, ಬಾ ನಿನ್ನ ಮುದ್ದಿಸುವೆ ! ನಿನ್ನ ಆಲಿಂಗನವೆ ಮನದ ಗಾಯಕೆ ಮದ್ದು ಬಾ ಮಗು. |

–ಕೈ ಚಾಚಿ ಹತ್ತಿರ ಹೋಗುವನು. ಮಗು ದೂರ ಸರಿದು–

| | | |
|---|---|---|
| **ಸಾಗರ** | : | ಅಪ್ಪಾಜಿ, ನೀವೆನ್ನ ಮುಟ್ಟದಿರಿ... ದೂರವಿರಿ ನೀವು ! ಮುಟ್ಟಿದರೆ ಕೊಂದು ಬಿಡುವೆ ! |
| **ಅಜಾತ** | : | ಏಕೆ ! ನಾನು ಮಾಡಿದ ಅಪರಾಧವಾದರು ಏನು ಸಾಗರಮಿತ್ರ ಮಹರಾಜರೆ ? |
| **ಸಾಗರ** | : | ಏನೆಂದು ಕೇಳುವಿರಾ ? ಸಾಲದೇ ನೀವು ನಮ್ಮಜ್ಜನವರನ್ನು ಸೆರೆಮನೆಗೆ ತಳ್ಳಿದ್ದು ! |

–ಶಬ್ದ ಕಿವಿಗೆ ಬಿದ್ದ ಕೂಡಲೆ ಅಜಾತನಿಗೆ ಯಾರೊ ಕೆನ್ನೆಗೆ
ಹೊಡೆದಂತಾಗುತ್ತದೆ 'ಛಟೀರ್' ಎಂಬ ಶಬ್ದ ಸ್ಫೋಟಿಸುತ್ತದೆ.
ಅವನು 'ಹ್ಹಾ' ಎಂದು ಬೆಚ್ಚಿ ತನ್ನ ಕೆನ್ನೆ ಮುಟ್ಟಿಕೊಳ್ಳುತ್ತಾನೆ–

| | | |
|---|---|---|
| **ಅಜಾತ** | : | ಯಾರು ಹೇಳಿದ್ದು ? (ತನ್ನ ತಾಯಿಯ ಕಡೆ ನೋಡುವನು).... ಉಪ್ಪು ತಿಂದಾತ ನೀರು ಕುಡಿಯಲೆ ಬೇಕು. ತಪ್ಪಿಗೆ ಶಿಕ್ಷೆ ಆಗಲೇಬೇಕು ! ಆಗಿದೆ. |
| **ಸಾಗರ** | : | ಏನಂಥ ತಪ್ಪು ನಮ್ಮ ಬಿಂಬಸಾರ ತಾತನವರು ಮಾಡಿದ್ದು ಹೇಳಿ ? |
| **ಅಜಾತ** | : | ಬಡಜೋಗಿ ಭಿಕ್ಕುಗಳಿಗಾಶ್ರಯವ ನೀಡಿ ಆಡಳಿತ ಯಂತ್ರವನು ಹಸಗೆಡಿಸಿದ್ದು. ಅದು ನಿಜಕು ರಾಜ್ಯದ್ರೋಹ. ದ್ರೋಹಕ್ಕೆ ತಕ್ಕ ದಂಡನೆ ವಿಧಿಸಲಾಯ್ತು ! |
| **ಸಾಗರ** | : | ಅಪ್ಪಾಜಿ, ನಾನು ಅಧಿರಾಜನಾದ ಮೇಲೆ, ನೀವೂ ಮುಂದೆ ಇಂಥದೇ ಒಂದು ತಪ್ಪು ಮಾಡಿದರೆ, ನಾನು ನಿಮಗೆ ಇಂಥದೇ ಶಿಕ್ಷೆ ವಿಧಿಸಬಹುದಲ್ಲ ? |

–ಮತ್ತೊಂದು ಏಟು ಕೆನ್ನೆಗೆ ಹೊಡೆದಂತಾಗುವುದು 'ಛಟೀರ್' ಎಂಬ

ಶಬ್ದ ಅಜಾತ ಮತ್ತೊಂದು ಕೆನ್ನೆ ಮುಟ್ಟಿಕೊಳ್ಳುವನು–

–ಒಂದು ಮೆಟ್ಟಿಲು ಕೆಳಗೆ ಬಂದ ಅಜಾತನ ತಾಯಿ ವಾಸಂತಿದೇವಿ–

**ವಾಸಂತಿ** : ಪುಟ್ಟ ಬಾಯಿಂದ ಕೆಟ್ಟ ಮಾತು ! ಮಗು, ಸಾಗರಮಿತ್ರ, ಮುಯ್ಯಿಗೆ ಮುಯ್ಯಿ ನೀತಿ ಸರಿಯಲ್ಲ ! ದ್ವೇಷವನು ತ್ವೇಷದಿಂದಲೇ ಗೆಲಬೇಕು ! ದ್ವೇಷ ದ್ವೇಷಕ್ಕೆ ಮೊಟ್ಟೆ ಇಡುತ್ತದೆ. ಪ್ರೀತಿ ಜಗತ್ತನ್ನೇ ಗೆಲ್ಲುತ್ತದೆ !

**ಸಾಗರ** : ಅಂತಹ ನಡತೆ ಹೇಡಿತನವಂತೆ ! ಹಾಗೆಂದು ನಮ್ಮ ಗುರುಗಳು ಹೇಳುತಿದ್ದರು ಅಜ್ಜಿ.

**ಅಜಾತ** : ಅಯ್ಯೋ... ಅಜಾತನ ಅವಿವೇಕವೇ ? ಕೇಳಲಾರೆ, ಕೋಳಿ ಕೆದಕಿದ ತಿಪ್ಪೆ ಈ ನನ್ನ ಕ್ಷುದ್ರ ಮನ !

**ವಾಸಂತಿ** : ಉದ್ವಿಗ್ನಗೊಳ್ಳದಿರು ಅಜಾತಶತ್ರು. ನಿನಗಿಲ್ಲಿ ಈ ಅರಮನೆಯಲ್ಲಿ ಶಾಂತಿ ಸಿಗದು. ಹೋಗು, ಆ ನಿನ್ನ ಬಣ್ಣದ ಬೀಸಣಿಗೆ ಇಹಳಲ್ಲ ಆ ಅಮರಪಾಲಿ ಅವಳ ಬಳಿ ಹೋಗಿ ವಿಶ್ರಾಂತಿವಡೆ !

**ಅಜಾತ** : ಅಮರಪಾಲಿ ! ಅಮ್ಮಾ, ಅವಳೀಗ ಬೌದ್ಧ ಭಿಕ್ಷುಣಿ ! ನನ್ನಾಕೆಯಲ್ಲ.

**ವಾಸಂತಿ** : ಅವಳಿಲ್ಲದಿದ್ದರೇನಂತೆ ? ನೆಚ್ಚಿನ ನಾಟ್ಯಾಚಾರ್ಯನಿಹನಲ್ತೆ, ಆ ನಿನ್ನ ದೇವದತ್ತ !

**ಅಜಾತ** : ಹಾಳಾದ ! ಆ ಪಾಪಿ ಚುಂದನ ಮೂಲಕ ಬುದ್ಧದೇವನಿಗೆ ಮದ್ದು ಹಾಕಿಸಿ, ಕಡೆಗೆ ಹುಚ್ಚಳಾದ ಕುಜಾತಪಾಲಿಯಿಂದ ಕೊಲೆಗೀಡಾಗಿ, ಸಂಸ್ಕಾರ ಕಾಣದ ಹೆಣವಾಗಿ, ಹದ್ದು, ನಾಯಿ ನರಿಗಳಿಗೆ ಉಣಿಸಾಗಿ ಮಣ್ಣಾದ ! ಚುಂದ ಚಂದರುಗಳೂ ಚಿಂದಿಯಾದರು ಆ ಕುಜಾತಪಾಲಿಯ ಕೈಯಿಂದ. ಕಡೆಗೆ, ಕುಜಾತಪಾಲಿಯೂ ಆತ್ಮಹತ್ಯೆ ಮಾಡಿಕೊಂಡಳೆಂದು ಸುದ್ದಿ !

**ವಾಸಂತಿ** : ದೌಷ್ಟ್ಯಕ್ಕೆ ಎಂದಿದ್ದರೂ ದಯನೀಯ ಸೋಲು ! ಪಾಪಕ್ಕೆ ತಕ್ಕ ಪ್ರಾಯಶ್ಚಿತ್ತ ! ಸತ್ಯಕ್ಕೆ ಸಾವಿಲ್ಲ ಮಿಥ್ಯಕ್ಕೆ ಬದುಕಿಲ್ಲ ! 'ಋತ'ವೊಂದೆ ಗೆಲ್ಲುವುದು ಅನೃತವಲ್ತು !

**ಅಜಾತ** : ನನ್ನ ಶಿಕ್ಷಿಸು ತಾಯಿ, ನನ್ನಿಂದಲೇ ಘಟಿಸಿತೆಲ್ಲ ಅಪರಾಧ !

**ವಾಸಂತಿ** : ಅಜಾತ, ನೀನೀಗ ಈ ವಾಸಂತಿ ದೇವಿಯ ಮಗನಲ್ಲ, ಮಗಧ ರಾಜ್ಯದ ಅರಸು. ಸರ್ವಜ್ಞ, ಸರ್ವಶಕ್ತ, ಸಾರ್ವಭೌಮ. ಆದರೆ ಮಾನವ ಬಾಂಧವ್ಯ ಒಲವನಾಧರಿಸಿ ನಿಂತಿಹುದು, ಅಧಿಕಾರ ಅಂತಸ್ತು, ದರ್ಪ ದಬ್ಬಾಳಿಕೆಗಳನ್ನಲ್ಲ. ನೀನು ಈ ಕಂದ ಸಾಗರ ಮಿತ್ರನಷ್ಟೇ ಪುಟ್ಟ ಮಗುವಿದ್ದಾಗ, ಆ ನಿಮ್ಮ ತಂದೆ ಬಿಂಬಸಾರರ ಒಲವೇನು ! ನಲಿವೇನು ! ನೀನೇ ಸರ್ವಸ್ವವೆಂದು ಮುದ್ದಿಸುತ್ತಿದ್ದರಪ್ಪ ! ಆದರೆ ಅದೇ ತಂದೆಗೆ ನೀನು ಕೊಟ್ಟಿರುವ ಸಂಭಾವನೆ ಸೆರೆಮನೆಯವಾಸ ! ಒಂದು ವಾರದಿಂದುಪವಾಸ !

**ಸಾಗರ** : ಅಹುದು, ಅಜ್ಜಿ ತನ್ನ ಕಾಲಂದುಗೆಗಳಲ್ಲಿ ಅನ್ನ ತುಂಬಿ ತೆಗೆದು ತಾತನಿಗೆ ನಿತ್ಯವೂ ಕೊಡುತ್ತಿದ್ದರು ಸೆರೆಮನೆಯಲ್ಲಿ. ಅಪ್ಪಾಜಿ, ನೀವು ಅದನ್ನೂ ತಪ್ಪಿಸಿದಿರಿ !

**ವಾಸಂತಿ** : ಜನ್ಮಕೊಟ್ಟ ತಂದೆಗೆ ಇದೆ ಏನು ಮಗನೀವ ಪುರಸ್ಕಾರ ? ಹೇಳು ಅಜಾತ... ಹೇಳು ? ನನ್ನ ಗಂಡನ ಸ್ಥಿತಿಯ ಕಂಡು ಕರುಳು ಕಿತ್ತು ಬರುತ್ತಿದೆ. ಈ ಹಿಂಸೆಗಿಂತ ಒಂದಿಷ್ಟು ವಿಷವ ಕೊಟ್ಟು ಬಿಡು; ಇಬ್ಬರೂ ನಿಶ್ಚಿಂತರಾಗಿ ಅಸುವ ನೀಗುವೆವು.

**ಅಜಾತ** : ಅಮ್ಮಾ, ಶಾಂತಳಾಗು ತಾಯಿ, ಪಾಪಕ್ಕೆ ಪಶ್ಚಾತ್ತಾಪವೇ ಪರಿಹಾರವಾಗುವುದಾದಲ್ಲಿ ಇಂದದನು ನೆರವೇರಿಸಿ, ಮತ್ತೆ ಮಗುವಾಗಿ ನಿಮ್ಮ ಮಡಿಲಲ್ಲಿ ಪವಡಿಸಿ, ಶಾಂತಿವಡೆವೆ ! ಯಾರಲ್ಲಿ – ಜಾಗಟೆ ಬಾರಿಸುವವನು–

**ಪ್ರತೀಹಾರಿ** : ಮಹಾಪ್ರಭು !...

**ಅಜಾತ** : ಪ್ರತೀಹಾರಿ... ಈಗಲೇ ಈ ಕ್ಷಣವೆ ಕಾರಾಗೃಹಕೆ ಕಳುಹು ವೇಗಾಯ್ಲರನು... ನಾನಲ್ಲಿಗೈದುವ ಸುದ್ದಿ ಅರಸರಿಗೆ ಮುಟ್ಟಲಿ ಬೇಗ.

**ಪ್ರತೀಹಾರಿ** : ಅಪ್ಪಣೆ ಮಹಾಪ್ರಭು.

**ಅಜಾತ** : ಅಮ್ಮಾ, ಬೇಗ ಸಿದ್ಧರಾಗಿ... ಅಪ್ಪಾಜಿಯವರನ್ನು ಸ್ವಾಗತಿಸಲು ಸಕಲ ಮಂಗಲ ದ್ರವ್ಯಗಳ ಅಣಿಮಾಡಿ. ನಾನವರ ಪಾದಪಂಕಜಗಳಲಿ ಮಣಿದು ಕ್ಷಮೆ ಬೇಡುವೆನು. ನನ್ನ ಮುದ್ದಿನ ಕುವರ ಸಾಗರಮಿತ್ರಾ, ಅಜ್ಜಿಗೆ ನೀನು ನೆರವಾಗು ; ತಾತನನು ಸ್ವಾಗತಿಸೆ ಅವಳ ಜೊತೆಯಾಗು !

**ಸಾಗರ** : ಅಪ್ಪಾಜೀ... ನನ್ನ ಅಪ್ಪಾಜಿ...... (ಅಪ್ಪುವನು)

**ದೃಶ್ಯ : ೧೪** **ಕಾರಾಗೃಹ**

(ಕಪ್ಪು ಕಾರಾಗೃಹ ರಂಗದ ನಡುವೆ ಒಂದು ಕಟ್ಟೆ. ಅದರ ಮೇಲೆ ಬಿಗಿದ

ಸರಪಣಿಗಳಿಂದ ಬಂಧಿತನಾಗಿ ಬಿಂಬಸಾರ ಕುಳಿತಿದ್ದಾನೆ. ತೆರೆ ಸರಿದಾಗ
ಅವನ ಮುಖದ ಮೇಲಷ್ಟೇ ಬೆಳಕು, ಉಳಿದೆಲ್ಲ ಕತ್ತಲು. ಗಡ್ಡ ಬೆಳೆದ,
ಬಾಡಿದ ಮೊಗದ, ಬಡಕಲು ದೇಹಿ ಬಿಂಬಸಾರ ತನಗೆ ತಾನೇ ತಡೆತಡೆದು
ಮಾತುಗಳನ್ನಾಡಿಕೊಳ್ಳುತ್ತಿರುತ್ತಾನೆ)

**ಬಿಂಬಸಾರ** : ಒಳ್ಳೆಯ ಮಕ್ಕಳನು ಪಡೆವುದಕೂ ಪುಣ್ಯವಿರಬೇಕು ! ಹೆತ್ತ ತಂದೆ ತಾಯಂದಿರಿಗೆ ಮಕ್ಕಳೇ ಸಂಪತ್ತು, ಮಕ್ಕಳೇ ಸೌಭಾಗ್ಯ, ಮಕ್ಕಳೇ ಸರ್ವಸ್ವ. ಅವರಿಂದ ಪ್ರೀತಿಯೊಂದನು ಹೊರತು ಏನನೂ ಬಯಸುವುದಿಲ್ಲ. ಮಕ್ಕಳು ಮುಪ್ಪಿನಲ್ಲಿ ಅವರ ಸೇವೆಗೈಯದಿದ್ದರೂ ತಂದೆ ತಾಯಂದಿರಿಗೆ ಬಾಧಕ ಇಲ್ಲ, ಆದರೆ ಮಕ್ಕಳು ಅವರನ್ನು ಎಂದಿಗೂ ಮಾನಸಿಕವಾಗಿ ಕೊಲಬಾರದು ! ನನ್ನ ಪಾಲಿಗೋ ಮಗ....

**ಪ್ರಹರಿ** : ಮಹಾಪ್ರಭುಗಳಿಗೆ ಜಯವಾಗಲಿ !

**ಬಿಂಬಸಾರ** : ಹ್ಹಾ ! ಪ್ರಹರಿ ನಾನೀಗ ಪ್ರಭುವಲ್ಲ, ಅಜಾತಶತ್ರು ಮಹಾರಾಜರ ಪ್ರಜೆ ! ಅದರಲ್ಲೂ ಅಪರಾಧಿ ಪ್ರಜೆ, ಮುತ್ತ ಮುದಿ ಸೆರೆಯಾಳು ಬಿಂಬಸಾರ ! ವರ್ತಮಾನವದೇನು ?

**ಪ್ರಹರಿ** : ಮಹಾಪ್ರಭುಗಳು ಈಗ ದಯಮಾಡಿಸುವರಂತೆ !

**ಬಿಂಬಸಾರ** : ತುಂಬಾ ಸಂತೋಷ... ನೀನಿನ್ನು ಹೊರಡು !

**ಪ್ರಹರಿ** : ಅಪ್ಪಣೆ

–ನಿರ್ಗಮನ–

**ಬಿಂಬಸಾರ** : ಮಹಾಪ್ರಭುಗಳು... ! ಅಜಾತಶತ್ರು ಸಾಮ್ರಾಟರು ! ಸೆರೆಮನೆಯೆಡೆಗೆ ದಯಮಾಡಿಸುವರೆ ? ಅಹ್ಹಹ್ಹಹ್ಹಾ ! ಬರುವರೇಕೆ ? ಈ ಮುದಿಯನನು ಕೊಲೆಗೈವುದಕ್ಕೆ... ಹ್ಹಾ ! ಅಹುದು... ಆ ಪಾಪಿ ದೇವದತ್ತನ ನುಡಿಗೆ ಬೆಲೆಕೊಟ್ಟು ನನ್ನ ತಳ್ಳಿದವನಿವನು ಆ ಕಾರಾಗೃಹದ ಕಲ್ಲಿನೀ ಮಂಚಕ್ಕೆ ! ಕೆಲ ದಿವಸ ಉಪವಾಸ ! ಅದು ಕೂಡ ರಾಜಾಜ್ಞೆಯಂತೆ ! ಅದನರಿತ ನನ್ನಾಕೆ ನನ್ನ ಮೋಹದ ಮಡದಿ ವಾಸಂತಿ ನಿತ್ಯವೂ ತನ್ನ ಕಾಲಂದುಗೆಗಳಲಿ ಅನ್ನವನು ತುಂಬಿ ಹಸಿವ ನೀಗಿಸಿದಳೆನ್ನ ! ಅದು ಕೂಡ ರದ್ದಾಯ್ತು... ! ನನ್ನವಳು, ನನ್ನ ಪ್ರಿಯ ವಾಸಂತಿ ಅನ್ನ ಆಹಾರವನು ತನ್ನ ಬೆನ್ನಲಿ ಲೇಪಿಸಿ ತಂದು ನೆಕ್ಕಿಸಿದಳೆನ್ನಿಂದ ! ಅದೂ ತಪ್ಪಿ, ವಾರದಿಂದಲು ಅನ್ನ ನೀರಿಲ್ಲದಂಥ ವ್ರತ ! ಈಗ ಆ ರಾಜನಾಗಮನ ಏಕೆ ? ಮತ್ತೇಕೆ ? ಒರೆಯಿಂದ ಹೊರಬಂದ ಖಡ್ಗದಿಂದಿರಿದು ಮುಗಿಸಲಿಕೆ ! ತುಂಬ ಹರ್ಷದ ದಿನ... ತುಂಬ ಭಾಗ್ಯದ ದಿವಸ !... ಛೇ, ಆ ಪಾಪಿ ಮಗನಿಂದ ಹತನಾಗುವ ಬದಲು ನಾನೇಕೆ ಮುಗಿಸಬಾರದು ನನ್ನ ಇಹಲೋಕ ಯಾತ್ರೆಯನು ! ...ಹ್ಹಾ ...ಅಹುದು ! ...ಅದೇ ಸರಿಯಾದ ಮಾರ್ಗ... ಸರಿಯಾದ ಮಾರ್ಗ... ! ಜಯಬುದ್ಧ ಗುರುದೇವ... ! ಜಯಬುದ್ಧ ಗುರುದೇವ ! ಜೈ ಬೋಧಿಸತ್ತ್ವ ! ಜೈ.....

–ಎಂದು ಕೂಗುತ್ತಾ ಎದ್ದು ನಿಂತು ಪಕ್ಕದ ಕಂಬಕ್ಕೆ ತನ್ನ ತಲೆಯನ್ನು
ಜೋರಾಗಿ ಹೊಡೆದುಕೊಳ್ಳುವನು 'ಢಮಾರ್' ಎಂಬ ಶಬ್ದ
ಸ್ಫೋಟಗೊಳ್ಳುವುದು, ತಲೆ ಒಡೆದು, ರಂಗದ ಮೇಲೆ ರಕ್ತ
ಚೆಲ್ಲಾಡುವುದು. ಇದ್ದಕ್ಕಿದ್ದಂತೆಯೇ ಇಡೀ ರಂಗದಲ್ಲಿ ಗುಡುಗು ಸಿಡಿಲುಗಳ
ಆರ್ಭಟ, ಮಿಂಚಿನ ಭಯಂಕರ ಸಂಚಳ ! ಭೀಕರ ವಾದ್ಯಗಳ ಬೋರಾಟ !
ನಡುವೆ ನೇಪಥ್ಯದಲ್ಲಿ ಅಜಾತ, ವಾಸಂತಿ ಹಾಗೂ ಸಾಗರಮಿತ್ರರ
'ಅಪ್ಪಾಜೀ... ಸ್ವಾಮೀ... ತಾತ !' ಎಂಬ ಆರ್ತತೆಯ ಕೂಗು... ಎಲ್ಲವೂ
ಮೇಳೈಸುವುವು. ಚಣಕಾಲ ರಂಗದ ಮೇಲೆ ಪರಿಣಾಮಕಾರಿ
ಭೀತಿವಾತಾವರಣ ಮೂಡಬೇಕು–

**ಅಜಾತ** : ಅಪ್ಪಾಜೀ

**ವಾಸಂತಿ** : ಸ್ವಾಮೀ...

**ಸಾಗರ** : ತಾತ..... !

–ಮೂವರೂ ರಂಗವೇರಿ ಬಿಂಬಸಾರನ ಇರುವಿಕೆಯ ಕಂಡು ದೊಪ್ಪನೆ
ಹೆಣದ ಮೇಲೆ ಅಪ್ಪಾಜೀ.... ಸ್ವಾಮೀ.... ತಾತ..... ಎಂದು
ಚೀರಿಕೊಂಡು ಬೀಳುವರು–
–ಚಣಕಾಲ ರಂಗ ಮೌನ–

**ವಾಸಂತಿ** : ಅಜಾತ.... ಶಾಂತವಾಯಿತು ದೇಹ ! ಶಾಂತವಾಯಿತು ಪೃಥ್ವಿ..... ಶಾಂತವಾಗಲಿ ದ್ವೇಷ ಈರ್ಷಾಸೂಯೆ ಜಗದಲ್ಲಿ ! ನೆಲೆನಿಲ್ಲಲೆಂದಿಗೂ ಪ್ರೀತಿ ಸೌಹಾರ್ದಗಳು ! ಹ್ಹಾ ! ಅಯ್ಯೋ... ಸ್ವಾಮೀೀ.... ಬರುವೆ ನಿಮ್ಮೆಡೆಗೆ ನಾ ಬರುವೆ..... ಇದೊ ಬಂದೆ... ಇದೊ ಬಂದೆ !.....

**ಅಜಾತ** : ಅಮ್ಮಾ.... ಅಪ್ಪಾಜೀ.....

**ಸಾಗರ** : ಅಜ್ಜಿ..... ತಾತ !....

**ಅಜಾತ** : ದಿಟ್ಟನಟ್ಟುತ ಬಂದ ಬಿರುಗಾಳಿ ಕಡಲನೊಡಲನ್ನೆಲ್ಲ
ಅಲ್ಲೋಲ ಕಲ್ಲೋಲಗೊಳಿಸಿ ಕಡೆಗೆಲ್ಲೋ ಹೇಳ
ಹೆಸರಿಲ್ಲದಲೆ ಅಡಗಿ ಮಡಿವುದು ಉಸಿರನುಡುಗಿ !
ಶಾಂತವಾಯಿತು ಒಡಲು ! ಶಾಂತವಾಯಿತು ಕಡಲು !

ಆಯಿತು ಶೂನ್ಯದಿಂದಲೆ ಬಂದ ಸಕಲವೂ ಶೂನ್ಯದೆಡೆಗೇ ತನ್ನ
ಪ್ರಯಣವನು ಬೆಳೆಸಿತು. ಇನ್ನುಳಿದಿಹುದು ಧರ್ಮದ ಸೆರಗಿನಲ್ಲಾಶ್ರಯವ
ಪಡೆದು ಆಯುವನು ಕಳೆಯುವುದು, ಕಡೆಗಿಲ್ಲವಾಗುವುದು !
ನನಗಿನ್ನು ಶಾಂತಿಧಾಮವದೊಂದೆ, ಅದು ಬುದ್ಧದೇವನಡಿ !
ಗುರುದೇವಾ.... ಗುರುದೇವಾ..... !

–ನೆಟ್ಟ ದಿಟ್ಟಿ ತೋರುಬೆರಳು ಮಾಡಿ ನಿರ್ಗಮಿಸುವನು–

**ಸಾಗರ** : ಅಜ್ಜೀ..... ಅಪ್ಪಾಜಿ ನಿನ್ನ ಹಣೆಯ ಕುಂಕುಮನಳಿಸಿದರು ನಿನ್ನ ಮೊಮ್ಮಗ ನಾನು ರಕ್ತ ತಿಲಕವನಿಡುವೆ ನೀನೆನ್ನ ಹರಸು.... ತಾತ ಆಶೀರ್ವದಿಸಿ.... !

–ಬಿಂಬಸಾರನ ತಲೆಯ ರಕ್ತವನ್ನು ತನ್ನ ಬಲಗೈ ಹೆಬ್ಬೆರಳಿನಲ್ಲಿ
ತೆಗೆದು ಅಜ್ಜಿಯ ಹಣೆಗೆ ರಕ್ತ ತಿಲಕವನ್ನಿಡುವನು. ಚಣಕಾಲ
ಮೊಣಕಾಲೂರಿ ಪ್ರಾರ್ಥನೆಯ ಸಲ್ಲಿಸಿ, ಅಜ್ಜ ಅಜ್ಜಿಯರ
ಹೆಣಗಳನ್ನು ನೋಡುತ್ತಾ ಕುಳಿತಿರುವನು
–ದೀಪ ಮಂಕಾಗಿ, ರಂಗ ಕತ್ತಲಾಗುವುದು–

**ದೃಶ್ಯ : ೧೫** **ಕುಶೀನಾರೆಯ ಸಾಲವನ**

(ಸಾಲವೃಕ್ಷದಡಿಯಲ್ಲಿ ಒಂದು ಹಗ್ಗದ ಮಂಚ ಅದರ ಮೇಲೆ ಬುದ್ಧದೇವ
ಪವಡಿಸಿದ್ದಾನೆ ಸುತ್ತಲೂ ಭಿಕ್ಷು ಭಿಕ್ಷಣಿಯರು, ಅಮರಪಾಲಿ, ಆನಂದ,
ಕಿಸಾಗೋತಮಿ, ಉಪಗುಪ್ತ, ಅಂಗುಲೀಮಾಲಾ ಹಾಗೂ ಸದ್ಭಕ್ತ ಮಲವರು
ಹಲವರು ನೆರೆದಿದ್ದಾರೆ. ವಾತಾವರಣ ಪ್ರಶಾಂತವಾಗಿದೆ. ಆ
ಪ್ರಶಾಂತತೆಯನ್ನು ಭಗ್ನಗೊಳಿಸಿತೋ ಎನ್ನುವಂತೆ ಅಜಾತ ಜೋರಾಗಿ
ಕೂಗಿಕೊಂಡು ಓಡೋಡಿ ಬಂದು ಬುದ್ಧದೇವನ ಪಾದದ ಮೇಲೆ
ಬೀಳುವನು.)

**ಅಜಾತ** : ಗುರುದೇವಾ... ಗುರುದೇವಾ... ರಕ್ಷಿಸು... ರಕ್ಷಿಸು... ನಾನು ಪಾಪಿ

**ಆನಂದ** : ಶಾಂತಿ ಮಗಧಾಧಿಪರೆ, ಶಾಂತರಾಗಿರಿ ತಂದೆ ! ಇದು ಕುಶೀನಾರೆಯ ಸಾಲವನ. ಇಲ್ಲಿರುವ ಈ ಮಲವಮಹನೀಯರು ನಿರ್ಮಿಸಿದ್ದು. ಈ ತಾಣದಲ್ಲಿ ನಿಮಗೆ ನೆಮ್ಮದಿ ಸಿಕ್ಕೆ ಸಿಗುವುದು. ಚಣಕಾಲ ವಿಶ್ರಮಿಸಿ, ಸಾಂತ್ವನವ ತುಂಬಿಕೊಳಿ ! ಎಲ್ಲದಕು ಶುಭವಹುದು, ಮಂಗಳವು ಕೂಡುವುದು.

**ಅಜಾತ** : ಆನಂದ ಗುರುಗಳೆ, ಏನಾಯ್ತು ಬುದ್ಧರಿಗೆ ? ಹೇಗಾಯ್ತು ಹೇಳಿ. (ಆನಂದ ಮೌನದಿಂದಿರಲು) ಉಪಗುಪ್ತ ಗುರುಗಳೇ, ನೀವಾದರೂ ಒಮ್ಮೆ ಅಪ್ಪಣೆಯ ಕೊಡಿಸಿ ಏನಾಯ್ತು ಹೇಳಿ !

**ಉಪಗುಪ್ತ** : ಏನೇನೂ ಆಗಿಲ್ಲ ಅಜಾತ, ಬೋಧಿಸತ್ವರು ಈಗ ಸಮಾಧಿಯಲ್ಲಿಹರು... ಆದರಿದು...

**ಅಜಾತ** : ಆದರಿದು.... ! ಯಾವುದು ಹೇಳಿ....

**ಉಪಗುಪ್ತ** : ಆದರಿದು ಉತ್ಕ್ರಮಣ ಕಾಲ ! ಇಂದಿಗೆ ಒಂದು ವರ್ಷದ ಹಿಂದೆ 'ಸೂಕರಮದ್ದವ' ಎಂಬ ಆಹಾರದಲ್ಲಿ ಯಾರೋ ಇಟ್ಟ ಮದ್ದು ಬುದ್ಧ ಭಗವಾನರ ಅನಾರೋಗ್ಯಕ್ಕೆ ಕಾರಣವಾಯ್ತು ! ತಿಂದ ಮರುಕ್ಷಣವೆ

ಗರಣೆ ಗರಣೆ ರಕ್ತವಾಂತಿಯಾಯಿತು ! ಈವರೆಗೂ ಮದ್ದು ಮುದ್ದಾಗಿ ಒಳಗೊಳಗೆ ಕೆಲಸ ಮಾಡಿ ಇಂದು ಈ ಉಲ್ಬಣ ಸ್ಥಿತಿಗೆ ತಂದುದಾಯ್ತು ತಿಳಿಯಿರಿ.

–ಮಲಗಿದ್ದ ಬುದ್ಧನ ಮೈ ಅಲುಗಾಡೆ ಸಮಾಧಿಯಿಂದೆಚ್ಚೆತ್ತ ಸೂಚನೆ ನೀಡುವುದು. ಆಗ ರಂಗ ಶ್ಮಶಾನ ಮೌನ ತಾಳುವುದು–

**ಬುದ್ಧ** : (ಮಲಗಿದ್ದಂತೆಯೇ) ಭಂತೇ...

**ಆನಂದ** : ಗುರುದೇವ್

**ಬುದ್ಧ** : ಭಂತೇ, ಅಜಾತಶತ್ರು ಪ್ರಭುಗಳಾಗಮಿಸಿದಂತಿಹುದು !

**ಅಜಾತ** : ಅಹುದು ಗುರುದೇವಾ... ಕಣ್ಣೀರ ಸಲಿಲದಲಿ ಪಾದಗಳ ತೊಳೆಯುತಿಹೆ ಕೃಪೆಮಾಡಬೇಕು, ಅನುಗ್ರಹಿಸಬೇಕು.

**ಬುದ್ಧ** : ಈ ಶಾಂತವನದಲ್ಲಿ ಉದ್ವಿಗ್ನ ಬಿರುಗಾಳಿ ಸುಳಿವುದೇಕೆ ? ಶಾಂತರಾಗಿರಿ ಪ್ರಭು, ಶಾಂತರಾಗಿರಿ ನೀವು. ಒಂದಲ್ಲ ಒಂದು ದಿನ ನೀವು ಬಂದೇ ಬಹಿರಿ ಎಂದಂದುಕೊಂಡಿದ್ದೆ. ನನ್ನ ಊಹನೆ ಇಂದು ಸತ್ಯವೇ ಆಯ್ತು !

**ಅಜಾತ** : ಕರು ತಾಯಬಳಿಗಲ್ಲದೆ ವ್ಯಾಘ್ರನ ಗುಹೆಯರಸಿ ಹೋಗುವುದೆ ! ಗುರುದೇವ... ಗುರುದೇವ... ನಾನು ಪಾಪಿ, ಕಡುಪಾಪಿ !

**ಬುದ್ಧ** : (ಎದ್ದು ಕುಳಿತು) ಜಗತ್ತಿನಲ್ಲಿ ಪಾಪವೆಂಬುದೂ ಇಲ್ಲ, ಪುಣ್ಯವೆಂಬುದೂ ಇಲ್ಲ ; ಎಲ್ಲ ಭ್ರಮೆ. ಮಾಡಿದಪರಾಧಕ್ಕೆ ಮನ ಕಂಡುಕೊಂಡೊಂದು ಪುಟ್ಟ ಉಪಾಯ ! ಕೇಳಿ, ಸ್ವರ್ಗ ನರಕಗಳಿಲ್ಲ ; ಮೋಕ್ಷ ಪದವಿಗಳಿಲ್ಲ. ಸಕಲಕೂ ಈ ನೆಲವೆ ಮೊತ್ತ ಮೊದಲಿನ ಬಿತ್ತು. ಕಿತ್ತು ಕಳೆಯಿರಿ ನಿಮ್ಮ ಮನದ ಮಾಲಿನ್ಯವನು. ಶುದ್ಧರಾಗಿರಿ ಮತ್ತೆ ಸಿದ್ಧಿಸಲಿ ಸಾಹಸವು. ಜನಪ್ರಿಯತೆ ಗಳಿಸಿದುದೆಲ್ಲವೂ ಶ್ರೇಷ್ಠವಲ್ಲ ! ಪರಿಕಿಸದೆ ಯಾವುದನು ಸ್ವೀಕಾರ ಮಾಡದಿರಿ. ವಿಷಯವನು ವಿಮರ್ಶೆ ತ್ರಾಸಿನಲಿ ಕೂಗಿ, ವೈಚಾರಿಕತೆಯ ಒರೆಗಲ್ಲ ಮೇಲುಜ್ಜಿ, ಪರೀಕ್ಷಿಸಿ, ಪರಿಗ್ರಹಿಸಿ. ಒಳ್ಳಿತಾಗಲಿ ಎಲ್ಲ, ಎಲ್ಲ ಒಳಿತಕ್ಕೆ !

**ಅಜಾತ** : ಎಲ್ಲವೂ ಆ ಪಾಪಿ ದೇವದತ್ತನಿಂದಾದ್ದು ಗುರುದೇವ; ಅನಾಹುತಕ್ಕೆ ಅಡಿಗಲ್ಲು ಹಾಕಿದವನವನೇ !

**ಬುದ್ಧ** : ನಮ್ಮ ಅವಿವೇಕಕ್ಕೆ ಅನ್ಯರನು ದೂರುವುದು ಒಳಿತಲ್ಲ ಅಜಾತ ! ಯಾವುದಕ್ಕೂ ನಾವು ವಿವೇಕಮತಿಗಳಾಗಲು ಬೇಕು. ನಿರಂಕುಶಮತಿಗಳೂ ಆಗಬೇಕು. ಕೇಳಿ, ಹರಿದಂತೆ ಮನಸನ್ನು ಹರಿಯಬಿಡಬಾರದು ! ಎಲ್ಲೆಡೆಯೂ ಸಂಯಮದ ಕಡಿವಾಣದ ಅಗತ್ಯತೆಯ ಕಾಣುವುದು.

ದೇವದತ್ತ ಎಂದೋ ಬುದ್ಧನಾಗಬಹುದಿತ್ತು ! ಆಗಲಿಲ್ಲ ಮಹಾಮೇಧಾವಿ, ಶ್ರೇಷ್ಠಕಲಾವಿದ, ದಕ್ಷ ಆಡಳಿತಗಾರ ! ಆದರೇನು ? ಆಶಾಪಿಶಾಚಕ್ಕೆ ಅವನು ಬಲಿಯಾದ ! ತನ್ಮೂಲಕ ನಮಗೆ ನಿಮಗೆಲ್ಲ ಎಚ್ಚರದ ಗಂಟೆಯೂ ಆದ ! ಕೇಳಿ, ಮೋಡದಿಂದ ಮಳೆಯಾಗಿ ಸುರಿವ ನೀರನ್ನು ವಾಯುಮಂಡಲದಲ್ಲೆ ಹಿಡಿದು ಸವಿಯೆ ಅದರಲ್ಲಿ ರುಚಿಯಿಲ್ಲ, ನೋಡೆ ಬಣ್ಣವೂ ಇಲ್ಲ ! ಆದರದು ಭೂಸ್ಪರ್ಶ ಪಡೆದೊಡನೆ ಭೂಗುಣಕೆ ಬದ್ಧವಾಗುವುದು. ಕಪ್ಪು ಮಣ್ಣಲಿ ಹರಿಯೆ ಕಪ್ಪಾಗಿ, ಉಪ್ಪು ನೆಲದಲಿ ಹರಿಯೆ ತಾನು ಉಪ್ಪುಪ್ಪಾಗಿ ರುಚಿಯ ತಳೆಯುವುದು. ಅದರ ಒಂದು ಹನಿ ಗಿಡವೊಂದರ ಮೇಲೆ ಬೀಳೆ ಕರ್ಪೂರವಾಗುವುದು. ಕಪ್ಪೆ ಚಿಪ್ಪಲಿ ಬೀಳೆ ಮುತ್ತು ತಾನಾಗುವುದು; ಒಮ್ಮೊಮ್ಮೆ ಬೇರೆಡೆಯಲ್ಲಿ ಜ್ಯೋತಿಯನು ನೀಡುವುದು ! ಗಂಗೆ, ತುಂಗೆ, ಕೃಷ್ಣ, ಕಾವೇರಿ ನದಿಗಳು ಹರಿವ ಪವಿತ್ರ ಪಾತ್ರದಲಿ ಹರಿಯೆ ತೀರ್ಥವೆಂದೆನಿಸುವುದು. ಕಡೆಗೆ.... ನಗರ ಪಟ್ಟಣಗಳಲಿ ಒಳಚರಂಡಿಯಲಿ ಹರಿಯೆ ಕೊಚ್ಚೆಯೂ ಆಗುವುದು ! ನೋಡಿ, ನೀರು ಒಂದೇ... ಆದರೆ, ಅದು ಹರಿವ ಪಾತ್ರದ ಮೇಲೆ ಅದರ ಯೋಗ್ಯತೆ ಅರ್ಹತೆಗಳು ನಿಂತಿಹವು ಅಲ್ಲವೇ ? ಅದರಂತೆ ಎಲ್ಲದೂ. ದೇವದತ್ತನ ಚೈತನ್ಯ ತೀರ್ಥವಾಗಲೆ ಇಲ್ಲ; ಕೊಚ್ಚೆಯಾಯ್ತು ! ಯಾರ ಬದುಕೂ ಅಂತಾಗದಿರಲಿ. ಆಶೆ ನಾಶದ ಹೇತು; ಆಶೆ ಪತನಕೆ ಸೇತು ! ಯಾವನದರಿಂದ ಮುಕ್ತನೋ ಅವನೆ ಬುದ್ಧ; ಸುಪ್ರಬುದ್ಧ ! ! ಕಿತ್ತು ಕಳೆಯಲು ಬೇಕು ಆಶಾವೃಕ್ಷದಡಿಬೇರ ! ಆಶೆ ಅನಾಹುತಗಳೆಲ್ಲವಕು ಮೂಲ ಅಡಿಗಲ್ಲು ! ಅಪ್ರಮಾದವು ಅಮೃತತ್ವಕ್ಕೆ ಹಾದಿ, ಪ್ರಮಾದ ಮರಣದ ಹೆಬ್ಬಾಗಿಲು ! ನಡೆ ನುಡಿಗಳೊಂದಾಗಿ ಇರಬೇಕು. ಅಂತಲ್ಲದಿರೆ ನುಡಿವ ಮಾತುಗಳೆಲ್ಲ ಬಣ್ಣವಿದ್ದರೂ ಗಂಧವಿಲ್ಲದ ಪುಷ್ಪ ! ಕ್ಷಮೆಯಿಂದ ಕ್ರೋಧವನು, ಸಾಧುತ್ವದಿಂ ಅಸಾಧುತ್ವವನು, ದಾನದಿಂ ಕೃಪಣತೆಯ ಸತ್ಯದಿಂ ಕಾಪಟ್ಯವನು ಗೆಲಬೇಕು. ಪಾಪ ವಿಮುಖನಾದವನೆ ಬ್ರಾಹ್ಮಣ, ಶಾಂತಪ್ರಿಯನು ಸವಣ, ನಿಷ್ಕಲ್ಮಶದ ಚಿತ್ತವುಳ್ಳವನೆ ಪರಿವ್ರಾಜಕ ಸನ್ಯಾಸಿ. ಈ ಮೂರೂ ಮೌಲ್ಯಗಳು ನಿಮ್ಮವಾಗಿರಲಿ. ತಾಯಿ ಯಶೋಧರೆ, ತಂಗಿ ಅಮರಪಾಲಿ ಎಲ್ಲರಲು ಶುಭವಿರಲಿ ಮಂಗಳವು ಕೂಡಿರಲಿ. ಆನಂದ.......

**ಆನಂದ** : ಗುರುದೇವಾ

**ಬುದ್ಧ** : ಹಾಲು ಹಾಲಾಹಲವು ಎಲ್ಲವೂ ಆನಂದ ! ಸಂಘದಲಿ ವಿಶ್ವಾಸ, ಧರ್ಮದಲಿ ಶ್ರದ್ಧೆ, ಬುದ್ಧನಲಿ ಭಕ್ತಿ ನೆಲೆಗೊಳ್ಳಲಿ.... ಲೋಕಕ್ಕೆ ಒಳಿತಾಗಲಿ. ಶಾಂತಿ ಶಾಂತಿ ಶಾಂತಿ

–ಬುದ್ಧ ಕುಳಿತಿರುವಂತೆಯೇ ರಂಗಕತ್ತಲಾಗಿ, ಅವನ ಹಿಂಬದಿಯಲ್ಲಿ ಪ್ರಭಾವಳಿ ಬೆಳಗುವುದು. ಆ ಬೆಳಕಿನಲ್ಲಿ ಎಲ್ಲರೂ ದೀರ್ಘದಂಡ ನಮಸ್ಕಾರ ಮಾಡುತ್ತಿರುವುದು ಕಾಣಿಸುವುದು–

**ಆನಂದ** : ತಥಾಗತರ ನಿರ್ವಾಣ ಮನುಕುಲದ ನಿರ್ಮಾಣಕ್ಕೆ ನಾಂದಿ ! ಇಂದು ವೈಶಾಖ ಶುಕ್ಲ ಪೌರ್ಣಿಮೆಯು ! ಕಪಿಲವಸ್ತುವಿನರಸ ಶುದ್ಧೋಧನನ ಧರ್ಮಪತ್ನಿ ಮಾಯಾದೇವಿ ಸಿದ್ಧಾರ್ಥನಿಗೆ ಜನ್ಮವಿತ್ತುದು ಇಂದಿಗೆ ಎಂಬತ್ತು ವರುಷಗಳ ಹಿಂದೆ, ಇದೇ ವೈಶಾಖ ಶುಕ್ಲ ಪೌರ್ಣಿಮೆಯಲ್ಲಿ ! ಬೋಧಿವೃಕ್ಷದಡಿಯಲ್ಲಿ ಕುಳಿತು ತಪಗೈದು ಸಿದ್ಧಾರ್ಥ ಬುದ್ಧನಾದದ್ದೂ ಇದೇ ವೈಶಾಖ ಶುಕ್ಲ ಪೌರ್ಣಿಮೆಯಲ್ಲಿ ! ಇಂದು ತಥಾಗತನು ನಿರ್ವಾಣವಡೆದದ್ದೂ ಇದೇ ವೈಶಾಖ ಶುಕ್ಲ ಪೌರ್ಣಿಮೆಯಲ್ಲಿ ! ಇದು ಬೌದ್ಧ ಪೌರ್ಣಿಮೆಯ ಮಹಾದಿನ ! ಮಂಗಳದ ದಿನವೆಂದೇ ಪರಿಗಣಿತವಾಗಲಿ !

–ಸುಜಾತ ಮತ್ತು ಮತ್ತಿತರ ನರ್ತಕಿಯರು ಎದ್ದು ಮುಂದೆ ಬರುವರು–

**ಸುಜಾತ** : ಸೋದರ ಸೋದರಿಯರೆ, ಬುದ್ಧ ಅರ್ಥಾತ್ ತಥಾಗತ

**ನರ್ತಕಿ ೧** : ತಥಾಗತ ಶಬ್ದದ ಅರ್ಥ ?

**ಸುಜಾತ** : ಅರ್ಥ....... ಹೇಗೆ ಬಂದನೋ ಹಾಗೆ ಹೋದವನು ಎಂದು. ಅವನು ಬರುವಾಗ ಏನನ್ನೂ ತರಲಿಲ್ಲ, ಹೋಗುವಾಗ ಏನನ್ನೂ ಕೊಂಡೊಯ್ಯಲಿಲ್ಲ ! ಎಲ್ಲರ ಬಾಳೂ ಇಷ್ಟೇ ಬರುವಾಗ ಬತ್ತಲೆ ಹೋಗುವಾಗ ಕತ್ತಲೆ ! ನಡುವೆ ನಡೆವುದು ನಾಲ್ಕು ದಿನದ ಬಣ್ಣದ ಬದುಕು. ಆದರಾ ಬದುಕು ಬೆಳಕಾಗಿ ಬೆಳಗುತ್ತಲೇ ಇರಲಿ ! ಬನ್ನಿ, ನಾವೆಲ್ಲರೂ ಸೇರಿ ತಥಾಗತನ ನಿರ್ವಾಣವನ್ನಾಚರಿಸೋಣ ! ಹೇಗೆ ಬಂದನೋ ಹಾಗೆ ಹೋದವನಿಗೆ ಜಯ ಕೋರೋಣ

**ಸಮೂಹ ಗಾಯನ :**

ಬುದ್ಧಂ ಶರಣಂ ಗಚ್ಛಾಮಿ
ಧಮ್ಮಂ ಶರಣಂ ಗಚ್ಛಾಮಿ
ಸಂಘಂ ಶರಣಂ ಗಚ್ಛಾಮಿ॥

ಜಯ ಬುದ್ಧ ಗುರುದೇವ । ಜಯ ಬುದ್ಧ ಗುರುದೇವ
ಜಯ ಸಿದ್ಧರಾದಿತ್ಯ ಜಯ ವಿಶ್ವವಂದ್ಯ ॥
ಜಯ ಶುದ್ಧ ಚಾರಿತ್ರ್ಯ ಜಯ ಶುಭ್ರತೇಜ
ಜಯ ಜಯವು ಜಯ ಜಯವು ಜಯ ಮಂಗಳಾಂಗ
ಜಯ ಜಯವು ಜಯ ಜಯವು ಜಯ ಕರುಣಪಾಂಗ ॥
ಜಯ ಜಯತು ಜಯ ಜಯತು ಜಯ ಶುದ್ಧ ಬುದ್ಧನೇ
ಜಯ ಜಯತು ಜಯ ಜಯತು ಜಯ ಶುದ್ಧ ಸಿದ್ಧನೇ ।

ಜಯ ವಿಭೂತಿಯೆ ನಮೋ
ಜಯ ಮನೀಷಿಯೆ ನಮೋ
ಜಯ ಮಾನವ ಪ್ರೇಮಿ ದಲಿತರುದ್ಧಾರಕ
ದೀನ ಬಂಧುವೆ ನಮೋ ।
ದಲಿತೋದಯದ ಹರಿಕಾರ ನಿನಗೆ
ನಮೋ ನಮೋ ನಮೋ ನಮಃ